ಮಾನವಿಕ ಕರ್ಣಾಟಕ

ಸಂಪುಟ ೧೫ ಸಂಚಿಕೆ ೩

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೫

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನು ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು : ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು **ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬** ಈ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೫ ಸಂಚಿಕೆ ೩

೫೯

ನೇ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೫

MANAVIKA KARNATAKA, Kannada quarterly of the University of Mysore, Volume 15, Number 3, May, 1985
Edited by Dr. B. K. Gururaja Rao and Dr. C. K. Renukarya

ಪ್ರಧಾನ ಸಂಪಾದಕರು

ಡಾ|| ಎಚ್. ತಿಪ್ಪೇರುದ್ರ ಸ್ವಾಮಿ

ಸಂಪಾದಕರು

ಡಾ|| ಬಿ. ಕೆ. ಗುರುರಾಜ ರಾವ್

ಡಾ|| ಸಿ. ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀ ಮೀರಾ ಪ್ರಿಂಟರ್ಸ್, ಶಿವರಾಮಪೇಟೆ, ಮೈಸೂರು–೧

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧ ಪಿ. ಆರ್. ತಿಪ್ಪೇಸ್ವಾಮಿ	ನಿವೃತ್ತ ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಮಾನಸಗಂಗೋತ್ರಿ, ಮೈಸೂರು-೬
೨ ಆರ್. ಇಂದಿರಾ,	ಪ್ರವಾಚಕಿ, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ ಮೈಸೂರು-೬
೩ ಬಿ. ಎಸ್. ಮಂಜುನಾಥಯ್ಯ ಕೆ. ಯಶೋಧರಾ ಮತ್ತು ಬಿ. ಎನ್. ಸುಜಾತಾ	ಅಧ್ಯಾಪಕರು, ಶಿಕ್ಷಣಶಾಸ್ತ್ರ ವಿಭಾಗ, ಮಾನಸಗಂಗೋತ್ರಿ ಮೈಸೂರು-೬
೪ ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬
೫ ಹರಿತಸ ಅನಂತಶರ್ಮ	ಹಿಂದಿ ಅಧ್ಯಾಪಕರು, ಸೇಂಟ್ ಫಿಲೋಮಿನಾ ಕಾಲೇಜು, ಮೈಸೂರು
೬ ಎಚ್. ಆರ್. ರಘುನಾಥಭಟ್ಟ	ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ೫೮೦ ೦೦೩
೭ ಆರ್. ರಾಜಪ್ಪ ದಳವಾಯಿ	ಅಂತಿಮ ಎಂ.ಎ. ವಿದ್ಯಾರ್ಥಿ, ಕನ್ನಡ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
೮ ಟಿ. ದಯಾನಂದ ಪಟೇಲ್	ಕ್ಯೂರೇಟರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ ಮೈಸೂರು-೬
೯ ಎಲ್. ಎಸ್. ಕಪನಿಗೌಡ	ಕ್ಷೇತ್ರ ಸಹಾಯಕ, ಮಾನವಶಾಸ್ತ್ರವಿಭಾಗ. ಮಾನಸಗಂಗೋತ್ರಿ, ಮೈಸೂರು-೬
೧೦ ಲಕ್ಷ್ಮೀನಾರಾಯಣ ಆರೋರಾ	ಅಧ್ಯಾಪಕರು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬

೧೧ ಯಮುನಾಬಾಯಿ ಆರ್. ರಾವ್ — 'ಶ್ರೀ', ೪೦೯, ೧೨ನೇ ಮುಖ್ಯರಸ್ತೆ, ಸರಸ್ವತೀಪುರಂ, ಮೈಸೂರು-೯

೧೨ ಸೀತಾರಾಮ ಜಾಗೀರ್‌ದಾರ್ — ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು-೬

೧೩ ಎಚ್. ಕೆ. ನಾಗರಾಜ — ಪ್ರವಾಚಕರು, ಕಾನೂನುಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು-೭

೧೪ ಎ. ವಿ. ನರಸಿಂಹಮೂರ್ತಿ — ಶಾಸನಶಾಸ್ತ್ರ ಸಹಾಯಕ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬



ಶ್ರೀಮನ್ನಾಲ್ವಡಿ ಕೃಷ ರಾಜ ಒಡೆಯರ್ ಅವರು

ಪಿ. ಆರ್. ತಿಪ್ಪೇಸ್ವಾಮಿ

ನಾಲ್ವಡಿ ಕೃಷ್ಣರಾಜ ಒಡೆಯರ ಕಲಾ ಸೇವೆ

ಮೈಸೂರು ರಾಜರ ಕಲಾಭಿಮಾನ ಹಾಗೂ ಮುಕ್ತ ಮನಸ್ಸಿನ ಪ್ರೋತ್ಸಾಹ ಇಲ್ಲಿನ ಭವ್ಯ ಕಲಾಪರಂಪರೆಗೆ ಮೂಲ ನೆಲೆಯಾಗಿತ್ತು. ಮೈಸೂರು ಅರಸರ ಆಶ್ರಯದಲ್ಲಿ ಕನ್ನಡ ನಾಡಿನ ಚಿತ್ರ ಶಿಲ್ಪ ಕಲೆ ಚೈತನ್ಯವನ್ನು ಪಡೆದು ತನ್ನ ವೈಭವ ಶಿಖರವನ್ನು ಮುಟ್ಟಿತು.

'ಶೃಂಗಾರ ಕರ್ನಾಟಕ ಚಕ್ರೀ' ಬಿರುದನ್ನು ಹೊಂದಿದ್ದ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಆರಂಭವಾದ, ಈ ಪ್ರೋತ್ಸಾಹ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿತ್ತು. 1861 ರಲ್ಲಿ ಮೈಸೂರು ನಗರದಲ್ಲಿ ಜಗನ್ಮೋಹನ ಬಂಗಲೆಯಲ್ಲಿ ಕಲಾವಸ್ತುಗಳನ್ನು ಸಂಗ್ರಹಿಸಲು ದಾರಿಮಾಡಿಕೊಟ್ಟಿದ್ದಲ್ಲದೆ ಇಲ್ಲಿ ಕನ್ನಡ ಚಿತ್ರಶೈಲಿಯ ಭಿತ್ತಿಚಿತ್ರಗಳನ್ನು ಸ್ಥಳೀಯ ಕಲಾವಿದರಿಂದ ರಚಿಸಲು ಅವಕಾಶ ನೀಡಿದರು. ಅಲ್ಲದೆ ತಮ್ಮ ತಂದೆಯವರ ಹೆಸರಿನಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಕಟ್ಟಡ ಆರಂಭವಾದುದು ಇವರ ಕಾಲದಲ್ಲೇ.

ರಾಜರ್ಷಿಗಳಾಗಿದ್ದ ನಾಲ್ವಡಿ ಕೃಷ್ಣರಾಜರು ತಮ್ಮ ಕಾಲದಲ್ಲಿ ಅನೇಕ ಕಲಾವಿದರಿಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಇವರ ಕಾಲದಲ್ಲಿ ಪಾಶ್ಚಾತ್ಯ ತಂತ್ರದ ಕೃತಿಗಳನೇಕವು ಬೆಳಕು ಕಂಡಿವೆ. ಅವನ್ನು ಬಹುಪಾಲು ಪಾಶ್ಚಿಮಾತ್ಯರು ಹಾಗೂ ನಮ್ಮ ಕಲಾವಿದರನೇಕರು ರಚಿಸಿದ್ದಾರೆ. ರಾಜಾಶ್ರಯ ಪಡೆದ ಹೊರಗಿನ ಕಲಾವಿದರಲ್ಲಿ ಜರ್ಮನಿಯ ಜೆರಾರ್ಡ್‌ಟನ್, ಇಂಗ್ಲೇಂಡಿನ ಸ್ಟರ್ಲಿನ್, ವೆಕ್ಸಲರ್ ಇಟಲಿಯ ಶಿಲ್ಪಿ ಕಾರ್ಟಮ್ಯಾನ್ ಅಲ್ಲದೆ ತಿರುವಾಂಕೂರಿನ ರಾಜಾರವಿವರ್ಮ ಮತ್ತು ಇವರ ಸೋದರ ರಾಮವರ್ಮ ರಷ್ಯಾದ ನಿಕೋಲಾಸ್ ರೋರಿಚ್ ಮೊದಲಾದವರು ಪ್ರಮುಖರು. ನಮ್ಮವರಲ್ಲಿ ಎಂ. ಎ. ಅಜೀಜ್, ಲಕ್ಷ್ಮಣಕೃಷ್ಣ, ಕೆ. ಕೇಶವಯ್ಯ, ಕೆ. ವೆಂಕಟಪ್ಪ, ವೈ. ನಾಗರಾಜು, ಎಸ್. ನಂಜುಂಡಸ್ವಾಮಿ, ಎಸ್. ಎನ್. ಸ್ವಾಮಿ, ವೈ. ಸುಬ್ರಮಣ್ಯರಾಜು, ಎಸ್. ಆರ್. ಅಯ್ಯಂಗಾರ್, ಶಂಕರರಾಜು, ಶಿಲ್ಪಿಗಳಾದ ಸ್ವರ್ಣಕಲಾನಿಪುಣ ನಿಂಗಣ್ಣಾಚಾರ್ಯ, ಅಂಕಪ್ಪಾಚಾರ್ಯ, ಚಿನ್ನಾಚಾರ್ಯ, ಶ್ರೀನಿವಾಸಾಚಾರ್ಯ, ಬಿ. ಬಸವಯ್ಯ ಮುಂತಾದವರು ಪ್ರಮುಖರು.

ತ್ರಿಭಾಷಾ ಪಂಡಿತರೂ ಅಪೂರ್ವ ಕಲಾಭಿಮಾನಿಗಳೂ ಆಗಿದ್ದ ನಾಲ್ವಡಿ ಕೃಷ್ಣರಾಜರು ಅಂಗಸಾಧನೆ, ಕುದುರೆ ಸವಾರಿ, ಕವಾಯತ್ತು ಮುಂತಾದ ಅಂಗಸಾಧನೆ ಕಲೆಯನ್ನು ರೂಢಿಸಿಕೊಂಡಿದ್ದರು. ಶಿಸ್ತಿನ ಸಾತ್ವಿಕ ಕಲಾಮಯ ಜೀವನ ಇವರದಾಗಿತ್ತು.

'ದೇಶ ಸಂಚಾರ ಬಹಳ ಪ್ರಯೋಜನ' ಎಂಬುವುದನ್ನು ಇವರ ವಿದ್ಯಾಗುರು ಕರ್ನಲ್ ಮ್ಯಾಲಿಸರ್ ಸದಾ ಹೇಳುತ್ತಿದ್ದರು. ರಾಜರನ್ನು ಗಾಡಿಯಲ್ಲಿ ಕೂಡಿಸಿ ತಾವೇ ಪಾಠಶಾಲೆಗೆ ಕರೆತರುವುದನ್ನು ರಾಜರು ಕೊನೆತನಕ ಜ್ಞಾಪಿಸಿಕೊಳ್ಳುತ್ತಿದ್ದರು. ಜೊತೆಗೆ ನಾಗರಿಕ ಮುಂತಾದ

ನಿಸರ್ಗನೆಲೆಗಳಿಗೆ ಜೊತೆಯಲ್ಲಿ ಪ್ರವಾಸ ಮಾಡಿಸುತ್ತಿದ್ದರು. ಮುಂದೆ ಹಿಮಾಲಯ ಗೌರೀಶಂಕರ ಶಿಖರ ಸಂದರ್ಶಿಸಿ ಅಲ್ಲಿನ ಆದಿವಾಸಿ ಜನರ ಕಲೆಯ ಬಗ್ಗೆ ಅಧ್ಯಯನ ಮಾಡಿ ಬಂದರು. ಅಲ್ಲಿಯ ಸುಂದರ ನೆಲೆಗಳನ್ನು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದರು.

ನಾಲ್ವಡಿ ಅವರ ಮತ್ತೊರ್ವ ವಿದ್ಯಾಗುರು ಗಾರ್ಡನ್ ಸಾಹೇಬರು ಮೈಸೂರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯ ನೆನಪಿಗಾಗಿ ಅವರ ಲೋಹ ಪ್ರತಿಮೆಯನ್ನು ಮಾಡಿಸಿ ಬೆಂಗಳೂರಿನ ಅಠಾರ ಕಛೇರಿಯ ಹಿಂಬದಿ ಸ್ಥಾಪಿಸಿದರು.

ನಾಲ್ವಡಿಯವರಿಗೆ ಚಿತ್ರ–ಶಿಲ್ಪ ಕಲೆಯಲ್ಲಿ ಆಸಕ್ತಿ ಇದ್ದಿತು. ಇವರಿಗೆ ಪಟ್ಟಾಭಿಷೇಕ ಆದ ಸಮಯ. ತಮ್ಮ ತಂದೆ ದಿ॥ ಚಾಮರಾಜ ಒಡೆಯರ ಅದ್ಭುತ ಶಿಲಾ ಪ್ರತಿಮೆಯ ನಿರ್ಮಾಣದ ಬಗ್ಗೆ ಒಂದು ಸ್ವಾರಸ್ಯ ಘಟನೆ ನೆನಪು ಬರುತ್ತದೆ. ಚಾಮರಾಜ ಒಡೆಯರ ಪ್ರತಿಮೆ ಇಟಲಿಯ ಸುಪ್ರಸಿದ್ಧ ಶಿಲ್ಪಿ ಕಾರ್ನವನ್ನಿಯಿಂದ ಕೆತ್ತಿಸಲಾಗಿದ್ದು ಹಡಗಿನಲ್ಲಿ ಮೈಸೂರಿಗೆ ತರಲಾಯಿತು. ಬಹು ಬೆಲೆಬಾಳುವ ಈ ಪ್ರತಿಮೆಯನ್ನು ಪರೀಕ್ಷಿಸಿದ ರಾಜಮಾತೆ ಅದು ತನ್ನ ಪತಿಯ ಮುಖಭಾವವನ್ನು ತೋರುವುದಿಲ್ಲವೆಂದು ನೊಂದು ನುಡಿದರು. ಎಲ್ಲ ಭಾಗವೂ ಸೊಗಸಾಗಿದ್ದರೂ ಮುಖಭಾವ ಸರಿ ಇಲ್ಲ ಎಂಬ ಮಾತೆಯ ಅಭಿಪ್ರಾಯ ನಾಲ್ವಡಿ ಅವರಿಗೂ ಸರಿ ಎನಿಸಿತು. ಏನು ಮಾಡುವುದೆಂದು ಚಿಂತಿಸಿದರು. ಓರ್ವ ಅರಮನೆಯ ಶಿಲ್ಪಿ ಒಂದು ಉಪಾಯ ಸೂಚಿಸಿದರು. ಬೊಂಬಾಯಿಯ ಸರ್. ಜೆ. ಜೆ. ಕಲಾಶಾಲೆಯ ಖ್ಯಾತ ಶಿಲ್ಪಿ ರಾವ್‌ಬಹದ್ದೂರ್ ಗಣಪತಿರಾವ್ ಮಾತ್ರೆ ಅವರನ್ನು ಕರೆಸಿದರು. ಮಾತ್ರೆಯವರು ಚಾಮರಾಜರ ಕೆಲವು ಭಾವಚಿತ್ರಗಳ ಸಹಾಯದಿಂದ ತಲೆ ಭಾಗವನ್ನು ನಿರ್ಮಿಸಿದರು. ಇಟಲಿಯ ಶಿಲ್ಪಿ ಮಾಡಿದ್ದ ಪ್ರತಿಮೆಯ ತಲೆಭಾಗವನ್ನು ಕತ್ತರಿಸಿದ. ಆ ಜಾಗಕ್ಕೆ ತಾನು ಮಾಡಿದ ಭಾಗವನ್ನು ಕೂಡಿಸಿದ. ರಾಜಮಾತೆ ಇದನ್ನು ವೀಕ್ಷಿಸಿದರು. ಸ್ವಾಭಾವಿಕತೆಯಿಂದ ಕೂಡಿದ ತಮ್ಮ ಪತಿಯ ವಿಗ್ರಹ ಪ್ರತಿಷ್ಠಾಪನೆಗೆ ಒಪ್ಪಿಗೆ ನೀಡಿದರು. ನಾಲ್ವಡಿಯವರಿಗೆ ಆದ ಆನಂದ ಹೇಳತೀರದು. ಶಿಲ್ಪಿಯ ಚಮತ್ಕಾರಕ್ಕೆ ಬೆರಗಾದರು. ಪ್ರೋತ್ಸಾಹದ ಬಹುಮಾನ ನೀಡಿ ಗೌರವಿಸಿದರು. ಈ ವಿಷಯ ಅನೇಕರಿಗೆ ತಿಳಿಯಿತು.

ನಮ್ಮ ರಾಜರಿಗೆ ದೇಶವಿದೇಶಗಳಿಂದ ಉಡುಗೊರೆಯಾಗಿ ಬಂದ ಹಾಗೂ ಅವರು ಉಪಯೋಗಿಸಿದ ಅಪೂರ್ವ ಕಲಾವಸ್ತುಗಳನ್ನೆಲ್ಲಾ ಒಂದೆಡೆ ಹಾಕಲಾಯಿತು. ಇವುಗಳನ್ನು ನಾಲ್ವಡಿ ಅವರ ಕಾಲದಲ್ಲಿ ಒಂದೆಡೆ ಪ್ರದರ್ಶಿಸಲಾಯಿತು. ಇದಕ್ಕಾಗಿಯೇ ಜಗನ್ಮೋಹನ ಅರಮನೆಯು ಕಲಾವಸ್ತುಗಳ ಸಂಗ್ರಹಾಲಯವಾಗಿ ರೂಪಗೊಂಡಿತು. 1915 ರ ಸುಮಾರಿಗೆ ಇದು ನಾಲ್ವಡಿ ಕೃಷ್ಣರಾಜ ಒಡೆಯರ ಸವಿನೆನಪಿಗಾಗಿ ವ್ಯವಸ್ಥೆ ಮಾಡಲಾಯಿತು. ಶ್ರೀ ಬಾಲರಾಜ ಅರಸ್ ಅವರು ಇದರ ಪ್ರಥಮ ಮೇಲ್ವಿಚಾರಕರು. ಅನಂತರ ಜನಾಬ್ ಷಾ ಎಂಬುವರು ನಾಲ್ವಡಿಯವರ ಆದೇಶದಂತೆ ಚಿತ್ರಗಳನ್ನು ಸೇರಿಸುವಂತೆ ಮಾಡಿದರು. ಇದರಿಂದಾಗಿ ಇಲ್ಲಿಂದೀಚೆಗೆ "ಜಗನ್ಮೋಹನ ಚಿತ್ರಶಾಲೆ" ಎಂದು ಹೆಸರಾಯಿತು. ದೇಶೀಯ ಕಲಾವಿದರ ಕಲಾಕೃತಿಗಳ ಜೊತೆಗೆ ದೇಶವಿದೇಶ ಕಲಾವಿದರ ಕೃತಿಗಳಿಗೆ ಇಲ್ಲಿ ಎಡೆಗೊಡುವುದರ ಮೂಲಕ ಇದಕ್ಕೆ ಅಖಿಲ ಭಾರತ ಮಟ್ಟದ ಖ್ಯಾತಿ ದೊರಕಿಸಿ ಕೊಡಲಾಯಿತು.

1932 ರಿಂದ 1937 ರವರೆಗೆ ಪ್ರತಿವರ್ಷ ಮೈಸೂರು ದಸರೆಯ ಕಲಾಪ್ರದರ್ಶನದಿಂದ ಉತ್ತಮ ಚಿತ್ರಗಳನ್ನು ಶಿಲ್ಪ ಕೃತಿಗಳನ್ನು ಕೊಳ್ಳಲಾಯಿತು. ಮ್ಯಾಕಾಲುಪ್, ಕೆ. ವೆಂಕಟಪ್ಪ, ಜೇಮ್ಸ್ ಕಜಿನ್ಸ್. ಸರ್ದಾರ್ ಮದನಗೋಪಾಲರಾಜ ಅರಸರು ಈ ಕಲಾಸಂಗ್ರಹಾಲಯವನ್ನು ಓರಣವಾಗಿ ಜೋಡಿಸಿ ಹೊಸರೂಪ ತಂದರು. ಈ ಚಿತ್ರಶಾಲೆಯಲ್ಲಿ ಹೈದರ್, ಟಿಪ್ಪು ಮತ್ತು ಇಂಗ್ಲೀಷ್ ಅಧಿಕಾರಿಗಳ ಅನೇಕ ಚಿತ್ರಗಳೂ ಇದ್ದವು. ಇವುಗಳನ್ನು ಶ್ರೀರಂಗಪಟ್ಟಣದ ಕಾವೇರಿ ನದಿ ತೀರದ 'ಸ್ಕಾಟ್' ಬಂಗಲೆಯಲ್ಲಿ ಪ್ರದರ್ಶಿಸಲಾಯಿತು. ನಾಲ್ವಡಿ ಅವರ ಆದೇಶದಂತೆ ಮತ್ತೆ ಅವು ಜಗನ್ಮೋಹನ ಬಂಗಲೆಗೆ ಮರಳಿಬಂದುವು.

ಈ ಮನಮೋಹಕ ಜಗನ್ಮೋಹನ ಬಂಗಲೆಯ ಮುಂಭಾಗವನ್ನು ಸಭಾಂಗಣವಾಗಿ ನಾಲ್ವಡಿ ಅವರ ವಿವಾಹ ಮಹೋತ್ಸವಕ್ಕಾಗಿ 1900 ನಲ್ಲಿ ವಿಸ್ತರಿಸಲಾಯಿತು. 1902 ರಲ್ಲಿ ನಾಲ್ವಡಿ ಅವರು ಲಾರ್ಡ್ ಕರ್ಜನ್‌ರೊಂದಿಗೆ ದರ್ಬಾರು ನಡೆಸಿದ್ದು ಈ ಸುಂದರ ಸಭಾಂಗಣದಲ್ಲೇ.

ಈ ಕಲಾಗಾರಕ್ಕೆ ಹಾಗೂ ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ ರಾಜರಲ್ಲಿ ಮುಮ್ಮಡಿ ಭೂಪರನ್ನು ಹಾಗೂ ನಾಲ್ವಡಿ ಭೂಪರನ್ನು ಯಾರೂ ಮರೆಯುವಂತಿಲ್ಲ. ಇವರ ಕಾಲದಲ್ಲಿ ಚಿತ್ರ ಕಲೆಗೆ ಹೆಚ್ಚಿನ ಪ್ರೋತ್ಸಾಹ ಬೆಂಬಲ ದೊರೆತ ನಿದರ್ಶನಗಳಿವೆ.

ಮುಮ್ಮಡಿ ಅವರ ಕಾಲದಲ್ಲಿ ಭಿತ್ತಿಚಿತ್ರಗಳು ಇಲ್ಲಿ ರೂಪುಗೊಳ್ಳುವಂತಾದುದು, ಶಿಕಾರಿ ಪುರದ ಚಿತ್ರಕಾರ ತಿಪ್ಪಯ್ಯ, ಮೈಸೂರಿನ ಕೊಂಡಯ್ಯ, ವೀರಣ್ಣ ಮುಂತಾದ ಚಿತ್ರಕಾರರಿಗೆ ಪ್ರೋತ್ಸಾಹ ದೊರೆತಂತೆ– ನಾಲ್ವಡಿ ಅವರ ಕಾಲದಲ್ಲಿ ಸೊರಬದ ಗುಡಿಗಾರ ಶಿಲ್ಪಿ ವಾಮನಪ್ಪ ಸಿಂಗಣ್ಣಾಚಾರ್ಯ, ವೆಂಕಟಪ್ಪ, ಕೇಶವಯ್ಯ ಮೊದಲಾದವರಿಗೆ ಪ್ರೋತ್ಸಾಹ ದೊರೆಯಿತು. ಖ್ಯಾತ ವಿದೇಶಿ ಚಿತ್ರಕಾರರಾಗಿದ್ದ ವೆಕ್ಸ್‌ಲರ್ ಮತ್ತು ಜರಾಲ್ಡೇನರು ರಚಿಸಿದ ನಾಲ್ವಡಿ ಅವರ ರೂಪಚಿತ್ರಗಳು ಅಮೋಘವಾಗಿವೆ. 1900ರಲ್ಲಿ ನಡೆದ ನಾಲ್ವಡಿ ಅವರ ವಿವಾಹ ಮಹೋತ್ಸವದ ಚಿತ್ರವನ್ನು ವೆಕ್ಸ್‌ಲರ್‌ನು ತುಂಬ ಶ್ರಮದಿಂದ ರೂಪಿಸಿದ್ದಾನೆ.

1904ರಲ್ಲಿ ಜುಲೈ ತಿಂಗಳಲ್ಲಿ ರಾಜಾರವಿವರ್ಮನಿಗೆ ನಾಲ್ವಡಿ ಅವರಿಂದ ಆಮಂತ್ರಣ ತಲುಪಿತು. ಹೊಸದಾಗಿ ನಿರ್ಮಿಸಲಾಗಿದ್ದ ಜಗನ್ಮೋಹನ ಅರಮನೆಯನ್ನು ಅಲಂಕರಿಸಲು ರವಿವರ್ಮನ ಕೃತಿಗಳೇ ಯೋಗ್ಯವೆಂದು ಮಹಾರಾಜರು ಬಗೆದಿದ್ದರು. ಅಲ್ಲದೆ ಹೊಸ ಅರಮನೆಗೆ ಕಲಾನಿರ್ದೇಶಕರಾಗಿಯೂ ರವಿವರ್ಮನ ಸಹಕಾರವನ್ನು ಬಯಸಿದರು. ಈತ ಮೈಸೂರಿನಲ್ಲಿದ್ದು ಒಂಬತ್ತು ತೈಲಚಿತ್ರಗಳನ್ನು ರಚಿಸಿದನು. ಅರಮನೆಯ ಅಲಂಕಾರ ಗೃಹಗಳಿಗೆ ವರ್ಣ ಸಂಯೋಜನೆಯೂ ಈತನ ಮಾರ್ಗದರ್ಶನದಲ್ಲಿ ನಡೆಯಿತು. ಮಹಾರಾಜರ ಪೂರ್ಣ ಆಕಾರದ ತೈಲಚಿತ್ರವೊಂದನ್ನು ರವಿವರ್ಮ ರಚಿಸಿದನು.

ಇಂಗ್ಲೆಂಡಿನ ರಾಜಕುಮಾರನು ಮೈಸೂರಿಗೆ ಭೇಟಿನೀಡಿದ ಸಂದರ್ಭದಲ್ಲಿ 'ಖೆಡ್ಡಾ' ಕಾರ್ಯಕ್ರಮ ಏರ್ಪಡಿಸಲಾಯಿತು. ರವಿವರ್ಮನೂ ಇವರೊಂದಿಗೆ ಅರಣ್ಯಕ್ಕೆ ತನ್ನ ಕಲಾಸಾಮಗ್ರಿ ಯೊಂದಿಗೆ ಹೋಗಿ ಅನೇಕ ದೃಶ್ಯಗಳನ್ನು ಚಿತ್ರಿಸಿದನು. ಇಂಗ್ಲೆಂಡಿನ ರಾಜಕುಮಾರ ಹಾಗೂ

ಅವರ ಜೊತೆ ಬಂದಿದ್ದ ಐರೋಪ್ಯ ಕಲಾವಿದರು ರವಿವರ್ಮನ ಕುಂಚಕೌಶಲಕ್ಕೆ ಅಚ್ಚರಿ ಪಟ್ಟಿದ್ದರು. ಆತನಿಗೆ ನಾಲ್ವಡಿ ಅವರು ಸಾಕಷ್ಟು ಪುರಸ್ಕಾರ ಪ್ರಶಸ್ತಿ ನೀಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ''ಕರಕುಶಲ ಕಲೆ ಜನಸಾಮಾನ್ಯರಿಗೂ ಮುಟ್ಟಲಿ'' ಎಂಬ ಆಸೆ ಇದ್ದಿತು. ಅದಕ್ಕಾಗಿಯೇ ಮೈಸೂರಿನ ಈಗಿನ ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆ ಕಟ್ಟಡಕ್ಕೆ ನಜರ್‌ಬಾದಿನಲ್ಲಿದ್ದ ಪುಟ್ಟ ಕಲಾಶಾಲೆಯನ್ನು ವರ್ಗಾಯಿಸಲಾಯಿತು. ಚಾಮರಾಜೇಂದ್ರ ಒಡೆಯರ ಹೆಸರಿನಲ್ಲಿ ಈ ಕಟ್ಟಡದ ಶಂಕುಸ್ಥಾಪನೆ 1901 ರ ಜನವರಿ ತಿಂಗಳಲ್ಲಿ ಜರುಗಿತು. ಈ ಸಮಾರಂಭಕ್ಕೆ ಬೇಕಾದ ಕರಂಡವೊಂದನ್ನು ನಾಗಮಂಗಲದ ಪ್ರಸಿದ್ಧ ಶಿಲ್ಪಿ ವೆಂಕಟಾಚಾರ್ಯರು ನಿರ್ಮಿಸಿದರು. ಒಂದೂವರೆ ಅಡಿ ಉದ್ದದ ಅಳತೆ ಸೇರಿನಾಕಾರದ ಕರಂಡವೊಂದನ್ನು ರಚಿಸಿ, ಅದರ ಸುತ್ತಲೂ ಮನಮೋಹಕವಾದ ತಮ್ಮ ಕೈಚಳಕದಿಂದ ಅಮೋಘವಾದ ಕುಸುರಿ ಕೆತ್ತನೆ ಮಾಡಿಕೊಟ್ಟರು. ಈ ಕರಂಡದ ಮೇಲ್ಭಾಗದಲ್ಲಿ ವಿರಾಟ ವಿಶ್ವಕರ್ಮ ಭಗವಂತನ ಮೂರ್ತಿಯನ್ನು ಸೃಷ್ಟಿಸಿದ್ದರು. ಶಂಕುಸ್ಥಾಪನೆಯ ಕಾರ್ಯ ನಾಲ್ವಡಿ ಅವರ ಅಧ್ಯಕ್ಷತೆಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಹಸ್ತದಿಂದ ನೆರವೇರಿತು. ಶಿಲ್ಪಿ ವೆಂಕಟಾಚಾರ್ಯರು, ನಿರ್ಮಿಸಿದ ಕರಂಡದ ತುಂಬ ವಜ್ರವೈಢೂರ್ಯಗಳನ್ನು ತುಂಬಿ ಕಟ್ಟಡದ ಭೂಮಿಯೊಳಗೆ ಇರಿಸಿ ಸಮಾರಂಭ ಮುಗಿಸಲಾಯಿತು. ಶಿಲ್ಪಿಯನ್ನು ಸನ್ಮಾನಿಸಲಾಯಿತು.

ಈ ಶಿಲ್ಪಿ ವೆಂಕಟಾಚಾರ್ಯರ ಕೀರ್ತಿ ಲಂಡನ್ನಿನಲ್ಲಿ ಮೆರೆಯುವಂತಾದುದಕ್ಕೆ ನಾಲ್ವಡಿ ಅವರೇ ಕಾರಣರು. ಲಂಡನ್ನಿನಲ್ಲಿ ನಡೆದ ವಿಶ್ವಕಲಾ ಪ್ರದರ್ಶನದಲ್ಲಿ ಇವರ ಕೃತಿಗೆ ವಿಕ್ಟೋರಿಯಾ ರಾಣಿ ಅವರ ಸ್ವರ್ಣ ಪದಕ ದೊರೆಯಿತು.

ವೆಂಕಟಾಚಾರ್ಯರ ಮಗ ಚಿನ್ನಾಚಾರ್ಯರಿಗೂ ನಾಲ್ವಡಿ ಅವರಿಂದ ಪ್ರೋತ್ಸಾಹ ದೊರೆಯಿತು. ಚಿನ್ನಾಚಾರ್ಯರು ನಾಲ್ವಡಿ ಅವರ ಪೂರ್ಣ ಪ್ರಮಾಣದ ಪ್ರತಿಮೆಯನ್ನು ಪಂಚಲೋಹದಲ್ಲಿ ನಿರ್ಮಿಸಿದರು. ಇದು ಇಂದಿಗೂ ಬೇಲೂರಿನ ದೇವಾಲಯದ ಆವರಣದಲ್ಲಿ ಅನೇಕರನ್ನು ಆಕರ್ಷಿಸುತ್ತಿದೆ.

ನಾಲ್ವಡಿ ಅವರಿಂದ ಪ್ರಸಿದ್ಧ ಕಲಾವಿದರಾಗಿದ್ದ ಕೆ. ವೆಂಕಟಪ್ಪನವರ ತಂದೆ ದುರ್ಗದ ಕೃಷ್ಣಪ್ಪನವರಿಗೂ ಪ್ರೋತ್ಸಾಹ ದೊರೆತಿತ್ತು. ಇವರು ರಚಿಸುತ್ತಿದ್ದ ದೇಶೀಯ ಚಿತ್ರಗಳಿಗೆ ರಾಜರಿಂದ ಹೆಚ್ಚಿನ ಪುರಸ್ಕಾರ ದೊರೆಯಿತು. ಅರಮನೆಯ ಕಟ್ಟಡದ ನಿರ್ಮಾಣ ಕಾಲದಲ್ಲಿ ನೂರಾರು ಜನ ಕಲಾವಿದರು, ಶಿಲ್ಪಿಗಳು ಅಲ್ಲಿ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಬಾಲಕ ವೆಂಕಟಪ್ಪನಿಗೂ ಅಲ್ಲಿ ಉದ್ಯೋಗ ದೊರೆಯಿತು. ನುರಿತ ಕಲಾವಿದರಂತೆ ಕೈಚಳಕವನ್ನು ತೋರುತ್ತ ಈ ಬಾಲಕ ತಮ್ಮಷ್ಟೇ ಸಮಾನವಾದ ಸಂಭಾವನೆ ಪಡೆಯುತ್ತಿದ್ದುದನ್ನು ಕಂಡ ಕೆಲವರು ಗೊಣಗಾಡಿದರು. ವಿನಾಪ ಹೊತ್ತ ತಮ್ಮಂತೆಯೇ ಈ ಬಾಲಕನನ್ನು ರಾಜರು ಪುರಸ್ಕರಿಸುತ್ತಿದ್ದುದು ಅವರಿಗೆ ಸರಿಬೀಳಲಿಲ್ಲ. ಇದನ್ನು ಗಮನಿಸಿದ ತರುಣ ಕಲಾವಿದ ವೆಂಕಟಪ್ಪ ''ವಿನಾಪೆಯಲ್ಲ ಕೆಲಸ ಮಾಡುವುದು, ಹಸ್ತ'' ಎಂದು ಚಾತುರ್ಯದಿಂದ ಉತ್ತರಿಸಿ ಅವರನ್ನು ನಗಿಸಿದ್ದನಂತೆ. ಈ ಬಾಲಕ ಬರೆದ 'ಸಿಂಹ–ಸಿಂಹಿಣಿ' ನಾಲ್ವಡಿ ಅವರ ದೃಷ್ಟಿಗೆ ಬಿದ್ದು ಆ ಚಿತ್ರ ಬಾಲಕನ ಕೃತಿ ಎಂದು

ನಂಬದೆ ಒಂದು ಸಣ್ಣ ಪರೀಕ್ಷೆಯನ್ನು ನಡೆಸಿ ಬಹುಮಾನ ನೀಡಿದರು. ರಾಜರ ದೃಷ್ಟಿಗೆ ಬಿದ್ದ ಈ ಬಾಲಕನನ್ನು ಮುಂದೆ ಕಲಾಭ್ಯಾಸಕ್ಕೆ ಕಲಕತ್ತೆಗೆ ಕಳಿಸುವ ಮುಂಚೆ ಇವರಿಗೆ ಆಂಗ್ಲಭಾಷೆ ಕಲಿಸಲು ಏರ್ಪಾಟುಮಾಡಿದರು.

ಕಲಾಭ್ಯಾಸ ಮುಗಿಸಿ ಮೈಸೂರಿಗೆ ಹಿಂದಿರುಗಿದ ವೆಂಕಟಪ್ಪನವರನ್ನು ಅರಮನೆಯಲ್ಲಿ ಶಿಲ್ಪ ಕೃತಿ ರಚಿಸಲು ಕಲಾಗಾರನನ್ನಾಗಿ ನೇಮಿಸಿಕೊಂಡರು. ಇಲ್ಲಿ ನಾಲ್ವಡಿ ಅವರ ಅಪೇಕ್ಷೆಯಂತೆ ಅನೇಕ ಪ್ಲಾಸ್ಟರ್ ರಿಲೀಫ್‌ಗಳನ್ನು ರಚಿಸಿದರು. ವರ್ಣರಹಿತ ಕಲೆ ಇದು. ಇಲ್ಲಿ ಉಬ್ಬುತಗ್ಗುಗಳ ಕುಶಲತೆ ಮುಖ್ಯ. ಅತಿ ಸೂಕ್ಷ್ಮ ರೇಖಾವಿನ್ಯಾಸ ಇವರದು. ಜಲವರ್ಣ ನಿಸರ್ಗ ಚಿತ್ರಗಳ ಜೊತೆಗೆ ದಂತದ ಫಲಕದ ಮೇಲೆ ಜಲವರ್ಣದ ತಮ್ಮ ರೂಪಚಿತ್ರಗಳನ್ನು ಕಾವ್ಯಕಥಾಚಿತ್ರಗಳನ್ನು ಬರೆಸಿ ಪ್ರಭುಗಳು ಪ್ರೋತ್ಸಾಹಿಸಿದರು. ಸಂಗೀತದಲ್ಲಿ ವೆಂಕಟಪ್ಪನವರಿಗೆ ವ್ಯಾಮೋಹ ಇದ್ದುದನ್ನು ಗಮನಿಸಿದ ರಾಜರು ಅವರನ್ನು ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರಲ್ಲಿ ವೀಣಾಭ್ಯಾಸವನ್ನು ಮಾಡುವಂತೆ ಪ್ರೋತ್ಸಾಹಿಸಿದರು. ಇವರ ಕಲಾಪ್ರೌಢಿಮೆ ಮೆಚ್ಚಿದ ರಾಜರು ಅವರಿಗೆ ಯಾವ ಕಟ್ಟುಕಟ್ಟಲೆ ಇಲ್ಲದೆ ಸಾಧಾರಣ ಉಡುಪಿನಲ್ಲಿ ಸಂದರ್ಶನ ಮಾಡಲು ಅವಕಾಶವನ್ನು ನೀಡಿದ್ದರು.

ಕರ್ನಾಟಕ ಕಲಾವಿದರಿಗೆಲ್ಲ ಆಚಾರ್ಯಪುರುಷರಂತಿದ್ದ ಸ್ವರ್ಣಕಲಾನಿಪುಣ ಸಿಂಗಣ್ಣಾ ಚಾರ್ಯರಿಗೆ ನಾಲ್ವಡಿ ಭೂಪರು ಇತ್ತ ಪ್ರೋತ್ಸಾಹ ಯಾರೂ ಮರೆಯುವಂತಿಲ್ಲ. ಖ್ಯಾತ ಚಿತ್ರಕಾರ ಪದ್ಮಶ್ರೀ ಎಸ್. ಎನ್. ಸ್ವಾಮಿಗಳ ತಂದೆ ಸಿಂಗಣ್ಣಾಚಾರ್ಯರು ಅರಮನೆಯಲ್ಲಿ ಕಲಾವಿದರಾಗಿದ್ದರು. ಶಿಲ್ಪಕಲಾವೃತ್ತಿ ಇವರಿಗೆ ವಂಶಪಾರಂಪರ್ಯವಾಗಿ ಬಂದಿತ್ತು.

ಮಹಾರಾಜರು ವರ್ಧಂತಿಯಲ್ಲಿ ಬಳಸುತ್ತಿದ್ದ ಬೆಳ್ಳಿರಥ, ಅಂಬಾರಿ, ಸಿಂಹಾಸನ, ಅನೇಕ ಆಭರಣಗಳನ್ನು ಸಿಂಗಣ್ಣಾಚಾರ್ಯರು ರಚಿಸಿಕೊಟ್ಟಿದ್ದಾರೆ. ಇವುಗಳಲ್ಲಿ ಮುಖ್ಯವಾದುದು ಹಪ್ಪರ್‌ದಾನ್; ಜವಾಹರಿ ಕೆತ್ತನೆ ಕೆಲಸದ ಈ ವಸ್ತುವನ್ನು ರಾಜರು ನವರಾತ್ರಿಯಲ್ಲಿ ಮಾತ್ರ ಬಳಸುತ್ತಿದ್ದರು. ಇದೇ ರೀತಿ ಪನ್ನೀರ್‌ದಾನ್, ದಾನ್‌ದುನ್‌ಗಳನ್ನು ರಚಿಸಿಕೊಟ್ಟಿದ್ದಾರೆ. ಚಾಮುಂಡೇಶ್ವರಿ ವಿಗ್ರಹದ 8 ಹಸ್ತಗಳನ್ನು ಕೆಂಪು ಪಚ್ಚೆವಜ್ರಾದಿಗಳಿಂದ ರೂಪಿಸಿಕೊಟ್ಟಿದ್ದರು.

'8' ಸಾವಿರ ತೊಲೆಯ ಸಿಂಹಾಸನವನ್ನು ಕರಗಿಸಿ 6 ಸಾವಿರ ತೊಲೆಯ ಚಿನ್ನದಲ್ಲಿ ಇಬ್ಬರು ಕೂರುವಂತೆಯೂ ಹಗುರವಾಗಿಯೂ ಮಾರ್ಪಡಿಸಿದ್ದನ್ನು ಕಂಡ ನಾಲ್ವಡಿ ಅವರು ಬಹಳವಾಗಿ ಮೆಚ್ಚಿದ್ದರು. ಇದೇ ರೀತಿ ಸಿಂಹಾಸನವನ್ನು ಚಿನ್ನದ ಕುಸುರಿ ಕೆಲಸದ ಹೊದಿಕೆಯಿಂದ ನಿರ್ಮಿಸಿದ್ದರು.

ಸಿಂಗಣ್ಣಾಚಾರ್ಯರ ಶಿಷ್ಯ ಅಂಕಪ್ಪಾಚಾರ್ಯರಿಗೂ ಈ ರಾಜರಿಂದ ಸಾಕಷ್ಟು ಉತ್ತೇಜನ ದೊರಕಿತ್ತು. ಇವರು ರಾಜರ ಆದೇಶದಂತೆ ಗ್ವಾಲಿಯರ್ ಮಹಾರಾಜರಿಗೆ ಬೆಳ್ಳಿಸಾರೋಟ್ ರಚಿಸಿಕೊಟ್ಟು ಮೈಸೂರು ರಾಜರಿಗೆ ಕೀರ್ತಿ ತಂದರು. ಬಾಳೆಹೊನ್ನೂರು ಶ್ರೀಗಳು ಅಂಕಪ್ಪಾ ಚಾರ್ಯರಿಂದ ರೇಣುಕಾಚಾರ್ಯ ಬೆಳ್ಳಿಯ ಪಟವನ್ನು ಮಾಡಿಸಿ ನಾಲ್ವಡಿ ಭೂಪನಿಗೆ ಅರ್ಪಿಸಿದಾಗ ರಾಜರು ಸಂತೋಷಪಟ್ಟು ಶಿಲ್ಪಿಗಳನ್ನು ಗೌರವಿಸಿದರು.

ಸಿಂಗಣ್ಣಾಚಾರ್ಯರ ಪುತ್ರರಾದ ಎಸ್. ಎನ್. ಸ್ವಾಮಿಗಳಿಗೆ ನಾಲ್ವಡಿ ಅವರಿಂದ ದೊರೆತ ಪ್ರೋತ್ಸಾಹ ಚಿರಸ್ಮರಣೀಯ. ತಂದೆಯವರ ಜೊತೆಯಲ್ಲಿ ಅರಮನೆಗೆ ಹೋಗಿಬರುವ ಒಂದು

ಸಂದರ್ಭ ಸ್ವಾಮಿಗೆ ದೊರೆಯಿತು. ಈ ಬಾಲಕ ಬರೆದ ರೇಖಾಚಿತ್ರ ರಾಜರ ದೃಷ್ಟಿಗೆ ಬಿದ್ದಿತು.

ಒಮ್ಮೆ ಪ್ರಭುಗಳು ಇರ್‌ವಿನ್ ರಸ್ತೆಯ ಮೂಲಕ ಕಾರಿನಲ್ಲಿ ಹೋಗುತ್ತಿದ್ದಾಗ ಬಾಲಕ ಸ್ವಾಮಿ ತಮ್ಮ ಮನೆಯ ಮುಂದೆ ಗೆಳೆಯರೊಂದಿಗೆ ಹರಟೆಯಲ್ಲಿ ತೊಡಗಿದ್ದುದು ರಾಜರ ದೃಷ್ಟಿಗೆ ಬಿದ್ದಿತು. ಪ್ರಭುಗಳನ್ನು ಕಾಣುತ್ತಲೇ ಸ್ವಾಮಿ ಮನೆಯೊಳಗೆ ಧಾವಿಸಿ ಅಡಗಿಕೊಂಡರು. ಆದರೆ ಅಷ್ಟಕ್ಕೆ ಬಿಡದೆ ಸ್ವಾಮಿಯನ್ನು ಅರಮನೆಗೆ ಕರೆಸಿ ಹಾಗೆಲ್ಲಾ ಕಾಲಹರಣ ಮಾಡದೆ ಕಲಾಭ್ಯಾಸದಲ್ಲಿ ತೊಡಗಬೇಕೆಂದು ರಾಜರು ಬುದ್ಧಿ ಹೇಳಿ ಒಂದು ಚಿತ್ರ ಬರೆದುತರಲು ಅಪ್ಪಣೆಮಾಡಿದರು. ಕೂಡಲೇ ಸ್ವಾಮಿ ಸೊಗಸಾಗಿ ರಚಿಸಿ ಅರ್ಪಿಸಿದರು. ರಾಜರು ಮೆಚ್ಚಿ ಬೆನ್ನುತಟ್ಟಿ ಜೇಬುಹಣ ನೀಡಿದರು. ಬೊಂಬಾಯಿ ಕಲಾ ಶಾಲೆಗೆ ಸೇರಿ ಕಲಾಭ್ಯಾಸಮಾಡಲು ವಿದ್ಯಾರ್ಥಿವೇತನವನ್ನು ನೀಡಿದರು. ಮುಂದೆ ಬೊಂಬಾಯಿಗೆ ಹೋದಾಗಲೆಲ್ಲ ಸ್ವಾಮಿಯನ್ನು ಕರೆಸಿ ಉತ್ತೇಜನ ಮಾತು ಗಳನ್ನು ಆಡಿ ಜೇಬುಹಣ ನೀಡಿ ಬರುತ್ತಿದ್ದರಂತೆ.

ಶಿಲ್ಪಿ ಚಿ. ಬಸವಯ್ಯನವರ ಕಲೆಯನ್ನು ನಾಲ್ವಡಿ ಅವರು ಮೆಚ್ಚಿಕೊಂಡಿದ್ದರು. ತಾವು 'ಸಿಟ್ಟಿಂಗ್' ನೀಡಿ ಅವರ ಪೂರ್ಣಪ್ರಮಾಣ ಪ್ಲಾಸ್ಟರ್ ಕೃತಿಯನ್ನು ರಚಿಸಲು ಬಸವಯ್ಯನವರಿಗೆ ಅವಕಾಶ ನೀಡಿದ್ದರು. ಈ ಕೃತಿ ಅರಮನೆಯ ಮೊದಲ ಮಹಡಿಯಲ್ಲಿದೆ. ಪ್ರೇಕ್ಷಕರು ಈ ಕೃತಿ ನೋಡಿದಾಕ್ಷಣ ಬೆಚ್ಚಿ ಬೆರಗಾಗುವಂತೆ ಸ್ವಾಭಾವಿಕತೆಯಿಂದ ಕೂಡಿದೆ.

ನಾಲ್ವಡಿ ಅವರ ಕಾಲದಲ್ಲಿ ದಿ॥ ಕೇಶವಯ್ಯ, ದಿ॥ ನಂಜುಂಡಸ್ವಾಮಿ, ದಿ॥ ನಾಗರಾಜು, ಸುಬ್ರಹ್ಮಣ್ಯರಾಜು, ಎಸ್. ಆರ್. ಅಯ್ಯಂಗಾರ್, ಶಂಕರರಾಜು ಅವರಿಂದ ದಸರಾ ಮೆರವಣಿಗೆಯ ಬೃಹದಾಕಾರದ ಅನೇಕ ತೈಲಚಿತ್ರಗಳನ್ನು ಬರೆಸಿ ಪ್ರೋತ್ಸಾಹಿಸಿದ್ದರು. ಈ ಚಿತ್ರಗಳು ಕಲ್ಯಾಣ ಮಂಟಪದಲ್ಲಿ ಸಾವಿರಾರು ಜನರನ್ನು ಇಂದಿಗೂ ಆಕರ್ಷಿಸುತ್ತಿವೆ. ತಾವು ವಿದೇಶೀ ಪ್ರವಾಸ ಕಾಲದಲ್ಲಿ ಅರಮನೆ ಚಿತ್ರಕಾರರಾಗಿದ್ದ ವೈ. ನಾಗರಾಜು ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿನ ಕಲಾಗಾರಗಳನ್ನು, ಕಲಾವಿದರನ್ನು ಕಂಡು ಕಲಾಸಕ್ತಿ ಬೆಳೆಸಿಕೊಳ್ಳಲು ಅವಕಾಶ ನೀಡಿದ್ದರು.

ದಸರಾ ದರ್ಬಾರು. ಮೆರವಣಿಗೆ, ವರ್ಧಂತಿ ಉತ್ಸವ. ಮುಂತಾದವು ನಾಲ್ವಡಿ ಅವರ ಕಾಲದಲ್ಲಿ ಹೆಚ್ಚಿನ ಆಕರ್ಷಣೆಯಾಗಿದ್ದುವು. ಇಂದಿನ ಅರಮನೆಯ ಬಹು ಜನರನ್ನು ''ಆಕರ್ಷಿಸುವ ಇಲ್ಲಿರುವ ಚಿತ್ರಗಳು, ಈ ಪ್ರಭುಗಳ ಕಾಲದಲ್ಲೇ ರೂಪುಗೊಂಡವು. ಚಿತ್ರರಚನೆಗೆ ಅರಮನೆಯಲ್ಲಿ ಒಂದು ಕಲಾಗಾರ, ಸ್ವರ್ಣ ಕೆಲಸಕ್ಕಾಗಿಯೇ ವಿಶಾಸಲಾಗಿದ್ದ ಸುನೇರ್‌ಭಾಗ್ ಅರಮನೆಯಲ್ಲಿ ಸ್ಥಾಪಿಸಲಾಗಿದ್ದು ಇವರ ಕಾಲದಲ್ಲೇ.

ಅಂದಿನ ದಿನಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಕಲಾವಿದರಿಗೆ, ಕಲೆಗೆ ನೀಡಿದ ಪ್ರೋತ್ಸಾಹ ಚಿರಸ್ಮರಣೀಯವಾದುದು. ಇಷ್ಟೆಲ್ಲಕ್ಕೂ ಪ್ರಭುಗಳಿಗಿದ್ದ ಕಲಾದೃಷ್ಟಿ ಉದಾರ ಕಲಾಮಯ ಹೃದಯವೇ ಕಾರಣ ಎನ್ನಬಹುದು.

ಇಂಥ ಕಲಾ ಶ್ರೀಮಂತಿಕೆಯ ವ್ಯಕ್ತಿತ್ವದ ಅಪರೂಪ ಪ್ರಭುಗಳನ್ನು ಕಳೆದುಕೊಂಡುದು ನಮ್ಮ ಕಲಾರಂಗಕ್ಕೆ ಬಹು ದೊಡ್ಡ ನಷ್ಟವೆನಿಸಿದೆ.

ಆರ್. ಇಂದಿರಾ

ಭಾರತದ ತಂತ್ರಜ್ಞರಲ್ಲಿ ಪ್ರತಿಭಾ ಪಲಾಯನ* ಒಂದು ವಿಶ್ಲೇಷಣೆ

ಕಳೆದ ಹತ್ತು–ಹದಿನೈದು ವರುಷಗಳಿಂದೀಚೆಗೆ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಭಾ ಪಲಾಯನದ ಸಮಸ್ಯೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಪರಿಣಿತ ತಾಂತ್ರಿಕ ಸಿಬ್ಬಂದಿಗಳು ತಾವು ಶಿಕ್ಷಣ ಅಥವಾ ತರಬೇತಿಯನ್ನು ಪಡೆದ ದೇಶವನ್ನು ಬಿಟ್ಟು ಬೇರೊಂದು ದೇಶಕ್ಕೆ ತಮ್ಮ ಶೈಕ್ಷಣಿಕ ಜ್ಞಾನ ಅಥವಾ ತರಬೇತಿಯನ್ನು ಎರವಲು ನೀಡಿದಾಗ ಪ್ರತಿಭಾ ಪಲಾಯನ ಉಂಟಾಗುತ್ತದೆ. ಪ್ರತಿ ವರ್ಷವೂ ನೂರಾರು ತಂತ್ರಜ್ಞರು ಭಾರತವನ್ನು ಬಿಟ್ಟು ಹೊರದೇಶಗಳಿಗೆ ಉತ್ತಮ ಉದ್ಯೋಗಾವಕಾಶಗಳಿಗಾಗಿ, ಹೆಚ್ಚಿನ ಸಂಬಳ ಸೌಲಭ್ಯಗಳಿಗಾಗಿ ವಲಸೆ ಹೋಗುತ್ತಿದ್ದಾರೆ.

ಭಾರತದಾದ್ಯಂತ ಹರಡಿರುವ ನಿರುದ್ಯೋಗ ಸಮಸ್ಯೆ ಪ್ರತಿಭಾ ಪಲಾಯನಕ್ಕೆ ಪ್ರಮುಖ ಕಾರಣವಾಗಿದೆ. ನಿರುದ್ಯೋಗದ ಹೊಡೆತವನ್ನು ತಪ್ಪಿಸಿಕೊಳ್ಳಲು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಮಟ್ಟದ ತರಬೇತಿಯನ್ನು ಪಡೆಯುತ್ತಿರುವ ಅನೇಕರು ಇನ್ನೂ ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ದೇಶವನ್ನು ಬಿಡುವ ಯೋಜನೆಗಳನ್ನು ಹಾಕಿಕೊಂಡಿರುತ್ತಾರಷ್ಟೇ ಅಲ್ಲ, ಅದಕ್ಕಾಗಿ ತೀವ್ರವಾದ ಪ್ರಯತ್ನಗಳನ್ನೂ ನಡೆಸುತ್ತಿರುತ್ತಾರೆ. ಅತಿ ಹೆಚ್ಚಿನ ವೆಚ್ಚದಲ್ಲಿ ತರಬೇತಿ ಪಡೆಯುತ್ತಿರುವ ಈ ತಂತ್ರಜ್ಞರ ಜ್ಞಾನ ಹಾಗೂ ತಾಂತ್ರಿಕ ಪರಿಣತೆಯ ಪ್ರಯೋಜನವನ್ನು ಭಾರತ ಪಡೆದುಕೊಳ್ಳಲಾಗದಂಥ ಪರಿಸ್ಥಿತಿಯಲ್ಲಿರುವುದು ನಿಜಕ್ಕೂ ವಿಷಾದದ ಸಂಗತಿಯೇ ಸರಿ.

ಕಳೆದ, ಎಂದರೆ 1970 ನೇ ದಶಕದ ಆದಿಭಾಗದ ವೇಳೆಗೆ ತಾಂತ್ರಿಕ ಕ್ಷೇತ್ರದಲ್ಲಿನ ನಿರುದ್ಯೋಗ ಸಮಸ್ಯೆ ತೀವ್ರವಾಗಲಾರಂಭಿಸಿತ್ತು. 1974ರ ವೇಳೆಗೆ ತಾಂತ್ರಿಕ ಕ್ಷೇತ್ರದಲ್ಲಿನ ಪ್ರತಿ ಒಂದು ಉದ್ಯೋಗಕ್ಕೂ ಏಳು ಮಂದಿ ಆಕಾಂಕ್ಷಿಗಳಿದ್ದರು ಎಂದು ರಾವ್ ಅವರು ತಮ್ಮ ಒಂದು ಲೇಖನದಲ್ಲಿ[1] ತಿಳಿಸಿದ್ದಾರೆ. ತಂತ್ರಜ್ಞರಿಗೆ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳೆರಡರಲ್ಲೂ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಾ ಬಂದಿದ್ದಷ್ಟೇ ಅಲ್ಲದೆ 1974ರ ವೇಳೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ನೇಮಕಾತಿಗಳಲ್ಲೂ ಗಮನಾರ್ಹವಾದ ಇಳಿಮುಖ ಕಂಡು ಬಂದಿದ್ದೇ ನಿರುದ್ಯೋಗ ಪರಿಸ್ಥಿತಿ ಬಿಗಡಾಯಿಸಲು ಕಾರಣವಾಯಿತು. ಒಂದು ದಶಕದ

---

* ಈ ಲೇಖನದಲ್ಲಿ ತಂತ್ರಜ್ಞರು ಎಂಬ ಪದವನ್ನು ಆಂಗ್ಲ ಭಾಷೆಯ engineer ಎಂಬ ಪದಕ್ಕೆ ಪೂರಕವಾಗಿ ಬಳಸಲಾಗಿದೆ.

ಒಂದೆಯೇ ಇಷ್ಟು ಗಂಭೀರವಾಗಿದ್ದ ನಿರುದ್ಯೋಗ ಸಮಸ್ಯೆ ಈಗ ಮತ್ತಷ್ಟು ಗಂಭೀರವಾಗಿದೆ ಎಂದೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಭಾರತದಲ್ಲಿ ಪ್ರತಿವರ್ಷವೂ ಬೆಳೆಯುತ್ತಿರುವ ನಿರುದ್ಯೋಗದ ಭೂತ ಒಂದು ಕಡೆ ಕಂಡು ಬಂದರೆ, ಅದರ ಗಣನೆಯೇ ಇಲ್ಲದೆ ಅಷ್ಟೇ ತೀವ್ರಗತಿಯಲ್ಲಿ ಹೆಚ್ಚುತ್ತಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಮತ್ತೊಂದು ಕಡೆ ಕಂಡು ಬರುತ್ತಿದೆ. ತಾಂತ್ರಿಕ ಶಿಕ್ಷಣದ ಈ ಯೋಜನಾ ರಹಿತ ಬೆಳವಣಿಗೆಯೇ ನಿರುದ್ಯೋಗ ಸಮಸ್ಯೆಗೂ, ಅದರಿಂದ ಉದ್ಭವಿಸುವ ಪ್ರತಿಭಾ–ಪಲಾಯನಕ್ಕೂ ಮುಖ್ಯ ಕಾರಣವಾಗಿದೆ.

ತಾಂತ್ರಿಕ ಶಿಕ್ಷಣದ ವಿವಿಧ ಕ್ಷೇತ್ರಗಳ ಬೆಳವಣಿಗೆ ಹಾಗೂ ಅಭಿವೃದ್ಧಿಯಾಗಲೀ, ಆ ಕ್ಷೇತ್ರಗಳಲ್ಲಿ ಆಗುತ್ತಿರುವ ವಿದ್ಯಾರ್ಥಿಗಳ ದಾಖಲಾತಿಯಾಗಲೀ ಸಮರ್ಪಕವಾಗಿ ನಿಯೋಜನೆಗೊಳ್ಳದಿರುವುದೇ ಅನೇಕ ತಂತ್ರಜ್ಞರ "ಪಲಾಯನಕ್ಕೆ" ಮತ್ತೊಂದು ಮೂಲ ಕಾರಣವಾಗಿದೆ. ಹಲವು ತಾಂತ್ರಿಕ ಕ್ಷೇತ್ರಗಳಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಆ ಕ್ಷೇತ್ರಗಳಲ್ಲಿರುವ ಉದ್ಯೋಗಾವಕಾಶಗಳಿಗಿಂತ ಅತ್ಯಧಿಕ ಸಂಖ್ಯೆಯಲ್ಲಿರುತ್ತದೆ. ಇಲ್ಲವಾದರೆ ಹಲವು ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿದ್ದರೂ ತರಬೇತಿ ಹೊಂದಿದ ನಿಪುಣರು ಸಾಕಷ್ಟು ಸಂಖ್ಯೆಯಲ್ಲಿ ಇರುವುದಿಲ್ಲ. ತಾಂತ್ರಿಕ ಶಿಕ್ಷಣದ ಕೆಲವು ಶಾಖೆಗಳಲ್ಲಿ ಮಾತ್ರ ಕಂಡು ಬರುತ್ತಿರುವ ಈ ಅನಧಿಕೃತ–ಅನವಶ್ಯಕ ಬೆಳವಣಿಗೆ ಹಾಗೂ ಆ ಶಾಖೆಗಳಲ್ಲಿ ಆಗುತ್ತಿರುವ ಅತ್ಯಧಿಕ ಸಂಖ್ಯೆಯಲ್ಲಿನ ದಾಖಲಾತಿಗಳಿಂದ ಆಯಾ ಕ್ಷೇತ್ರಗಳಲ್ಲಿನ ಉದ್ಯೋಗಾವಕಾಶಗಳು ಅತಿ ವೇಗ ಕಡಿಮೆಯಾಗುತ್ತಾ ಬರುತ್ತಿವೆ. ಈ ಕಾರಣದಿಂದ ಅನೇಕ ತಂತ್ರಜ್ಞರು ಉದ್ಯೋಗದ ಬೆನ್ನಟ್ಟಿ ಭಾರತವನ್ನು ಬಿಡಲೇ ಬೇಕಾದ ಕಹಿ ಸಂದರ್ಭ ಬರುವುದು ಅನಿವಾರ್ಯ.

ಪ್ರತಿಭಾಶಾಲಿಗಳೂ, ಪರಿಣಿತರೂ ಆದ ತಂತ್ರಜ್ಞರನ್ನು ಪಲಾಯನಕ್ಕೆ ಪ್ರೇರೇಪಿಸುವಂಥ ಶೈಕ್ಷಣಿಕ ವ್ಯವಸ್ಥೆಯಿಂದ ಭಾರತಕ್ಕೆ ಆಗುತ್ತಿರುವ ಸಾಮಾಜಿಕ-ಆರ್ಥಿಕ ನಷ್ಟ ಅಗಾಧವಾಗಿದೆ. ಭಾರತದಂತಹ ಬಡರಾಷ್ಟ್ರಕ್ಕೆ ಅತಿ ದುಬಾರಿ ಹಾಗೂ ಒಮ್ಮೊಮ್ಮೆ ಅನವಶ್ಯಕವೇ ಎನಿಸಿಬಿಡುವಷ್ಟು ವೆಚ್ಚದಲ್ಲಿ ಪೋಷಿಸಲ್ಪಡುತ್ತಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಂದ (ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ) ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಾವಂತ ತಂತ್ರಜ್ಞರು ಹೊರ ದೇಶಗಳಿಗೆ, ಅದರಲ್ಲೂ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗುತ್ತಿರುವುದಾಗಿ ತಿಳಿದು ಬಂದಿದೆ. ಈ ಸಂಸ್ಥೆಗಳನ್ನು ಅನೇಕರು 'ಬಿಳಿ ಆನೆಗಳು' ಎಂದು ಟೀಕಿಸಿರುವುದು ಅತಿಶಯೋಕ್ತಿಯಲ್ಲ. ಇಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೂ ಸರ್ಕಾರ ಅವನ ತರಬೇತಿಯ ಅವಧಿಯಲ್ಲಿ ಸಾವಿರಾರು ರೂಪಾಯಿಗಳನ್ನು ರಾಷ್ಟ್ರೀಯ ಬೊಕ್ಕಸದಿಂದ ಧಾರೆ ಎರೆದಿರುತ್ತದೆ. ಇಂತಹ ಸಂಸ್ಥೆಗಳು ಖರಗ್‌ಪುರ, ಮುಂಬಯಿ, ಮದ್ರಾಸು, ಕಾನ್‌ಪುರ ಮತ್ತು ನವದೆಹಲಿಗಳಲ್ಲಿವೆ ಮತ್ತು ಪ್ರತಿಯೊಂದು ತಂತ್ರಜ್ಞಾನ ಸಂಸ್ಥೆಯಲ್ಲೂ ಒಂದೂವರೆ ಸಾವಿರಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳಿದ್ದಾರೆ ಅಲ್ಲಿಗೆ ಪ್ರತಿ ವರುಷವೂ ಸರ್ಕಾರ ಈ ಸಂಸ್ಥೆಗಳ ಪೋಷಣೆಯ ಮೇಲೂ ಅಲ್ಲಿನ ವಿದ್ಯಾರ್ಥಿ ಅಧ್ಯಾಪಕರ ಮೇಲೂ ವ್ಯಯ ಮಾಡುವ ಹಣದ ಒಂದು ಮಾನಸಿಕ ಅಂದಾಜು ನಮಗೆ ಉಂಟಾಗುತ್ತದೆ.

ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಂದ ಹೊರಬರುವ ಅನೇಕ ತಂತ್ರಜ್ಞರು ತಮ್ಮ ಸ್ವಯಂ ಪ್ರತಿಭೆಯ ಬೆಂಬಲದಿಂದಲೋ, ತಮ್ಮ ವಿದ್ಯಾಸಂಸ್ಥೆಗಳಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿರುವ ಖ್ಯಾತಿಯ ಬಲದಿಂದಲೋ, ಇಲ್ಲ ತಮ್ಮ ಮಾತೃಭೂಮಿಯಲ್ಲಿ ತಮ್ಮನ್ನು ಕಬಳಿಸಲು ಸಿದ್ಧವಾಗಿ ನಿಂತಿರುವ ನಿರುದ್ಯೋಗದ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲೋ ತಮ್ಮ ದೃಷ್ಟಿಯನ್ನು ಹೊರ ದೇಶಗಳೆಡೆಗೆ ಕೇಂದ್ರೀಕರಿಸುತ್ತಾರೆ. ಬೇರೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಪಡೆದವರಿಗಿಂತ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಂದ ಹೊರಬರುವಂತಹ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಹೊರದೇಶಗಳಿಗೆ ವಲಸೆ ಹೋಗುತ್ತಾರೆ ಎಂದು ತಿಳಿದು ಬಂದಿದೆ.[2] ಪ್ರಸ್ತುತ ತಾಂತ್ರಿಕ ಶಿಕ್ಷಣದ ನೀತಿಯನ್ನು ಬದಲಿಸಿ, ದುಬಾರಿ ರಾಷ್ಟ್ರೀಯ ವೆಚ್ಚದಲ್ಲಿ ತಯಾರಾದ ಈ ತಾಂತ್ರಿಕ ಪ್ರತಿಭೆಯ ಪಲಾಯನಕ್ಕೆ ತಡೆಯೊಡ್ಡದಿದ್ದಲ್ಲಿ ದೇಶಕ್ಕೆ ಅಪಾರವಾದ ಆರ್ಥಿಕ ನಷ್ಟವೊಂದೇ ಅಲ್ಲ, ದೇಶದ ತಾಂತ್ರಿಕ ಬೆಳವಣಿಗೆಗೆ ಪೂರಕವಾದ ವಿದ್ವತ್ತಿನ ನಷ್ಟವೂ ಸಂಭವಿಸುತ್ತದೆ.

ತಂತ್ರಜ್ಞರು, ವೈದ್ಯರು ಮುಂತಾದ ವೃತ್ತಿನಿರತ ಉದ್ಯೋಗಿಗಳಿಗೆ ತರಬೇತಿ ನೀಡಲು ಭಾರತಕ್ಕೆ ತಗಲುತ್ತಿರುವ ವೆಚ್ಚಗಳ ಬಗ್ಗೆ ನಮಗೆ ದೊರಕಿರುವ ಹಲವು ಅಂಕಿ-ಅಂಶಗಳನ್ನು ಪರಿಶೀಲಿಸಿದಾಗ ಪ್ರತಿಭಾ ಪಲಾಯನದಿಂದ ದೇಶಕ್ಕೆ ಸಂಭವಿಸುತ್ತಿರುವ ನಷ್ಟದ ಅರಿವು ನಮಗೆ ಆಗುತ್ತದೆ. ಭಾರತದಲ್ಲಿ ಒಬ್ಬ ವೃತ್ತಿನಿರತ ಉದ್ಯೋಗಿಯನ್ನು ತರಬೇತಿ ಮಾಡಲು ತಗಲುವ ವೆಚ್ಚ 16,000 ರೂಪಾಯಿಗಳು ಎಂದು ಒಂದು ದಶಕಕ್ಕೂ ಹಿಂದೆಯೇ ವಿಶ್ವ ಸಂಸ್ಥೆಯ ವರದಿಯೊಂದು ತಿಳಿಸಿತ್ತು. 1962 ಹಾಗೂ 1970ನೇ ಇಸವಿಗಳ ನಡುವೆ ಮೂವತ್ತು ಸಾವಿರಕ್ಕೂ ಹೆಚ್ಚು ಮಂದಿ ಭಾರತೀಯರು ತಮ್ಮ ಉದ್ಯೋಗಿಕ ಪರಿಣತಿಯ ಬಲದ ಮೇಲೆ ಅಮೆರಿಕಾಕ್ಕೆ ತೆರಳಿದ್ದರು. ಅವರಲ್ಲಿ 10,810 ಜನ, 1970 ಈ ಒಂದೇ ವರುಷದಲ್ಲಿ ಅಮೆರಿಕಾಕ್ಕೆ ವಲಸೆ ಹೋದವರು ಎಂದು ತಿಳಿದು ಬಂದಿದೆ.[3] ವಿಶ್ವಸಂಸ್ಥೆ ನೀಡಿರುವ ಅಂಕಿ-ಅಂಶಗಳನ್ನೇ ತೆಗೆದುಕೊಂಡು ನಮ್ಮ ದೇಶದಿಂದ ಅಮೇರಿಕಾ ದೇಶವೊಂದಕ್ಕೆ ಮಾತ್ರ ವಲಸೆ ಹೋದವರ ಪ್ರತಿಭೆಯನ್ನು ಬೆಳೆಸಲು ಭಾರತಕ್ಕೆ ಖರ್ಚಾಗಿರುವ ಹಣದ ಲೆಖ್ಖ ಹಾಕಿದಾಗ ತಿಳಿದು ಬರುವುದು ಭಾರತ ಈ ತಜ್ಞರ ತರಬೇತಿಯ ಮೇಲೆ 501 ಮಿಲಿಯ ರೂಪಾಯಿಗಳನ್ನು ವೆಚ್ಚಮಾಡಿದೆ ಎಂದು. ಈ ಭಾರಿ ಮೊತ್ತವನ್ನು ಖರ್ಚುಮಾಡಿದ್ದಷ್ಟೇ ಭಾರತಕ್ಕೆ ಸಂದ ಲಾಭ. ಏಕೆಂದರೆ ಈ ತಜ್ಞರ ಪ್ರತಿಭೆಯ ಪ್ರಯೋಜನ ಪಡೆದದ್ದು ಅವರ ತರಬೇತಿಯ ಮೇಲೆ ಒಂದಿಷ್ಟೂ ಹಣವನ್ನು ವೆಚ್ಚಮಾಡದಿದ್ದ ಅಮೆರಿಕಾ ದೇಶ.

ಅಮೆರಿಕಾ ದೇಶಕ್ಕೇ ಆಗಲಿ, ಮತ್ತಿನ್ಯಾವ ರಾಷ್ಟ್ರಕ್ಕೇ ಆಗಲಿ ಭಾರತದಿಂದ ತಮ್ಮ ರಾಷ್ಟ್ರಗಳೆಡೆಗೆ ಆಗುತ್ತಿರುವ ಪ್ರತಿಭೆಯ ಪಲಾಯನ ಅತ್ಯಂತ ಲಾಭದಾಯಕವಾಗಿ ಪರಿಣಮಿಸುತ್ತಿದೆ. ತಮ್ಮ ದೇಶದ ತಾಂತ್ರಿಕ ಅಭಿವೃದ್ಧಿಗೆ ಮತ್ತು ಅದರ ಮೂಲಕ ಆಗುತ್ತಿರುವ ಆರ್ಥಿಕ ಅಭಿವೃದ್ಧಿಗೆ ಅವಶ್ಯಕವಾಗಿರುವ ಈ ಭಾರತೀಯರ ಪ್ರತಿಭೆಯ ಪೋಷಣೆಗೆ ಯಾವ ವೆಚ್ಚವನ್ನೂ ಭರಿಸದೆ, ಆ ಪ್ರತಿಭೆಯ ಸಂಪೂರ್ಣ ಪ್ರಯೋಜನವನ್ನು ಪಡೆಯಬಹುದಾದ ಈ ಸುಲಭ ವ್ಯವಸ್ಥೆ ಯಾವ ರಾಷ್ಟ್ರಕ್ಕೆ ತಾನೇ ಹಿತವಲ್ಲ? ಅಮೆರಿಕಾದ ಉನ್ನತ ಆಡಳಿತಾಧಿಕಾರಿಯೊಬ್ಬರು ಹೊರ

ರಾಷ್ಟ್ರಗಳಿಂದ ತಮ್ಮ ದೇಶದೆಡೆಗೆ ಆಗುತ್ತಿರುವ ಪ್ರತಿಭಾ ಪಲಾಯನವನ್ನು ಸಮರ್ಥಿಸುತ್ತಾ ಒಮ್ಮೆ ಹೀಗೆ ಹೇಳಿದ್ದರು—'ಹೊರದೇಶಗಳಿಂದ ವಲಸೆ ಬಂದವರ ಉನ್ನತ ಮಟ್ಟದ ಜ್ಞಾನ ಹಾಗೂ ತರಬೇತಿ ಅಮೆರಿಕಾದ ಅತ್ಯಂತ ಮಹತ್ವವಾದ ಸಂಪತ್ತುಗಳಲ್ಲೊಂದಾಗಿದೆ. ಈ ಕಾರಣದಿಂದಲೇ ನಾವು ಸತತವಾಗಿ ತೀಕ್ಷ್ಣ ಬುದ್ಧಿಯುಳ್ಳ ಹೊರದೇಶೀಯರ ಅನ್ವೇಷಣೆಯಲ್ಲಿದ್ದೇವೆ.'[4] ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತದಿಂದ ಈ ರೀತಿ ಖರೀದಿಸಿ ಆಮದು ಮಾಡಿಕೊಳ್ಳುತ್ತಿರುವ ತಾಂತ್ರಿಕ ಪ್ರತಿಭೆಯಿಂದ ದೇಶದ ತಂತ್ರಜ್ಞಾನ ಭಂಡಾರ ಸೂರೆಯಾಗುತ್ತಿರುವುದರಲ್ಲಿ ಸಂದೇಹವಿಲ್ಲ.

ಮುಂದುವರಿಯುತ್ತಿರುವಂಥ ರಾಷ್ಟ್ರವಾದ ಭಾರತ ಮಹತ್ವಾಕಾಂಕ್ಷೆಯಿಂದ ತನ್ನ ವೈಜ್ಞಾನಿಕ ತಾಂತ್ರಿಕ ಪ್ರಗತಿಯಲ್ಲಿ ಪಾಲ್ಗೊಳ್ಳಲು ತಯಾರು ಮಾಡಿದ ತಾಂತ್ರಿಕ ಪ್ರತಿಭೆ ಹೊರದೇಶಗಳ ಬೊಕ್ಕಸಗಳನ್ನು ತುಂಬಲು ಧಾವಿಸುತ್ತಿರುವುದು ಭಾರತಕ್ಕೆ ಭರಿಸಲಾಗದಂಥ ನಷ್ಟವಾಗಿ ಪರಿಣಮಿಸಿದೆ. ಈ ನಷ್ಟವನ್ನು ತಪ್ಪಿಸಲು ಈ ಪ್ರತಿಭಾವಂತರನ್ನು ಭಾರತದಲ್ಲೇ ಉಳಿಸಿಕೊಳ್ಳುವಂತೆ ಮಾಡಬೇಕು ಎಂದೇನೋ ಸುಲಭವಾಗಿ ಹೇಳಿಬಿಡಬಹುದು. ಆದರೆ ಅದನ್ನು ಕಾರ್ಯಗತ ಮಾಡುವುದು ಅಷ್ಟು ಸರಳವಲ್ಲ. ಏರುತ್ತಿರುವ ಬೆಲೆಗಳು, ಇಳಿಮುಖವಾಗುತ್ತಿರುವ ರೂಪಾಯಿನ ಮೌಲ್ಯ, ಆಕರ್ಷಕವಲ್ಲದ ಸಂಬಳಗಳು ಹೊರದೇಶಗಳೆಡೆಗೆ ಹೋಗದಂತೆ ನಮ್ಮ ತಾಂತ್ರಿಕ ಪ್ರತಿಭೆಯನ್ನು ತಡೆಯಲು ಅಡ್ಡಿಗಳಾಗಿವೆ. ಭಾರತದಲ್ಲಿದ್ದುಕೊಂಡು, ಆಕರ್ಷಣೆಯಾಗಲೀ, ಆಸಕ್ತಿಯಾಗಲೀ ಇಲ್ಲದ ಹುದ್ದೆಗಳಲ್ಲಿದ್ದೋ ಅಥವಾ ನಿರುದ್ಯೋಗದ ಬೇಗೆಯನ್ನು ಎದುರಿಸಿಕೊಂಡೋ ಇರುವ ಬದಲು ವರುಷಕ್ಕೆ 20,000 ಡಾಲರುಗಳಷ್ಟು ಸಂಬಳವನ್ನೂ, ಅದರ ಜೊತೆಗೇ ಜೀವನದಲ್ಲಿ ಅನೇಕ ಸೌಲಭ್ಯಗಳನ್ನೂ ಪಡೆಯಬಹುದಾದ ಹುದ್ದೆಗಳನ್ನು ಅನೇಕ ತಂತ್ರಜ್ಞರು ಅರಿಸುವುದರಲ್ಲಿ ಆಶ್ಚರ್ಯವೇನಿದೆ ?

ಸಂಶೋಧನಾ ಧ್ಯೇಯಗಳನ್ನೂ, ಉನ್ನತ ತಾಂತ್ರಿಕ ಶಿಕ್ಷಣವನ್ನು ಪಡೆಯುವ ಮಹತ್ವಾಕಾಂಕ್ಷೆಗಳನ್ನೂ ಹೊಂದಿರುವ ಅನೇಕ ತಂತ್ರಜ್ಞರಿಗೆ ಪಾಶ್ಚಿಮಾತ್ಯ ದೇಶಗಳಲ್ಲಿರುವ ಸಂಶೋಧನಾ ಪ್ರಯೋಗಾಲಯಗಳು. ಅಲ್ಲಿರುವ ಅತ್ಯಾಧುನಿಕವೂ-ಅತ್ಯುತ್ಕೃಷ್ಟವೂ ಆದ ಸಂಶೋಧನೆಯ ಸೌಲಭ್ಯಗಳು ಆಕರ್ಷಿಸುತ್ತವೆ. ತಮ್ಮ ಧ್ಯೇಯಗಳನ್ನು ಸಾಧಿಸಲು ಭಾರತದಲ್ಲಿ ತಲೆದೋರುವ ನೂರಾರು ಅಡೆ-ತಡೆಗಳಿಂದ ಅಧೀರರಾಗಿ ಅನೇಕ ತಂತ್ರಜ್ಞರು ಭಾರತವನ್ನು ಬಿಡುವ ಯೋಚನೆಯನ್ನು ಮಾಡುತ್ತಾರೆ.

ಭಾರತದಿಂದ ಅಮೂಲ್ಯವಾದ ತಾಂತ್ರಿಕ ಪ್ರತಿಭೆ ಪಾಶ್ಚಿಮಾತ್ಯ ರಾಷ್ಟ್ರಗಳೆಡೆಗೆ ಮಾತ್ರವಲ್ಲ. ಕೊಲ್ಲಿ ರಾಷ್ಟ್ರಗಳೆಡೆಗೂ ತೀರ ಅಪಾಯಕಾರಿ ಎನಿಸಬಹುದಾದ ಗತಿಯಲ್ಲಿ ಪಲಾಯನಮಾಡುತ್ತಿದೆ. 1973 ನೇ ಇಸವಿಯಿಂದೀಚೆಗೆ ಕೊಲ್ಲಿ ರಾಷ್ಟ್ರಗಳ ಹಣಗಳಿಕೆ ತೀವ್ರವಾಗಿ ಏರಿದ್ದು, ಆ ದೇಶಗಳಲ್ಲಿ ಅನೇಕ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾವಿರಾರು ತಂತ್ರಜ್ಞರನ್ನು ಈ ರಾಷ್ಟ್ರಗಳು ಬಹಳ ಹೆಚ್ಚಿನ ಸಂಬಳ-ಸೌಲಭ್ಯಗಳನ್ನು ನೀಡಿ ತಮ್ಮೆಡೆಗೆ ಸೆಳೆಯುತ್ತಿವೆ.[5] ತಮ್ಮ ರಾಷ್ಟ್ರದಲ್ಲಿ ವ್ಯಾಪಕವಾಗಿ ಹರಡಿರುವ ನಿರುದ್ಯೋಗ ಸಮಸ್ಯೆಯಿಂದ ತಪ್ಪಿಸಿಕೊಳ್ಳಲೆಂದೋ, ಇಲ್ಲ, ಕೊಲ್ಲಿ ರಾಷ್ಟ್ರಗಳು ತೋರುವ

ಸೌಲಭ್ಯಗಳ ಆಸೆಯು ಬೆನ್ನು ಹತ್ತಿಯೋ ಸಾವಿರಾರು ತಂತ್ರಜ್ಞರು ಭಾರತದಿಂದ ಆ ರಾಷ್ಟ್ರಗಳೆಡೆಗೆ ಧಾವಿಸುತ್ತಿದ್ದಾರೆ.

ಭಾರತದಿಂದ ಹೊರದೇಶಗಳೆಡೆ ಅವ್ಯಾಹತವಾಗಿ ನಡೆಯುತ್ತಿರುವ ಈ ತಾಂತ್ರಿಕ ಪ್ರತಿಭೆಯ ಪಲಾಯನಕ್ಕೆ ತಡೆಯೊಡ್ಡುವುದಾದರೂ ಹೇಗೆ ? ಮೊಟ್ಟಮೊದಲಿಗೆ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಯೋಜನಾರಹಿತ ಬೆಳವಣಿಗೆಗೆ ತಡೆಯೊಡ್ಡಬೇಕು. ಅಷ್ಟೇ ಅಲ್ಲ, ಈಗಾಗಲೇ ಇರುವ ಶಿಕ್ಷಣ ಸಂಸ್ಥೆಗಳಲ್ಲಿನ ದಾಖಲಾತಿಯನ್ನೂ ಹೆಚ್ಚಿಸಬಾರದು. ತಾಂತ್ರಿಕ ಪಠ್ಯಕ್ರಮವನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಭಾರತೀಯ ಪರಿಸ್ಥಿತಿಗಳಿಗೆ ಸೂಕ್ತವಾಗುವಂಥ ತಂತ್ರಜ್ಞಾನವನ್ನು ವಿದ್ಯಾರ್ಥಿಗಳಿಗೆ ಬೋಧಿಸಿ ಅವರನ್ನು ಭಾರತದಲ್ಲೇ ನೆಲೆಸುವಂತೆ ಮಾಡಲು ಯತ್ನಿಸಬೇಕು. ತಂತ್ರಜ್ಞಾನದ ಬೋಧನೆಯೊಡನೆಯೇ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿ ಅವರನ್ನು ಭಾರತವನ್ನು ಬಿಡದಂತೆ ಮಾಡುವುದೂ ಅವಶ್ಯಕ. ಇದರ ಜೊತೆಗೆ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲಿಚ್ಛಿಸುವವರಿಗೂ, ಸಂಶೋಧನೆ ನಡೆಸಬೇಕೆನ್ನುವವರಿಗೂ ಅನೇಕ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಸೌಲಭ್ಯವನ್ನು ಒದಗಿಸಿಕೊಡಬೇಕು, ಪ್ರತಿಭಾವಂತ ತಾಂತ್ರಿಕ ಉದ್ಯೋಗಾಕಾಂಕ್ಷಿಗಳಿಗೆ ಸೌಲಭ್ಯಗಳನ್ನೂ, ಎಲ್ಲಕ್ಕಿಂತ ಹೆಚ್ಚಾಗಿ ಅವರನ್ನು ಇಲ್ಲಿಯೇ ಉಳಿಸಿಕೊಳ್ಳಲು ಶಕ್ತವಾದಂತಹ ಸಂಬಳಗಳನ್ನೂ ನೀಡಬೇಕು. ಇಷ್ಟೆಲ್ಲಾ ಪ್ರಯತ್ನಗಳನ್ನೂ ಮಾಡಿದರೆ ಮಾತ್ರ ತಾಂತ್ರಿಕ ಪ್ರತಿಭೆಯ ಪಲಾಯನವನ್ನು ಸಂಪೂರ್ಣವಾಗಲ್ಲದಿದ್ದರೂ, ಬಹಳಷ್ಟು ಮಟ್ಟಿಗೆ ತಡೆಗಟ್ಟಬಹುದು. ಯಾವ ಕ್ರಮಗಳನ್ನೂ ಕೈಗೊಳ್ಳದೆ ಪರಿಸ್ಥಿತಿಯನ್ನು ಹೀಗೆಯೇ ಬೆಳೆಯಲು ಬಿಟ್ಟರೆ ಭಾರತ ಹಾಕಿಕೊಂಡಿರುವ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಗುರಿಗೇ ತೀವ್ರವಾದ ಹೊಡೆತ ಬೀಳುವುದು ಖಚಿತ.

ಟಿಪ್ಪಣಿಗಳು

1. A. K. Rao, "Engineering Education : Retrospect and Prospect," in Radhakrishna et al (eds) *Technological Education and National Development* (Bangalore: COSTED, Indian Institute of Science, 1979).

2. Chowdhury and R. K. Nandy, "Scientific and Technical Personnel" in Singh and Altbach (eds) *The Higher Learning in India (Delhi* : Vikas Publishing House, 1974).

3. A. K. N. Reddy "Brain drain," in Ibid.

4. Ibid.

5. See Times of India dated 8-12-1981 and 13-12-1981.

ಬಿ. ಎಸ್. ನಂಜುನಾಥಯ್ಯ, ಕೆ. ಯಶೋಧರಾ, ಬಿ. ಎನ್. ಸುಜಾತಾ

ಮುಕ್ತ ಶಿಕ್ಷಣ-ಆಡಳಿತ ವ್ಯವಸ್ಥೆ ಹಾಗೂ ನಾಯಕತ್ವ ತರಬೇತಿ*

ಶಿಕ್ಷಣವೆಂದರೆ ವಿಶಾಲಾರ್ಥದಲ್ಲಿ ಹುಟ್ಟಿನಿಂದ ಸಾವಿನವರೆಗೆ ಜೀವನದಲ್ಲಿ ದೊರೆಯುಬಹುದಾದ ಎಲ್ಲ ರೀತಿಯ ಕಲಿಕೆಯ ಪರಿಪಾಕ ಎಂದು ತಿಳಿದಿದ್ದರೂ, ಸಾಮಾನ್ಯವಾಗಿ ಶಾಲಾಕಾಲೇಜುಗಳ ಕಲಿಕೆಯೇ ಶಿಕ್ಷಣ ಎಂಬ ಸಂಕುಚಿತ ಅರ್ಥವೇ ಬಲಿಷ್ಟವಾಗಿದ್ದು ಶಿಕ್ಷಣದ ಅಭ್ಯುದಯದ ದಿಸೆಯಲ್ಲಿ ಔಪಚಾರಿಕ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಲಾಗಿತ್ತು. ಆದರೆ ಇತ್ತೀಚಿನ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಯಿಂದಲೂ, ಜ್ಞಾನಸ್ಫೋಟ ಹಾಗೂ ಜನಸಂಖ್ಯಾ ಸ್ಫೋಟದಿಂದಲೂ ದೇಶದ ಎಲ್ಲ ಪ್ರಜೆಗಳಿಗೂ ಔಪಚಾರಿಕ ಶಿಕ್ಷಣವನ್ನೊದಗಿಸುವುದು ದುಸ್ಸಾಧ್ಯವೆಂದು ತಿಳಿದು ಅನೌಪಚಾರಿಕ ಶಿಕ್ಷಣದ ಉಪಯುಕ್ತತೆಯನ್ನು ಗುರುತಿಸಲಾಯಿತು. ಶಾಲಾ ಕಲಿಕೆ ಎಂಬ ಸೀಮಿತ ಅರ್ಥವನ್ನು ಮೀರಿ **'ಮಾನವ ನಿರ್ಮಾಣವೇ'** ಶಿಕ್ಷಣದ ಗುರಿಯಾಗಬೇಕೆಂದು ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ಕ್ರಮದ ಲಕ್ಷಣಗಳನ್ನು ಹೊಂದಿರುವ ಆದರೆ ಸಂಪೂರ್ಣ ಔಪಚಾರಿಕವೂ ಅಲ್ಲದ, ಅನೌಪಚಾರಿಕವೂ ಅಲ್ಲದ ಶಿಕ್ಷಣ ಕ್ರಮದ ಮಹತ್ವವನ್ನು ಪರಿಗಣಿಸಿ ಅದಕ್ಕೆ **'ನಾನ್ ಫಾರ್ಮಲ್ ಎಜುಕೇಶನ್'** ಎಂದು ಕರೆಯಲಾಯಿತು. ಇದನ್ನು ಕನ್ನಡದಲ್ಲಿ **'ಮುಕ್ತ ಶಿಕ್ಷಣ'** ಎಂದು ಹೆಸರಿಸಬಹುದಾಗಿದೆ.

ಸಂಪೂರ್ಣ ಅನಕ್ಷರಸ್ಥರು, ಅರೆ ಅಕ್ಷರಸ್ಥರು ಹಾಗೂ ಶಿಕ್ಷಿತರು ; ಗ್ರಾಮೀಣರು ಹಾಗೂ ನಗರವಾಸಿಗಳು ; ಸ್ತ್ರೀ ಪುರುಷರು, ಮಕ್ಕಳು, ಹದಿವಯಸ್ಕರು, ವಯಸ್ಕರು ಹಾಗೂ ವೃದ್ಧರು ; ಕಾರ್ಮಿಕರು, ಹಾಗೂ ಅಧಿಕಾರ ವರ್ಗದವರು ; ಉದ್ಯೋಗಿಗಳು ಹಾಗೂ ನಿರುದ್ಯೋಗಿಗಳು ; ಬಡವರು, ಸಿರಿವಂತರು ; ವಿವಿಧ ಸಾಮಾಜಿಕ ವರ್ಗದವರು ; ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳಲ್ಲದವರು ; ಜ್ಞಾನ ಪಿಪಾಸಿಗಳು, ಇತ್ಯಾದಿ ಎಲ್ಲ ವರ್ಗದವರಿಗೂ ಅವರವರ ಅಗತ್ಯತೆ ಹಾಗೂ ಆಸಕ್ತಿಗಳಿಗನುಗುಣವಾಗಿ ಸೂಕ್ತವಾದ ಶಿಕ್ಷಣ ನೀಡಿ ವ್ಯಕ್ತಿತ್ವ ವಿಕಸನದ ಜೊತೆಗೆ ಉತ್ತಮ ಜೀವನ ಮಾರ್ಗ ರೂಪಿಸಿಕೊಳ್ಳುವಂತೆ ಮಾಡುವ ಮೂಲಕ ರಾಷ್ಟ್ರದ ಪ್ರಗತಿಗೆ ಸಹಕರಿಸುವುದೇ ಮುಕ್ತ ಶಿಕ್ಷಣದ ಪ್ರಮುಖೋದ್ದೇಶ. ಮುಕ್ತ ಶಿಕ್ಷಣವನ್ನು ಶಾಲಾ ವ್ಯವಸ್ಥೆಯಿಂದ ಹೊರಗೆ ಶಾಲಾ ವ್ಯವಸ್ಥಾಪಕ ವರ್ಗದವರಿಂದಾಗಲೀ ಇತರೆ ಸಂಘ ಸಂಸ್ಥೆಗಳಿಂದಾಗಲೀ ಸಮಾಜದ ವಿವಿಧ ಸ್ಥಳಗಳಲ್ಲಿ ವಿವಿಧ ಉದ್ದೇಶಗಳಿಗಾಗಿ, ವಿವಿಧ ರೀತಿಗಳಲ್ಲಿ, ವಿವಿಧ ಸಮೂಹ

* ಕರ್ನಾಟಕ ರಾಜ್ಯ ಪ್ರಶಿಕ್ಷಕರ ಸಂಘದ 17ನೇ ಸಮ್ಮೇಳನದಲ್ಲಿ ಮಂಡಿಸಿದ ಲೇಖನ.

ಗಳಿಗೆ, ವಿವಿಧ ಚಟುವಟಿಕೆಗಳ ಮೂಲಕ ನೀಡಬಹುದಾಗಿದೆ. ಕಾರ್ಯಕ್ರಮದ ಉದ್ದೇಶಗಳು, ಪಠ್ಯವಸ್ತು, ಬೋಧನಾ ವಿಧಾನಗಳು, ಕಲಿಕಾ ಅನುಭವಗಳು, ಸಲಕರಣೆಗಳು ಇತ್ಯಾದಿ ವಿವಿಧ ವರ್ಗಗಳ ಶಿಕ್ಷಣಾರ್ಥಿಗಳ ಅಗತ್ಯತೆ, ಕಲಿಕಾ ಸಾಮರ್ಥ್ಯ, ಸಾಮಾಜಿಕ ಹಾಗೂ ಶೈಕ್ಷಣಿಕ ಮಟ್ಟಗಳಿಗನುಗುಣವಾಗಿ ರೂಪಿತವಾಗಿರಬೇಕು. ಕೇವಲ ಅಕ್ಷರ ಜ್ಞಾನ ಅಥವಾ ಓದುಬರಹ ಕಲಿಕೆಗೆ ಮಾತ್ರ ಒತ್ತು ಕೊಡದೆ ಜೀವನದ ವಿವಿಧ ರಂಗಗಳಲ್ಲಿ—ಸಾಮಾಜಿಕ, ಕೌಟುಂಬಿಕ, ಆರ್ಥಿಕ, ಆರೋಗ್ಯ, ವೃತ್ತಿ, ಇತ್ಯಾದಿ—ಬೇಕಾದ ಮೂಲಭೂತ ಜ್ಞಾನ ಹಾಗೂ ಕೌಶಲಾಭಿವೃದ್ಧಿಗೆ ಹೆಚ್ಚಿನ ಗಮನ ನೀಡಬೇಕು.

ಮುಕ್ತ ಶಿಕ್ಷಣದ ಪರಿಕಲ್ಪನೆ ಅಷ್ಟೇನೂ ನೂತನವಾದುದಲ್ಲದಿದ್ದರೂ, ಭಾರತದ ಪ್ರಸ್ತುತ ಸ್ಥಿತಿಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದಿದೆ. ಪ್ರಜಾಸತ್ತಾತ್ಮಕ ಸಮತಾವಾದಿ ಸ್ವತಂತ್ರ್ಯ ಭಾರತದಲ್ಲಿ ವರ್ಷಂಪ್ರತಿ ಹೆಚ್ಚುತ್ತಿರುವ ಮಿಲಿಯಾಂತರ ಜನಕೋಟಿಗೆ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸುವ ದಿಸೆಯಲ್ಲಿ ಏನೆಲ್ಲಾ ಸಾಧನೆಗಳಾಗಿದ್ದರೂ ಸಾಕ್ಷರತೆಯ ಮಟ್ಟ ಕೇವಲ ಶೇಕಡ 30 ರಷ್ಟಿದೆ ; ಅವರಲ್ಲಿಯೂ ಮಹಿಳೆಯರು ಹಾಗೂ ಗ್ರಾಮೀಣ ಜನತೆಯಲ್ಲಿ ಇನ್ನೂ ಕಡಿಮೆ ದರದಲ್ಲಿದೆ. ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಸೌಲಭ್ಯಗಳು ಪರಿಮಾಣಾತ್ಮಕವಾಗಿ ಹೆಚ್ಚುತ್ತಿದ್ದರೂ ಬಹುತೇಕ ಗುಣಾತ್ಮಕ ಸೌಕರ್ಯಗಳು ನಗರ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿದ್ದು ಉತ್ತಮ ಶಿಕ್ಷಣವು ಮೇಲ್ವರ್ಗದವರಿಗೆ ಹೆಚ್ಚು ಉಪಕಾರಿಯಾಗಿ ಕೆಳವರ್ಗದ ಜನತೆಯ ಜೀವನೋದ್ಧಾರ ನಿಂತ ನೀರಾಗಿದೆ. ಮುಕ್ತ ಶಿಕ್ಷಣದ ಹೆಸರಿನಲ್ಲಿ ಈಗಾಗಲೇ ಹಲವಾರು ಕಾರ್ಯಕ್ರಮಗಳು ಸಾಗುತ್ತಿದ್ದರೂ ಅವೆಲ್ಲವು ಕೆಳವರ್ಗದ ಜನತೆಯ ಅಭ್ಯುದಯದ ದಿಸೆಯಲ್ಲಿ ಪರಿಣಾಮಕಾರಿಯಾಗಿಲ್ಲದಿರುವುದೂ, ಕೆಲವೆಡೆ ಆ ವರ್ಗವನ್ನು ಸಂಪೂರ್ಣ ಕೈಬಿಟ್ಟಿರುವುದೂ ಗಮನಾರ್ಹವಾಗಿದೆ. ಆದುದರಿಂದ, ಪ್ರಸಕ್ತ ಪರಿಸ್ಥಿತಿಯಲ್ಲಿ ಮುಕ್ತ ಶಿಕ್ಷಣ ಕಾರ್ಯಕ್ರಮಗಳ ಗುಣವನ್ನು ಉತ್ತಮಪಡಿಸುವುದಲ್ಲದೆ ಬಹುತೇಕವಾಗಿ ಗ್ರಾಮೀಣರಿಗೆ ಮತ್ತು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿದ ಕೆಳದರ್ಜೆಯ ಪ್ರಜೆಗಳಿಗೆ ಪ್ರಯೋಜನಕಾರಿಯಾಗುವಂತೆ ಮಾಡಬೇಕಾಗಿರುವುದು ಹಾಗೂ ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಪೂರಕವಾಗಿಯೂ, ಸಹವರ್ತಿಯಾಗಿಯೂ ಇರುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಮುಕ್ತ ಶಿಕ್ಷಣ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿಯೂ, ಯಶಸ್ವಿಪೂರ್ಣವಾಗಿಯೂ ನಿರ್ವಹಿಸಬೇಕಾದರೆ ಉತ್ತಮ ಆಡಳಿತ ವ್ಯವಸ್ಥೆ ಹಾಗೂ ನಾಯಕತ್ವ ಅತ್ಯಾವಶ್ಯಕವಾಗಿದೆ. ಇಲ್ಲದಿದ್ದಲ್ಲಿ ಮುಕ್ತ ಶಿಕ್ಷಣ ಕ್ರಮವೂ ಸಹ ಇತರೆ ಕಾರ್ಯಕ್ರಮಗಳಂತೆ ಕೇವಲ ಸುತ್ತೋಲೆಗಳ ಮೇಲೆಯೇ ಉಳಿದು ಕಾರ್ಯರೂಪಕ್ಕೆ ಬರದೇ ವಿಫಲತೆಗೊಳ್ಳುವ ಸಾಧ್ಯತೆ ಬಹಳಷ್ಟಿದೆ ಎಂದರೆ ತಪ್ಪಾಗಲಾರದು.

ಗ್ರೆಗ್ ಎಂಬಾತ ಯಾವುದೇ ಆಡಳಿತ ವ್ಯವಸ್ಥೆಯೂ ನಿರ್ಧಾರ ನಿರ್ಮಾಣ, ಯೋಜನೆ ಸಂಘಟನೆ, ಸಂವಹನೆ, ಪ್ರಭಾವ ಬೀರುವಿಕೆ, ಸಂಯೋಜನೆ ಮತ್ತು ಮೌಲ್ಯಮಾಪನೆ—ಈ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಹ್ಯಾಲ್ಪಿನ್‌ನ ಪ್ರಕಾರ ಆಡಳಿತ

ವ್ಯವಸ್ಥೆಯು ಕಾರ್ಯ, ಸಂಘಟನೆ, ಕಾರ್ಯಸಮೂಹಗಳು ಹಾಗೂ ನಾಯಕತ್ವ ಎಂಬ ನಾಲ್ಕು ಪ್ರಮುಖ ಅಂಗಗಳನ್ನು ಒಳಗೊಂಡಿರುತ್ತದೆ. ಹೀಗೆಯೇ ಅನೇಕ ಆಡಳಿತ ಶಾಸ್ತ್ರಜ್ಞರು ಆಡಳಿತ ವ್ಯವಸ್ಥೆಯ ಬಗೆಗೆ ಅನೇಕ ಮಾದರಿಗಳನ್ನು ಪ್ರತಿಪಾದಿಸಿದ್ದಾರೆ. ಒಟ್ಟಿನಲ್ಲಿ, ಶೈಕ್ಷಣಿಕ, ಆಡಳಿತ ವ್ಯವಸ್ಥೆಯು ಮಾನವ ಶಕ್ತಿ, ಸಂಪನ್ಮೂಲಗಳು ಹಾಗೂ ಶೈಕ್ಷಣಿಕ ತತ್ವ ಹಾಗೂ ಸಿದ್ಧಾಂತಗಳನ್ನು ಸಂಘಟಿಸುವ ಸಮಗ್ರ ಪ್ರಕ್ರಿಯೆ ಆಗಿರುವುದರಿಂದ ಪ್ರಮುಖವಾಗಿ ನಾಯಕತ್ವ, ಸಮೂಹ ಪ್ರಕ್ರಿಯೆಗಳು ಹಾಗೂ ಮಾನವೀಯ ಸಂಬಂಧಗಳನ್ನು ಅವಲಂಬಿಸಿರುತ್ತವೆ. ಅಂತೆಯೇ ಮುಕ್ತ ಶಿಕ್ಷಣದ ಆಡಳಿತ ವ್ಯವಸ್ಥೆಯೂ ಸಹ ಈ ಮೂರು ಅಂಶಗಳನ್ನೇ ಆಧರಿಸಿರಬೇಕಲ್ಲದೆ, ಈ ಶಿಕ್ಷಣದ ಉದ್ದೇಶ ಸಾಧನೆ ಕೈಗೂಡಬೇಕಾದರೆ ಸಮಗ್ರವಾದ ಉತ್ತಮ ಆಡಳಿತ ವ್ಯವಸ್ಥೆ ಸ್ಥಾಪಿತವಾಗಬೇಕು ಹಾಗೂ ಆ ವ್ಯವಸ್ಥೆಯಲ್ಲಿ ಯಶಸ್ವಿಪೂರ್ಣವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವಿರಬೇಕು, ಮತ್ತು ಸಾಮರ್ಥ್ಯವಿರುವ ಮುಖಂಡರುಗಳನ್ನು, ಸಮಾಜ ಸುಧಾರಕರನ್ನು ತಯಾರು ಮಾಡಬೇಕು.

ಪ್ರಸ್ತುತ ಲೇಖನವಲ್ಲಿ ಮುಕ್ತ ಶಿಕ್ಷಣದ ಆಡಳಿತ ವ್ಯವಸ್ಥೆ ಹೇಗಿರಬೇಕು ಎಂಬುದರ ಬಗೆಗಾಗಲೀ ಅಥವಾ ಆಡಳಿತ ವ್ಯವಸ್ಥೆಯ ಸಮಸ್ಯೆಗಳೇನು ಎಂಬುದರ ಬಗೆಗಾಗಲೀ ಪ್ರಸ್ತಾಪಿಸದೆ ಮುಕ್ತ ಶಿಕ್ಷಣದ ಆಡಳಿತ ವ್ಯವಸ್ಥೆಗೆ ಅವಶ್ಯಕವಾದ ನಾಯಕತ್ವ, ಸಮೂಹ ಪ್ರತಿಕ್ರಿಯೆಗಳು ಮತ್ತು ಮಾನವ ಸಂಬಂಧಗಳ ಬಗೆಗೆ ತರಬೇತಿ ನೀಡುವಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳು ಯಾವ ಪಾತ್ರ ವಹಿಸಬಹುದೆಂಬುದರ ಬಗೆಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

ವಿವಿಧ ಹಂತದ ಶಿಕ್ಷಕ ತರಬೇತಿ ಸಂಸ್ಥೆಗಳು ಪ್ರಮುಖವಾಗಿ ತರಗತಿ ಬೋಧಕರನ್ನು ತಯಾರು ಮಾಡುವುದೇ ಅಲ್ಲದೆ ಶೈಕ್ಷಣಿಕ ಆಡಳಿತಗಾರರನ್ನೂ ತಯಾರು ಮಾಡುವ ಹೊಣೆಯನ್ನು ಹೊತ್ತಿವೆ, ಆದರೆ ಈ ತರಬೇತಿಯು ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಹಿನ್ನೆಲೆಯನ್ನು ಆಧರಿಸಿರುವುದರಿಂದ, ಇತ್ತೀಚಿನ ದಿನಗಳಲ್ಲಿ ಶಿಕ್ಷಣತಜ್ಞರ ಗಮನ ಸೆಳೆದಿರುವ ಮುಕ್ತ ಶಿಕ್ಷಣ ವ್ಯವಸ್ಥೆಯ ವಾತಾವರಣದಲ್ಲಿ ಸಮರ್ಪಕ ಆಡಳಿತಗಾರರೆನಿಸದಿರಬಹುದು. ಆದ್ದರಿಂದ ಈ ದಿಸೆಯಲ್ಲಿ ಕೆಲವು ಸುಧಾರಣೆಗಳನ್ನು ತರುವುದರ ಮೂಲಕ ಶಿಕ್ಷಕ ತರಬೇತಿ ಸಂಸ್ಥೆಗಳು ಪ್ರಮುಖಪಾತ್ರ ವಹಿಸಬಹುದಾಗಿದೆ.

ಮುಕ್ತ ಶಿಕ್ಷಣದ ನಿರ್ವಹಣೆಯು ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಓದುಬರಹ ಕಲಿಸುವ ಹೊಣೆಗಾರಿಕೆಗಿಂತ ವಿಭಿನ್ನವಾಗಿದ್ದು, ಇದರ ಜವಾಬ್ದಾರಿ ಹೊರುವ ವ್ಯಕ್ತಿಗಳು ಕೆಳಕಂಡ ಸಾಮರ್ಥ್ಯಗಳನ್ನುಳ್ಳವರಾಗಿರಬೇಕು.

1) ಮುಕ್ತ ಶಿಕ್ಷಣದ ಪರಿಕಲ್ಪನೆ ಹಾಗೂ ಉದ್ದೇಶಗಳ ಸ್ಪಷ್ಟ ತಿಳುವಳಿಕೆಯುಳ್ಳವರಾಗಿರಬೇಕು.

2) ಜನತೆಯಲ್ಲಿ ಈ ರೀತಿಯ ಶಿಕ್ಷಣದ ಆವಶ್ಯಕತೆ ಹಾಗೂ ಪ್ರಯೋಜನಗಳ ಬಗೆಗೆ ಸ್ಪಷ್ಟ ಅರಿವುಂಟು ಮಾಡಲೂ, ಅವರು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಲು ಸಮರ್ಥವಾಗಿರಬೇಕು.

3) ಈ ದಿಶೆಯಲ್ಲಿ ಪಾಲ್ಗೊಳ್ಳುವ ವಿವಿಧ ಸಂಘಸಂಸ್ಥೆಗಳನ್ನು, ಇವುಗಳ ಮೂಲಕ ಕಾರ್ಯನಿರತರಾಗಿರುವ ವ್ಯಕ್ತಿಗಳನ್ನು ಹಾಗೂ ಈ ಶಿಕ್ಷಣದಿಂದ ಪ್ರಯೋಜನ ಪಡೆಯಬೇಕಾದ ಜನತೆಯನ್ನು ಸಂಘಟಿಸುವ ಸಾಮರ್ಥ್ಯವಿರಬೇಕು.

4) ಈ ಸಂಘಟನೆಗೆ ಸಹಾಯಕವಾದ ಸಾಮೂಹಿಕ ಪ್ರಕ್ರಿಯೆಗಳು ಹಾಗೂ ಮಾನವ ಸಂಬಂಧದ ಬಗೆಗೆ ಸ್ಪಷ್ಟ ಪರಿಕಲ್ಪನೆಯುಳ್ಳ ಅವುಗಳ ಪ್ರಯೋಜನ ಪಡೆಯಲು ಅರ್ಹರಾಗಿರಬೇಕು.

5) ವಿವಿಧ ವರ್ಗದ ಜನತೆಯ ಅವಶ್ಯಕತೆ, ಆಸಕ್ತಿ, ಅಭಿರುಚಿಗಳನ್ನು ಗುರುತಿಸಿ, ಅವಕ್ಕನುಗುಣವಾದ ಕಾರ್ಯಕ್ರಮಗಳನ್ನು ನಿರೂಪಿಸಲು ಶಕ್ತನಾಗಿರಬೇಕು.

6) ಚಟುವಟಿಕೆಗಳ ಯೋಜನೆ, ನಿರೂಪಣೆ, ನಿರ್ವಹಣೆ, ಮೌಲ್ಯಮಾಪನ, ಹಾಗೂ ಅನುಸರಣಾ ಕಾರ್ಯಕ್ರಮಗಳ ಹೊಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲವನಾಗಿರಬೇಕು.

ಇಂತಹ ವ್ಯಕ್ತಿಗಳ ತರಬೇತಿಗಾಗಿ ಪ್ರಸ್ತುತ ಶಿಕ್ಷಕ ತರಬೇತಿ ಸಂಸ್ಥೆಗಳ ಚಟುವಟಿಕೆಗಳನ್ನು ಪರಿಷ್ಕರಿಸಬೇಕಾಗುತ್ತದೆ. ಮುಕ್ತ ಶಿಕ್ಷಣ ವಾತಾವರಣಕ್ಕೆ ಸರಿಹೊಂದಿಸಿಕೊಳ್ಳಬೇಕಾಗುತ್ತದೆ. ಅಂತೆಯೇ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ವಿಷಯಗಳೆರಡಕ್ಕೂ ಗಮನ ನೀಡಬೇಕಾಗುತ್ತದೆ.

ಸೈದ್ಧಾಂತಿಕ ವಿಷಯಗಳು : ಶೈಕ್ಷಣಿಕ ಆಡಳಿತ ವ್ಯವಸ್ಥೆ, ನಾಯಕತ್ವ, ಸಮೂಹ ಪ್ರಕ್ರಿಯೆಗಳು, ಹಾಗೂ ಮಾನವ ಸಂಬಂಧಗಳ ಬಗೆಗೆ ಮತ್ತು ಮುಕ್ತ ಶಿಕ್ಷಣದ ವಿವಿಧ ವಿಚಾರಗಳ ಬಗೆಗೆ ಪ್ರಸಕ್ತ ಶಿಕ್ಷಕ ತರಬೇತಿ ಪಠ್ಯಕ್ರಮಗಳಲ್ಲಿ ಸ್ವಲ್ಪಮಟ್ಟಿನ ಮಾಹಿತಿ ದೊರೆಯುವುದಾದರೂ ಮುಕ್ತ ಶಿಕ್ಷಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಪೂರ್ಣ ಪ್ರಯೋಜನ ಪಡೆಯುವ ದಿಸೆಯಲ್ಲಿ ಸಹಾಯಕವಾಗುತ್ತಿಲ್ಲವೆನ್ನಬಹುದಾಗಿದೆ. ಆದ ಕಾರಣ ಈ ಎಲ್ಲಾ ವಿಷಯಗಳನ್ನು ಮುಕ್ತ ಶಿಕ್ಷಣ ವ್ಯವಸ್ಥೆಗೆ ಕೇಂದ್ರೀಕೃತಗೊಳಿಸಬೇಕು. ಬಿ.ಇಡಿ ಹಂತದಲ್ಲಿ ಮುಕ್ತ ಶಿಕ್ಷಣದ ಬಗೆಗೆ ಯಾವುದಾದರೂ ಸಾಮಾನ್ಯ ಪತ್ರಿಕೆಯಲ್ಲಿ ಹೆಚ್ಚಿನ ಅಂಶಗಳನ್ನು ಸೇರಿಸಬಹುದು ಇಲ್ಲವೇ ಒಂದು ಪ್ರತ್ಯೇಕ ವಿಷಯವನ್ನಾಗಿಯೇ (ಅಡಿಷನಲ್ ಸಬ್ಜೆಕ್ಟ್) ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಡಬಹುದು. ಎಂ.ಇಡಿ. ಹಂತದಲ್ಲಿ ಇದನ್ನು ಒಂದು ಐಚ್ಛಿಕ ವಿಷಯವನ್ನಾಗಿ ಇಡಲು, ಅದಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಸಂಶೋಧನೆ ಕೈಗೊಳ್ಳಲು ಅವಕಾಶ ಒದಗಿಸಿಕೊಡಬಹುದು.

ಪ್ರಾಯೋಗಿಕ ವಿಷಯಗಳು : ಸೈದ್ಧಾಂತಿಕವಾಗಿ ಕಲಿತ ವಿಷಯಗಳನ್ನು ಪ್ರಾಯೋಗಿಕವಾಗಿ ಅಳವಡಿಸಲೂ, ಸ್ವಂತ ಅನುಭವ ಪಡೆದುಕೊಳ್ಳಲೂ, ತರಬೇತಿಯ ನಂತರ ತಾವೇ ಸ್ವತಃ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಮರ್ಥರಾಗಲೂ ಸೂಕ್ತವಾದ ಪ್ರಾಯೋಗಿಕ ತರಬೇತಿ ನೀಡಬೇಕಾಗುತ್ತದೆ. ಅಂತೆಯೇ ತರಬೇತಿ ಶಿಕ್ಷಕರು ಈ ದಿಸೆಯಲ್ಲಿ ಯೋಜನಾ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳುವಂತೆ ಮಾಡಬೇಕು. ಈ ಯೋಜನಾ ಕಾರ್ಯವು ಮತ್ತೊಂದು ಹೊರೆ ಎನಿಸದಂತೆ, ಈಗಾಗಲೇ ಪಠ್ಯ ಕ್ರಮದಲ್ಲಿ ಸ್ಥಾನ ಗಳಿಸಿಕೊಂಡಿರುವ ಪೌರತರಬೇತಿ ಶಿಬಿರ (ಸಿ ಟಿ ಸಿ) ಸಮುದಾಯ ಸೇವಾಕಾರ್ಯ, ಸಾಮಾಜಿಕವಾಗಿ ಉಪಯುಕ್ತವಾಗಿರುವ ಹಾಗೂ

ಉತ್ಪಾದಕವೆನಿಸುವ ಕಾರ್ಯ ಇತ್ಯಾದಿ ಯಾವುದೇ ಚಟುವಟಿಕೆಗಳ ಒಂದು ಅಂಗವನ್ನಾಗಿ ನಿಯೋಜಿಸಿಕೊಳ್ಳಬಹುದಾಗಿದೆ.

ಇಷ್ಟೆಲ್ಲವೂ ಕೇವಲ ಸೇವಾಪೂರ್ವ ತರಬೇತಿ ಶಿಕ್ಷಕರಿಗೆ ಮಾತ್ರ ಸೀಮಿತವಾಗದೆ ಸೇವಾವಧಿ ಶಿಕ್ಷಕರಿಗೂ, ಈಗಾಗಲೆ, ಮುಕ್ತ ಶಿಕ್ಷಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವ ಇತರೆ ಕಾರ್ಯಕರ್ತರಿಗೂ, ಸಮಾಜ ಸೇವಕರಿಗೂ, ಸೂಕ್ತ ತರಬೇತಿ ನೀಡಲು ಶಿಕ್ಷಕ ತರಬೇತಿ ಸಂಸ್ಥೆಗಳು ಮುನ್ನುಗ್ಗಬಹುದಾಗಿದೆ. ಇದನ್ನು ಅಲ್ಪಕಾಲಿಕ ವ್ಯಾಸಂಗ ಶಿಬಿರಗಳ ಮೂಲಕವಾಗಲಿ, ವಿಚಾರಗೋಷ್ಠಿ ಹಾಗೂ ಕಾರ್ಯಾಗಾರಗಳ ಮೂಲಕವಾಗಲಿ, ಸಮಾಜ ಸೇವಾ ಕಾರ್ಯಗಳ ಮೂಲಕವಾಗಲಿ ಸಾಧಿಸಬಹುದಾಗಿದೆ. ಇದರಿಂದ ಮುಕ್ತ ಶಿಕ್ಷಣದಲ್ಲಿ ಪಾಲ್ಗೊಳ್ಳಬಹುದಾದ ಬಹುತೇಕರಿಗೆ ಸೂಕ್ತ ತರಬೇತಿ ದೊರೆಯುವುದಲ್ಲದೆ ಶಿಕ್ಷಕ ತರಬೇತಿ ಸಂಸ್ಥೆಗಳು ಇತರ ನಿಯೋಗಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳಲು ಸಾಧ್ಯವಾಗಬಹುದಾಗಿದೆ.

ಒಟ್ಟಿನಲ್ಲಿ, ಮುಕ್ತ ಶಿಕ್ಷಣಕ್ಕೆ ಅವಶ್ಯಕವಾದ ಉತ್ತಮ ಹಾಗೂ ಉಪಯುಕ್ತ ಆಡಳಿತ ವ್ಯವಸ್ಥೆ ಮತ್ತು ನಾಯಕತ್ವ ತರಬೇತಿಯು ಶಿಕ್ಷಕ ತರಬೇತಿ ಸಂಸ್ಥೆಗಳ ಹೊಣೆ ಮಾತ್ರ ಎಂದು ತಿಳಿಯುವುದು ಸಲ್ಲದು. ಈ ಸಂಸ್ಥೆಗಳಿಗೆ ಸಹವರ್ತಿಗಳಾಗಿ ಪೂರಕವಾಗಿ ಶೈಕ್ಷಣಿಕ ಕಾರ್ಯಗಳಲ್ಲಿ ನಿರತವಾಗಿರುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ವಿವಿಧ ಸಂಸ್ಥೆಗಳು, ಸ್ವಯಂ ಸೇವಾ ನಿಯೋಗಗಳು, ಕೈಗಾರಿಕಾ ಕೇಂದ್ರಗಳು, ಇತ್ಯಾದಿಗಳ ಜವಾಬ್ದಾರಿಯೂ ಹೌದು. ಅವುಗಳೂ ಸಹ ಉಚಿತವರಿತು, ಈ ದಿಸೆಯಲ್ಲಿ ಮುಂದುವರಿದಾಗ ಮುಕ್ತ ಶಿಕ್ಷಣದ ಉದ್ದೇಶಗಳು ಸಾಧಿತವಾಗುವುದಲ್ಲದೆ ದೇಶದ ಪ್ರಗತಿಗೆ ಸಹಾಯಕವಾಗುವುದರಲ್ಲಿ ಸಂದೇಹವೇ ಇಲ್ಲವೆನ್ನಬಹುದಾಗಿದೆ.

ಬೋಧನೆಯೆಂದರೆ ಕೆಲವು ವಿದ್ಯಾರ್ಥಿಗಳನ್ನು ಒಂದು ವರ್ಗದಲ್ಲಿ ಕಲೆಹಾಕಿ ಒಂದೆರಡು ಪಾಠಗಳನ್ನು ಹೇಳಿಕೊಡುವುದಲ್ಲ. ಅದು ಒಂದು ಬಗೆಯ ವೈಚಾರಿಕ ಸಂಘರ್ಷಣೆ ; ವಿಚಾರಮಂಥನ. ವಿದ್ಯಾರ್ಥಿಗಳ ಹೃನ್ಮನಗಳು ವಿಕಾಸಗೊಂಡು ಜ್ಞಾನೋದಯವಾಗಬೇಕು. ಅವರ ನಡವಳಿಕೆಯಲ್ಲಿ ಒಂದು ಬಗೆಯ ನಾವೀನ್ಯತೆ ಹಾಗೂ ಸಂಸ್ಕಾರ ಒಡೆದು ಕಾಣುವಂತಾಗಬೇಕು. ಅಂದರೆ ಮಾತ್ರ ಬೋಧನೆಯು ಫಲಪ್ರದವಾದಂತೆ; ಇಲ್ಲವಾದರೆ ಅದು ಶಿಕ್ಷಕನ ಕಂಠಶೋಷಣೆ ಹಾಗೂ ವೇಳೆಯ ಅಪವ್ಯಯ. ಬೋಧನೆಯು ಶಿಕ್ಷಣದ ಒಂದು ಅವಿಭಾಜ್ಯ ಅಂಗ. ಶಿಕ್ಷಣವು ಪರಿಣಾಮಕಾರಿಯಾಗಬೇಕಾದರೆ ಬೋಧನೆಯು ಪರಿಣಾಮಕಾರಿಯಾಗಬೇಕಾಗುತ್ತದೆ. ಆದುದರಿಂದ ಹೊಸ ಶಿಕ್ಷಕರು ಬೋಧನೆಯ ಅರ್ಥ, ಅದರ ಸ್ವರೂಪ, ರೀತಿನೀತಿಗಳನ್ನು ವಿಧಿವಿಧಾನಗಳನ್ನು ಚೆನ್ನಾಗಿ ಅರಿತವರಾಗಬೇಕು.

ಬೋಧನೆಯು ಪುರಾತನಕಾಲದಿಂದಲೂ ನಡೆದುಬಂದಿದೆ. ಹಿಂದೆ ಗುರುಗಳು ಶಿಷ್ಯನಿಗೆ ವಿದ್ಯಾದಾನ ಮಾಡುತ್ತಿದ್ದಾಗ ಕತೆಗಳನ್ನು ಹೇಳಿ, ದೃಷ್ಟಾಂತಗಳನ್ನು ಕೊಟ್ಟು ಪ್ರಶ್ನೆಗಳನ್ನು ಕೇಳಿ ಕಲಿಸುತ್ತಿದ್ದುದು ರೂಢಿಯಲ್ಲಿತ್ತು. ಶಿಕ್ಷಕನು ಕಲಿಸುವಾಗ ವಿಷಯಸ್ವರೂಪ, ವಿದ್ಯಾರ್ಥಿಗಳ ಸ್ವಭಾವಗಳನ್ನು ಅರಿತು, ತನ್ನದೇ ಆದ ರೀತಿಯಲ್ಲಿ ಕಲಿಸುತ್ತಿದ್ದನು. ಆಗ ಬಳಕೆಯಲ್ಲಿದ್ದ ಕೆಲವು ವಿಧಾನಗಳು ಇಂದಿಗೂ ರೂಢಿಯಲ್ಲಿವೆ. ಕಾಲವು ಗತಿಸಿದಂತೆ ಹೊಸ ವಿಧಾನಗಳು ರೂಢಿಯಲ್ಲಿ ಬಂದವು. ಮುದ್ರಣ ಕಲೆಯು ಶೋಧವಾದ ಮೇಲೆ ಪುಸ್ತಕಗಳು ರೂಢಿಯಲ್ಲಿ ಬಂದವು. ಆದ್ದರಿಂದ ಬೋಧನಾ ಕ್ರಮದಲ್ಲಿಯೂ ಮಾರ್ಪಾಡಾಗಿ ಹೊಸ ವಿಧಾನಗಳು ಆಚರಣೆಯಲ್ಲಿ ಬಂದವು. ವಿಜ್ಞಾನದಲ್ಲಿ ಬೆಳವಣಿಗೆಯಾಯಿತು. ಹೊಸ ಹೊಸ ಸಂಶೋಧನೆಗಳು ಜರುಗಿದವು...... ತತ್ಪರಿಣಾಮವಾಗಿ ಶಿಕ್ಷಣ ಶಾಸ್ತ್ರದಲ್ಲಿಯೂ ಮಹತ್ವದ ಬದಲಾವಣೆಗಳಾದವು. ಶಿಕ್ಷಣದ ಸ್ವರೂಪವೇ ಬದಲಾಯಿತು. ಹೊಸ ಬಗೆಯ ವಿಧಾನಗಳೂ, ತಂತ್ರಗಳೂ ರೂಢಿಯಲ್ಲಿ ಬಂದವು. ಇಂದು ಬೋಧನೆಗೆ ಒಂದು ತಂತ್ರವಾಗಿದೆ. ಶಿಕ್ಷಕನು ಒಬ್ಬ ತಂತ್ರಜ್ಞನಾಗಿದ್ದಾನೆ.

ಸಿ. ಎಸ್. ಬೆನ್ನೂರ

('ಕಲಿಸುವ ಸಾಮಾನ್ಯ ಪದ್ಧತಿಗಳು' ಗ್ರಂಥದ ಮೆಚ್ಚು ನುಡಿಯಿಂದ)

ಆರ್. ರಾಮಕೃಷ್ಣ

ಸಂಗೀತ ಮತ್ತು ಧ್ವನಿವಿಜ್ಞಾನ (ಫೊನೆಟಿಕ್ಸ್)

ಒಂದು ಅರ್ಥದಲ್ಲಿ ಕಲೆಗಳಲ್ಲೆಲ್ಲಾ ಸಂಗೀತವೇ ಅತ್ಯಂತ ಪ್ರಾಚೀನವಾದುದು ಮತ್ತು ಪ್ರಭಾವಶಾಲಿಯಾದುದು. ಭರತಖಂಡವಂತೂ ಅದನ್ನೊಂದು ಅಲೌಕಿಕ ವಿದ್ಯೆಯೆಂದು ದೈವಿಕವಾದ ಹಿನ್ನೆಲೆಯಲ್ಲಿ ಬೆಳೆಸಿಕೊಂಡು ಬಂದಿದೆ; ಅನೇಕ ಪ್ರಯೋಗಗಳನ್ನು ನಡೆಸಿದೆ; ಸೂಕ್ಷ್ಮಾತಿಸೂಕ್ಷ್ಮವಾದ ಭಾವನೆಗಳ ಸಂವೇದನೆಗಳ ಅಭಿವ್ಯಕ್ತಿಗೆ ಸಮರ್ಥವಾದ ಮಾಧ್ಯಮವನ್ನಾಗಿ ಮಾಡಿದೆ.[1] ಲಲಿತಕಲೆಗಳಲ್ಲೆಲ್ಲಾ ಶ್ರೇಷ್ಠವಾದ ಈ ಕಲೆ ಬದುಕಿನ ನೋವುನಲಿವುಗಳಲ್ಲಿ ಕಂಪನ್ನು ಸೂಸುವ ಪುಷ್ಪವಾಗಿ ತಂಪನ್ನೆರೆಯುವ ವೃಕ್ಷವಾಗಿ ಆನಂದವನ್ನೀಯುವ ಅಮೃತವಾಗಿ ಪರಿಣಮಿಸಿದೆ. ಸಂಗೀತ ಭಾವಪ್ರಧಾನವಾದದ್ದು. ಹಾಡುವವನ ಭಾವನೆಯನ್ನೇ ಅದು ಅವಲಂಬಿಸಿರುವುದರಿಂದ, ಸಂಗೀತವನ್ನು ಮಾನವನ 'ಭಾವದ ಭಾಷೆ' ಯೆಂದೂ ಕರೆಯುವುದುಂಟು.

0. ಸಂಗೀತ : ವ್ಯಾಖ್ಯೆ ವಿವರಣೆ ಲಕ್ಷಣಗಳು

1) ಸ್ವರಪ್ರಧಾನವೂ ಲಯಪ್ರಧಾನವೂ ಚೇತನದ ಅವಧಾನಪ್ರಧಾನವೂ ಆದ ಗಾನವೇ ಸಂಗೀತ (ಯಶೋಧರ)

2) ಸುಷ್ಠುಗೀತಂ ಸಂಗೀತಂ, ಸುಗೀತಂ ಸಂಗೀತಂ—ಕರ್ಣಾನಂದಕರವೂ, ಹೃದಯ ಸ್ಪರ್ಶಿಯೂ ಆದ ಗೀತೆಯೇ ಸಂಗೀತ.

3) ಸಂಗೀತವು ನೈತಿಕ ಭಾವನೆಯ ನೇರವಾದ ಅನುಕರಣೆ (ಅರಿಸ್ಟಾಟಲ್)

4) ಸಂಗೀತವು ಮನೋವಿಕಾರದಿಂದ ಹೊರಹೊಮ್ಮುವುದು ಮತ್ತು ನೈಜತ್ವದ ಆಂತರ್ಯವನ್ನು ಬೇರೆ ಯಾವುದರಿಂದಲೂ ಅನುಕರಿಸಲು ಸಾಧ್ಯವಿರದಂತಹ ವಿಶಿಷ್ಟ ಗುಣವುಳ್ಳದ್ದು (ಪ್ಲೇಟೋ)

5) ಮನಸ್ಸಿನ ಚಪಲತೆಯನ್ನು ಹತೋಟಿಗೆ ತರುವ ಸಂಕೇತ ಭಾಷೆಯೇ ಸಂಗೀತ (ಆನ್‌ಟನ್ ಎರ್‌ನ್‌ಸ್ಟಿಗ್)

6) ಅದು (ಸಂಗೀತ) ಭಾವನೆ ಮತ್ತು ಅನುಭವವನ್ನು ಧ್ವನಿಯ ಮೂಲಕ ಪಡೆದಿದೆ (ರಿಚರ್ಡ್ ಸ್ಟ್ರಾಸ್)

7) ಸಂಗೀತದ ಹಿರಿಮೆ ಮುಖ್ಯವಾಗಿ ಧ್ವನಿಯನ್ನೇ ಅವಲಂಬಿಸಿದೆ. ಧ್ವನಿ ವೈಶಿಷ್ಟ್ಯದಿಂದಾಗಿಯೇ ಅದು ಸೌಂದರ್ಯವನ್ನು ಸೃಷ್ಟಿಯನ್ನು ಪಡೆದಿದೆ (ಸೀಶೋರ್ ಸಿ. ಇ.)

1. ಧ್ವನಿ ಮತ್ತು ಅದರ ವೈಲಕ್ಷಣ್ಯಗಳು

ಸಂಗೀತವು ಶ್ರೋತೃಗಳಲ್ಲಿ ಪರಿಣಾಮ ಬೀರಬೇಕಾದರೆ ಧ್ವನಿ ಮತ್ತು ಅದು ಅಭಿವ್ಯಕ್ತಿಗೊಳ್ಳುವ ಅನುಕ್ರಮ ಮುಖ್ಯವಾಗಿರುತ್ತದೆ. ಮಾನವನ ಮಾನಸಿಕ ಸ್ಥಿತಿಗಳು, ಧ್ವನಿವಿನ್ಯಾಸವನ್ನು

ನಿಯಂತ್ರಿಸುತ್ತವೆ. ಆದರೆ ಸುಖ-ದುಃಖ, ಪ್ರೀತಿ-ಪ್ರೇಮ, ಸಿಟ್ಟು-ಸಿಡುಕು ಮೊದಲಾದ ಭಾವಗಳನ್ನು ವ್ಯಕ್ತಪಡಿಸುವಾಗ ಧ್ವನಿಯಲ್ಲಿ ಉಂಟಾಗುವ ಬದಲಾವಣೆಗಳು ಎಲ್ಲರಿಗೂ ತಿಳಿದದ್ದೇ. ಧ್ವನಿಯ ಏರಿಳಿತಗಳಲ್ಲಿಯ ಈ ವ್ಯತ್ಯಾಸಗಳನ್ನು ಗಮನಿಸಿ ಅದಕ್ಕೊಂದು ವ್ಯವಸ್ಥಿತ ರೂಪ ವನ್ನು ಕೊಡುವ ಪ್ರಯತ್ನದಿಂದಲೇ ಸಂಗೀತದ ಉಗಮವಾಯಿತು ಎನ್ನಬಹುದು.

1:1. ನಾದ : ಸಂಗೀತದಲ್ಲಿ ನಾದ ಬಹಳ ಮುಖ್ಯ: ಪ್ರಾಣಾಗ್ನಿಗಳ ಸಂಯೋಗದಿಂದ ನಾದ ಉಂಟಾಗಿದೆ. ನಾದವಿಲ್ಲದೆ ಗೀತೆಯಿಲ್ಲ, ಸ್ವರವಿಲ್ಲ, ನೃತ್ಯವೂ ಇಲ್ಲ. ಈ ಮೂರು ನಾದವನ್ನೇ ಆಶ್ರಯಿಸಿವೆ; ಅಲ್ಲದೆ ಪ್ರಪಂಚವೇ ನಾದಮಯವಾಗಿದೆ[2]. ನಾದದಲ್ಲಿ ಎರಡು ಬಗೆ (1) ಅನಾಹತ (2) ಆಹತ. ಅನಾಹತ ನಾದವು ಯೋಗಿಗಳ ಓಂಕಾರ ನಾದದ ಅಂತರ್ನಾದ. ಆಹತ ನಾದವು ಮಾನವ ಧ್ವನ್ಯಂಗಗಳಿಂದ ವಾದ್ಯಗಳಿಂದ ಶ್ರುತಿ ಮೂಲಕವಾಗಿ ಹೊರಹೊಮ್ಮುವ ನಾದ. ಇದು ಬಹಿರ್ನಾದ. ಸ್ವರಗಳ ಗುಣಕ್ಕೆ ಅನುಗುಣವಾಗಿ ಆಹತ ನಾದವನ್ನು ಆರು ಬಗೆಯಲ್ಲಿ ವರ್ಗೀಕರಿಸ ಲಾಗಿದೆ.

(ಅ) ಚರ್ಮಜ – ಚರ್ಮವಾದ್ಯಗಳಿಂದ ಉಂಟಾಗುವ ನಾದ
(ಆ) ಧನುರ್ಜ – ಕಮಾನು ವಾದ್ಯಗಳಿಂದ ಉಂಟಾಗುವ ನಾದ
(ಇ) ನಖಜ – ಮೀಟು ವಾದ್ಯಗಳಿಂದ ಉಂಟಾಗುವ ನಾದ
(ಈ) ಲೋಹಜ — ಲೋಹ ವಾದ್ಯಗಳಿಂದುಂಟಾಗುವ ನಾದ
(ಉ) ವಾಯುಜ — ಗಾಳಿ ವಾದ್ಯಗಳಿಂದ ಉಂಟಾಗುವ ನಾದ
(ಊ) ಶಾರೀರಜ — ಮಾನವನ ಧ್ವನ್ಯಂಗಗಳಿಂದ ಉಂಟಾಗುವ ನಾದ.

ನಾದ ಭೇದವು ಮಂದ, ಮಧ್ಯ ಮತ್ತು ತಾರ ಎಂಬ ಸ್ಥಾಯಿಭೇದಗಳಾಗಿಯೂ ರೂಪುಗೊಂಡಿದೆ. ಹೃದಯದಿಂದ ಮಂದ್ರವೂ, ಕಂಠದಿಂದ ಮಧ್ಯವೂ, ಶಿರದಿಂದ ತಾರವೂ ಮೂಡುವುದೆಂದು ಋಗ್ವೇದ ಪ್ರಾತಿಶಾಖ್ಯದಿಂದ[3] ತಿಳಿದು ಬರುತ್ತದೆ.

ಆತ್ಮಾವಿವಕ್ಷಮಾಣೋಽಯಂ ಮನಃ ಪ್ರೇರಯತೇ ಮನಃ ।
ದೇಹಸ್ಥಂ ವಹ್ನಿ ಮಾಹಂತಿ ಸ ಪ್ರೇರಯತಿ ಮಾರುತಮ್ ॥
ಬ್ರಹ್ಮಗ್ರಂಥಿ ಸ್ಥಿತ : ಸೋಽಥ ಕ್ರಮಾದೂರ್ಧ್ವಪಥೇ ಚರನ್ ।
ನಾಭಿ ಹೃತ್ಕಂಠ ಮೂರ್ಧಾಸ್ಯೇಷ್ವಾ ವಿರ್ಭಾವಯತಿ ಧ್ವನಿಂ ॥

ಆತ್ಮನಿಂದ ಪ್ರೇರಿಸಲ್ಪಟ್ಟ ಮನಸ್ಸು ದೇಹದಲ್ಲಿರುವ ಅಗ್ನಿಯನ್ನು ಸ್ಪರ್ಶಿಸುತ್ತದೆ. ಅಗ್ನಿಯು ವಾಯುವನ್ನು ಪ್ರೇರೇಪಿಸುತ್ತದೆ. ಬ್ರಹ್ಮ ಗ್ರಂಥಿಯಲ್ಲಿರುವ ನಾದವು ಊರ್ಧ್ವಮುಖವಾಗಿ ಅನು ಕ್ರಮವಾಗಿ ನಾಭಿ, ಹೃದಯ, ಕಂಠ, ನಾಸಿಕ ಮತ್ತು ಶಿರಸ್ಸು ಮೂಲಕ ಹೊರಬರುತ್ತದೆ. ನಾದಕ್ಕೆ ನಾಭಿಯೇ ಮೂಲಸ್ಥಾನವೆಂದು ಕೇಶಿರಾಜ ಹೇಳಿದ್ದಾನೆ (ಅನುಕೂಲಪವನನಿಂ ಜೀವನಿಪ್ಪದಿಂ ನಾಭಿ ಮೂಲದೊಳ್ ಕಹಳೆಯ ಪಾಂಗಿನೆವೊಲ್ ಶಬ್ದದ್ರವ್ಯಂ ಜನಿಯಿಸುಗುಂ). ತ್ಯಾಗರಾಜರ 'ಶೋಭಿಲ್ಲು ಸಪ್ತಸ್ವರ' ಎಂಬ ಜಗನ್ಮೋಹಿನಿ ರಾಗದ ಕೃತಿಯಲ್ಲಿ ನಾದೋತ್ಪತ್ತಿ ಬಗೆಗೆ ಮಾಹಿತಿ ದೊರೆಯು ತ್ತದೆ (ನಾಭಿ ಹೃತ್ಕಂಠ ರಸನ ನಾಸಾದುಲಯಂದು).

1.2 ಧ್ವನ್ಯಂಗ ಮತ್ತು ಧ್ವನಿಗಳು : ಧ್ವನ್ಯಂಗಗಳು ಧ್ವನಿಗಳನ್ನು ಉತ್ಪಾದಿಸುವ ರೀತಿ (ಉಚ್ಚಾರಣಾತ್ಮಕ ಧ್ವನಿವಿಜ್ಞಾನ), ಅವು ಧ್ವನಿತರಂಗಗಳಾಗಿ ಪ್ರಸಾರವಾಗುವ ಬಗೆ (ತರಂಗಾತ್ಮಕ ಧ್ವನಿವಿಜ್ಞಾನ) ಮತ್ತು ಈ ತರಂಗಗಳು ಶ್ರೋತೃವಿನ ಕಿವಿಯನ್ನು ತಲುಪಿ ಗ್ರಾಹ್ಯವಾಗುವ ರೀತಿ (ಶ್ರವ್ಯಾತ್ಮಕ ಧ್ವನಿವಿಜ್ಞಾನ) ಈ ಮೂರು ವಿಧಗಳಲ್ಲಿ ಆಧುನಿಕ ಭಾಷಾವಿಜ್ಞಾನಿಗಳು ಧ್ವನಿಗಳನ್ನು ವರ್ಗೀಕರಿಸಿದ್ದಾರೆ. ಓಷ್ಠ್ಯ, ದಂತ್ಯ, ವರ್ತ್ಸ್ಯ, ತಾಲವ್ಯ, ಮೂರ್ಧನ್ಯ, ಅಲಿಜಿಹ್ವೆ, ಜಿಹ್ವೆ, ಸ್ವರತಂತುಗಳು ಇವು ಧ್ವನ್ಯಂಗಗಳು. ಓಷ್ಠ್ಯ ಸ್ಥಿತಿ, ಜಿಹ್ವೆಯ ಎತ್ತರ, ಜಿಹ್ವಾ ಪ್ರಗತಿ, ಕಾಲಾವಧಿ, ಅಲಿಜಿಹ್ವೆಯ ಸ್ಥಿತಿ, ಸ್ವರತಂತುಗಳ ಸ್ಥಿತಿ, ಉಚ್ಚಾರದ ಒತ್ತಡ—ಮುಂತಾದ ಅಂಶಗಳ ಆಧಾರದಿಂದ ಸ್ವರಗಳನ್ನು ಸಂವೃತ, ಅರ್ಧಸಂವೃತ, ಅರ್ಧ ವಿವೃತ, ವಿವೃತ, ಅಗ್ರ, ಮಧ್ಯ ಮತ್ತು ಪಶ್ಚ ಎಂಬುದಾಗಿ ವರ್ಗೀಕರಿಸಬಹುದು. ಅಂತೆಯೇ ಉಚ್ಚಾರಣಾಸ್ಥಾನ ಕರಣಗಳನ್ನು ಆಧರಿಸಿ ಓಷ್ಠ್ಯ, ದಂತೋಷ್ಠ್ಯ, ದಂತ್ಯಗಳು, ವರ್ತ್ಸ್ಯ ವರ್ತ್ಸ್ಯತಾಲವ್ಯ, ಮೂರ್ಧನ್ಯ, ತಾಲವ್ಯ, ಕಂಠ್ಯ, ಅಲಿ ಜಿಹ್ವೀಯ, ಉಪಾಲಿ ಜಿಹ್ವೀಯ. ಸ್ವರಯಂತ್ರ ಮುಖಿ (laryngeals), ಕಾಕಲ್ಯ (glottals), ಸ್ಪರ್ಶ, ಸಂಘರ್ಷ, ಅನುಘರ್ಷ, ಅನುನಾಸಿಕ, ಪಾರ್ಶ್ವಿಕ, ಲೋಡಿತ (ಲುಂಠಿತ), ಕಂಪಿತ, ತಾಡಿತ, ಅರ್ಧಸ್ವರ ಎಂಬುದಾಗಿ ವ್ಯಂಜನಗಳನ್ನು ವರ್ಗೀಕರಿಸಬಹುದು. ಇದೇ ಅಲ್ಲದೆ ಸ್ವರತಂತುಗಳನ್ನು, ಶ್ವಾಸ ಬಲವನ್ನು, ಉಚ್ಚಾರಣಾ ಶಕ್ತಿಯನ್ನು, ಅನುನಾಸಿಕತೆಯನ್ನು, ಸಂಯುಕ್ತತೆಯನ್ನು ಆಧರಿಸಿ ವ್ಯಂಜನಗಳನ್ನು ವರ್ಗೀಕರಿಸಿರುವುದೂ ಉಂಟು. ಧ್ವನಿ ಸಂಬಂಧ ಲಕ್ಷಣಗಳಾದ ಮಾತ್ರಾ, ಸ್ವರಾಘಾತ, ಬಲಾಘಾತ ಸಂಗಮ ಸ್ವರಲಹರಿ ಮುಂತಾದ ರಾಗಾತ್ಮಕ ಲಕ್ಷಣಗಳನ್ನು ಆಧರಿಸಿಯೂ ಧ್ವನಿಗಳನ್ನು ವರ್ಗೀಕರಿಸಲಾಗಿದೆ.

1.3 ಸಂಗೀತಸ್ವರ ಶ್ರೇಣಿ (ಧ್ವನಿ ರಚನೆ) : ಸ್ವರಗಳ ಸೂಕ್ಷ್ಮ ಅಂತರದಿಂದ ಸಂಗೀತ ಸ್ವರ ಶ್ರೇಣಿಯು ಮೂಡಿದೆ, (ಕರ್ಷಣ). ಋಗ್ವೇದದ ಮೂಲಕ ಸಾಮವೇದಕ್ಕೆ ಬಂದ ಉದಾತ್ತ, ಅನುದಾತ್ತ ಮತ್ತು ಸ್ವರಿತ ಎಂಬುವು ಸಂಗೀತದ ಪ್ರಮುಖ ಸ್ವರಗಳಾದವು. ಎತ್ತರದ ಸ್ಥಾಯಿಯಲ್ಲಿ ಹಾಡುವುದು ಉದಾತ್ತ, ತಗ್ಗುಸ್ಥಾಯಿಯಲ್ಲಿ ಹಾಡುವುದು ಅನುದಾತ್ತ, ಇವೆರಡರ ಮಧ್ಯಸ್ಥಾಯಿಯಲ್ಲಿ ಹಾಡುವುದು ಸ್ವರಿತವೆಂದು ಪಾಣಿನಿ (ಕ್ರಿ. ಪೂ. 3ನೆಯ ಶತಮಾನ) ಹೇಳಿದ್ದಾನೆ. ಕಾಲಾಂತರದಲ್ಲಿ ಸ್ವರಗಳನ್ನು ಹೆಚ್ಚಿಸಿಕೊಂಡದ್ದರಿಂದ ಸಪ್ತಸ್ವರಗಳು ಉಂಟಾದವು. ನಿಷಾಧ ಗಾಂಧಾರ ಸ್ವರಗಳನ್ನು ಉದಾತ್ತವೂ, ರಿಷಭ ಧೈವತ ಸ್ವರಗಳನ್ನು ಅನುದಾತ್ತವೂ ಷಡ್ಜ, ಮಧ್ಯಮ ಮತ್ತು ಪಂಚಮ ಸ್ವರಗಳನ್ನು ಸ್ವರಿತವು ಹೊಂದಿವೆ. ಸಪ್ತಸ್ವರವು ಅವರೋಹ ಕ್ರಮದಲ್ಲಿದೆ ಮತ್ತು ಷಡ್ಜವು ಮಧ್ಯಸ್ವರವಾಗಿದೆ.[4] ಸಂಗೀತವು ನಾದಮಯವೆಂದು ಹಿಂದೆಯೇ ಹೇಳಿದೆ. ಈ ನಾದವೇ ಶ್ರುತಿ, ಸ್ವರ, ರಾಗಗಳಾಗಿ ಒಂದೊಂದು ರಚನೆಯನ್ನೂ ಆಯಾ ರಚನೆಯ ಭಾವಕ್ಕೆ ಅನುಗುಣವಾಗಿ ರೂಪಿಸುವ ಮೂಲಾಂಶವಾಗಿದೆ.[5] ಈ ನಾದವು ಸಾಮಾನ್ಯಾರ್ಥದಲ್ಲಿ ಒಂದು ಧ್ವನಿ (ಗಾನಸ್ವರ).

1.4 ಧ್ವನಿಯ ಉತ್ಪತ್ತಿ, ಪ್ರಸಾರ, ಗ್ರಹಣ : ಧ್ವನಿಯ ಉತ್ಪತ್ತಿ, ಪ್ರಸಾರ ಗ್ರಹಣ

ಈ ಅಂಶಗಳನ್ನು ಧ್ವನಿವಿಜ್ಞಾನದ ದೃಷ್ಟಿಯಿಂದ ಗಮನಿಸಿದಾಗ ಗಾಯಕ ಮತ್ತು ಶ್ರೋತೃವಿನ ಪರಸ್ಪರ ಸಂಬಂಧ ಹೆಚ್ಚು ಸ್ಪಷ್ಟವಾಗಿ ತಿಳಿದುಬರುತ್ತದೆ.

1.4.1. **ಧ್ವನಿಯ ಉತ್ಪತ್ತಿ :** ಧ್ವನಿಯ ಉತ್ಪಾದನೆಗೆ ವಸ್ತು ಅಥವಾ ಪದಾರ್ಥಗಳ ಕಂಪನಗಳೇ ಮೂಲಕಾರಣ. ಶಬ್ದವನ್ನು ಒಯ್ಯಲು ವಸ್ತುವು ಘನ, ದ್ರವ ಅಥವಾ ಅನಿಲದ ಯಾವುದಾದರೊಂದು ರೂಪದಲ್ಲಿ ಇರಬೇಕು. ಉದಾಹರಣೆಗೆ—

ಘನ : ವೀಣೆಯನ್ನು ನುಡಿಸಿದಾಗ, ಅದರ ತಂತಿಗಳು, ಕೊಡ ದಂಡಿ ಇವೆಲ್ಲವೂ ಕಂಪಿಸಿ ನಾದವನ್ನುಂಟುಮಾಡುತ್ತವೆ.

ದ್ರವ : ಜಲತರಂಗ ವಾದ್ಯವನ್ನು ನುಡಿಸುವಾಗ ಬಟ್ಟಲುಗಳ ಜೊತೆಯಲ್ಲಿ ಅದರಲ್ಲಿಯ ನೀರೂ ಸಹ ನಾದವನ್ನುಂಟುಮಾಡುತ್ತವೆ.

ಅನಿಲ : ಕೊಳಲನ್ನು ನುಡಿಸುವಾಗ ಗಾಳಿಯೇ ನಾದ ಉತ್ಪಾದಕ.

ಶಬ್ದವು ಉತ್ಪನ್ನವಾದ ಆಕರದಿಂದ ಮಾಧ್ಯಮದ ಬೇರೆ ಭಾಗಗಳಿಗೆ ಅಲೆಗಳಂತೆ (ತರಂಗ) ಸಾಗುತ್ತವೆ. ಈ ಅಲೆಗಳು ಒಂದು ಗೊತ್ತಾದ ವೇಗದಲ್ಲಿ ಸಾಗುತ್ತವೆ. ಹೀಗೆ ಅಲೆಗಳು ಪ್ರಸಾರವಾಗುವ ವೇಳೆಯಲ್ಲಿ ಮಾರ್ಗದಲ್ಲಿರುವ ಮಾಧ್ಯಮದ ಕಣಗಳು ತಮ್ಮ ಸ್ವಸ್ಥಾನಗಳ ಎರಡು ಕಡೆಗಳಲ್ಲಿಯೂ ನಿಯಮಿತ ರೀತಿಯಲ್ಲಿ ಆಂದೋಳನಗಳನ್ನು (ಆಸ್ಸಿಲೇಷನ್ಸ್) ಉಂಟುಮಾಡುತ್ತವೆ. ಈ ರೀತಿಯ ಕ್ಷೋಭೆಯ ಮುನ್ನಡೆಯೇ ಶಬ್ದಪ್ರಸಾರದ ವಿಧಾನವಾಗುತ್ತದೆ,

1.4.1.1. **ಅಲೆಯ ಭೌತಲಕ್ಷಣಗಳು :** ಮಾಧ್ಯಮದ ಮೂಲಕ ಅಲೆಯು ವ್ಯಾಪಿಸುತ್ತಿರುವ ವೇಗವು ಮಾಧ್ಯಮದ ಲಕ್ಷಣಗಳನ್ನು ಅನುಸರಿಸುತ್ತದೆ ; ಅಲ್ಲದೆ ಮಾಧ್ಯಮಕ್ಕಿರುವ ಸ್ಥಿತಿಸ್ಥಾಪಕತ್ವವು ಕಣಗಳ ಓಡಾಟವನ್ನು ನಿರ್ಧರಿಸುತ್ತವೆ. ಅಲೆಯ ವೇಗವು ಮಾಧ್ಯಮದ ಸಾಂದ್ರತೆಯನ್ನು ಅವಲಂಬಿಸಿರುತ್ತದೆ.

ಒಂದು ಮಾಧ್ಯಮದಲ್ಲಿ ಅಲೆಯು ಪ್ರಸರಿಸುವಾಗ ಆಕರದಿಂದ ಸುತ್ತಲೂ ಒಂದೇ ದೂರದಲ್ಲಿರುವ ಕಣಗಳು ಒಂದೇ ದೆಶೆಯಲ್ಲಿರುತ್ತವೆ, ಅಂತೆಯೇ ಒಂದು ಗೊತ್ತಾದ ದೂರದಲ್ಲಿರುವ ಮತ್ತಷ್ಟು ಕಣಗಳು ಅದೇ ದೆಶೆಯಲ್ಲಿರುತ್ತವೆ. ಹೀಗೆ ಅಕ್ಕಪಕ್ಕದಲ್ಲಿ ಒಂದೇ ದೆಶೆಯಲ್ಲಿರುವ ಕಣಗಳಿಗಿರುವ ದೂರವನ್ನು 'ಅಲೆಯುದ್ದ' (λ) ಎಂದು ಕರೆಯುತ್ತಾರೆ. ಅಲೆಯುದ್ದವು ಪ್ರತಿಯೊಂದು ಅಲೆಗೂ ಇರುವ ಮುಖ್ಯ ಲಕ್ಷಣ. ಒಂದೇ ಆಕರದಿಂದ ಹೊರಟ ಅಲೆಗಳ ವೇಗವು ಬೇರೆ ಬೇರೆ ವಸ್ತುಗಳಲ್ಲಿ ಬೇರೆ ಬೇರೆಯಾಗಿರುವಂತೆ ಅಲೆಯುದ್ದವೂ ಬೇರೆ ಬೇರೆಯಾಗಿರುತ್ತವೆ.

ಅಲೆಯು ಮುಂದುವರೆಯಲು ಮಾಧ್ಯಮದ ಕಣಗಳು ಆಂದೋಲಿಸಬೇಕು. ಆಕರವು ತಡೆಯಿಲ್ಲದೆ ಕಂಪಿಸುತ್ತಿರಬೇಕು. ಆಕರವು ಪ್ರತಿಸಲ ಕಂಪಿಸಿದಾಗಲೂ ಒಂದು ಅಲೆಯನ್ನು ಮಾಧ್ಯಮದ ಮೂಲಕ ತಳ್ಳುತ್ತದೆ. ಆದ್ದರಿಂದ ಒಂದು ಸೆಕೆಂಡಿನಲ್ಲಿ ಆಕರವು ಎಷ್ಟು ಸಲ ಕಂಪಿಸುತ್ತದೋ ಅಷ್ಟೇ ಸಲ ಅಲೆಯನ್ನು ಪ್ರತಿಯೊಂದು ಸೆಕೆಂಡಿನಲ್ಲೂ ಮಾಧ್ಯಮದ ಮೂಲಕ ಆಕರವು ಕಳುಹಿಸುತ್ತದೆ. ಮಾಧ್ಯಮದ ಯಾವುದಾದರೊಂದು ಸ್ಥಳದಲ್ಲಿ ಮೇಲಿಂದ ಮೇಲೆ ಪ್ರತಿ ಸೆಕೆಂಡಿನಲ್ಲಿಯೂ ಎಷ್ಟು ಅಲೆಗಳು ಹಾಯುತ್ತಿರುತ್ತವೆ ಎಂಬುವದನ್ನು ಅಲೆಯ ಆವರ್ತ ಸಂಖ್ಯೆ (n) ಯೆಂದು ಕರೆಯುತ್ತಾರೆ.

ಆಕರದ ಕಂಪನ ಸಂಖ್ಯೆಯು n ಆದರೆ, ಪ್ರತಿ ಕಂಪನವನ್ನು ಪೂರೈಸಲು ಅದು ತೆಗೆದುಕೊಳ್ಳುವ ಕಾಲ $1/n$ ಸೆಕೆಂಡು. ಪ್ರತಿ ಕಂಪನದಲ್ಲೂ ಒಂದೇ ತೆರನಾದ ದೆಶೆಯನ್ನು ಮಾಧ್ಯಮದ ಮೂಲಕ ಆಕರವು ಕಳುಹಿಸುತ್ತಿರುವುದರಿಂದ ಮುಂದೆ ಜನಿಸಿದ ದೆಶೆಯು, ಆಗತಾನೆ ಜನಿಸಿದ ದೆಶೆಯಿಂದ λ ದೂರದಲ್ಲಿರುತ್ತದೆ. ಅಂದರೆ ಆಕರದ ಪ್ರತಿ ಆವರ್ತನದಲ್ಲೂ ದೆಶೆಯು ಚಲಿಸಿದ ದೂರ λ ಆಗಿರುತ್ತದೆ. ಪ್ರತಿ ಆವರ್ತನಕ್ಕೂ ಆಕರವು $1/n$ ಸೆಕೆಂಡುಗಳನ್ನು ತೆಗೆದುಕೊಳ್ಳುವುದರಿಂದ ಈ ಕಾಲದಲ್ಲಿ ಅಲೆಯು ಚಲಿಸಿದ ದೂರ λ ಎಂದಾಯಿತು. ಈ ಪ್ರಕ್ರಿಯೆ ನಡೆಯುತ್ತಿರುವಾಗ ಮಾಧ್ಯಮದ ಮೂಲಕ ಅಲೆಯು ಸಾಗುತ್ತಿರುವ ವೇಗ

$$V = \frac{\text{ಒಂದು ನಿರ್ದಿಷ್ಟಕಾಲದಲ್ಲಿ ಅಲೆಯು ಚಲಿಸಿದ ದೂರ}}{\text{ಕಾಲ}}$$

$$= \frac{\lambda}{1/n} = n\lambda$$

ಇದೇ ಅಲೆಯ ವೇಗಕ್ಕೂ ಅದರ ಉದ್ದ ಮತ್ತು ಆವರ್ತ ಸಂಖ್ಯೆಗೂ ಇರುವ ಸಂಬಂಧ.

1.4.2. ಶಬ್ದಪ್ರಸಾರ : ಅಲೆಗಳಲ್ಲಿ ಎರಡು ಮುಖ್ಯ ಭೇದಗಳಿವೆ. (i) ಅಡ್ಡ ಅಲೆ ; ಈ ಪ್ರಸಾರದಲ್ಲಿ ಮಾಧ್ಯಮದ ಕಣಗಳು ಅಲೆಗಳ ಪ್ರಸಾರ ಮಾರ್ಗಕ್ಕೆ ಲಂಬದ ದಿಕ್ಕಿನಲ್ಲಿ ಕಂಪನಗಳನ್ನು ಉಂಟುಮಾಡುತ್ತವೆ. (ii) ನೀಳ ಅಥವಾ ಉದ್ದ ಅಲೆ : ಇವು ಪ್ರಸಾರವಾಗುವಾಗ ಮಾರ್ಗದಲ್ಲಿರುವ ಮಾಧ್ಯಮದ ಕಣಗಳು ಕಂಪನ ಮಾಡುವ ನೇರವೂ ಅಲೆಗಳ ಪ್ರಸಾರದ ನೇರವೂ ಒಂದೇ ಆಗಿರುತ್ತದೆ. ಶಬ್ದದ ಅಲೆಗಳ ಈ ಬಗೆಯಲ್ಲಿ ಪ್ರಸಾರವಾಗುತ್ತವೆ.

1.4.3. ಶಬ್ದಗ್ರಹಣ : ಅಲೆಗಳ ರೂಪದಲ್ಲಿ ಪ್ರಸಾರವಾದ ಶಬ್ದವು ಕಿವಿಯನ್ನು ತಲುಪಿದ ಮೇಲೆ ಕಂಪನಗಳನ್ನು ಉಂಟುಮಾಡುತ್ತವೆ. ಇವು ಒಳಕಿವಿಯಲ್ಲಿಯ ಶ್ರಾವಕ ನರದ ಮೂಲಕ ಮಿದುಳನ್ನು ತಲಪಿದಾಗ ನಮಗೆ ಧ್ವನಿಯು ಗ್ರಾಹ್ಯವಾಗುತ್ತದೆ.

1.5 ಸಪ್ಪಳ (ಗದ್ದಲ) ಮತ್ತು ಸಂಗೀತಸ್ವರ(ಗಾನಸ್ವರ) ಲಕ್ಷಣಗಳು : ಶಬ್ದಗಳೆಲ್ಲವನ್ನು ಸಪ್ಪಳ ಮತ್ತು ಸಂಗೀತಸ್ವರಗಳೆಂದು ವರ್ಗೀಕರಿಸಬಹುದು. ಚಪ್ಪಾಳೆ ತಟ್ಟಿದಾಗ ಉಂಟಾಗುವ ಅಥವಾ ವಸ್ತುವೊಂದು ಬಿದ್ದಾಗ ಉಂಟಾಗುವ ಶಬ್ದವನ್ನು ಸಪ್ಪಳವೆನ್ನುತ್ತೇವೆ. ವೀಣೆ ಅಥವಾ ಕೊಳಲನ್ನು ನುಡಿಸಿದಾಗ ಪಿಟೀಲನ್ನು ಉಜ್ಜಿದಾಗ ಕಿವಿಗೆ ಇಂಪು ತರುವ ಶಬ್ದವನ್ನು ಸಂಗೀತ ಸ್ವರವೆನ್ನುತ್ತೇವೆ. ಸಪ್ಪಳಗಳು ವಿಚ್ಛಿನ್ನ ಶಬ್ದಗಳು (ವ್ಯಂಜನಗಳು), ಸಂಗೀತ ಸ್ವರಗಳು ಅವಿಚ್ಛಿನ್ನ ಶಬ್ದಗಳು (ಸ್ವರಗಳು). ಒಂದೇ ರೀತಿಯ ವಿಚ್ಛಿನ್ನ ಶಬ್ದಗಳನ್ನು ಸತತವಾಗಿ ಪುನರುಚ್ಚರಿಸುತ್ತಿದ್ದರೆ ಅದು ಸಂಗೀತಸ್ವರವಾಗುತ್ತದೆ. ಪ್ರತ್ಯೇಕವಾಗಿ ಕೇಳಿಸುವ ವಿಚ್ಛಿನ್ನ ಶಬ್ದಗಳು ಒಂದರೊಳಗೊಂದು ಮಿಳಿತವಾಗಿ ಇಂಪಾದ ಸ್ವರವಾಗಿ ಸಂಗೀತವೆನಿಸುತ್ತದೆ. ವೇಗವು ಹೆಚ್ಚಿದಂತೆ ಸಂಗೀತ ಸ್ವರದ ಸ್ಥಾಯಿಯೂ ಹೆಚ್ಚುತ್ತಾ ಹೋಗುತ್ತದೆ. ವೈಜ್ಞಾನಿಕ ಉಪಕರಣಗಳ ಸಹಾಯದಿಂದ ಪ್ರತಿಯೊಂದು ಸಂಗೀತ ಸ್ವರದ ಆವರ್ತ ಸಂಖ್ಯೆಯನ್ನು ಧ್ವನಿವಿಜ್ಞಾನಿಗಳು ಖಚಿತವಾಗಿ ಹೇಳಬಲ್ಲರು.

1.6 ಸಂಗೀತ ಸ್ವರದ ವಿಶೇಷ ಗುಣಗಳು : ಸಂಗೀತಸ್ವರಕ್ಕೆ ಮೂರು ವಿಶೇಷ ಗುಣಗಳಿವೆ. (i) ಸ್ಥಾಯಿ ಸಂಗೀತ ಶಾಸ್ತ್ರದಲ್ಲಿ ಗಾಯಕನ ಅನುಭವದ ಪೂರ್ಣವ್ಯಾಪ್ತಿಯನ್ನು ತೋರಿಸಲು ಸ್ಥಾಯಿ ಎಂಬ ಪದವನ್ನು ಬಳಸಲಾಗುತ್ತಿದೆ. ಸ್ಥಾಯಿಯು ನಿರ್ದಿಷ್ಟ ಪ್ರಮಾಣದಲ್ಲಿರುವ ಕಂಪನಗಳ ಸಂಖ್ಯೆಗಳನ್ನು ಅವಲಂಬಿಸಿರುತ್ತದೆ. ಸ್ವರದ ಆವರ್ತ ಸಂಖ್ಯೆಯನ್ನು ವೈಜ್ಞಾನಿಕ ಉಪಕರಣಗಳಿಂದ ತಿಳಿದುಕೊಳ್ಳಬಹುದಾದರೂ. ಮಾನವನ ಕಿವಿಯು ಸ್ವರಗಳಿಗಿರುವ ಭೇದವನ್ನು ತಕ್ಷಣ ಗ್ರಹಿಸುತ್ತದೆ. ಈ ಲಕ್ಷಣವೇ ಸ್ವರದ ಸ್ಥಾಯಿ ; ಗಾಯಕನ ಸಂಗೀತದಲ್ಲಿ ಸ್ವರಗಳ ಆವರ್ತ ಸಂಖ್ಯೆಗಳು ಅಧಿಕವಾಗಿದ್ದರೆ ಅವನು ತಾರಸ್ಥಾಯಿಯಲ್ಲಿ ಹಾಡುತ್ತಿರುವನೆಂದೂ, ಆವರ್ತಸಂಖ್ಯೆಗಳು ಕಡಿಮೆಯಾಗಿದ್ದರೆ ಮಂದ್ರಸ್ಥಾಯಿಯಲ್ಲಿ ಹಾಡುತ್ತಿರುವನೆಂದು ಹೇಳಬಹುದು. ಸಾಮಾನ್ಯವಾಗಿ ಹೆಂಗಸರ ಮಾತಿನ ಸ್ಥಾಯಿಗಿಂತ ಗಂಡಸರ ಮಾತಿನ ಸ್ಥಾಯಿಯು ಮಂದ್ರವಾಗಿರುತ್ತದೆ. (ii) ತೀವ್ರತೆ ಅಥವಾ ಘೋಷ ಒಂದು ಸ್ವರದ ತೀವ್ರತೆಯು ಗಟ್ಟಿಯಾಗಿ ಅಥವಾ ಮಂದವಾಗಿ ಇರಬಹುದು. ಸ್ವರದ ತೀವ್ರತೆ ಅಥವಾ ಘೋಷವು ಪ್ರತಿ ಆವರ್ತದಲ್ಲೂ ಆಕರವು ಹೊರಸೂಸುವ ಶಕ್ತಿಗೆ ಅನುಗುಣವಾಗಿರುತ್ತದೆ. ಆಕರವು ಶ್ರುತಿಗತಿಯಂತೆ ಸರಳ ಸಂಗತ ಚಲನೆಯನ್ನು ಮಾಡುತ್ತಿದೆ ಎಂದರೆ ಅದು ಪ್ರತಿ ಸಲವೂ ಹೊರಸೂಸುತ್ತಿರುವ ಶಕ್ತಿಯು ಆಂದೋಲನದ ಮಧ್ಯ ಬಿಂದುವಿನಲ್ಲಿ ಅದಕ್ಕಿರುವ ಚಲನಶಕ್ತಿಗೆ ಸಮ. ಆಕರಕ್ಕೆ ಆ ಬಿಂದುವಿನಲ್ಲಿರುವ ವೇಗವನ್ನು v ಎಂದು ಕರೆದರೆ ಪ್ರತಿ ಆವರ್ತನದಲ್ಲಿ ಆಕರದ ಶಕ್ತಿ = ಮಧ್ಯಬಿಂದುವಿನಲ್ಲಿರುವ

$$^1/_2\, mv^2 = 2\pi^2 m^2 n^2 A^2$$

ಚಲನಶಕ್ತಿ ಇಲ್ಲಿ A = ಆಕರದ ಕಂಪನ ವೈಶಾಲ್ಯ. n = ಆವರ್ತ ಸಂಖ್ಯೆ. ಹೀಗೆ ಸ್ವರದ ತೀವ್ರತೆ ಅಥವಾ ಘೋಷವು ಕಂಪನ ವೈಶಾಲ್ಯದ ವರ್ಗಕ್ಕೂ ಮತ್ತು ಆವರ್ತ ಸಂಖ್ಯೆಯ ವರ್ಗಕ್ಕೂ ಸರಳಾನುಪಾತದಲ್ಲಿರುತ್ತದೆ. (iii) ನಾದಗುಣ ಸ್ವರದ ಮೂಲಸ್ಥಾನದ ಸ್ವರೂಪವನ್ನು ಅವಲಂಬಿಸಿರುವ ಗುಣಕ್ಕೆ 'ನಾದಗುಣ' ಎಂದು ಹೆಸರು. ಒಂದೇ ತೀವ್ರತೆಯುಳ್ಳ ಮತ್ತು ಒಂದೇ ಕಂಪನ ಸಂಖ್ಯೆಯನ್ನು ಹೊಂದಿರುವ ಸ್ವರಗಳನ್ನು ಬೇರೆ ಬೇರೆ ವಾದ್ಯಗಳಿಂದ ಮೂಡಿಸಿದರೆ ಆ ಸ್ವರಗಳಲ್ಲಿ ವ್ಯತ್ಯಾಸವಿರುವುದನ್ನು ಕಿವಿಯು ಗುರುತಿಸುತ್ತದೆ. ಯಾವುದೇ ವಾದ್ಯದಿಂದ ಹೊರಟ ಸ್ವರವು ಸಂಪೂರ್ಣವಾಗಿ ಶುದ್ಧವಾಗಿರುವುದಿಲ್ಲ. ಅಂದರೆ ಮೂಲ ಕಂಪನ ಸಂಖ್ಯೆ ಒಂದೇ ಆಗಿದ್ದರೂ, ಅದರ ಜೊತೆಗೆ ಅದಕ್ಕಿಂತ ಅಧಿಕ ಕಂಪನ ಸಂಖ್ಯೆಗಳನ್ನು ಒಳಗೊಂಡ ಅನೇಕ ಅನುಸ್ವರಗಳು ಇದ್ದೇ ಇರುತ್ತವೆ. ಇವುಗಳ ಕಂಪನ ಸಂಖ್ಯೆಗಳು ಅಲ್ಪ ಪ್ರಮಾಣದಲ್ಲಿದ್ದರೂ ಸ್ವರದ ಸ್ವರೂಪವೇ ವ್ಯತ್ಯಾಸವನ್ನು ಹೊಂದುತ್ತದೆ, ಇವನ್ನು ಗಣಿತವಿಜ್ಞಾನದ ರೀತಿಯಲ್ಲಿ ವಿಶ್ಲೇಷಿಸಿದರೆ, ಅಂತಿಮವಾಗಿ ಫಲಿಸಿದ ತರಂಗರೂಪವು ಒಂದೊಂದು ವಾದ್ಯದ ಸ್ವರಕ್ಕೂ ಬೇರೆ ಬೇರೆಯಾಗಿರುತ್ತದೆ. ವಿವಿಧ ವಾದ್ಯಗಳಿಂದ ಹೊರಟ ಸ್ವರಗಳು ಒಂದೇ ಮೂಲಕಂಪನ ಸಂಖ್ಯೆಯನ್ನು ಹೊಂದಿದ್ದರೂ ಅವುಗಳ ವಾಸ್ತವ ರಚನೆಯಲ್ಲಿರುವ ಭೇದವನ್ನು ಗುರುತಿಸುವ ಅಸಾಧಾರಣ ಶಕ್ತಿಯನ್ನು ಮಾನವನ ಕಿವಿ ಪಡೆದಿದೆ. ಈ ಶಕ್ತಿಯಿಂದಲೇ ವಾದ್ಯವೃಂದಗಳು ಸಮೂಹಗಾನ ನಡೆಸುತ್ತಿದ್ದರೂ, ಒಂದೊಂದು ವಾದ್ಯದ ಸ್ವರವನ್ನು ಗುರುತಿಸಲು ಸಾಧ್ಯವಾಗುತ್ತದೆ.

2:0. ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ಪದ್ಧತಿ : ಭಾರತೀಯ ಸಂಗೀತದಲ್ಲಿ ಎರಡು ಸ್ವರಗಳ ಮಧ್ಯೆ ಇರುವ ಅಂತರ ಭಿನ್ನವಾಗಿರುತ್ತದೆ. ಪಾಶ್ಚಾತ್ಯ ಸಂಗೀತದಲ್ಲಿ ಒಂದು ಸ್ವರಕ್ಕೂ ಮತ್ತೊಂದು ಸ್ವರಕ್ಕೂ ಇರುವ ಅಂತರ ಒಂದೇ ಸಮವಾಗಿರುತ್ತದೆ. (ಸ್ವರಮೇಳ ಪದ್ಧತಿ) ಭಾರತೀಯ ಸಂಗೀತದ ವೈಶಿಷ್ಟ್ಯಗಳೆಂದರೆ ಮನೋಧರ್ಮ ಸಂಗೀತ, ರಾಗ ಪದ್ಧತಿ ಮತ್ತು ತಾಳ ವೈವಿಧ್ಯ. ರಾಗ ಮತ್ತು ತಾಳಗಳು ಪ್ರಧಾನ ಅಂಶಗಳು. ಇವೆರಡರ ಸಾಮರಸ್ಯವನ್ನು (ಸ್ವರಮಾಧುರ್ಯ) ಭಾರತೀಯ ಸಂಗೀತ ಪದ್ಧತಿ ಸಾಧಿಸಿಕೊಂಡಿದೆ. ಪಾಶ್ಚಾತ್ಯರು ಲಯಕ್ಕೆ ಕಾಲಮಾಪಕ ಎನ್ನುತ್ತಾರೆ. ಅವರ ಸಂಗೀತ ಪದ್ಧತಿಯಲ್ಲಿ ತಾಳವನ್ನು ರಚನೆಗಳಲ್ಲಿ ಮಾತ್ರ ಕಾಣಬಹುದು. ಅಲ್ಲದೆ ಅವರಲ್ಲಿ ರಚನಕಾರನ ಮನೋಧರ್ಮವೇ ಮುಖ್ಯವಾಗಿರುತ್ತದೆ. ಆದುದರಿಂದ ರಚನಕಾರನು ತನ್ನ ಸ್ಫೂರ್ತಿಗೆ ತಕ್ಕಂತೆ ಹೇಗೆ ರಚಿಸಿರುತ್ತಾನೆಯೋ ಅದನ್ನು ಹಾಡುವ ಗಾಯಕ ಅಥವಾ ನುಡಿಸುವ ಕಲಾವಿದ ಅನುಸರಿಸುತ್ತಾನೆ. ಹೀಗಾಗಿ ಪಾಶ್ಚಾತ್ಯ ಸಂಗೀತದಲ್ಲಿ ಗಾಯಕನಿಗೆ ಕಲಾವಿದನಿಗೆ ವ್ಯಕ್ತಿ ಸ್ವಾತಂತ್ರ್ಯ ಕಡಿಮೆ.

ಸಂಗೀತಕ್ಕೆ ಧ್ವನಿವಿಜ್ಞಾನವೇ ತಳಹದಿಯಾದ್ದರಿಂದ ಸಂಗೀತಕ್ಕೂ ಧ್ವನಿಗೂ ಇರುವ ನಿಕಟ ಸಂಬಂಧವನ್ನು ಕುರಿತಂತೆ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಸಂಶೋಧನೆ ನಡೆಸಿದ್ದಾರೆ. ಅವರ ಪೈಕಿ ಡಾ. ಬಿ.ಸಿ. ದೇವ, ಪ್ರೊ. ಸಿ. ಆರ್. ಶಂಕರನ್, ಬಕ್, ಮೊಜಾರ್ಟ್, ಬೇತೋವನ್, ಶೂಬರ್ಟ್, ವಾಗ್ನರ್ ಮತ್ತು ಬ್ರಾಮ್ಸ್ ಪ್ರಮುಖರು. ಇಂದಿನ ದಿನಗಳಲ್ಲಿ ಸಮಾಜ ಸಂಸ್ಕೃತಿ ನಾಗರಿಕತೆಗಳಿಗೆ ಅನುಗುಣವಾಗಿ ಸಂಗೀತದಲ್ಲಿ ಆಧುನಿಕತೆ ತಲೆದೋರುತ್ತಿದೆ. ಹೊಸ ಹೊಸ ರಚನಾ ಪ್ರಯೋಗಗಳು ನಡೆದಂತೆಲ್ಲಾ ಸಂಗೀತ ಮತ್ತು ಧ್ವನಿಗಳಿಗೆ ಸಂಬಂಧಿಸಿದ ಸಂಶೋಧನಾ ಮಾರ್ಗ ಹಿರಿದಾಗುತ್ತಿದೆ.

ಟಿಪ್ಪಣಿಗಳು

1 ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ, 1968, ಪು. 642

2 ಮತಂಗ, ಬೃಹದ್ದೇಶಿ ಪು 2–3

3 ಋಗ್ವೇದ ಪ್ರಾತಿಶಾಖ್ಯ, ಸಂ II, XIII ಪಟಲ, ಪು 395

4 ನಾರದ ನಾರದೀಯ ಶಿಕ್ಷಾ. ಪು. 24

5 ಪದ್ಮಾಮೂರ್ತಿ, ಸಂಗೀತ ಲಕ್ಷಣ ಸಂಗ್ರಹ–ಭಾಗ–1, 1980, ಪು 68

ಸಹಾಯಕ ಗ್ರಂಥಗಳು

1 Allen W. S. : Phonetics in Ancient India 1953

2 Bloch & Tragger : Outline of Linguistic Analysis 1949

3 Bloomfield L. Language 1950

4

4 Gleason, H. A. Jr : Introduction to Descriptive Linguistics 1974
5 Hall Robert, A. Jr : Introductory Linguistics 1969
6 Heffner : General Phonetics 1949
7 Hockett C. E. : A Course in Modern Linguistics 1976
8 Jones Daniel : An Outline of English Phonetics 1965
9 Kaiser L : Manual of Phonetics 1957
10 ಕುಳ್ಳಿ ಜೆ. ಎಸ್. ವರ್ಣನಾತ್ಮಕ ಭಾಷಾವಿಜ್ಞಾನ 1971
11 ಕೆಂಪೇಗೌಡ. ಕೆ. ಮತ್ತು [illegible] : ಧ್ವನಿವಿಜ್ಞಾನ 1979
12 ತಿಪ್ಪೇರುದ್ರಸ್ವಾಮಿ. ಎಚ್. : ಕರ್ನಾಟಕ ಸಂಸ್ಕೃತಿ ಸಮೀಕ್ಷೆ 1968
13 ನಾಗರತ್ನ, ಟಿ. ಆರ್. : ಸಂಗೀತ ಶಾಸ್ತ್ರ ಪ್ರಕಾಶಿಕೆ 1968
14 ಪಾಠಕ, ಬಿ. ಡಿ. : ಭಾರತೀಯ ಸಂಗೀತದ ಚರಿತ್ರೆ 1975
15 ಬಿಳಿಗಿರಿ, ಎಚ್. ಎಸ್. : ವರ್ಣನಾತ್ಮಕ ವ್ಯಾಕರಣ 1970
16 ರಾಮರತ್ನಂ ವಿ. ಮತ್ತು ಸಂಪತ್ಕುಮಾರಾಚಾರ್ಯ : ಕರ್ನಾಟಕ ಸಂಗೀತ ಸುಧಾ 1967
17 ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ : ಗಾನಕಲೆ 1973
18 ಶೇಷಾದ್ರಿ ಅಯ್ಯಂಗಾರ್ ಕೆ. : ಧ್ವನಿ ಮತ್ತು ಪ್ರಾಯೋಗಿಕ ಭೌತಶಾಸ್ತ್ರ 1969
19 ಶ್ರೀಲತಾ ಆರ್. ಎಸ್ : ಕರ್ನಾಟಕ ಸಂಗೀತದಲ್ಲಿ ಮನೋಧರ್ಮ ಸಂಗೀತದ ಪ್ರಕಾರಗಳು 1983
20 ಸಂಜೀವಯ್ಯ, ಜಿ. ಮತ್ತು ಇತರರು : ಭೌತವಿಜ್ಞಾನ ಪರಿಚಯ 1972
21 ಸತ್ಯನಾರಾಯಣ, ರಾ ಅನು : ಸಂಗೀತ ರತ್ನಾಕರ 1968

ಹರಿತಸ ಅನಂತಶರ್ಮ

ಮ್ಯಾಕ್‌ಬೆತ್ ಅನುವಾದಗಳು

ನಾಟಕ, ಒಂದು ಜೀವಂತ ಕಲೆ, ಮಿಶ್ರಕಲೆಯೂ ಹೌದು. ನಾಟಕಕಾರನಾದವನು ತನ್ನ ಕೃತಿಯ ಸಂದರ್ಭದಲ್ಲಿ ನಟವರ್ಗ, ಪ್ರೇಕ್ಷಕವೃಂದ ಹಾಗೂ ರಂಗಭೂಮಿ—ಈ ಮೂರು ವರ್ಗಗಳಲ್ಲಿ ಐಕ್ಯವನ್ನು ಸ್ಥಾಪಿಸುವುದು ಸಾಧ್ಯವಾದರೆ ಮಾತ್ರ ಆ ನಾಟಕ ಸಾರ್ಥಕ. ಇಲ್ಲವಾದರೆ ಅಷ್ಟರ ಮಟ್ಟಿಗೆ ಅದು ವಿಫಲ.

ಷೇಕ್ಸ್‌ಪಿಯರನ ಕಾಲಕ್ಕಾಗಲೇ ಒಂದು ನಿರ್ದಿಷ್ಟ ಬಗೆಯ ನಾಟಕಕ್ಕೆ ಪ್ರತಿಕ್ರಿಯಿಸುವಂತಹ ಪ್ರೇಕ್ಷಕವೃಂದ ಸಿದ್ಧವಾಗಿತ್ತು. ಆ ಕಾಲದ ನಾಟಕಕಾರರು ಆ ಪ್ರೇಕ್ಷಕರ ಅಭಿರುಚಿಗೆ ಹೊಂದಿಕೊಳ್ಳುವಂತಹ ನಾಟಕಗಳನ್ನೇ ಬರೆಯಬೇಕಾಗಿತ್ತು. ಅದರೊಂದಿಗೆ ಆ ನಾಟಕ ನಟವರ್ಗಕ್ಕೂ ಹೊಂದಿಕೊಳ್ಳಬೇಕಾಗಿತ್ತು. ಹಾಗಾಗಿ ನಾಟಕದ ವಸ್ತು, ಕ್ರಿಯೆಗಳಲ್ಲಿ ವೈವಿಧ್ಯವಿಲ್ಲದೆ ಒಬ್ಬರ ಹಾಗೆ ಮತ್ತೊಬ್ಬರು ನಾಟಕಗಳನ್ನು ಬರೆಯುತ್ತಿದ್ದರು. ಷೇಕ್ಸ್‌ಪಿಯರ್ ಈ ಎಲ್ಲಾ ಅಂಶಗಳನ್ನು ಅರಿತು ಅರಗಿಸಿಕೊಂಡು ರಂಗಭೂಮಿಯ ಸಾಧ್ಯತೆಗಳಲ್ಲಿ ಸುಧಾರಣೆಗಳನ್ನು ತಂದ. ಪ್ರೇಕ್ಷಕರ ಅಭಿರುಚಿಯ ಕಡೆ ಗಮನವಿಟ್ಟೇ 'ಕಾಮಿಡಿ' ಗಳನ್ನು ರಚಿಸಿದ. ಮ್ಯಾಕ್‌ಬೆತ್ ನಾಟಕದ ಅನಂತರ ಅದ್ಭುತವಾದ ನಾಟಕೀಯ ಕಥಾಪ್ರಸಂಗಗಳನ್ನು ಈ ಪ್ರಕಾರದಲ್ಲಿ ದುಡಿಸಿಕೊಂಡ. ಈ ಕಥಾ ಪ್ರಸಂಗಗಳಲ್ಲಿ ಮೇಲೆ ಹೇಳಿದ ಮೂರು ವರ್ಗಗಳಲ್ಲಿ ಅನನ್ಯವಾದ ತಾದಾತ್ಮ್ಯವನ್ನು ಸಾಧಿಸಿದ. ಅಷ್ಟೇ ಅಲ್ಲದೆ ಅವನೊಳಗಿನ "ಕವಿ"ಯ ಹೊಸ ಹೊಸ ಭಾವನೆಗಳು, ಕಲ್ಪನೆಗಳು ನಾಟಕಗಳಲ್ಲಿ ಪ್ರವೇಶ ಪಡೆದವು. ಆದ್ದರಿಂದಲೇ ಷೇಕ್ಸ್‌ಪಿಯರನ ನಾಟಕಗಳಲ್ಲಿ ಸಮರ್ಥ ನಾಟಕಕಾರ ಹಾಗೂ ಪ್ರತಿಭಾವಂತ ಕವಿ – ಇಬ್ಬರೂ ಒಟ್ಟಿಗೇ ಅಭಿವ್ಯಕ್ತಗೊಳ್ಳುತ್ತಾರೆ.

ಈ ವಿಶ್ವನಾಟಕಕಾರನ ಕೃತಿಗಳನ್ನು ಕನ್ನಡಿಸ ಹೊರಟವರು ಹಲವರು. ಇವರಲ್ಲಿ ಐತಿಹಾಸಿಕವಾಗಿ ಶ್ರೀ ಎಂ. ಎಲ್. ಶ್ರೀಕಂಠೇಶಗೌಡರ ಸ್ಥಾನ ಮುಖ್ಯವಾದದ್ದು. ಗೌಡರಿಗೆ ಅಂದಿನ ಪರಿಸರ ಮತ್ತು ಸಮಕಾಲೀನ ಪ್ರಜ್ಞೆ ಉತ್ತಮವಾಗಿತ್ತು. ಕನ್ನಡ ರಂಗಭೂಮಿಯೂ ಆಗ ಹೆಚ್ಚು ಚಟುವಟಿಕೆಯಿಂದಿತ್ತು. ಅಂದಿನ ನಟಸಾರ್ವಭೌಮ ವರದಾಚಾರ್ಯರಿಗಾಗಿಯೇ ಇವರು ಪಾತ್ರ ಪೋಷಣೆ ಮಾಡಿದರು. ಅಂದಿನ ನಾಟಕಗಳಲ್ಲಿ ರಂಜನೆಯ ದೃಷ್ಟಿಯಿಂದ ಪ್ರಧಾನವಾಗಿದ್ದ, ಹಾಗೂ ಪಾತ್ರಧಾರಿಯ ಸತ್ವವನ್ನು ಸಮರ್ಥವಾಗಿ ದುಡಿಸಿಕೊಳ್ಳುತ್ತಿದ್ದ ಕಂದ ಪದ್ಯಗಳದೇ ಬಾಹುಳ್ಯ. ಶ್ರೀಕಂಠೇಶಗೌಡರು ತಮ್ಮ ಅನುವಾದಗಳಲ್ಲೂ ಅದನ್ನೇ ಹೇರಳವಾಗಿ ಬಳಸಿಕೊಂಡರು. ಈ ಎರಡೂ ಸಂಗತಿಗಳು ಸಾಹಿತ್ಯಕೃತಿಗಳ ಸತ್ವದ ದೃಷ್ಟಿಯಿಂದ ಸಾಮಾನ್ಯ ವಿವೇಚನೆಗೆ ದೋಷಾತ್ಮಕ ಸಂಗತಿಗಳೆನಿಸಿದರೂ ಗೌಡರ ಅನುವಾದಗಳ ಸಂದರ್ಭದಲ್ಲಿ ಹಾಗೆನ್ನಿಸದೆ 'ಅರ್ಥಪೂರ್ಣ ತಪ್ಪುಗಳೆ'ನ್ನಿಸುತ್ತವೆ. ಅವರು ಇಂಗ್ಲೀಷ್ ನಾಟಕಗಳನ್ನು ಅದರಲ್ಲಿಯೂ ಆ ಭಾಷೆಯ ನಾಟಕ ಪಿತಾಮಹಾ ಷೇಕ್ಸ್‌ಪಿಯರನ

ನಾಟಕಗಳನ್ನು ಭಾರತೀಯ ರಂಗಭೂಮಿಗೆ, ಭಾರತೀಯ ವೇಷಭೂಷಣಗಳಿಗೆ ಪರಿವರ್ತಿಸುವ ಸಫಲ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು. ಪಾಶ್ಚಾತ್ಯ ಕಥಾವಸ್ತುವನ್ನು, ಕೇವಲ ಶುಷ್ಕವಾಗಿ ಅನುವಾದಿಸದೆ ಸರ್ವಾಲಂಕಾರಭೂಷಿತವಾಗಿ ಕನ್ನಡ ರಂಗಭೂಮಿಯ ಮೇಲೆ ಪ್ರದರ್ಶಿಸಿದರು. ಈ ದಿಶೆಯಲ್ಲಿ ಇವರಿಗೆ ಸಿಕ್ಕಿದ ಸಿದ್ಧಿ, ಸಫಲತೆ, ಪರಿಪೂರ್ಣತೆ ಬೇರೆಯವರ ಕಲ್ಪನೆಗೂ ನಿಲುಕದಂತಹುದು.

ಅಂದಿನ ರಂಗಭೂಮಿ ಪ್ರೇಕ್ಷಕರ ಮನಸ್ಸನ್ನು ಖುಷಿಪಡಿಸುವುದರ ಕಡೆ ಬಹಳ ಕಾಳಜಿ ವಹಿಸಿತ್ತು. ಇದೇ ಅಂಶ ಗೌಡರ ಅನುವಾದಿತ ನಾಟಕಗಳಲ್ಲೂ ಕಂಡು ಬರುತ್ತದೆ. ಪ್ರೇಕ್ಷಕರ ಮನ ತಣಿಸುವಲ್ಲಿ ಇವರ ಮುತುವರ್ಜಿ ಅಪಾರ. ಅಂತೆಯೇ ಇಂಗ್ಲೀಷ್ ಬಾರದ ಜನರಿಗೆ ಇಂಗ್ಲೀಷ್ ನಾಟಕಗಳನ್ನು ಇಲ್ಲಿಯ ಉಡುಗೆ-ತೊಡುಗೆಗಳಲ್ಲಿ ತೋರಿಸುವ ಹಂಬಲವೂ ಅಷ್ಟೇ. ಇಲ್ಲಿ ಕೆಲವು ಸಂದಿಗ್ಧತೆಗಳು, ಅಸಂಬದ್ಧತೆಗಳು ಸ್ಪಷ್ಟವಾಗಿ ಕಾಣಬರುತ್ತವೆಂಬುದು ನಿಜವಾದರೂ ಗೌಡರ ಪ್ರಯತ್ನ ಮಾತ್ರ ಸ್ತುತ್ಯಾರ್ಹ. ಅವರ ಅಪೂರ್ವಕಾಣಿಕೆ 'ಪ್ರತಾಪರುದ್ರದೇವ' ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕದ ಭಾರತೀಯ ರೂಪ. ಗೌಡರದು ರೂಪಾಂತರವೇ ಹೊರತು ಅನುವಾದವಲ್ಲ ಎಂದು ಹೇಳುವವರ ಮಾತಿಗೆ ಯಾವ ಆಧಾರವೂ ಇಲ್ಲ. ಪ್ರತಾಪರುದ್ರದೇವ ಸ್ಪಷ್ಟವಾಗಿಯೂ ಅನುವಾದವೇ. ಆದರೆ ಭಾರತೀಯತೆ ಇದರಲ್ಲಿ ಎದ್ದು ಕಾಣುತ್ತದೆ. ಸಮಕಾಲೀನ ಅಭಿರುಚಿಗೆ ತಕ್ಕಂತೆ ಹಲವು ಮಾರ್ಪಾಟುಗಳನ್ನು ತಂದಿದ್ದಾರೆಂಬುದು ನಿರ್ವಿವಾದ. ಸಾಧ್ಯವಾದಷ್ಟು ಮಟ್ಟಿಗೆ ಮೂಲದ ಧಾಟಿಯನ್ನೇ ಹಿಡಿದಿದ್ದಾರೆ. ಜೊತೆಗೆ ದೇಶೀಯ ಗತ್ತೂ ಇದೆ. ಮೂಲಕ್ಕೆ ನಿಷ್ಠರಾಗಿದ್ದರೂ ಷೇಕ್ಸ್‌ಪಿಯರನ ಪಾತ್ರಗಳಿಗೆ ಭಾರತೀಯ ಹೆಸರುಗಳ ನಿಡುವಲ್ಲಿ ಪೂರ್ಣ ಸಫಲವಾಗಿಲ್ಲ. ಅನುವಾದ ಮಾಡುವಾಗ ಇಲ್ಲಿಯ ಹೆಸರುಗಳನ್ನು ಹಾಗೂ ಇಲ್ಲಿಯ ಪ್ರದೇಶಗಳನ್ನು ಹೆಸರಿಸುವಲ್ಲಿ ಅವರಿಗೆ ಮೂಲದ ಶಬ್ದಗಳೊಡನೆ ಹೋಲುವ ಪದಗಳಷ್ಟೇ ಬೇಕು. ಅವುಗಳ ಪರಸ್ಪರ ಸಂಬದ್ಧತೆಯ ಬಗ್ಗೆ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಅಂದಿನ ನಾಟಕಗಳಲ್ಲಿ ನಟರಿಗೆ ಕಂದಪದ್ಯ ಹಾಡುವುದೆಂದರೆ ಬಲು ಇಷ್ಟ. ನಟರಿಗೆ ಮಾತೆತ್ತಿದರೆ ಹಾಡುವಂತಾಗುತ್ತದೆ, ಹೀಗಾಗಿ ಷೇಕ್ಸ್‌ಪಿಯರನ ನಾಟಕದ ಪ್ರಾಸರಹಿತ ಪದ್ಯಗಳಿಗೆ (ಡ್ರಾಮಾಟಿಕ್ ಬ್ಲ್ಯಾಂಕ್ ವರ್ಸ್)ಗೆ ಅಲ್ಲಲ್ಲಿ ಕಂದಪದ್ಯಗಳನ್ನು ಹಾಕಿದ್ದಾರೆ ಅದನ್ನು ಹಾಡಲೇ ಬೇಕೆಂದೇನಿಲ್ಲ, ಗದ್ಯದಂತೆಯೂ ಆಡಬಹುದೆಂಬುದು ಗೌಡರ ಅಭಿಪ್ರಾಯ. ಗೌಡರೇ ಅಂದಿನ ಕಂಪನಿ ನಾಟಕಗಳ ಸಂಪ್ರದಾಯಕ್ಕನುಗುಣವಾದ ರಂಗಗೀತೆಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ವರದಾಚಾರ್ಯರಂಥ ನಟರಿದ್ದ ಕಾರಣ ನಟರ ಬಳಕೆ, ಅವರ ಮೇಲೆ ಮಿತಿ ಹೇರಿಕೆ, ಇವೆಲ್ಲಾ ಶ್ರೀ ಗೌಡರ ವೈಶಿಷ್ಟ್ಯ, ಷೇಕ್ಸ್‌ಪಿಯರನ ಭಾವನೆಗಳನ್ನು ಕನ್ನಡದಲ್ಲಿ ಮೂಡಿಸಲು ಗೌಡರು ಪ್ರಯತ್ನಿಸಿದ್ದಾರೆ. ಷೇಕ್ಸ್‌ಪಿಯರನ ಚೈತನ್ಯ ಗೌಡರ ಅನುವಾದದಲ್ಲಿ ಖಂಡಿತವಾಗಿಯೂ ಇದೆ

ಮ್ಯಾಕ್‌ಬೆತ್ ನಾಟಕವನ್ನು ಅನಂತರ ಅನುವಾದಿಸಿದವರು ಶ್ರೀ ಡಿ. ವಿ. ಗುಂಡಪ್ಪನವರು. ಬಹುಶಃ ಡಿ. ವಿ. ಜಿ. ಯವರಂತೆ ಯಾರೂ ಮೂಲವನ್ನು ಅನುಸರಿಸಿಲ್ಲವೆಂದೇ ಹೇಳಬೇಕು. ಮೂಲವನ್ನು ಅವರು ಅನುಸರಿಸಿರುವ ರೀತಿ ಪ್ರಶ್ನಾತೀತ. ಮೂಲದ ಯಥಾರ್ಥ ಅನುವಾದ

ಇವರದು. ಏನನ್ನೂ ಸೇರಿಸಿಲ್ಲ ಮಿಗಿಲಾಗಿ ಏನನ್ನೂ ಬಿಟ್ಟಿಲ್ಲ. ಮೂಲದ ಕ್ರಮವನ್ನು ಹಿಂದೆ ಮುಂದೆ ಮಾಡಿಲ್ಲ. ಮೂಲದ ಅರ್ಥಛಾಯೆ ಡಿ.ವಿ.ಜಿ.ಯವರಲ್ಲಿ ಮೂಡಿ ಬರುವಷ್ಟು ಬೇರಾರ ಅನುವಾದದಲ್ಲೂ ಬರದು. ಮೂಲದ ಧಾಟಿಯೇ ಇವರ ಅನುವಾದದಲ್ಲೂ ಹರಿದುಬಂದಿದೆ. ಮೂಲ ಪಾತ್ರಗಳನ್ನು ಅವರ ಹೆಸರುಗಳನ್ನು ಯಥಾವತ್ತಾಗಿ ಉಳಿಸಿಕೊಂಡಿದ್ದಾರೆ, ಅವರಿಗೆ ಭಾರತೀಯ ಉಡುಗೆ-ತೊಡುಗೆಗಳೂ ಇಲ್ಲ. ಮೂಲ ಘಟನೆಗಳು ಕಲ್ಪನೆಯಾಗಷ್ಟೇ ಉಳಿಯದೆ ಇವರ ಅನುವಾದದಲ್ಲಿ ಅವುಗಳ ಯಥಾರ್ಥ ಚಿತ್ರಣವಿದೆ.

ಇದೆಲ್ಲಾ ಏನೇ ಆದರೂ ಷೇಕ್ಸ್ಪಿಯರನನ್ನೇ ಅವರು ಪ್ರತಿ ಹೆಜ್ಜೆಯಲ್ಲೂ ಅನುಸರಿಸಲು ಹೊರಟಿರುವುದು ಅಪ್ರಾಸಂಗಿಕವೆನಿಸುತ್ತದೆ. ಷೇಕ್ಸ್ಪಿಯರನ ಕಾಲಕ್ಕೇ ಓದುಗರನ್ನು ಕೊಂಡೊಯ್ಯುವ ಪ್ರಯತ್ನ ಎದ್ದುಕಾಣುತ್ತದೆ. ಡಿವಿಜಿಯವರ ಅನುವಾದವನ್ನು ಸೂಕ್ಷ್ಮವಾಗಿ ಗಮನಿಸಿ ಭಾಷೆ, ಶೈಲಿ, ನಿಷ್ಠೆ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ, ಒಂದಂಶ ಸ್ಪಷ್ಟ. ಬಹುಶಃ ಷೇಕ್ಸ್ಪಿಯರನ್ನೇ ಅಂದು ಮ್ಯಾಕ್‌ಬೆತ್ ನಾಟಕವನ್ನು ಅಂದಿನ ಪದ್ಯದ ಧಾಟಿಯ ಕನ್ನಡದಲ್ಲಿ ಬರೆದಿದ್ದಿದ್ದರೆ ಹೇಗಿರುತ್ತಿತ್ತೋ ಹಾಗೆ ಮೂಡಿಸಬೇಕೆಂಬ ಅವರ ಕಲ್ಪನೆಯ ಹಿನ್ನೋಟ ಅರ್ಥವಾಗುತ್ತದೆ. ಕೆಲವು ಕಡೆಯಂತೂ ಭಾಷೆ ಹೊರೆಯಾಗಿ ಬಿಡುತ್ತದೆ. ಮೂಲದಂತೆ ಇವರ ಅನುವಾದಕ್ಕೂ ವ್ಯಾಖ್ಯಾನದ ಸಹಾಯ ಪಡೆಯಬೇಕಾಗುತ್ತದೆ. ಮೂಲದ ರಸಾಸ್ವಾದನೆಯಲ್ಲಿ ಓದುಗ ತೊಡಗಿದ್ದಾಗ, ಭಾಷೆ ತೊಡರುಗಾಲು ಕೊಟ್ಟು ಅವನು ಮುಗ್ಗರಿಸಿ ಮತ್ತೆ ಎಚ್ಚೆತ್ತು ಕೊಳ್ಳದಂತೆ ಮಾಡಿಬಿಡುತ್ತವೆ ; ಇದಕ್ಕೆ ಕಾರಣವೂ ಇದೆ. ಡಿವಿಜಿಯವರ ಅನುವಾದ ಓದುಗರಿಗಷ್ಟೇ ಹೊರತು ರಂಗಭೂಮಿಯ ಪ್ರಯೋಗಕ್ಕಲ್ಲ. ಏಕೆಂದರೆ ಡಿವಿಜಿಯವರ ಕಾಲಕ್ಕೆ ಕನ್ನಡ ರಂಗಭೂಮಿ ನಿಶ್ಚೇಷ್ಟಿತವಾಗಿತ್ತು. ಹೀಗಾಗಿ ಪ್ರೇಕ್ಷಕ ಸಂಸ್ಕಾರದ ಬಗ್ಗೆ ಕಾಳಜಿ ವಹಿಸಲು ಆಸ್ಪದವಿರಲಿಲ್ಲ. ಇಡೀ ನಾಟಕದಲ್ಲಿ ಮೂಲದ ನಾಟಕದ ಪ್ರಾಸರಹಿತ ಪದ್ಯದಂತೆಯೇ ಸರಳರಗಳೆಯನ್ನು ಬಳಸಿದ್ದಾರೆ. ಆದರೆ ಕನ್ನಡದಲ್ಲಿ ಸರಳರಗಳೆಯನ್ನು ನಿಷ್ಠುರವಾಗಿ ಬಳಸಿರುವುದರಿಂದ ಅಲ್ಲಲ್ಲಿ ರಸಭಂಗವಾಗುತ್ತದೆ. ಷೇಕ್ಸ್ಪಿಯರ್ ಒಂದೊಂದೂ ದೃಶ್ಯದ ಕೊನೆಗೂ ಒಂದೊಂದು ದ್ವಿಪದಿಯನ್ನು (ಕಪ್ಲೆಟ್) ಹಾಕುತ್ತಾನೆ. ಇದನ್ನು ಹೆಚ್ಚುಕಡಿಮೆ ಡಿವಿಜಿ ಒಬ್ಬರೇ ಅನುಸರಿಸಿರುವುದು. ತೀರಾ ಹಾಸ್ಯ ಪ್ರಜ್ಞೆ ಇದ್ದಾಗಮಾತ್ರ ಅವನಲ್ಲಿ ಗದ್ಯ. ಪದ್ಯದಿಂದ ವ್ಯಕ್ತವಾಗದಿದ್ದಾಗ ಮಾತ್ರ ಗದ್ಯ. 'ಮ್ಯಾಕ್‌ಬೆತ್'ನಲ್ಲಿ 'ದ್ವಾರಪಾಲಕ' 'ಹ್ಯಾಮ್ಲೆಟ'ನಲ್ಲಿ 'ಶವಕುಳಿ ತೋಡುಗರ (ಗ್ರೇವ್ ಡಿಗ್ಗರ್) ದೃಶ್ಯ ಬಹಳ ಪ್ರಸಿದ್ಧವಾದವು. ರೌದ್ರತೆ ಬಂದಾಗ ಕಾವ್ಯ ಉಪಯೋಗಕ್ಕೆ ಬರದು ಅಂತಃಜ್ಞಾನದ ಅಭಿವ್ಯಕ್ತಿಗೆ ಗದ್ಯವೇ ಸರಿ (ಇ.ಎ.ಪೋ). ಒಂದು ಕಲಾಕೃತಿಯ ಅನುವಾದದಲ್ಲಿ, ಮುಖ್ಯವಾಗಿ ಅನುಸರಿಸಬೇಕಾದ ತತ್ವ, ವಿಧೇಯತಾ ತತ್ವ. ಡಿವಿಜಿಯವರಲ್ಲಿ ವಿಧೇಯತೆಯೊಡನೆ ಕೈಗಾರಿಕೆ ಇದೆ. ಈ ವಿಧೇಯತೆಯೂ ಒಂದು ಮಾನದಂಡವೇ

ಅನಂತರದ ಅನುವಾದ ಶ್ರೀರಾಮಚಂದ್ರದೇವರದು. ಇವರದು ಸ್ವತಂತ್ರಾನುವಾದ. ಪೂರ್ಣಸ್ವಾತಂತ್ರ್ಯವಹಿಸಿರುವುದಷ್ಟೇ ಅಲ್ಲ, ಸ್ವಾತಂತ್ರ್ಯವನ್ನೇ ತಂತ್ರವಾಗಿ ಬಳಿಸಿದ್ದಾರೆ. ಅರ್ಧ ಸರಳರಗಳೆಯ ರೂಪದಲ್ಲಿ ಅನುವಾದಿಸಿದ್ದಾರೆ. ಹೆಚ್ಚು-ಕಡಿಮೆ ಇಲಿಯಟ್ಟನ ಹೊಸ ಛಂದಸ್ಸಿನಂತೆ

ಕಾಣುತ್ತದೆ. ಅದನ್ನು ಅಚ್ಚು ಮಾಡಿರುವ ರೀತಿಯಲ್ಲಿ ಅದು ಪೂರ್ಣಗದ್ಯವಲ್ಲವೆನಿಸುತ್ತದೆ. ಇಷ್ಟಾದರೂ ಇದು ಓದುಗರಿಗೆ ಬಹಳ ಹತ್ತಿರವಾದ ಅನುವಾದ. ಹಾಗೂ ಎಷ್ಟೇ ನ್ಯೂನತೆಗಳಿದ್ದರೂ ರಂಗಪ್ರಯೋಗಕ್ಕೆ ಸುಲಭವಾದ ಅನುವಾದ. ಇವರ ಅನುವಾದದಲ್ಲಿ ಮುಖ್ಯವಾದ ತೊಡಕು ವಾಕ್ಯರಚನೆಯದು. ವಾಕ್ಯಗಳನ್ನು ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಹೇಳಿಬಿಟ್ಟಿದ್ದಾರೆ. ಇದರಿಂದಾಗಬಹುದಾದ ಮೂಲದ ಅರ್ಥಛಾಯೆಯ ವ್ಯತ್ಯಾಸದ ಬಗ್ಗೆ ಅವರು ಕಾಳಜಿವಹಿಸಿಲ್ಲ. ಇದರಿಂದಾಗಿ ಮೂಲದ ಹರವಿನಲ್ಲಿ ಬಿಗುವುಮಾಡಿದೆ.

ಈಗ ಪ್ರಾಸಂಗಿಕವಾಗಿ, ಈ ಮೂರೂ ಅನುವಾದಗಳ ಪ್ರಥಮ ಅಂಕಗಳನ್ನು ತೌಲನಿಕ ದೃಷ್ಟಿಯಿಂದ ಪರಿಶೀಲಿಸೋಣ.

ಮೊಟ್ಟಮೊದಲಬಾರಿಗೆ ಅನುವಾದಿಸಿದ ಶ್ರೀ ಶ್ರೀಕಂಠೇಶಗೌಡರು 'ಮ್ಯಾಕ್‌ಬೆತ್'ನ ಎಲ್ಲಾ ಪಾತ್ರಗಳಿಗೂ ಭಾರತೀಯ ಹೆಸರುಗಳನ್ನು ಕೊಟ್ಟು ಅವರಿಗೆ ಇಲ್ಲಿಯದೇ ಉಡುಗೆ ತೊಡಿಗೆಗಳನ್ನೂ ತೊಡಿಸಿದ್ದಾರೆ. ಡಿವಿಜಿ ರಾಮಚಂದ್ರದೇವರಿಬ್ಬರೂ ಮೂಲ ಪಾತ್ರಗಳಿಗೆ ಆಯಾ ಹೆಸರುಗಳನ್ನು ಕೊಟ್ಟು ಅಲ್ಲಿಯದೇ ವೇಷಭೂಷಣಗಳನ್ನೂ ಉಳಿಸಿದ್ದಾರೆ. ಗೌಡರು ಮತ್ತು ಡಿವಿಜಿಯವರು ಅನುವಾದಕ್ಕೆ ಮುಂಚೆ ದೀರ್ಘವಾದ ಪೀಠಿಕೆಗಳನ್ನೂ ಕೊಟ್ಟು ತಮ್ಮ ಆಶಯಗಳನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲೂ ಡಿವಿಜಿಯವರು ತಮ್ಮ ಪೀಠಿಕೆಯಲ್ಲಿ ಮ್ಯಾಕ್‌ಬೆತ್ ನಾಟಕದ ಯಥಾರ್ಥ ಚಿತ್ರಣವನ್ನು ಕರಾರುವಾಕ್ಕಾಗಿ ಕೊಟ್ಟು ಮೂಲಕ್ಕೆ ತಮ್ಮ ನಿಷ್ಠೆಯನ್ನು ತೋರಿಸಿದ್ದಾರೆ. ರಾಮಚಂದ್ರದೇವರು ಈ ಬಗ್ಗೆ ಕಾಳಜಿವಹಿಸದೆ ಎರಡೇ ಪುಟಗಳಲ್ಲಿ ಮ್ಯಾಕ್‌ಬೆತ್ ನಾಟಕದ ಬಗ್ಗೆ ಒಂದೆರಡು ಮಾತು ಹೇಳಿದ್ದಾರೆ. ಇಷ್ಟಾದರೂ ತಮ್ಮ ಅನುವಾದ ಒಂದು ಅರ್ಥದಲ್ಲಿ ವಿಮರ್ಶೆ ಅಥವಾ ವಿವರಣೆಯಿಂದಷ್ಟೇ ಹೇಳಿರುವುದು ಅವರ ಪ್ರಾಮಾಣಿಕತೆಯ ದ್ಯೋತಕವಾಗಿದೆ. ಈ ಮಾತು ನಿಜ, ಷೇಕ್ಸ್‌ಪಿಯರನನ್ನು ಅನುಸರಿಸಲಾಗದೆ ಅನುವಾದಕ ಕುಗ್ಗಿ, ಸೊರಗಿ ಹೋದಾಗ ಷೇಕ್ಸ್‌ಪಿಯರ್ ಅವನ ಮೇಲೆ ತನ್ನ ಮಿತಿಗಳನ್ನು ಹೇರಿ, ತಾನು ಮಾತ್ರ ಸೊಕ್ಕಿ ಮೆರೆಯುತ್ತಾನೆ. ಅನುವಾದಕ ಏನೆಲ್ಲಾ ಪ್ರಯತ್ನಮಾಡಿದರೂ ಅವನ ಅನಂತ ಅರ್ಥದ ಪದರಗಳನ್ನು ಬಿಚ್ಚಲಾರದೆ ಹೋಗುತ್ತಾನೆ.

ಇಂಗ್ಲೀಷಿನ 'ಸೀನ್' ಎಂಬ ಶಬ್ದವನ್ನು ಶ್ರೀಕಂಠೇಶಗೌಡರು ನಾಟಕದುದ್ದಕ್ಕೂ ಒಂದನೆಯ ಸ್ಥಾನ ಎರಡನೆಯ ಸ್ಥಾನ...ಎಂದೇ ಹೇಳುತ್ತಾ ಹೋಗುತ್ತಾರೆ. ಇದು ಸರಿಯಲ್ಲ. ಡಿ.ವಿ.ಜಿ. ರಾಮಚಂದ್ರದೇವರು ದೃಶ್ಯ ಎಂದಿದ್ದಾರೆ ಸರಿ. 'ವಿಚ್' ಎಂಬ ಪದವನ್ನು ಮೂವರೂ ತಮಗೆ ತೋಚಿದಂತೆ ಅನುವಾದಿಸಿದ್ದಾರೆ. ಶ್ರೀಕಂಠೇಶಗೌಡರು ಒಂದನೇ ಶಕ್ತಿ, ಎರಡನೇ ಶಕ್ತಿ ಎಂದಿದ್ದಾರೆ ಇದು ಸರಿ ಅಲ್ಲ ಎನಿಸುತ್ತದೆ. ಏನಿದು ಶಕ್ತಿ ? ಇಂಗ್ಲೀಷಿನ ವಿಚ್ ಎಂದರೆ ಕುಳ್ಳಿ, ಕುಬ್ಜೆ, ಅವಳಿಗೆ ಗಡ್ಡ ಬಂದಿರುತ್ತದೆ ಕೂದಲು ಹರಡಿಕೊಂಡಿರುತ್ತದೆ. ಇದಕ್ಕೆ ರಾಮಚಂದ್ರದೇವರ 'ಜಕ್ಕಿಣಿ' ಪದಪ್ರಯೋಗ ಬಹಳ ಸೂಕ್ತವೆನಿಸುತ್ತದೆ. ಡಿವಿಜಿಯವರು 'ಯಕ್ಷಿಣಿ' ಎಂದಿದ್ದಾರೆ. ಅದೂ ಅಷ್ಟು ಸರಿ ಅಲ್ಲ. 'ಜಕ್ಕಿಣಿ', 'ಯಕ್ಷಿಣಿ'ಯ ತದ್ಭವವೇ ಆದರೂ ಕನ್ನಡದ ಜಾಯಮಾನಕ್ಕನುಗುಣವಾಗಿದೆ. ಇವೆಲ್ಲಕ್ಕಿಂತ ಡಾಕಿನಿ ಶಾಕಿನಿ, ಎಂದಿದ್ದರೆ ಬಹಳ ಚೆನ್ನಾಗಿರುತ್ತಿತ್ತು.

ಮೂಲದ 'ಆನ್ ಓಪನ್ ಪ್ಲೇಸ್' ಎಂಬುದಕ್ಕೆ 'ಮರುಭೂಮಿ' ಎಂದಿದ್ದಾರೆ ಗೌಡರು. 'ಪಾಳು ಭೂಮಿ' ಎಂದಿದ್ದಾರೆ ಡಿವಿಜಿ. ಬಯಲು ಪ್ರದೇಶ ಎಂದಿದ್ದಾರೆ ರಾಮಚಂದ್ರದೇವ. ರಾಮಚಂದ್ರದೇವರದು ಬಹಳ ನೇರ ಯಾಂತ್ರಿಕ ಅನುವಾದವಾಯಿತು ಆದರೂ ಸರಿ ಎನಿಸುತ್ತದೆ, ಆದರೆ ಗೌಡರ 'ಮರುಭೂಮಿ' ಪ್ರಯೋಗ ಸರಿ ಅಲ್ಲ. ಎಲ್ಲಾ ಬಯಲು ಪ್ರದೇಶಗಳೂ ಮರುಭೂಮಿಗಳಾಗಬೇಕಿಲ್ಲ. ಡಿವಿಜಿ ಯವರ ಪಾಳು ಭೂಮಿ ಹೆಚ್ಚು ಸೂಕ್ತ.

ತಿರುಗಿ ನಾವು ಸೇರುವುದು ಯಾವಾಗ ? ಎಂದು ಹೇಳುವಲ್ಲಿ ಒಂದು ವ್ಯಾಕವನ್ನೇ ನುಂಗಬಲ್ಲರು ಗೌಡರು. ಮೂಲದ 'ಹರ್ಲಿ-ಬರ್ಲಿ ಎಂಬುದಕ್ಕೆ ಗಲಭೆ, ಗದ್ದಲ ಕೋಲಾಹಲವೆಂಬರ್ಥವಿದೆಯೇ ವಿನಾ ಗೌಡರು ಹೇಳಿರುವಂತೆ ಗಡಿಬಿಡಿ ಮಾತೇ ಇಲ್ಲ. ಡಿವಿಜಿಯುವರ ಸಡಗರವೂ ಸರಿ ಅಲ್ಲ. ರಾಮಚಂದ್ರದೇವರಂತೂ ಅದೇನೋ 'ಗಿರಿಗೆಟ್ಟು, ಗೆಟ್ಟಿಗರ' ಎಂದಿದ್ದಾರೆ. ಆದರೂ 'ಸಡಗರ'ದಲ್ಲಿ ಷೇಕ್‌ಸ್ಪಿಯರನ ಅರ್ಥ ಸ್ವಲ್ಪ ಉಳಿದಿದೆ. ರಾಮಚಂದ್ರದೇವರ ಪ್ರಥಮ ದೃಶ್ಯ ಗಮನ ಸೆಳೆಯುವಂತಿದೆ. ಭಾರತೀಯರಿಗೆ ಹೊಸ ಸನ್ನಿವೇಶ ಮಾಡಿಸುವಲ್ಲಿ ರಾಮಚಂದ್ರದೇವರ ಪ್ರಯತ್ನ ಗಮನಾರ್ಹ. ಮೂಲದ ಒಂದು ರೀತಿಯ ಒರಟುತನ ರಾಮಚಂದ್ರದೇವರ ಅನುವಾದದಲ್ಲಿದೆ.

'ವೆನ್ ದಿ ಬ್ಯಾಟಲ್ ಈಸ್ ಲಾಸ್ಟ್ ಅಂಡ್ ವನ್' ಎಂಬಲ್ಲಿ ಮೂವರೂ ಸೋತಿದ್ದಾರೆ. ಯಕ್ಷಿಣಿಯುವರು ಮಾನವ ಲೋಕದಿಂದ ದೂರ ಎಂಬುದನ್ನು ಮರೆಯಬಾರದು. ರಾಮಚಂದ್ರದೇವರು 'ಗೆದ್ದಲ್ಲಿ, ಸೋತಲ್ಲಿ ಕದನದಲ್ಲಿ' ಸ್ವಲ್ಪವೂ ಚೆನ್ನಾಗಿಲ್ಲ ಗೌಡರು 'ಗಡಿಬಿಡಿಯಾದಾಗ ಯುದ್ಧವನ್ನು ಗೆದ್ದಾಗ ಸೋತಾಗ' ಎಂದಿದ್ದಾರೆ. ಮೂಲದ ಧ್ವನಿ ಮೂವರ ಅನುವಾದದಲ್ಲೂ ಬಂದಿಲ್ಲ. ಅದು ಸೇರುವುದೆಲ್ಲಿ? (ರಾಮಚಂದ್ರದೇವ) ಪರವಾಗಿಲ್ಲ 'ಪ್ರದೇಶವೆಲ್ಲಿ ?' (ಗೌಡರು) ನಿರ್ಜನ ಪ್ರದೇಶದಲ್ಲಿ ವಿಳಾಸ ಕೇಳಿದಂತಾಗುತ್ತದೆ.

ಅನಂತರ ಡಿವಿಜಿಯುವರು 'ಪಾಳ್ಬೀಡತ್ತಿಲ್' ಎಂದಿದ್ದಾರೆ. ಬಹಳ ಚೆನ್ನಾಗಿದೆ. ಪ್ರಾತಿನಿಧಿಕವಾಗಿದೆ. ಇದಕ್ಕೆ ರಾಮಚಂದ್ರದೇವರು 'ನಿರ್ಜನದ ಬಯಲಲ್ಲಿ. ಎಂದಿದ್ದಾರೆ. ತೀರಾ ಜಾಳು-ಜಾಳು. ಮೂಲದ ವ್ಯಂಗ್ಯಾರ್ಥ ಇಲ್ಲಿ ವಾಚ್ಯವಾಗಿದೆ. ವೀರಸೇನನ ಕಾಣುವುದಕ್ಕೊ?'' ಗೌಡರು ಪ್ರಶ್ನಾರ್ಥಕ ಹಾಕಿದ್ದಾರೆ ಬಹಳ ಚೆನ್ನಾಗಿದೆ. ಡಿವಿಜಿ, ರಾಮಚಂದ್ರದೇವರಲ್ಲಿ ಇಷ್ಟು ಸ್ಪಷ್ಟವಾಗಿಲ್ಲ. 'ಮ್ಯಾಕ್‌ಬೆತನನು ಕಾಣುವ ಪತ್ರಲ್ ಡಿವಿಜಿಯುವರ ಅನುವಾದ ಚೆನ್ನಾಗಿದ್ದರೂ ನೇರವಾಯಿತು. ಆ ಮುಂದೆ ಡಿವಿಜಿ ಯವರ 'ಬಂದೆನು ನಾನು ಬೂದು ಬಿಡಾಲಿ (ಬೆಕ್ಕು) ಬಹಳ ಚೆನ್ನಾಗಿದೆ.

ಷೇಕ್‌ಸ್ಪಿಯರ್ 'ಗ್ರೇಮೂಲ್ಕಿನ್' ಎಂಬ ಹಳೆಯ ಶಬ್ದ ಬಳಸಿದ್ದಾನೆ. ಡಿವಿಜಿಯವರಲ್ಲೂ ಇದು ಬಂದಿದೆ. ಗದ್ಯದಲ್ಲಿ 'ಹೇ ಬೂದು ಬೆಕ್ಕೇ' ಎಂದಿದ್ದರೆ ಚೆನ್ನಾಗಿರುತ್ತಿತ್ತು. ರಾಮಚಂದ್ರದೇವರು ಇರುವ ಅವಕಾಶವನ್ನು ಬಿಟ್ಟು' 'ಹೇ ಗ್ರೆ ಮಾಲ್ಕಿನ್' ಎಂದಿರುವುದು ಸರಿ ಅಲ್ಲ, ಗ್ರೆಮಾಲ್ಕಿನ್ ವ್ಯಕ್ತಿವಾಚಕ ನಾಮಪದದಲ್ಲಿ ಷೇಕ್‌ಸ್ಪಿಯರ್ 'G' ಎಂದು ದೊಡ್ಡಕ್ಷರ ಬಳಸಿದ್ದಾನೆಂದಾಕ್ಷಣ ಅದು ವ್ಯಕ್ತಿಸೂಚಕವಲ್ಲ. ಗ್ರೆಮಾಲ್ಕಿನ್ ಎಂದರೆ, ಮೇಲೆ ಹೇಳಿದ ಜಕ್ಕಿಣಿಯರು ತಮ್ಮ ವಾಮಾಚಾರ ಕಾರ್ಯ ಸಿದ್ಧಿಗಾಗಿ ಬೆಕ್ಕುಗಳದ್ದು ಇಟ್ಟುಕೊಂಡಿರುತ್ತಾರೆ. ಈ ಅರ್ಥ ಡಿವಿಜಿ ಯವರಲ್ಲಿ ಮಾತ್ರ ಮೂಡಿಬಂದಿದೆ.

'ಪ್ಯಾಡಕ್'ಗೆ ಡಿವಿಜಿಯವರ 'ಮರಿಘೀಕಿನಿ' ಗೌಡರ 'ಮಾಳಬೆಕ್ಕು' ಬಹಳ ಚೆನ್ನಾಗಿದೆ. ರಾಮಚಂದ್ರದೇವರು ಹಾಗೆ ಉಳಿಸಿಕೊಂಡಿರುವುದು ಸರಿ ಅಲ್ಲ. ಭಾಷಾಂತರಕ್ಕೆ ಎಲ್ಲಾ ಹೊರತಾಗಿರುತ್ತದೆಂಬುದು ಸರಿಕಾಣದು. ಅದು ನಮ್ಮ ಪಾಂಡಿತ್ಯವನ್ನು ಅವಲಂಬಿಸಿರುತ್ತದೆ. ಮೂಲದಲ್ಲಿಲ್ಲದ 'ಪಾಪ ಪುಣ್ಯಗಳನ್ನು ಕಲ್ಪಿಸಿಕೊಂಡಿದ್ದಾರೆ. ಗೌಡರು ಈ ಹಂತದಲ್ಲಿ ಅಡಿ ಟಿಪ್ಪಣಿಯಲ್ಲಿ ಒಂದು ರಗಳೆ ಹಾಕಿಬಿಟ್ಟಿದ್ದಾರೆ. ಒಮ್ಮೆ ಇದು ಬಿಚ್ಚಿಕ ಎನಿಸುತ್ತದೆ. ಅವರೆ ಜಕ್ಕಿಣಿಯವರನ್ನು 'ಜಟ್ಟಿ'ಕ್ಕೇರಿಸಿದ್ದಾರೆ. ಮೂಲದಲ್ಲಿ ಈ ಬಗ್ಗೆ ಏನೂ ಇಲ್ಲ. ಅದರೂ ಒಟ್ಟು ದೃಶ್ಯದ ಅರ್ಥ ಛಾಯೆ ತಂದಿದ್ದಾರೆ. ಗೌಡರಲ್ಲಿ. ರಂಗಭೂಮಿಯ ಪ್ರಭಾವವಿದೆ ಒಟ್ಟಾಗಿ ಸೇರಿ ಮಾಟ ಮಾಡುವ ..... ಹೂಟದ ಬಳಿಕ ಚೆನ್ನಾಗಿದೆ.

ಎರಡನೆಯ ದೃಶ್ಯದಲ್ಲಿ ಗೌಡರ ಭಾಷಾಂತರವನ್ನು ನೋಡಬೇಕಾದರೆ ಅಲ್ಲಿನ ಗಾಂಭೀರ್ಯವನ್ನು ಗಮನಿಸಬೇಕು 'ಅಲ್ಲಿ ಬರುವ ರಕ್ತಾಂಗನಾದರೂ ಯಾರು' ? ಗೌಡರ ಅನುವಾದ ಚೆನ್ನಾಗಿದೆ. ರಾಮಚಂದ್ರದೇವರು 'ಮೈಯೆಂದ ನೆತ್ತರು ಸುರಿಸುತ್ತಿರುವ ಈ ವ್ಯಕ್ತಿಯಾರು' ಎಂದಿದ್ದಾರೆ ಚೆನ್ನಾಗಿದೆ. ಡಿವಿಜಿಯವರು 'ಅಂಪಸ್ ನೆತ್ತರಿಂ ತೊಯ್ದಾವನ್' ಹೆಚ್ಚು ಒತ್ತುಕೊಟ್ಟಿದ್ದಾರೆ. 'ದಿ ಮ್ಯಾಸಿಸ್ಟ್ ಹೇಪ್ ಆಫ್ ರಿವೋಲ್ಟ್'ಗೆ ಗೌಡರು ಹೊಸದಾದ ದ್ರೋಹ ಪಾರ್ಟೆ ಎಂದಿದ್ದಾರೆ. ಅದು ಪ್ರಸ್ತುತ ಪ್ರಸಂಗಕ್ಕೆ ಅಷ್ಟು ಸರಿಯಲ್ಲ. 'ಇತ್ತ ಬಾ ಶೂರ ಸುಟಿ' (ಡಿವಿಜಿ) ಗೆ ಬದಲಾಗಿ 'ಬನಗೆ ಸ್ವಾಗತ' ಎಂದಿದ್ದಾರೆ ರಾಮಚಂದ್ರದೇವರು : ಸರಿ ಅಲ್ಲ. 'ಡೌಟ್‌ಫುಲ್ ಇಟ್ ಸ್ಟುಡ್' ಎಂಬುದಕ್ಕೆ ಗೌಡರ ಅನುಮಾನಕ್ಕಾಗದಾಗಿತ್ತು. ಡಿವಿಜಿಯವರ 'ಸಂದೇಹದೊಳಿರ್ದುದು' ಬಹಳ ಚೆನ್ನಾಗಿದೆ. ರಾಮ ಚಂದ್ರದೇವರ 'ಅನುಮಾನದಲ್ಲಿತ್ತು' ತೀರಾ ನೀರಸವಾಯ್ತು. 'ಕ್ಯಾಪ್ಟನ್'ಗೆ ಡಿವಿಜಿಯವರ 'ದಳಪತಿ' ರಾಮಚಂದ್ರದೇವರ 'ಸೇನಾಪತಿ' ಬಹಳ ಚೆನ್ನಾಗಿದೆ. 'ಪದಾತಿ ಪದಪ್ರಯೋಗ ಸರಿ ಅಲ್ಲ. 'ಕಾಲಾಳು' ಎಂಬರ್ಥದಲ್ಲೂ ಪದಾತಿ ಪ್ರಯೋಗವಿದೆ. ಷೇಕ್ಸ್‌ಪಿಯರನ ದೃಷ್ಟಿಯಲ್ಲಿ ಅವನು ಸೇನಾ ನಾಯಕನೆ ಹೊರತು ಸೈನಿಕನಲ್ಲ.

ರಾಮಚಂದ್ರದೇವರಲ್ಲಿ ಮುಖ್ಯವಾಗಿ ವಾಕ್ಯ ರಚನೆಯ ತೊಂದರೆ ಇದೆ. ಆರಂಭ, ಅಂತ್ಯದ ಅರಿವಿಲ್ಲ. ಡಿವಿಜಿಯವರು 'ಈಜ್ ವಿದ್ದರ್.........ಫೋರಾಟಿವ್' ಎಂಬಲ್ಲಿ ಬಹಳ ಒಳ್ಳೆ ಕೆಲಸಮಾಡಿದ್ದಾರೆ. ಗೌಡರು ಒಂದು ಪೂರ್ಣವಿರಾಮ ಹಾಕುವುದರ ಮೂಲಕ ಗದ್ಯವನ್ನು ಬಳಸಿದ್ದಾರೆ. ಸ್ಪಷ್ಟವಾಗಿದೆ. ರಾಮಚಂದ್ರದೇವರು ವಾಕ್ಯವನ್ನು ನಿಲ್ಲಿಸದೆ ತಪ್ಪು ಮಾಡಿದ್ದಾರೆ. ಪೂರ್ಣವಿರಾಮದ ಬದಲು (—) ಹಾಕಿದ್ದಾರೆ. ಒಂದಕ್ಕೊಂದು ಜೋಡಿಸಿದ್ದಾರೆ. ಪ್ರೇಕ್ಷಕ ನಟರಿಬ್ಬರರಿಗೂ ತೊಂದರೆ. ಪ್ರಕೃತಿಯ ದುರ್ಗುಣಗಳನ್ನು ಮೊಕ್‌ಡೊನಾಲ್ಡನಿಗೆ ಸೇರಿಸಿಬಿಟ್ಟರೆ ಹೇಗೆ ? ಡಿವಿಜಿಯವರ 'ಹತಕ' ಪದಪ್ರಯೋಗ ಬಹಳ ಚೆನ್ನಾಗಿದೆ. ಗೌಡರು, ಭೂಮಿಯ ದುರಾಚಾರಿಗಳಿಗೆಲ್ಲಾ ಮಾತೃಸ್ಥಾನವಾಗಿ ಮದಕೇರಿ ನಾಯಕನೆಂದಿದ್ದಾರೆ. ಇಲ್ಲಿ ಮತ್ತೆ ಮದಕೇರಿ ನಾಯಕನ ಸಂಬದ್ಧತೆ ಇತರ ಪಾತ್ರಗಳೊಂದಿಲ್ಲ. ಗೌಡರಿಗೆ ಹೆಸರುಗಳು ಬೇಕಷ್ಟೆ. ಅವುಗಳ ಪೂರ್ವಾಪರ ಸಂಬಂಧಗಳ ಬಗ್ಗೆ ಅವರು ತಲೆ ಕೆಡಿಸಿಕೊಂಡಿಲ್ಲ.

ಇಂಗ್ಲೀಷಿನ 'ವ್ಹೋರ್' ಎಂಬ ಶಬ್ದಕ್ಕೆ ಕೆಟ್ಟ ಹೆಂಗಸು ಅಥವಾ ಸೂಳೆ ಎಂಬರ್ಥವಿದೆ, ಷೇಕ್ಸ್‌ಪಿಯರನ ಆಶಯವೂ ಇದೆಯೆ. ಡಿವಿಜಿಯವರು 'ಭಾಗ್ಯದೇವಿ ಎಂದಿದ್ದಾರೆ, ಅದೂ ಅವಳು ಮುಗುಳ್ನಗುತ್ತಿಲ್ಲ ನಗುತ್ತಿದ್ದಾಳೆ. ಗೌಡರು 'ಜಯಲಕ್ಷ್ಮಿಯು ಅವನ್ನು ಕಟಾಕ್ಷದಿಂದ ನೋಡುತ್ತಿದ್ದಳು' ಎಂದಿದ್ದಾರೆ. ಇದೂ ಸರಿ ಅಲ್ಲ. ರಾಮಚಂದ್ರದೇವರು 'ದತ್ತ ಸೂಳೆ' ಎಂದಿದ್ದಾರೆ. 'ದತ್ತ' ಎಂದರೇನು ? ಕಟಾಕ್ಷಕ್ಕೆ ಬದಲು ಅದೃಷ್ಟ ಎಂದಿದ್ದಾರೆ. 'ಭಾಗ್ಯದೇವಿ' ಯನ್ನು (ಡಿವಿಜಿ) ಸೂಳೆಯ ಅರ್ಥದಲ್ಲಿ ಬಳಸಲಾಗುವುದಿಲ್ಲ.

'ಆ ಪುಂಡನನ್ನು ಹೊಕ್ಕಳಿನಿಂದ ದವಡೆಯವರೆಗೆ ಎರಡಾಗಿ ಸೀಳಿ' ಎಂದು ರಾಮಚಂದ್ರ ದೇವರು ಬಹಳ ಚೆನ್ನಾಗಿ ಅನುವಾದಿಸಿದ್ದಾರೆ. ಡಿವಿಜಿಯವರು 'ಪೊಕ್ಕಳಿನಿಂ ದವಡೆಯನ್ನೆಗಂ' ಎಂದಿದ್ದಾರೆ ಚೆನ್ನಾಗಿದೆ. ಗೌಡರಲ್ಲಿ ಹೊಕ್ಕಳೂ ಇಲ್ಲ, ದವಡೆಯೂ ಇಲ್ಲ. ಅವನ 'ಶಿರಚ್ಛೇಧನ' ಮಾಡಿಸಿಬಿಟ್ಟಿದ್ದಾರಲ್ಲವೆ ಅದಕ್ಕೊಂದು ಜಾಗಬೇರೆ (ಕೋಟೆ ಬತೇರಿ) ಹುಡುಕಿದ್ದಾರೆ.

'ಓ ವ್ಯಾಲಿಯಂಟ್ ಕಸಿನ್! ವರ್ದಿ ಜೆಂಟಲ್‌ಮನ್ !' ಎಂಬುದನ್ನು ಮೂವರೂ ತಮಗೆ ತೋಚಿದಂತೆ ಅನುವಾದಿಸಿದ್ದಾರೆ. ರಾಮಚಂದ್ರದೇವರಂತೂ ದೇಶದ ವಿಚಾರಗಳನ್ನೆಲ್ಲಾ ತಂದಿದ್ದಾರೆ ಇಲ್ಲಿ. ಡಿವಿಜಿ ಯವರ ಅನುವಾದ ಯಥಾಪ್ರಕಾರ ಮೂಲಕ್ಕೆ ಬದ್ಧವಾಗಿದೆ. ಗೌಡರಲ್ಲಿ ಈ ವಾಕ್ಯ 'ತಮ್ಮನೇ ನೀನೆ ಧೀರನು' ಎಂದಾಗಿ ಬಿಟ್ಟಿದೆ. ನೇಸರುದಯಿಸಿ... ಉಕ್ಕಿತೊಂದಸಂತೃಪ್ತಿ 'ಡಿವಿಜಿ' ಇಲ್ಲಿ ಅನಾವಶ್ಯಕವಾಗಿ ಸಂಧಿ ಮಾಡಿದ್ದಾರೆ. ತೊಂದರೆ ನೇರವಾಗಿರುತ್ತದೆ. ಗೌಡರು ಷೇಕ್ಸ್‌ಪಿಯರನ ಕ್ರಮವನ್ನು ಅನುಸರಿಸಿದ್ದಾರೆ 'ದೈವವನು ಮುಂದಲೆಯಿಂದೆಳೆದು' ಎಂದು ರಂಗಭೂಮಿಯ ಪ್ರಭಾವವನ್ನು ತಂದಿದ್ದಾರೆ. ಸೂರ್ಯನ ಅಂಶವನ್ನು ಪೂರ್ಣವಾಗಿ ಬಿಟ್ಟು, ಸೂರ್ಯ, ಸೂರ್ಯನ ದಿಕ್ಕು ಎಂಬುದೆಲ್ಲಾ ಅನವಶ್ಯಕ ಎಂದು ಭಾವಿಸಿದ್ದಂತಿದೆ.

ರಾಮಚಂದ್ರದೇವರು ತೊಂದರೆಗೆ 'ತಕರಾರು' ಎಂದಿದ್ದಾರೆ, ಸರಿ ಅಲ್ಲ. ಆದರೆ ಆ ಮುಂದೆ ನ್ಯಾಯ, ಧೈರ್ಯವನ್ನು ಶಸ್ತ್ರಾಸ್ತ್ರವಾಗಿ ಹೊಂದಿ—ಎಂದಿದ್ದಾರೆ. ರಾಮಚಂದ್ರದೇವರ ಅನುವಾದ ಬಹಳ ಚೆನ್ನಾಗಿದೆ. 'ದರಿದ್ರ ಬೊಗಳೆಗಳು ಕಾಲಿಗೆ ಬುದ್ಧಿಹೇಳುವ ಹಾಗೆ' (ರಾಮಚಂದ್ರದೇವ) ಬಹಳ ಚೆನ್ನಾಗಿದೆ. ಕನ್ನಡದ ಸೊಬಗು ಇಲ್ಲಿ ಮೂಡಿದೆ.

'ಅಚಾಪಲದ (ಕವರ್ಡ್‌ಲಿ) ಕಾಲ್ಬಲಂ' ಎಂದಿದ್ದಾರೆ ಡಿವಿಜಿ. ಚೆನ್ನಾಗಿದೆ. ಗೌಡರು ಇದನ್ನು ಬಿಟ್ಟಿದ್ದಾರೆ.

ನಾರ್ವೆ ರಾಜನಿಗೆ ವಿದರ್ಭರಾಜನೆಂದಿದ್ದಾರೆ ಗೌಡರು, ರಾಮಚಂದ್ರದೇವ ಹಾಗೂ ಡಿವಿಜಿ ಹಾಗೇ ಉಳಿಸಿಕೊಂಡಿದ್ದಾರೆ.

ಮುಂದೆ ರಾಮಚಂದ್ರದೇವರ ವಿರೋಧಾರ್ಥಕ ಪ್ರಯೋಗವಿದೆ— 'ಹದ್ದು ಗುಬ್ಬಚ್ಚಿ ಯನ್ನು ಸೋಲಿಸಿದಂತೆ ಎಂದಿದ್ದಾರೆ. ಇದರಲ್ಲಿ ಆಶ್ಚರ್ಯವೇನು ? ಸ್ವಾಭಾವಿಕ ತಾನೇ ? ಷೇಕ್ಸ್‌ಪಿಯರ್ ಸ್ವಾಭಾವಿಕತೆಯ ವಿರೋಧಿಭಾವನೆ ಮೂಡಿಸಿದ್ದಾನೆ. ಹದ್ದು ಗುಬ್ಬಚ್ಚಿಯನ್ನು ಸೋಲಿಸ ಬಲ್ಲುದು. ಆದರೆ ಷೇಕ್ಸ್‌ಪಿಯರ್ ಗುಬ್ಬಚ್ಚಿ ಹದ್ದನ್ನು ಸೋಲಿಸುವ ಕಲ್ಪನೆ ತಂದಿದ್ದಾನೆ. ಮೂಲದ ಕ್ರಮವನ್ನು ಹಿಂದೆ ಮುಂದೆ ಮಾಡಿ ಷೇಕ್ಸ್‌ಪಿಯರನ ಆಶಯಕ್ಕೆ ಭಂಗ ತಂದಿದ್ದಾರೆ

ರಾಮಚಂದ್ರದೇವರು ಇದು ಸರಿ ಅಲ್ಲ. 'ಗುಬ್ಬಿಗೆ—ಆ ಗೃಧ್ರನು ಮರಿಪುಲ್ಲಿಗೆ ಕಡುಸಿಂಗವಮ್' ಎಂದಿದ್ದಾರೆ ಗೌಡರು, ಬಹಳ ಚೆನ್ನಾಗಿದೆ. ಗಿಡಗನ ಗುಬ್ಬಿಯಂಜಿಕೆಯು 'ಎಂದಿದ್ದಾರೆ ಡಿವಿಜಿ; ಬಹಳ ಚೆನ್ನಾಗಿದೆ. ಆದರೆ ಪ್ರೇಕ್ಷಕರತ್ತ ಇವರ ಗಮನವಿಲ್ಲ. ರಾಮಚಂದ್ರದೇವರ 'ಹಾರ್ಟ್ ದಿ ಲಯನ್'ನ ಅರ್ಥಗ್ರಹಿಕೆ ವಿಪರೀತ ತಪ್ಪು.

ಡಬಲ್ ಬ್ಯಾರಲ್‌ಗೆ ಡಿವಿಜಿ ಯವರು 'ಇರ್ಪಾತದ ಶತಘ್ನಿ'ಎಂದಿದ್ದಾರೆ. ಬಹಳ ಚೆನ್ನಾಗಿದೆ. ಪದಪ್ರಯೋಗ ಅಸ್ವಾಭಾವಿಕವಾದರೂ ಡಿವಿಜಿಯವರಲ್ಲಿ ಸೃಜನಾತ್ಮಕತೆ ಇದೆ. 'ಫಿರಂಗಿಗೆ ಎರಡು ಗುಂಡು' ಎಂಬ ಗೌಡರ ಮಾತು ಸರಿ ಅಲ್ಲ. ಇಲ್ಲಿ ಬಂದೂಕದ ವೈಶಿಷ್ಟ್ಯ ಮೂಡಿ ಬಂದಿಲ್ಲ. ರಾಮಚಂದ್ರದೇವರು ಅನಗತ್ಯವಾಗಿ ವಿಸ್ತರಿಸಿದ್ದಾರೆ.

ಇಂಗ್ಲೀಷಿನ 'ಗೊಲ್ಗೊಥಾ' ರಾಮಚಂದ್ರದೇವ. ಡಿವಿಜಿಯವರಲ್ಲಿ ಹಾಗೇ ಮೂಡಿ ಬಂದಿದೆ. ಗೌಡರಲ್ಲಿ ಈ ಕಲ್ಪನೆಯೇ ಇಲ್ಲ. ಇದರ ಬದಲು ಇನ್ನೇನನ್ನೋ ಹೇಳಿ ಅಜಾಗ ತುಂಬಿದ್ದಾರೆ.

'ಈ ಎನ್ನ ಗಾಯಗಳು ವಿಪ್ಲಗೆಂಬಳುತಿಹವು'—ಡಿವಿಜಿ. ಬಹಳಚೆನ್ನಾಗಿದೆ. ರಾಮಚಂದ್ರದೇವರು 'ನನ್ನ ಗಾಯಗಳು 'ಎಂದು ಒಂದು (—) ಹಾಕಿದ್ದಾರೆ. ಇದು ಅವರ ದೌರ್ಬಲ್ಯದ ಸಂಕೇತವಷ್ಟೆ. ಗೌಡರು –'ನನ್ನ ಗಾಯಗಳು ಆದರಣೆಯನ್ನಪೇಕ್ಷಿಸುತ್ತಿರುವುವು' ಎಂದಿದ್ದಾರೆ. ತೀರಾ ನೀರಸವಾಯಿತು. ಗಾಯಗಳು ಆದರಣೆಯಿಂದ ಮಾಗುವುದಿಲ್ಲ.

ಡಿವಿಜಿಯವರ 'ಪೋಗು ವೈದ್ಯನ ಬಳಿಗೆ ಕೊಂಡಿವನ' ವಾಕ್ಯ ತೀರ ಕೃತಕವಾಯಿತು. ರಾಮಚಂದ್ರದೇವರು ವೈದ್ಯರ ಹತ್ತಿರ ಕರೆದೊಯ್ಯಿರಿ ಎಂದಿದ್ದಾರೆ. ಗೌಡರು-'ನೀವ್ಯಾರಾದರೂ ಇವನನ್ನು ವೈದ್ಯಶಾಲೆಗೆ ಕರದೊಯ್ಯುವುದು' ಎಂದಿದ್ದಾರೆ. ಸರಿ ಅಲ್ಲ ರಾಜಾಜ್ಞೆ ನೇರವಾಗಿರುತ್ತದೆ, ಅಲ್ಲವೇ? ಐಚ್ಛಿಕತೆಗೆ ಅವಕಾಶವಿಲ್ಲ. ಯಾರಾದರೂ ಏಕೆ? ಸೇವಕ ಕರೆದುಕೊಂಡು ಹೋಗಬೇಕು. ಇಷ್ಟಾದರೂ ಮೂಲದ ಗೋ, ಗೆಟ್ ಹಿಮ್ ಸರ್ಜನ್ಸ್'ನ ಭಾವ ಮೂವರಲ್ಲೂ ಮೂಡಿ ಬಂದಿಲ್ಲ. ಇಲ್ಲಿ ಗಾಯಾಳುವಿಗೆ ಶುಶ್ರೂಷೆ ಕೊಡಿಸಬೇಕಷ್ಟೆ. ಅವನನ್ನೇ ವೈದ್ಯರ ಬಳಿಗೆ ಕರೆದು ಕೊಂಡು ಹೋಗಬೇಕೋ, ಇಲ್ಲವೇ, ವೈದ್ಯರೇ ಅವನಲ್ಲಿಗೆ ಬರಬೇಕೋ ಎಂಬಲ್ಲಿ ಮೂಲದಲ್ಲಿ ಅಸ್ಪಷ್ಟ ಇಂಗಿತವಿದೆ. ಈ ಇಂಗಿತ ಅನುವಾದಗಳಲ್ಲಿಲ್ಲ.

ರಾಸ್ ರಾಜನಿಗೆ ರಾಮಚಂದ್ರದೇವ. ಡಿವಿಜಿ ರಾಸ್ ಎಂದೇ ಬಳಸಿದ್ದಾರೆ. ಗೌಡರು ನಂದರಾಜನೆಂದಿದ್ದಾರೆ. ಇಲ್ಲಿ ಇವನಿಗೆ ಬರೀ ಹೆಸರಷ್ಟೇ. ಅವನಿಗೆ ಯಾವ ದೇಶದ ಸಂಬಂಧವೂ ಇಲ್ಲ ಆದರೆ ಗೌಡರು ಅವನನ್ನು ಮುನವಳ್ಳಿ ಕಣಿವೆಯಿಂದ ಕರೆಸಿದ್ದಾರೆ. ಬಹಳ ಅಪ್ರಾಸಂಗಿಕವಾಗಿದೆ. ಭಾರತೀಯತೆ ಎದ್ದು ಕಾಣುತ್ತದೆ. ಆದರೆ ವಿದರ್ಭ–ಓಷ್ಕ್ರ–ಮುನವಳ್ಳಿ, ಎಲ್ಲಿಂದೆಲ್ಲಿಗೆ? ಇದನ್ನು ಮಾತ್ರ ಕೇಳುವಂತಿಲ್ಲ. ಏಕೆಂದರೆ ಅವರ ಪ್ರೇಕ್ಷಕರು ಷೇಕ್ಸ್ಪಿಯರನವರಾಗಿಬಿಟ್ಟಿದ್ದರು. ನಕ್ಷೆ ನೋಡಿದರೆ ಮಾತ್ರ ಅಸಂಬದ್ಧ. ಡಿವಿಜಿ ನಕ್ಷೆ ಕೊಟ್ಟಿದ್ದಾರೆ. ಗೌಡರಿಗೆ ಇದು ಬೇಕಿಲ್ಲ. ಅವನು ಬರುತ್ತಿದ್ದಂತೆ ಹಾಡುತ್ತಲೇ ಬರಬೇಕಲ್ಲಾ ! ಒಂದು ಕಂದಪದ್ಯ, ಒಂದು ರಗಳೆ ಹಾಕಿಬಿಟ್ಟಿದ್ದಾರೆ.

ಷೇಕ್ಸ್‌ಪಿಯರನ 'ಬೆಲೋನಾ'ಸ್ ಬ್ರೈಡ್‌ಗ್ರೂಮ್'ಗೆ ಬದಲಾಗಿ ಗೌಡರು 'ಹಿಡಿಂಬಿಯರಸ' ನೆಂದಿದ್ದಾರೆ. ಡಿವಿಜಿ ಯುದ್ಧಕನ್ಯಾವರಂ ಎಂದಿದ್ದಾರೆ, ಚೆನ್ನಾಗಿದೆ, ಪ್ರಾಸಂಗಿಕವಾಗಿದೆ. ರಾಮಚಂದ್ರ ಬೆಲೋನಾಳ ವರ ಎಂದಿದ್ದಾರೆ ಮೂಲದ ರೂಪಕಾರ್ಥ ಇಲ್ಲಿ ಬಂದಿಲ್ಲ. ರಾಮಚಂದ್ರ ದೇವರ ಅನುವಾದದಲ್ಲಿ ಮೂಲದ ಆಶಯಕ್ಕೆ ಭಂಗ ಬಂದಿದೆ.

ಗೌಡರ ಬಳಿ ಬಂದು ಕಾಡಾರ್ ದೊರೆ ಬರ್ಭರನಾಗಿದ್ದಾನೆ. ಡಿವಿಜಿ ರಾಮಚಂದ್ರ ದೇವರಲ್ಲಿ ಹಾಗೆ ಉಳಿದುಕೊಂಡಿದ್ದಾನೆ. ಮ್ಯಾಕ್‌ಬೆತ್ ನಾಟಕದಲ್ಲಿ ಮೊದಲಂಕದ ಮೊದಲ ದೃಶ್ಯ ವಸೌಲ್ಯಗಳ ವಿಕೃತಿಯ ದೃಶ್ಯ, ಎರಡನೆಯದು ಚಾರಿತ್ರಿಕವಾದರೆ, ಮೂರನೆಯದು ವಿಕೃತಿಯ ದೃಶ್ಯ. ಇಲ್ಲಿ ಮ್ಯಾಕ್‌ಬೆತ್‌ನ ಗುಣಗಳ ಚಿತ್ರಣವಿದೆ· ಬ್ಯಾಂಕೊ ಮತ್ತು ಮ್ಯಾಕ್‌ಬೆತ್ ನಡುವೆ ಸ್ಪರ್ಧೆ ಬರುತ್ತದೆ· ಎರಡನೆಯ ದೃಶ್ಯದಲ್ಲಿ ಅವರಿಬ್ಬರನ್ನೂ ವೀರರನ್ನಾಗಿ ತೋರಿಸಲಾಗಿದೆ. ಜಕ್ಕಿಣಿಯರು ಇಲ್ಲಿ ವಿಕೃತ ರೂಪ ತಳೆಯುತ್ತಾರೆ.

ಡಿವಿಜಿಯವರು 'ಚೆಸ್ಟ್‌ನಟ್'ಗೆ ಗೇರುಬೀಜ ಎಂದಿದ್ದಾರೆ. ಸರಿ ಇದೆ. ಕಡಲೆಬೀಜ ಎಂದಿದ್ದಾರೆ ರಾಮಚಂದ್ರದೇವರು, ಸರಿಯಲ್ಲ. ಉಮತ್ತಿಕಾಯಿ ಎಂದಿದ್ದಾರೆ ಗೌಡರು ಸರಿ ಅಲ್ಲ ಸುಮ್ಮನೆ ಸಮಯಕ್ಕೆ ನೆನಪಾದನ್ನು ಬರೆದು ಬಿಟ್ಟರೆ ಮೂಲಭಾವದ ವರ್ಗಾವಣೆ ಆಗಬೇಡವೇ ಅನುವಾದದಲ್ಲಿ ?

ರಾಮಚಂದ್ರದೇವರು ಯಕ್ಷಿಣಿಯರ ಬಾಯಿಂದ–'ದಢೂತಿ ಮುಕಳಿಯ ಮುಂಡೆ' ಎನಿಸಿದ್ದಾರೆ. ಇದೆಲ್ಲಾ ಏನು? ಮೂಲದಲ್ಲಿದೆಯೇ? ಅಥವಾ ರಂಗಭೂಮಿಯಲ್ಲಿ ಪ್ರಯೋಗಕ್ಕೆ ಸಾಧ್ಯವೇ? ಗೌಡರು ಕಿವಿ ಮೂಳಿ ಎಂದಿದ್ದಾರೆ, ಸರಿ ಇದೆ; ಮೂಲದಲ್ಲಿ 'ರಂಪ್–ಫೆಡ್ ರ್ಯನ್ಯಾನ್' ಎಂದಿದೆ. ಇದಕ್ಕೆ ಒಟ್ಟಾರೆ 'ಎ ಫಾಲ್ ಫ್ಯಾಟ್ ವುಮನ್' ಎಂದರ್ಥ. ಒಟ್ಟಾರೆ ದಢೂತಿತನ ವಿದೆಯೇ ವಿನಾ ಆ ದಢೂತಿ ತನ್ನ ದೇಹದ ಯಾವುದೋ ಒಂದೇ ಭಾಗದಲ್ಲಿದೆಯೆಂದೇನು ಇಲ್ಲವಲ್ಲ. ಡಿವಿಜಿಯವರ 'ತೊಲಗಿ ಪೋಗು ಯಕ್ಷಿಣಿ'ಎಂಬಲ್ಲಿ ಬೈಗುಳದ ಅರ್ಥ ಬಂದಿಲ್ಲ. ಆದರೆ 'ಗದರಿಸಿದಳಾ ಲೋಭಿ, ಎಂಜಲುಣ್ಣುವ ನಾಯಿ (ಡಿವಿಜಿ) ಚೆನ್ನಾಗಿದೆ. ಇದಕ್ಕೆ ಮೂಲದ ಆಧಾರವಿಲ್ಲ.

'ಸೀವ್'ಗೆ ಜರಡೆ ಎಂಬುದು ಹೆಚ್ಚು ಧ್ವನ್ಯಾತ್ಮಕವಾಗಿದೆ, (ಡಿವಿಜಿ, ರಾಮಚಂದ್ರದೇವ)'; ಆದರೆ ಗೌಡರು ಇದನ್ನು ಬಿಟ್ಟಿದ್ದಾರೆ.

ಡಿವಿಜಿಯವರ 'ಮಾಡುವೆನ್, ಮಾಡುವೆನ್ ಮತ್ತೆ ಮಾಡುವೆನ್' ಮೂಲದ ಐ ವಿಲ್ ಡೂ, ಐ ವಿಲ್ ಡೂ, ಐ ವಿಲ್ ಡೂ ಎಂಬುದಕ್ಕೆ ಬಹಳ ಹತ್ತಿರವಾಗಿದೆ ರಾಮಚಂದ್ರದೇವರ ನಾನು ಮಾಡುತ್ತೇನೆ... ತೀರಾ ಯಾಂತ್ರಿಕ ಅನುವಾದವಾಯ್ತು.

'ದಾ ಆರ್ಟ್ ಕೈಂಡ್' ಎಂಬುದಕ್ಕೆ ಡಿವಿಜಿಯವರು 'ಒಲುಮೆಯುಳ್ಳವಳು ನೀಂ' ಎಂದಿದ್ದಾರೆ. 'ನೀ ದಯಾಳು,' ಎಂದಿದ್ದಾರೆ ಗೌಡರು, ಚೆನ್ನಾಗಿಯೇ ಇದೆ. 'ಐ ಮೈಸೆಲ್ಫ್ ಹ್ಯಾವ್ ಆಲ್ ದಿ ಅದರ್' ಎಂಬುವಕ್ಕೆ ಡಿವಿಜಿ 'ಎನ್ನೊಳೆ ಇರ್ದುದು ಮಿಕ್ಕೆಲ್ಲ ಎಂದಿದ್ದಾರೆ. ಗೌಡರು 'ಉಳಿದ ಗಾಳಿ ಕೈಯೊಳಿಹುದು ಎಂದಿದ್ದಾರೆ. ಇಲ್ಲಿ ದಿ ಅದರ್ ಎಂಬುದಕ್ಕೆ ಗಾಳಿ ಎಂಬ ಒಳಾರ್ಥ ವಿದೆ. ಈ ಹಂತದಲ್ಲಿ ಗೌಡರ ಅನುವಾದ ಬಹಳ ಚೆನ್ನಾಗಿದೆ.

'ನಾನು ಶೋಧಿಸಿ ಬಿಡುವೆ' ಎಂದಿದ್ದಾರೆ ರಾಮಚಂದ್ರದೇವರು. ಈ ಶೋಧನೆ ಇತ್ತೀಚಿನದು, ಷೇಕ್ಸ್‌ಪಿಯರನ ಕಾಲಕ್ಕೆ ಒಗ್ಗದು. 'ಅವನೊಡಲಿನ ರಕ್ತವ ಕುಡಿದು ಅವನನು ನಾನ್ ಒಣ ಪುಲ್ಲೆನಿಪೆನ್'–ಡಿವಿಜಿಯವರ ಅನುವಾದ ಚೆನ್ನಾಗಿದೆ. 'ಹಗಲಿನಲ್ಲೇ ಇರಲಿ, ರಾತ್ರಿಯಲ್ಲೇ ಇರಲಿ ನಿದ್ದೆ ಬರದು' ಎಂಬ ರಾಮಚಂದ್ರದೇವರ ಅನುವಾದ ಸೊಗಸಾಗಿದೆ. ಡಿವಿಜಿಯವರ ಅನುವಾದವೂ ಚೆನ್ನಾಗಿದೆ. ಗೌಡರು ಅರ್ಥ ಬದಲಿಸಿದ್ದಾರೆ ಆದರೆ ಡಿವಿಜಿಯವರ 'ಕೊಂಡ' ಶಬ್ದ ಪ್ರಯೋಗ ಸಮರ್ಪಕವಾಗಿಲ್ಲ. ಪೆಟ್ಟೆರಳಿನ ಕಲ್ಪನೆ ಸರಿಯಾಗಿ ಮೂಡಿಬಂದಿಲ್ಲ. ನಗಾರಿ ಕೇಳಿದ ಮೇಲೆ ಬರುವ ಹಾಡನ್ನು ಮೂವರೂ ಚೆನ್ನಾಗಿಯೇ ಅನುವಾದಿಸಿದ್ದಾರೆ. ಗೌಡರಂತೂ ಷೇಕ್ಸ್‌ಪಿಯರಿಗಿಂತ ಹೆಚ್ಚಿಗೆ ಬರೆದಿದ್ದಾರೆ.

ಮ್ಯಾಕ್‌ಬೆತ್, ಬ್ಯಾಂಕೊ ಬಂದಾಗಿನ ಅನುವಾದ ಸುಮಾರಾಗಿದೆ ಅಷ್ಟೆ. ಇಲ್ಲಿ ಹಿಂದಿನ ಘಟನೆಗಳು ಪ್ರತಿಫಲಿಸಬೇಕು. ಡಿವಿಜಿ ಪ್ರಯತ್ನಿಸಿದ್ದಾರೆ.

'ಸೋ ಫೌಲ್ ಅಂಡ್ ಫೇರ್ ಎ ಡೆ ಐ ಹ್ಯಾವ್ ನಾಟ್ ಸೀನ್' ಮ್ಯಾಕ್‌ಬೆತನ ಈ ಮಾತನ್ನು 'ಇನಿತುಂ ಹೊಲಸುಂ ಸೊಗಸುಮಿಹದಿನ' (ಡಿವಿಜಿ) 'ಹೀಗೆ ಬಳಿತುಕೆಡುಕು ಒಟ್ಟಿಗೆ ತರುವದಿನ' (ರಾಮಚಂದ್ರದೇವ) ಚೆನ್ನಾಗಿ ಅನುವಾದಿಸಿದ್ದಾರೆ. ಆದರೆ ಈ ಹಂತದಲ್ಲಿ ಗೌಡರು ಅನುವಾದದಲ್ಲಿ 'ದುರ್ದಿನ' ಪದಪ್ರಯೋಗಮಾಡಿದ್ದಾರೆ. ಎರಡು ಭಾವನೆಗಳು ಬಂದಿವೆಯಾದರೂ ಇಲ್ಲಿ 'ದಿನ' ಫೌಲ್ ಅಂಡ್ ಫೇರ್ ಎರಡಕ್ಕೂ ಅನ್ವಯವಾಗಬೇಕು. 'ಉತ್ಕೃಷ್ಟ'ವಾದ ಮೇಲೆ ಕೆಟ್ಟದ್ದೆಲ್ಲಿ? ದುರ್ದಿನವಾದ ಮೇಲೆ ಉತ್ಕೃಷ್ಟತೆ ಎಲ್ಲಿಯದು? ಗೌಡರ ಅರ್ಥಗ್ರಹಿಕೆ ಸರಿಕಾಣದು. ಇಲ್ಲಿ ಈ ಎರಡು ಭಾವನೆಗಳು ಪರಸ್ಪರ ವಿರೋಧಾರ್ಥಕವಾಗಿ ಬಂದಿಲ್ಲ. ಒಟ್ಟಾಗಿ ಬಂದಿವೆ.

ರಾಮಚಂದ್ರದೇವರ ಮೂಲಸಮಸ್ಯೆ ವಾಕ್ಯರಚನೆಯದು. ಸಣ್ಣ ವಾಕ್ಯಗಳ ಅವಶ್ಯಕತೆ ಇರುವೆಡೆ ದೊಡ್ಡ ದೊಡ್ಡ ವಾಕ್ಯರಚನೆ ಮಾಡುತ್ತಾರೆ.

ಡಿವಿಜಿಯವರ—'ಈ ಇವರಾರು.. ಮೇಲ್ನಿಂದಹರು' ಅನುವಾದ ಬಹಳ ಚೆನ್ನಾಗಿದೆ. ಅಂತೆಯೇ 'ಕವಲೊಡೆದ ಬೆರಳಲಿ ಜೋಲ್ದೊಗಲ' (ಡಿವಿಜಿ) ಕೂಡ ಚೆನ್ನಾಗಿದೆ. 'ಒಣ ತುಟಿಗಳ ಮೇಲೆ ಕಡ್ಡಿ ಬೆರಳನ್ನಿಟ್ಟು'–ಗೌಡರ ಅನುವಾದ ಬಹಳ ಚೆನ್ನಾಗಿದೆ ರಾಮಚಂದ್ರದೇವರು– 'ಒಣತುಟಿ' 'ಬಡಕು ಬೆರಳು,' 'ನೀವು ಹೆಂಗಸರಿರಬೇಕು' ಈ ಪ್ರಯೋಗಗಳು ಇವರ ಉತ್ಕೃಷ್ಟ ಅನುವಾದಕ್ಕೆ ಒಳ್ಳೆಯ ಉದಾಹರಣೆಗಳು. ಡಿವಿಜಿಯವರ 'ನೀಮ್ ಪೆಣ್ಗಳೇಮ್' ತೀರಾ ತಾರ್ಕಿಕ.

'ಅಂಡ್ ಯೆಟ್ ಯುವರ್ ಬಿಯರ್ಡ್ಸ್ ಫರ್ಬಿಡ್ ಮಿ ಟು ಇಂಟರ್‌ಪ್ರಿಟ್'ಗೆ ಡಿವಿಜಿಯವರ 'ಅಂತೆನಿಸೆ ಗಡ್ಡಗಳ ತಡೆಯುಹವು' ಬಹಳ ಸಮರ್ಪಕವಾಗಿದೆ. ರಾಮಚಂದ್ರದೇವರೂ ಸುಂದರವಾಗಿ ಅನುವಾದಿಸಿದ್ದಾರೆ. ಆದರೆ ಗೌಡರಿಗೆ ಆ ಗಡ್ಡಗಳು' 'ತಡೆಯದೆ' ಅನುಮಾನ' ವನ್ನುಂಟುಮಾಡಿವೆ. ಇದು ಸರಿ ಅಲ್ಲ. ಷೇಕ್ಸ್‌ಪಿಯರನ 'ಗುಡ್ ಸರ್'ಗೆ ಗೌಡರ 'ಪೂಜ್ಯನೇ' ಬಹಳ ಚೆನ್ನಾಗಿದೆ. ರಾಮಚಂದ್ರದೇವರಲ್ಲಿ ಈ ಮಾತು ಮುಚ್ಚಿಹೋಗಿದೆ. ಮ್ಯಾಕ್‌ಬೆತ್‌ಗೆ ಬ್ಯಾಂಕೊ ಹೇಳುವ ಮಾತಿಗೂ ಆ ಮುಂದೆ ಯಕ್ಷಿಣಿಯರಿಗೆ ಹೇಳುವ ಮಾತಿಗೂ, ನಡುವೆ ಏನೂ

ಅಂತರವನ್ನೇ ತಂದಿಲ್ಲ. ಡಿವಿಜಿಯವರ 'ಬೆಚ್ಚುವುದೇಕೆ ಮಿತ್ರನೆ ?' ಮ್ಯಾಕ್‌ಬೆತನೊಡನೆ ಬ್ಯಾಂಕೊನ ಸಲುಗೆ ತೋರಿಸುತ್ತದೆ. ಮೂಲದಲ್ಲಿ ಆವರಣದಲ್ಲಿ 'ಟು ದಿ ವಿಚಸ್' ಎಂದು ಸ್ಪಷ್ಟವಾಗಿ ಕೊಟ್ಟಿದ್ದರೂ, ಅದನ್ನು ರಾಮಚಂದ್ರದೇವರು ಹಾಗೂ ಗೌಡರು ಬಿಟ್ಟಿರುವುದು ಬಹಳ ದೊಡ್ಡ ತಪ್ಪು. ಡಿವಿಜಿಯವರು ಮಾತ್ರ ಮಾಕ್ಬೆತ್ ಹಾಗೂ ಯಕ್ಷಿಣಿಯರನ್ನು ಪ್ರತ್ಯೇಕ ವಾಗಿ ಸಂಬೋಧಿಸಿದ್ದಾರೆ. ಮ್ಯಾಕ್‌ಬೆತನಿಗೆ ಏಕವಚನ ಪ್ರಯೋಗದಿಂದ ಮಾತ್ರ ಗೌಡರ ಆಶಯ ವ್ಯಕ್ತವಾಗುತ್ತದೆ. ಡಿವಿಜಿಯವರ ಅನುವಾದ ಈ ಘಟ್ಟದಲ್ಲಿ ಬಹಳ ಪ್ರಾತಿನಿಧಿಕವಾಗಿದೆ. 'ಸತ್ಯದಾಣೆಯಲ್ಲಿ ನಾಂ ಕೇಳುವೆನ್ ನೀಮ್ ಏನು ಭ್ರಾಂತಿಕೃತಕಂಗಳೋ' (ಡಿವಿಜಿ) ; 'ನೀವೇನು ಕಲ್ಪನೆಯ ದೃಶ್ಯಗಳೇ'–ಎಂದಿದ್ದಾರೆ ರಾಮಚಂದ್ರದೇವ. ತೀರಾಸಪ್ಪೆ. ಮೂಲದ ಆಶಯ ವ್ಯಕ್ತ ಪಡಿಸದಿದ್ದರೂ ಪರವಾಗಿಲ್ಲ. ಆದರೆ ಗೌಡರ 'ನೀವೇನು ಮನಸ್ಸಿನ ಕಳವಳವೋ' ಸರಿ ಅಲ್ಲ. ಇವರಿಗೆ ಎಲ್ಲೆಂದರಲ್ಲಿ ಕಳವಳವಾಗಿ ಬಿಡುತ್ತದೆ.

'ಮೈ ನೋಬಲ್ ಪಾರ್ಟ್‌ನರ್'ಗೆ ಡಿವಿಜಿಯುವರ–'ಈಯೆನ್ನುದಾತ್ತ ಸಹಕಾರ್ಯರ್ಗಂಗೆ' ರಾಮಚಂದ್ರದೇವರ 'ನನ್ನಧೀರ ಜೊತೆಗಾರ' ಬಹಳ ಚೆನ್ನಾಗಿದೆ. ಗೌಡರಲ್ಲಿ 'ನೋಬಲ್'ನ ಅರ್ಥಬಿಟ್ಟು ಹೋಗಿ ಬ್ಯಾಂಕೊಗೆ ಮ್ಯಾಕ್‌ಬೆತ್ ಬರೀ ಜೊತೆಗಾರನಾಗಿಬಿಟ್ಟಿದ್ದಾನೆ.

'ಹಿ ಸೀಮ್ಸ್ ರ್ಯಾಪ್ಟ್ ವಿಥಾಲ್'ಗೆ ರಾಮಚಂದ್ರದೇವರ 'ಮಾತುಗಳಲ್ಲಿ ಮುಚ್ಚಿ ಹೋಗಿದ್ದಾನೆ' ಎನ್ನುವುದಕ್ಕಿಂತ ಡಿವಿಜಿ ಯವರ 'ಮುಗುದನಾಗಿರ್ಪನ್' ಹೆಚ್ಚು ಅರ್ಥಪೂರ್ಣ ವಾಗಿದೆ. ಗೌಡರ 'ಮಗ್ನನಾಗಿ' ಪ್ರಯೋಗ ಕೂಡ ಚೆನ್ನಾಗಿದೆ.

'ನಿಮ್ಮ ಪಗೆಯಿಂದಂತು ಅರ್ಗ ಅಳುಕೆನ್' (ಡಿವಿಜಿ) ಚೆನ್ನಾಗಿದೆ-ರಾಮಚಂದ್ರದೇವರೂ ಚೆನ್ನಾಗಿ ಅನುವಾದಿಸಿದ್ದಾರೆ—'ನಿಮ್ಮ ಕೃಪೆಯನ್ನು ಬೇಡದ' ಎಂದಿದ್ದಾರೆ ಸರಿ. ಆದರೆ ಸಿಟ್ಟಿಗೆ ಹೆದರದ ಎಂದಿದ್ದಾರೆ ಸರಿ ಅಲ್ಲ. ಸಿಟ್ಟು ಬೇರೆ, ಹಗೆತನ ಬೇರೆ. ಮೂಲದಲ್ಲಿ 'ಹೇಟ್' ಎಂಬ ಪದವೇ ಇದೆ. ಗೌಡರು ಇದೆಲ್ಲವನ್ನು ಬಿಟ್ಟಿದ್ದಾರೆ.

ಯಕ್ಷಿಣಿಯರಿಗೆ ಬ್ಯಾಂಕೊ ಹೇಳುವ ಮಾತು.

'ವೀರ ಸೇನಾನಿಗಿಂತಲ್ಪನ್ ಅವಂಗಧಿಕಮ್' ಎಂಬ ಗೌಡರ ಅನುವಾದ ಪ್ರಾತಿನಿಧಿಕವಾಗಿದೆ. ರಂಗಭೂಮಿಯ ಸಂಸ್ಕಾರದ ಕಲ್ಪನೆ ಗೌಡರಿಗಿದೆ. ಡಿವಿಜಿಯವರ 'ಕಿರಿಯರ್ಗೆ ಮ್ಯಾಕ್‌ಬೆತನಿಂ ಮೇಣ್ ಹಿರಿಯನ್' ತೀರಾ ಅಸ್ವಾಭಾವಿಕವಾಗಿದೆ. ರಾಮಚಂದ್ರದೇವರ ಅನುವಾದದಲ್ಲಿ ಪರಸ್ಪರ ವಿರೋಧೀಭಾವವಿದೆ, 'ಮ್ಯಾಕ್‌ಬೆತ್‌ನಷ್ಟು ಶ್ರೇಷ್ಠನಲ್ಲ ಆದರೂ ಅವನಿಗಿಂತ ಶ್ರೇಷ್ಠ ಮೂಲದ 'ಲೆಸ್ಸರ್' 'ಗ್ರೇಟರ್'ನ ಅರ್ಥಗ್ರಹಿಕೆ ರಾಮಚಂದ್ರದೇವರಲ್ಲಿ ಸರಿಯಾಗಿ ಮಾಡಿಲ್ಲ.

'ಎರಡನೇ ಶಕ್ತಿಯು'ಮಾತನ್ನು ಗೌಡರು ನೇರವಾಗಿ ಹೇಳಿಬಿಟ್ಟಿದ್ದಾರೆ. ರಾಮಚಂದ್ರದೇವರ ಅನುವಾದ ಬಹಳ ಚೆನ್ನಾಗಿದ್ದೆ, ಡಿವಿಜಿಯವರು ಮಾತ್ರ 'ಸೊಗಮಿನಿತಿಲ್ಲಂ ಮೇಣ್ ಪೆಚ್ಚು ಸೊಗಂ' ಎಂದು ಭಾಷೆಯನ್ನು ಕಾವ್ಯಮಯವನ್ನಾಗಿಸಿ ಬಿಟ್ಟಿದ್ದಾರೆ.

'ದೊರೆಗಳನಾಗಿಪೆ' ಡಿವಿಜಿಯವರ ಮಾತು ಬಹಳ ಸುತ್ತಾಯಿತು. 'ನೀಲ ರಾಜನಾಗೆ' ಎಂಬ ಗೌಡರ ಮಾತು ಯಥಾರ್ಥವಾಗಿದೆ. ವಿರೋಧಾಭಾಸದ ಮಾತು ಸರಳವಾಗಿರಬೇಕು ಇಲ್ಲದಿದ್ದರೆ, ಓದುಗರಿಗೆ ಪ್ರೇಕ್ಷಕರಿಗೆ ಅರ್ಥವಾಗದು.

'ಇಂಪರ್ಫೆಕ್ಟ್ ಸ್ಪೀಕರ್ಸ್‌ಗೆ' ಅಲ್ಪಭಾಷಿಗಳು (ಗೌಡರು) ಸರಿ ಅಲ್ಲ, 'ಅರೆನುಡಿಯ ನುಡಿವವರೆ'–ಡಿವಿಜಿ ಬಹಳ ಚೆನ್ನಾಗಿದೆ. ಆದರೆ 'ಅರ್ಥಕ್ಕೆ ಮಾತು ನಿಲ್ಲಿಸುವವರೇ (ರಾಮಚಂದ್ರದೇವ) ಎಂಬುದು ತೀರಾ ಅಸಹಜ. 'ನನಗೆ ಭರವಸೆ ಇಲ್ಲ'. ಡಿವಿಜಿಯವರ ಮಾತು ತೀರಾ ನೇರವಾಯ್ತು : ಮೂಲದಲ್ಲಿ ಸೂಚ್ಯಾರ್ಥವಿದೆ, ಚೆನ್ನಾಗಿದೆ. 'ಅನುಮಾನಾಸ್ಪದ, ಗೌಡರ ಪ್ರಯೋಗ ಸರಿ 'ಭರವಸೆ ಇಲ್ಲ'—'ಅನುಮಾನಾಸ್ಪದ' ಎರಡರಲ್ಲೂ ವ್ಯತ್ಯಾಸವಿದೆ. 'ನಂಬಲಿಕ್ಕೆ ಸಾಧ್ಯವಿಲ್ಲದ ಮಾತು' (ರಾಮಚಂದ್ರದೇವ) ಕೂಡ ಚೆನ್ನಾಗಿದೆ.

'ಎಲ್ಲಿಂ ತಂದಿರೀ ಬೆರಗುಸುದ್ದಿಯನು' ಡಿವಿಜಿಯವರ ಅನುವಾದ ಚೆನ್ನಾಗಿದೆ. ಮೂಲದ ಭಾವನೆ ಅನುವಾದದಲ್ಲೂ ಹೊಮ್ಮಿದೆ. 'ನಿಮಗೆ ಈ ವಿಷಯ ಹ್ಯಾಗೆ ಗೊತ್ತಾಯಿತು ಹೇಳಿ' ಗೌಡರ ಮಾತು ತೀರಾ ನೇರವಾಯಿತು. ಕನ್ನಡಕ್ಕಿಲ್ಲದ ಪ್ರಯೋಗ. ಡಿವಿಜಿಯವರ ಮಾತಿನಲ್ಲಿ ಹಾಸ್ಯ ಬಂದಿದೆ, ಇದು ಷೇಕ್ಸ್‌ಪಿಯರನಲ್ಲಿಲ್ಲ. ಸ್ವಲ್ಪ ಸೃಜನಾತ್ಮಕತೆ ಇದೆ.

ಮೂಲದ 'ಬ್ಲಾಸ್ಟೆಡ್ ಹೀತ್' ಮೂವರಲ್ಲೂ ಚೆನ್ನಾಗಿ ಬಂದಿದೆ. ಅದರಲ್ಲೂ ಗೌಡರು 'ಬೆಂಗಾಡಿನಲ್ಲಿ' ಪ್ರಯೋಗ ಬಹಳ ಚೆನ್ನಾಗಿದೆ.

'ಪ್ರಾಫೆಟಿಕ್ ಗ್ರೀಟಿಂಗ್'ಗೆ ಡಿವಿಜಿಯವರ 'ಭವಿಷ್ಯ ಕಥೆಯಿಂ' ತೀರಾ ಶಾಬ್ದಿಕವಾಯ್ತು. ಗೌಡರಲ್ಲಿ ಇದು 'ಅದ್ಭುತವಾರ್ತೆ'ಯಾಗಿದೆ, ಚೆನ್ನಾಗಿದೆ. ರಾಮಚಂದ್ರದೇವರಲ್ಲಿ 'ವಿಚಿತ್ರ ವಿಷಯ' ವಾಗಿದೆ.

ಮೂಲದಲ್ಲಿ 'ಐ ಚಾರ್ಜ್' ಎಂಬ ಪ್ರಯೋಗವಿದೆ. ಇದಕ್ಕೆ 'ಆರ್ಡರ್' ಆಜ್ಞೆ ಎಂಬರ್ಥ ಕಲ್ಪಿಸಿದ್ದಾನೆ, ಷೇಕ್ಸ್‌ಪಿಯರ್. ಇದು ರಾಮಚಂದ್ರದೇವರಲ್ಲಿ ಮಾತ್ರಬಂದಿದೆ. ಗೌಡರು ಬಿಟ್ಟಿದ್ದಾರೆ. ಡಿವಿಜಿ 'ಬೆಸಸುವೆನ್' ಎಂದಿದ್ದಾರೆ, ಅಷ್ಟು ಸರಿ ಅಲ್ಲ. ಡಿವಿಜಿಯವರ ಹಳಗನ್ನಡ ತೀರಾ ಅಸ್ವಾಭಾವಿಕ.

'ನಿನ್ನ ಮಕ್ಕಳು ದೊರೆಗಳಾಹರೆಂದು ... ಮಾತನಿತ್ತಿಹರು' ಡಿವಿಜಿಯವರ ಅನುವಾದ ಚೆನ್ನಾಗಿದ್ದರೂ ಬಹಳ ಉದ್ದವಾಕ್ಯ. ಈ ಹಂತದಲ್ಲಿ ಮೂಲದ 'ಟೆಂಪ್ಟೇಷನ್' ಸ್ಪಷ್ಟವಾಗಿಲ್ಲ. ಮ್ಯಾಕ್‌ಬೆತ್‌ನ ದೌರ್ಬಲ್ಯಗಳನ್ನು ತಿಳಿಸಲೇ ಬ್ಯಾಂಕೊ ಪಾತ್ರದ ಸೃಷ್ಟಿಯಾಗಿದೆ. ಈ ಕಲ್ಪನೆ ಅನುವಾದಕರಲ್ಲಿಲ್ಲ.

'ಅಂಧತಮಸಿನ ದೂತರ್...ವಂಚಿಪರು' ಬಹಳ ಉದ್ದವಾದ ವಾಕ್ಯ ಎಂಬುದೊಂದನ್ನು ಬಿಟ್ಟರೆ ಡಿವಿಜಿಯವರ ಅನುವಾದ ಬಹಳ ಚೆನ್ನಾಗಿದೆ.

'ಭವಿಷ್ಯಕಾಲ ತಿಳಿದವರಂತೆ ನಟಿಸಿ' ಗೌಡರ ಈ ಮಾತಿಗೆ ಮೂಲದಲ್ಲಿ ಯಾವುದೇ ಆಧಾರ ವಿಲ್ಲ. 'ಅಗಾಧವಾದ ಗುಂಡಿಯಲ್ಲಿ ತಳ್ಳಿರುವರು' ಗೌಡರು ಬಹಳ ಸ್ವಾತಂತ್ರ್ಯವಹಿಸಿದ್ದಾರೆ.

ಷೇಕ್ಸ್‌ಪಿಯರನಂತೆ ಇಂಗ್ಲೀಷನ್ನು ಬಳಸಲೂ ಯಾರಿಂದಲೂ ಆಗದು. ಶಬ್ದಗಳನ್ನು ಹಿಂಜಿ ಹಿಂಜಿ ಅರ್ಥದ ಪದಗಳನ್ನು ಬಿಚ್ಚುತ್ತಾನೆ.

'ದಿಸ್ ಸೂಪರ್ ನ್ಯಾಚುರಲ್...ಗುಡ್' ವಾಕ್ಯವನ್ನು ಡಿವಿಜಿಯವರು 'ಅಮಾನುಷಾತೀತ ದಾಶಂಸನಂ ನೋಡೆ...ಎಂದು ಅನುವಾದಿಸಿದ್ದಾರೆ. ಸಣ್ಣ ವಾಕ್ಯಗಳಿರಬೇಕಿತ್ತು.

ಈ ಹಂತದಲ್ಲಿ ಗೌಡರ ಅನುವಾದ ಚೆನ್ನಾಗಿದೆ. ಷೇಕ್ಸ್‌ಪಿಯರ್ ಇಲ್ಲಿ ಸಮಾಂತರರೂಪಕವನ್ನು ಬಳಸಿದ್ದಾನೆ. 'ಎನ್ನೆದೆಯೊಳ್ಮೊಳೆತಿಹ ಕೊಲೆವಧಿಪುದೆನ್ನ'...ಗೌಡರೂ ಕೂಡ ಸಮಾಂತರ ವೃತ್ತಿಯ ಮೂಲಕ ಷೇಕ್ಸ್‌ಪಿಯರನ ಕಾವ್ಯದ ಮುಖವನ್ನು ಅಭಿವ್ಯಕ್ತಿಗೊಳಿಸಿದ್ದಾರೆ.

'ಮನಸೋಲ್ಪಿನಾ ಘೀಕರ ಪ್ರೇರಣೆಗೆ' ಡಿವಿಜಿಯವರಲ್ಲಿ ಕೊಲೆಯ ವಿಚಾರ ಆಗಲೇ ಬಂದುಬಿಟ್ಟಿದೆ. ಮ್ಯಾಕಬೆತನಿಗೆ ಕೊಲೆಯ ವಿಚಾರ ಈಗಾಗಲೇ ಹೊಳೆದುಬಿಟ್ಟಿದೆ ಎಂಬುದನ್ನು ಬಹಳ ಬೇಗ ತಂದಿದ್ದಾರೆ. ಷೇಕ್ಸ್‌ಪಿಯರನಲ್ಲಿ ಇಷ್ಟು ನೇರವಾಗಿಲ್ಲ

'ಕಲ್ಪನೆಯ ಘೋರದಿಂ ವಾಸ್ತವ ಭಯ ಕಿರಿದು' ಡಿವಿಜಿಯವರ ಈ ಮಾತು ಷೇಕ್ಸ್‌ಪಿಯರನ ಮಾತಿನಷ್ಟೇ ಚೆನ್ನಾಗಿದೆ. ಗೌಡರಲ್ಲಿ ಈ ಬಗ್ಗೆ ಏನೂ ಬಂದಿಲ್ಲ 'ಹತ್ಯೆಯುನ್ನುಂ ಭಾವಮಾತ್ರದೊಳೆ' ಡಿವಿಜಿಯವರ ಅನುವಾದ ಸ್ವಾಭಾವಿಕವಾಗಿದೆ. ಶ್ರೀಕಂಠೇಶಗೌಡರು ಇದನ್ನೆಲ್ಲಾ ನುಂಗಿಬಿಟ್ಟಿದ್ದಾರೆ. ಆದರೂ ಈ ಹಂತದಲ್ಲಿ ಡಿವಿಜಿ ಷೇಕ್ಸ್‌ಪಿಯರನನ್ನು ಅನುಸರಿಸುವ ರೀತಿ ಸರಿ ಅಲ್ಲ.

'ನೋಡಿ ನಮ್ಮ ಗೆಳೆಯನು ಹೇಗೆ ಪರವಶನಾಗಿರುವನು' ಗೌಡರ ಈ ಮಾತು ಸಹಜವಾಗಿದೆ. ಇದಕ್ಕೆ ಡಿವಿಜಿ 'ಮಗ್ನನಿರ್ಹ' ಎಂದಿದ್ದಾರೆ.

'ಸ್ಟ್ರೇಂಜ್ ಗಾರ್ಮೆಂಟ್ಸ್' ಗೌಡರಲ್ಲಿ ವಿಜಾತಿಯ ಉಡುಪುಗಳಾಗಿವೆ ಸರಿ. ಡಿವಿಜಿಯವರಲ್ಲಿ 'ಪೊಸವಸನ್' ಆಗಿದೆ ರಾಮಚಂದ್ರದೇವರಲ್ಲಿ ಹೊಸ ಬಟ್ಟೆಗಳಾಗಿವೆ.

ನಾಲ್ಕನೇ ದೃಶ್ಯದ ಆರಂಭಕ್ಕೆ ಬರುವ ಅರಮನೆಯ ಒಂದು ಕೊಠಡಿ, ಗೌಡರ ಅನುವಾದದಲ್ಲಿ 'ಪಾಳೆಯ ಸಭೆ' ಆಗಿಬಿಟ್ಟಿದೆ. ಡಿವಿಜಿ ಹಾಗೂ ರಾಮಚಂದ್ರದೇವರು ಹಾಗೆ ಉಳಿಸಿಕೊಂಡಿದ್ದಾರೆ. ಗೌಡರ ಕೈಗೆ ಸಿಕ್ಕಿ ಡಂಕನ್ ದೊರೆ ವಿಜಯ ಧ್ವಜನಾಗಿಬಿಟ್ಟಿದ್ದಾನೆ. ಮಾಲ್ಕಂ—ಪ್ರತಾಪ ರುದ್ರದೇವ, ಡೊನಾಲ್ಬೈನ್—ಪ್ರತಾಪಸಿಂಹರಾಗಿದ್ದಾರೆ. ಕಾಡಾರನನ್ನು 'ಬರ್ಭರ' ನನ್ನಾಗಿಸಿದ್ದಾರೆ. ರಾಮಚಂದ್ರದೇವ ಹಾಗೂ ಡಿವಿಜಿ ಪಾತ್ರಗಳನ್ನು ಹಾಗೇ ಉಳಿಸಿಕೊಂಡಿದ್ದಾರೆ. ಕಾಡಾರನನ್ನು ವಧಿಸಲು ನಿಯಮಿತರಾದ ಜನರನ್ನು ರಾಮಚಂದ್ರದೇವರು ವರದಿಗಾರರೆಂದಿದ್ದಾರೆ. ಒಂದು ವೇಳೆ ಅವರು ಮಾಡಿದ ಕೊಲೆಯ ಬಗ್ಗೆ ರಾಜನಿಗೆ ವರದಿಮಾಡುವ ಬೇರೆ ವ್ಯಕ್ತಿಗಳೆಂದುಕೊಂಡರೂ ಷೇಕ್ಸ್‌ಪಿಯರನಲ್ಲಿ ಆ ಕಲ್ಪನೆಯಲ್ಲಿ 'ಇಂದು ಕಾಡಾರನನ್ನು ಗಲ್ಲಿಗೇರಿಸುವ ದಿವಸ' ಎಂದು ತಮಗೆ ತೋಚಿದಂತೆ ಅನುವಾದಿಸಿದ್ದಾರೆ ಗೌಡರು. ಈ ಹಂತದಲ್ಲಿ 'ದ್ರೋಹಿ' ಎಂಬ ಪದಬಳಸಿದ್ದಾರೆ. ಚೆನ್ನಾಗಿಯೇ ಇದೆ. ಡಿವಿಜಿಯವರ ಅನುವಾದ ಯಥಾರ್ಥವಾಗಿದೆ.

'ಆ ಕೊಲೆಯನ್ನು ನೋಡಿದವನೊಬ್ಬನೊಡನೆ ನಾನು ಮಾತಾಡಿದ್ದೇನೆ' ಎಂದು ಹೇಳುವ ಬದಲು ರಾಮಚಂದ್ರದೇವರು 'ನೋಡಿದವನೊಬ್ಬ ಹೇಳುತ್ತಿದ್ದ' ಎಂದಿದ್ದಾರೆ. 'ಯಾರಿಗೆ'? ಎಂಬ ಪ್ರಶ್ನೆ ಏಳುತ್ತದೆ. ಗೌಡರ ಮತ್ತು ಡಿವಿಜಿಯವರ ಅನುವಾದದಲ್ಲೂ ಮೂಲದ ಆಶಯ ಬಂದಿದೆ. ಈ ಹಂತದಲ್ಲಿ ಗೌಡರು 'ಎಕ್ಸಿಕ್ಯೂಷನ್' ಗೆ 'ಶೂಲದಂಡನೆ' ಎಂದಿದ್ದಾರೆ. ಈ ಪದದಲ್ಲಿ ಭಾರತೀಯತೆ ಎದ್ದು ಕಾಣುತ್ತದೆ. ಡಿವಿಜಿಯವರ 'ದಂಡಿಸು' ಪ್ರಯೋಗ ಸರಿಕಾಣದು. 'ದಂಡಿಸುವುದು' 'ಶಿಕ್ಷಿಸುವುದು' ಎರಡೂ ಒಂದೇ ಇಲ್ಲಿ ಬರೀ ದೇಹದಂಡನೆ ಅಲ್ಲ ಶಿರಚ್ಛೇಧನದ ಅರ್ಥ ಬರಬೇಕು. 'ಆರ್ಸ್ ಒನ್ ದಟ್ ಹ್ಯಾಡ್ ಬೀನ್ ಸ್ಟಡೀಡ್' ಎಂಬುದಕ್ಕೆ ರಾಮಚಂದ್ರ

ದೇವರು 'ಹುಟ್ಟಿದವನಿಗೆ ಸಾವು ಕಟ್ಟಿಟ್ಟದ್ದು ಎಂಬುದನ್ನು ತಿಳಿದವನಂತೆ' ಎಂಬ ತಾತ್ವಿಕ ಅರ್ಥ ಹುಡುಕಿದ್ದಾರೆ. ಇಲ್ಲಿ ಒಬ್ಬ ರಂಗನಟ ನಟನೆಯ ಅಭ್ಯಾಸಮಾಡುವಂತೆ ಅವನು ಸಾಯುವ ಅಭ್ಯಾಸ ಮಾಡಿಕೊಂಡಿದ್ದ ಎಂಬ ಅರ್ಥ ಬರಬೇಕು. ಗೌಡರಲ್ಲಿ ಈ ಅರ್ಥ ಛಾಯೆ ಇದೆ. ಡಿವಿಜಿಯವರಲ್ಲಿ ಇದೇ ಅರ್ಥದ 'ಕಲಿಕೆ'ಯ ಪ್ರಯೋಗವಾಗಿದೆ.

ರಾಮಚಂದ್ರದೇವರ 'ಬದುಕನ್ನು ಎಸೆದು ಸತ್ತ' ಪ್ರಯೋಗ ಬಹಳ ಚೆನ್ನಾಗಿದೆ. ಡಿವಿಜಿಯವರು 'ಬೆಲೆಯಿರದ ತೃಣವೆಂದು' ಎಂದಿರುವುದು ತೀರಾ ಶಾಬ್ದಿಕವಾಯ್ತು. ಗೌಡರಲ್ಲೂ ಈ 'ತೃಣ' ಬಂದಿದೆ. ಬೆಲೆಯಿಲ್ಲದ್ದೆಲ್ಲ ಹುಲ್ಲಲ್ಲ. ಇಲ್ಲಿ 'ಅರ್ಥಹೀನತೆ' ಬರಬೇಕಷ್ಟೆ.

'ದೇರ್ ಈಸ್ ನೋ ಆರ್ಟ್ ಟು ಫೈಂಡ್ ದ್ಮೈಂಡ್ಸ್ ಕನ್‌ಸ್ಟ್ರಕ್ಷನ್ ಇನ್ ದಿ ಫೇಸ್' ಡಂಕನನ ಈ ಹೇಳಿಕೆಯಲ್ಲಿ ಒಂದು 'ಧ್ವನಿ' ಇದೆ ಈ ಧ್ವನಿ ಮೂವರ ಅನುವಾದದಲ್ಲೂ ಬಂದಿದೆ.

'ಸ್ಟಾರ್ಸ್, ಹೈಡ್ ಯುವರ್ ಫೈರ್ಸ್'ಎಂಬುದನ್ನು ಡಿವಿಜಿ 'ನಕ್ಷತ್ರಗಳಿರ ಬಚ್ಚಿಡಿರಿ ನಿಮ್ಮುರಿಗಳನ್ನು' ಎಂದಿದ್ದಾರೆ ಚೆನ್ನಾಗಿದೆ. ನಕ್ಷತ್ರಗಳೇ ನಿಮ್ಮ ಬೆಳಕನ್ನು ಅಡಗಿಸಿ ಎಂದಿದ್ದಾರೆ ರಾಮಚಂದ್ರ ದೇವರು. ಗೌಡರು ನಕ್ಷತ್ರಗಳನ್ನು 'ಕ್ಷಯಿಸಿರಿ' ಎಂದಿದ್ದಾರೆ. ಇಲ್ಲಿ ನಕ್ಷತ್ರಗಳು ತಮ್ಮ ಬೆಳಕನ್ನು ಅಡಗಿಸಬೇಕಷ್ಟೆ.

ಈ ಹಂತದಲ್ಲಿ ಗೌಡರ– 'ನೋಡಿದಿರಿ ನೀವ್ ಪಕ್ಷವ ತೆರೆದೀಗ ತಕ್ಷಕ ಸದೃಶ ಕರವಂ' ಎಂದಿದ್ದಾರೆ. ಬಹಳ ಪ್ರಾತಿನಿಧಿಕ ಅನುವಾದವಿದು. ತಕ್ಷಕ ಬಹಳ ಉಪಯುಕ್ತವಾದ ಪದ.

ಐದನೆಯ ದೃಶ್ಯದಲ್ಲಿ ಲೇಡಿ ಮ್ಯಾಕ್‌ಬೆತ್ ಮೊದಲ ಬಾರಿಗೆ ಬರುತ್ತಾಳೆ. ಷೇಕ್ಸ್‌ಪಿಯರನ ಸ್ವಗತ ಭಾಷಣ ಬಹಳ ಪ್ರಸಿದ್ಧವಾದವು. ಹ್ಯಾಮ್ಲೆಟ್‌ನಲ್ಲಂತೂ ಇವು ತುಂಬಿವೆ. ಅನುವಾದಗಳಲ್ಲಿ ಆ ಪ್ರಭಾವ ತರುವುದು ಕಷ್ಟ. ಲೇಡಿ ಮ್ಯಾಕ್‌ಬೆತ್ ಗೌಡರ ಅನುವಾದದಲ್ಲಿ ಚಂದ್ರವಲ್ಲಿಯಾಗಿದ್ದಾಳೆ. ಇವಳ ಸ್ವಗತ ಭಾಷಣ ಬಹಳ ಪ್ರಸಿದ್ಧವಾದುದು.

'ಯೆಟ್ ಡೂ ಐ ಫಿಯರ್ ದೈ ನೇಚರ್' ನ್ನು ಡಿವಿಜಿ ನಿನ್ನ ಸ್ವಭಾವ ವಳುಕಿಪುದೆನ್ನನ್ ಎಂದಿದ್ದಾರೆ. ಇಲ್ಲಿ 'ಅಳುಕು' ಬಹಳ ಪ್ರಾಸಂಗಿಕವಾಗಿದೆ. ಇದಕ್ಕೆ ರಾಮಚಂದ್ರದೇವರು 'ಭಯ ಹುಟ್ಟಿಸುತ್ತದೆ ಎಂದಿದ್ದಾರೆ. ಸರಿ ಅಲ್ಲ. ಭಯ ಬೇರೆ 'ಅಳುಕು' ಬೇರೆ. ಗೌಡರಿಗೆ 'ಅನುಮಾನ' ವಾಗಿದೆ, ಸರಿ ಇದೆ.

'ದಿ ಮಿಲ್ಕ್ ಆಫ್ ಹ್ಯೂಮನ್ ಕೈಂಡ್‌ನೆಸ್'...ವಾಕ್ಯವನ್ನು ಡಿವಿಜಿ ಸೀಳಿ ಎರಡು ವಾಕ್ಯ ಮಾಡಿದ್ದಾರೆ. ಯಶಸ್ಸು ಸಾಧಿಸಿದ್ದಾರೆ. ಗೌಡರು ಒಂದೇ ವಾಕ್ಯದ ಸ್ವಾಭಾವಿಕ ರಚನೆಯಿಂದ ಯಶಸ್ವಿಯಾಗಿದ್ದಾರೆ. ರಾಮಚಂದ್ರದೇವರಲ್ಲಿ ವಾಕ್ಯ ವಿಧಾನ ಬದಲಾಗಿದೆ.

'ಇಲ್‌ನೆಸ್'ಗೆ 'ಕೆಡುಕುತನ' ಬಹಳ ಒಳ್ಳೆಯ ಪ್ರಯೋಗ. ಇದಕ್ಕೆ ರಾಮಚಂದ್ರದೇವರು' ಖಾಯಿಲೆ ಎಂದಿದ್ದಾರೆ, ಬಹಳ ಅಭಾಸ.

ಮುಂದಿನ ವಾಕ್ಯದಲ್ಲಿ ರಾಮಚಂದ್ರದೇವರು ಷೇಕ್ಸ್‌ಪಿಯರನ ಅರ್ಥವನ್ನು ಬದಲಿಸಿದ್ದಾರೆ. ಇಲ್ಲಿ ಅವರು 'ಷುಡ್' 'ವುಡ್' ಪದಗಳಿಗೆ ಷೇಕ್ಸ್‌ಪಿಯರ್ ಕಾಲದಲ್ಲಿ ಅರ್ಥ ಅರಿಯದಿರುವುದು,

ಅಪಾರ್ಥ ಕಲ್ಪನೆಗೆ ಅವಕಾಶವಾಗಿದೆ. ಗೌಡರು ಈ ಹಂತದಲ್ಲಿ ಮಾನಸಿಕ ದೌರ್ಬಲ್ಯಗಳನ್ನೇ ಅನುವಾದಿಸಿಲ್ಲ. ಮ್ಯಾಕ್‌ಬೆತ್ ಕೇವಲ ಮಹತ್ವಾಕಾಂಕ್ಷಿ, ಆದರೆ ಅದಕ್ಕೆ ತೆರಬೇಕಾದ ಬೆಲೆಯನ್ನು ತೆರಲೊಲ್ಲ. ಹೆದರುತ್ತಾನೆ, ಎಂಬ ಮಾತು ಗೌಡರ ಅನುವಾದದಲ್ಲಿ ಬರುವುದೇ ಇಲ್ಲ. ಅದಕ್ಕೆ ಬದಲಾಗಿ 'ತಡಂಮಾಳ್ಪಧರ್ಮಂ' ಎಂಬ ಮಾತು ಸೇರಿಸಿದ್ದಾರೆ. ಏಕೆಂದರೆ ಗೌಡರ ಅನುವಾದಿತ ಕೃತಿಯಲ್ಲಿ ಮ್ಯಾಕ್‌ಬೆತ್ ನಾಯಕನೇ ಅಲ್ಲ, ಮಾಲ್ಕಂ (ಪ್ರತಾಪರುದ್ರದೇವ) ನಾಯಕ.

'ತೀವ್ರದಿಂದಾಶಿಪುದ ಶುದ್ಧಿಯಿಂದಾಶಿಸುವೆ' ಎಂಬಲ್ಲಿ ಡಿವಿಜಿ ಷೇಕ್ಸ್‌ಪಿಯರನಿಗಿಂತ ಹೆಚ್ಚಿಗೆ ಬೆಳೆದಿದ್ದಾರೆ. ಆದರೆ 'ಉಚಿತ' ಪ್ರಯೋಗ ಸರಿ ಅಲ್ಲ. 'ತೀವ್ರ' ಎಂಬ ಪದ 'ಹೈಲಿ'ಗೆ ಬಹಳ ಹತ್ತಿರವಾಗಿದೆ. ಯಶಸ್ಸು ಸಿಕ್ಕಿದೆ. ರಾಮಚಂದ್ರದೇವರು ದ್ವಂದ್ವವನ್ನೇ ತರದೆ ಸರಳವಾಗಿ ಹೇಳಿಬಿಟ್ಟಿದ್ದಾರೆ. 'ಸುಳ್ಳಾಟಗಳನ್ನು ಆಡಬಾರದು, ಆದರೂ ಗೆಲ್ಲಬೇಕು' ಎಂದಿದ್ದಾರೆ ರಾಮಚಂದ್ರ ದೇವರು, ಬಹಳ ಚೆನ್ನಾಗಿದೆ.

'ಹಿಪ್ ದೀ ಹಿದರ್' ಅನ್ನು ಡಿವಿಜಿ 'ಬೇಗ ಬಾರಿತ್ತಾ' ಎಂದಿದ್ದಾರೆ ಸರಿ ಇದೆ. ರಾಮ ಚಂದ್ರದೇವರು 'ಆಗ' ಎಂದಿದ್ದಾರೆ ತಪ್ಪು. 'ಗೋಲ್ಡನ್ ರೌಂಡ್'ಗೆ ಡಿವಿಜಿಯವರು 'ಕನಕ ವಲಯ' ಎಂದಿದ್ದಾರೆ ಬಹಳ ಚೆನ್ನಾಗಿದೆ. ಇದನ್ನು ರಾಮಚಂದ್ರದೇವರು 'ಸಿಂಹಾಸನ' ಎಂದಿರು ಪುದು ಸರಿ ಅಲ್ಲ. 'ಸಿಂಹಾಸನ'ದ ಕಲ್ಪನೆಯೇ ಮೂಲದಲ್ಲಿಲ್ಲ. ಗೌಡರ ಅನುವಾದದಲ್ಲಿ ಇದೆಲ್ಲಾ ಬಿಟ್ಟು ಹೋಗಿದೆ.'

ಅನಂತರದ, ಲೇಡಿ ಮ್ಯಾಕ್‌ಬೆತ್‌ಳ, ಸ್ವಗತದಲ್ಲಿ ರೌದ್ರತೆ ಇದೆ. ಡಿವಿಜಿ, ಹಾಗೂ ರಾಮ ಚಂದ್ರದೇವರಲ್ಲಿ ಅದೇ ರೌದ್ರತೆ ಇದೆ. ಗೌಡರು ಸ್ವಾತಂತ್ರ್ಯ ವಹಿಸಿ ಒಂದು ರಗಳೆ ಹಾಕಿ ಬಿಟ್ಟಿ ದ್ದಾರೆ. ಅವರಲ್ಲಿ ಮೂಲದ ರೌದ್ರತೆ ಎದ್ದು ಕಾಣುತ್ತದೆ. ಡಿವಿಜಿ ಹಾಗೂ ರಾಮಚಂದ್ರ ದೇವರು 'ಕೋಕ್ಸ್'ಗೆ 'ಕಾಗೆ' 'ಗೂಗೆ' ಗಳೆಂಬ ಪದಗಳನ್ನು ರೂಪಕಾರ್ಥದಲ್ಲಿ ಬಳಸಿದ್ದಾರೆ. ಆದರೆ ಈ ಅಪಶಕುನ ಅರ್ಥಛಾಯೆ ಗೌಡರ ಅನುವಾದದಲ್ಲಿಲ್ಲ. 'ಓ! ನೆವರ್ ಷಲ್ ಸನ್ ದಟ್ ಮಾರೋ ಸೀ' ಎಂಬುದನ್ನು ಓ! ಸೂರ್ಯ ಆ ನಾಳೆಯನ್ನು ಎಂದೂ ನೋಡುವುದಿಲ್ಲ! ಎಂದಿ ದ್ದಾರೆ ರಾಮಚಂದ್ರದೇವರು. ಡಿವಿಜಿ, 'ಓ ಸೂರ್ಯ ಆ ನಾಳೆಯಂ ಕಾಣದಿರಲೆಂದುಮ್' ಎಂದಿ ದ್ದಾರೆ. ಯಥಾರ್ಥವಾಗಿದೆ. ಮೂಲದ ಭಾವನೆ ಇಲ್ಲೂ ಬಂದಿದೆ. ಗೌಡರು, 'ನಾಳೆಯೋ ಹಾಗಾವರಾಗದು' ಎಂದು ಬಿಟ್ಟಿದ್ದಾರೆ. 'ಏನಾಗಬೇಕಿತ್ತೊ' ಗೊತ್ತಿಲ್ಲ. ನಾಳೆ ಎಂಬಲ್ಲಿ 'ಧ್ವನಿ' ಇದೆ, ಅದನ್ನು ಗೌಡರು ಗ್ರಹಿಸಲಿಲ್ಲ.

ಲೇಡಿ ಮ್ಯಾಕ್‌ಬೆತ್ ಡಂಕನನನ್ನು ಕೊಲ್ಲುವಂತೆ ಮ್ಯಾಕ್‌ಬೆತ್‌ನನ್ನು ಹುರಿದುಂಬಿಸುವ ದೃಶ್ಯ: ಮೂವರ ಅನುವಾದದಲ್ಲೂ ಹೆಚ್ಚು ಕಡಿಮೆ ಚೆನ್ನಾಗಿ ಬಂದಿದೆ. ಗೌಡರು ಮಾತ್ರ ಎರಡೇ ಕಂದ ಪದ್ಯಗಳಲ್ಲಿ ಎಲ್ಲವನ್ನು ಹೇಳಿ ಮುಗಿಸಿದ್ದಾರೆ.

ಆರನೆಯ ದೃಶ್ಯದಲ್ಲಿ, 'ಇನ್ವರ್‌ನೆಸ್' 'ವಲ್ಲಭಪುರಿ' ಆಗಿದೆ ಗೌಡರ ಅನುವಾದದಲ್ಲಿ. ಭಾರತೀಯ ಹೆಸರುಗಳನ್ನು ಆಯ್ದುಕೊಳ್ಳುವ ಇವರ ಸೂಕ್ಷ್ಮ ಪ್ರಜ್ಞೆಯನ್ನು ನಿಜಕ್ಕೂ ಮೆಚ್ಚ ಬೇಕು. ಆರಂಭದಲ್ಲಿ ಮೂವರ ಅನುವಾದಗಳೂ ಚೆನ್ನಾಗಿವೆ. 'ಜೆಂಟ್ಲ್ ಸೆನ್ಸಸ್' ಡಿವಿಜಿ

ಯವರಿಗೆ 'ಸರಳೇಂದ್ರಿಯ' ಗಳಾಗಿದ್ದರೆ ಉಳಿದಿಬ್ಬರಿಗೆ 'ಅಂಗಾಂಗ' 'ಇಂದ್ರಿಯ' ಗಳಾಗಿವೆ. 'ಮಾರ್ಟೇಯಿಟ್' ಅನ್ನು ಗೌಡರು 'ಗೀಜಗ' ಎಂದಿದ್ದಾರೆ ಅರ್ಥಪೂರ್ಣವಾಗಿದೆ. ಆದರೆ ಡಿವಿಜಿ ಯವರ ಗುಬ್ಬಿ, ರಾಮಚಂದ್ರದೇವರ 'ಗುಬ್ಬಚ್ಚಿ' ಸರಿ ಅಲ್ಲ. 'ಪೆಂಡಂಟ್ ಬೆಡ್' ಅನ್ನು ಗೌಡರು 'ಉಯ್ಯಾಲೆ' ಎಂದಿದ್ದಾರೆ. ಸಮಂಜಸವಾಗಿದೆ. ಡಿವಿಜಿ 'ತೂಗುಮಂಚ' ಎಂದಿದ್ದಾರೆ ತೀರ ತಾರ್ಕಿಕವಾಯ್ತು. ಆದರೂ ತಪ್ಪೇನಿಲ್ಲ. ರಾಮಚಂದ್ರದೇವರಲ್ಲಿ ಈ ಕಲ್ಪನೆಯೇ ಇಲ್ಲ.

'ಆನರ್ಡ್ ಹೋಸ್ಟೆಸ್' ಅನ್ನು ಡಿವಿಜಿಯವರು 'ಸನ್ಮಾನ್ಯಳಾದಾತಿಥೇಯಳು' ಎಂದಿದ್ದಾರೆ ಚೆನ್ನಾಗಿದೆ. ರಾಮಚಂದ್ರದೇವರು ಬರೀ 'ಅತಿಥಿ' ಎಂದಿದ್ದಾರೆ ತಪ್ಪು. ಇಲ್ಲಿ ಡಂಕನ್ ಅತಿಥಿ. ಲೇಡಿ ಮ್ಯಾಕ್‌ಬೆತ್ ಅವನಿಗೆ ಆತಿಥ್ಯ ನೀಡುತ್ತಿದ್ದಾಳೆ. ಈ ಕಲ್ಪನೆ ರಾಮಚಂದ್ರದೇವರಲ್ಲಿ ಬಂದಿಲ್ಲ. ಗೌಡರು 'ಈ ಪೂಜ್ಯಳು' ಎಂದಿದ್ದಾರೆ ಸರಿ ಅಲ್ಲ. ಒಬ್ಬ ಸಾಮಂತರಾಜನ ಹೆಂಡತಿಯ ಬಗ್ಗೆ ಮಹಾರಾಜ (ಡಂಕನ್) ನಿಗೆ ಪೂಜ್ಯಭಾವನೆ ಬರಲು ಸಾಧ್ಯವೇ ? ಸಾಧುವೆ? ಗೌಡರ ಈ ಪೂಜ್ಯ ಭಾವನೆ ನಡೆಯದು. ಡಂಕನ್‌ಗೆ ಅವಳು ಗೌರವಸ್ಥಳಾದ ಅತಿಥೇಯಳು. ಅವನಿಗೆ ಎಲ್ಲಿಲ್ಲದ ಆದರ-ಸತ್ಕಾರಗಳನ್ನು ಮಾಡಿ, ಕೊನೆಗೆ ಅವನ ಜೀವಕ್ಕೆ ಕುತ್ತು ತರುವ ಮಹಾ ಠಕ್ಕುಗಾತಿ ಅವಳೆಂಬ ವ್ಯಂಗ್ಯಾರ್ಥ ಷೇಕ್ಸ್‌ಪಿಯರನ ಮಾತಿನಲ್ಲಿದೆ. ಇದು ಯಾರ ಅನುವಾದದಲ್ಲೂ ಬಂದಿಲ್ಲ.

'ನಾಂ ಕುಡುವ ಶ್ರಮಕ್ಕಾಗಿ ನೀಂ ದೇವರನ್ನು ನಮ್ಮ ಪೊರೆವಂತೆ ಬೇಡುವುದು' (ಡಂಕನ್) ಡಿವಿಜಿಯವರ ಈ ಮಾತಿನಲ್ಲಿ ಯಥಾರ್ಥತೆ ಇದೆ. ಮೂಲದ ಆಶಯ ಮೂಡಿ ಬಂದಿದೆ. ರಾಮ ಚಂದ್ರದೇವರಲ್ಲಿ 'ತನ್ನನ್ನು ಪೊರೆವಂತೆ ತಾನೇ ಪ್ರಾರ್ಥಿಸುತ್ತೇನೆ' ಎನ್ನುತ್ತಾನೆ (ಡಂಕನ್). ಯಾರಿ ಗಾಗಿ ಯಾರು ಪ್ರಾರ್ಥಿಸಬೇಕೆಂಬುದೇ ಸ್ಪಷ್ಟವಾಗಿರದ ಈ ಮಾತಿನಿಂದ ಏನು ಪ್ರಯೋಜನ? ಗೌಡ ರಲ್ಲಿ ಈ ಕಲ್ಪನೆಯೇ ಇಲ್ಲ. ಮೂಲದಲ್ಲಿಲ್ಲದ 'ತಂಗಿ' ಪ್ರಯೋಗ ಮಾಡಿದ್ದಾರೆ. ಡಂಕನ್‌ರಾಜ ಅವಳನ್ನು 'ತಂಗಿ' ಎಂದು ಕರೆಯುವ ಔಚಿತ್ಯವಾದರೂ ಏನು? ಮುಂದಿನ ಘಟನೆಗಳನ್ನು ಗಮನಿಸಿ ದಾಗ ಇದು ತೀರಾ ಅಸಮಂಜಸ ಎನ್ನಿಸುತ್ತದೆ. ಇವೆ, 'ತಂಗಿ' ತಂಗಿಯೆಂದು ಕರೆದ 'ಅಣ್ಣ'ನ ಕೊಲೆ ಮಾಡಿಸುತ್ತಾಳೆ. ಪದ ಪ್ರಯೋಗ ಘಟನೆಗಳ ಸಂಬಂಧ್ಧತೆಯನ್ನು ಅನುಸರಿಸಬೇಕು.

'ವಿ ರೆಸ್ಟ್ ಯುವರ್ ಹರ್ಮಿಡ್ಸ್' ನಿಮ್ಮ ಹಿತವನಂ ಬೇಡಿ ಜಪಿಗಳಾಗುವೆವು' ಡಿವಿಜಿ ಯವರ ಈ ಮಾತು ಮೂಲಕ್ಕೆ ಬಹಳ ಹತ್ತಿರವಾಗಿದೆ. 'ನೋಬಲ್ ಹೋಸ್ಟೆಸ್' ಗೌಡರಲ್ಲಿ 'ಎಲೌ ಮಂಗಳಾಂಗಿ' ಆಗಿದೆ. ಡಿವಿಜಿಯವರಲ್ಲಿ 'ಅತಿಥೇಯಳೆ' ಎಂದಾಗಿದೆ, ಸರಿ ಇದೆ. ರಾಮ ಚಂದ್ರದೇವರು 'ಆತಿಥ್ಯಕ್ಕೆ ಹೆಸರಾದ ರಾಣಿ' ಎಂದಿದ್ದಾರೆ. ತೀರಾ ನೇರವಾಯಿತು. ಆದರೂ ಮೇಲೆ ಬಾರದ 'ಆತಿಥ್ಯ'ದ ಕಲ್ಪನೆ ಇಲ್ಲಿ ಬಂದಿದೆ ಎಂಬುದು ಸಮಾಧಾನದ ಅಂಶ.

ರಾಮಚಂದ್ರದೇವರ 'ನಮ್ಮನ್ನೂ, ನಮ್ಮವನ್ನೂ' ಎಂಬುದು ಅಪಾರ್ಥಕ್ಕೆ ಎಡೆಮಾಡಿದೆ. ಅಂತೆಯೇ ಡಂಕನ್ ಹೇಳುವ—ನನ್ನನ್ನು ನನ್ನ ಅಥಿತಿಯ ಕಡೆಗೆ ಕರೆದೊಯ್ಯಿ' ಎಂಬುದು ತೀರಾ ತಪ್ಪು. ಡಂಕನ್ ತಾನೇ ಅತಿಥಿ ಮ್ಯಾಕ್‌ಬೆತ್ ಅತಿಥೇಯ, ಡಿವಿಜಿ ಸರಿಯಾಗಿ ಗ್ರಹಿಸಿದ್ದಾರೆ. ಗೌಡರು ಇವೆಲ್ಲವನ್ನು ಬಿಟ್ಟು ತಮಗಿಷ್ಟ ಬಂದ ರೀತಿಯಲ್ಲಿ ಒಂದು ಕಂದ ಪದ್ಯ ಹಾಕಿದ್ದಾರೆ.

ಈ ಅಂಕದ ಕೊನೆಯ ದೃಶ್ಯದ ಅನುವಾದವನ್ನು ಗೌಡರು ಬಹಳ ಚೆನ್ನಾಗಿ ಮಾಡಿದ್ದಾರೆ.

ಡಿವಿಜಿ ಅರ್ಥಗೌರವ ಉಳಿಸಲು ಪ್ರಯತ್ನಿಸಿದ್ದಾರೆ. ಗೌಡರು ಇದೇ ದೃಶ್ಯವನ್ನು ಪದ್ಯಮಯ ವನ್ನಾಗಿಸಿ ಬಿಟ್ಟಿದ್ದಾರೆ. ಮ್ಯಾಕ್‌ಬೆತ್‌ನ ಮನಸ್ಸಿಗೆ ಹಿಡಿದ ಕನ್ನಡಿ ಈ ದೃಶ್ಯ, ಷೇಕ್ಸ್‌ಪಿಯರನನ್ನು ಅನುಸರಿಸಲು ಹೋಗಿ ರಾಮಚಂದ್ರದೇವರು ಎಡವಿದ್ದಾರೆ. ಮೂಲದ 'ಧ್ವನಿ' ಇಲ್ಲಿ ಬಂದಿಲ್ಲ. ಆರಂಭದಲ್ಲೇ ಅವರು ಉಪಯೋಗಿಸಿರುವ 'ತೊಡಗಿ' ಪದಕ್ಕೆ ಮೂಲದಲ್ಲಿ ಯಾವುದೇ ಆಧಾರವಿಲ್ಲ. ಗೌಡರೂ ತಮ್ಮದೇ ಧಾಟಿ ತಂದು ಬಿಟ್ಟಿದ್ದಾರೆ. ಷೇಕ್ಸ್‌ಪಿಯರನನ್ನು ಅನುಸರಿಸದೆ ಸ್ವಲ್ಪ ಸ್ವಾತಂತ್ರ್ಯವಹಿಸಿದ್ದಾರೆ. ಡಿವಿಜಿಯವರ ಅನುವಾದ ಯಥಾರ್ಥವಾಗಿದೆ. ಡಿವಿಜಿ ಅವರ 'ಮಾಡಿದೊಡನೆಯೆ ಮಾಳ್ಕೆ ಮುಗಿವುದಾದೊಡೆ ಅದನು ಬೇಗ ಮಾಡುವುದೊಳಿತು' ವಾಕ್ಯ ಬಹಳ ಚೆನ್ನಾಗಿದೆ. ಈ ಹಂತದಲ್ಲಿ ಗೌಡರು ಉಪಯೋಗಿಸಿರುವ 'ಆ ಪಕ್ಷದಲ್ಲಿ' ಪ್ರಯೋಗ ಬಹಳ ಚೆನ್ನಾಗಿದೆ.

'ಐ ಹ್ಯಾವ್‌ನೋ ಸ್ಪರ್ ಟು ಪಿಕ್ ದಿ ಸೈಡ್ಸ್ ಆಫ್ ಇಂಟೆಂಟ್ ಬಟ್ ಓನ್ಲಿ ವಾಲ್ಟಿಂಗ್ ಆ್ಯಂಬಿಷನ್ ವಿಚ್ ಓವರ್‌ಲಾಪ್ಸ್ ಇಟ್‌ಸೆಲ್ಫ್ ಅಂಡ್ ಫಾಲ್ಸ್ ಆನ್ ದಿ ಅದರ್ಸ್' ಅನ್ನು ಡಿವಿಜಿಯವರು—'ಎನ್ನಿಂಗಿತದ ಪಕ್ಕೆಗಳ ಚುಚ್ಚಿ.........ಬಿದ್ದೀತು' ಎಂದು ಬಹಳ ಚೆನ್ನಾಗಿ ಅನುವಾದಿಸಿದ್ದಾರೆ. ರಾಮಚಂದ್ರದೇವರು.........'ನನ್ನ ಆಸೆಯ ಪಕ್ಕೆಗಳ ತಿವಿದು ಎಬ್ಬಿಸುವ ತಾಖತ್ತಿಲ್ಲ' ಎಂದಿದ್ದಾರೆ, ಚೆನ್ನಾಗಿದೆ. ಗೌಡರು ಸ್ವಲ್ಪ ಹಿಂದೆ ಮುಂದೆ ಮಾಡಿದ್ದಾರೆ.

'ವಿ ವಿಲ್ ಪ್ರೊಸೀಡ್ ನೋ ಫರ್ದರ್ ಇನ್ ದಿಸ್ ಬಿಸಿನೆಸ್' ಅನ್ನು ರಾಮಚಂದ್ರದೇವರು 'ನಾವು ಇನ್ನು ಈ ವಿಷಯ ಎತ್ತುವುದು ಬೇಡ ಎಂದಿದ್ದಾರೆ ಬಹಳ ಚೆನ್ನಾಗಿದೆ. ಡಿವಿಜಿಯವರು 'ಇನ್ನು ನಾಂ.........ಈ ಕಜ್ಜದಲ್ಲಿ' ಎಂದಿದ್ದಾರೆ. ಸ್ವಲ್ಪ ಕೃತಕವಾಗಿದೆ. ಅಲ್ಲದೆ 'ನಾಂ' ಎಂದು ಅವನಿಗೊಬ್ಬನಿಗೆ ಅನ್ವಯಿಸುವುದು ಸರಿ ಅಲ್ಲ, ಲೇಡಿ ಮ್ಯಾಕ್‌ಬೆತ್ ಮ್ಯಾಕ್‌ಬೆತ್ ಇಬ್ಬರೂ ಸೇರಿ ಈ ಕೊಲೆ ಯೋಜನೆ ರೂಪಿಸಿರುವುದು. ಅವಳನ್ನು ಈ ಹಂತದಲ್ಲಿ ಬಿಡಲಾಗದು. ಗೌಡರು—ಸಾಕಿನ್ನು ನಾ ಕಜ್ಜವನೆಸಗೆವಿದನು' ಎಂದಿದ್ದಾರೆ. ಕಾರ್ಯದಲ್ಲಿ ಮುಂದುವರೆಯುವ ಕ್ರಿಯೆ ಮಾಡಿಲ್ಲ.

'ವಾಸ್ ದಿ ಹೋಪ್ ಡ್ರಂಕ್, ವೇರಿನ್ ಯು ಡ್ರೆಸ್ಡ್ ಯುವರ್ ಸೆಲ್ಫ್' ಅನ್ನು ಡಿವಿಜಿಯವರು 'ಕುಡಿದಿದೆಯೇನ್ ನೀನುಟ್ಟು ತೊಟ್ಟ ಪ್ರತೀಕ್ಷೆಯನು' ಎಂದಿದ್ದಾರೆ. ಪ್ರತೀಕ್ಷೆಗಳನ್ನು ಕುಡಿಯುವುದಲ್ಲ. ಆವನ್ನು ಕೈಗೊಳ್ಳುವ ಯೋಜನೆ ಮಾಡಿದಾಗ ನಶೆಯಲ್ಲಿದ್ದ ಭಾವನೆ ಬರಬೇಕಿತ್ತು. ರಾಮಚಂದ್ರದೇವರು, ಗೌಡರು ಇದನ್ನು ಚೆನ್ನಾಗಿ ಅನುವಾದಿಸಿದ್ದಾರೆ.

ಅನಂತರ ಮ್ಯಾಕ್‌ಬೆತ್‌ನ ಮನಸ್ಸಿನಲ್ಲಿ ಕಿಚ್ಚು ಹಚ್ಚುವ ಲೇಡಿ ಮ್ಯಾಕ್‌ಬೆತ್‌ಳ ಮಾತುಗಳನ್ನು ಮೂವರೂ ಚೆನ್ನಾಗಿ ಅನುವಾದಿಸಿದ್ದಾರೆ. ರಾಮಚಂದ್ರದೇವರ ಅನುವಾದವಂತೂ ಮೂಲದಂತೆಯೇ ಓದಿಸಿಕೊಂಡು ಹೋಗುತ್ತದೆ. ಷೇಕ್ಸ್‌ಪಿಯರನಲ್ಲಿಲ್ಲದ ರೂಪಕಗಳನ್ನು ರಾಮಚಂದ್ರದೇವರು ತಂದಿದ್ದಾರೆ. ಮೂಲದ ಕೂಟಶಬ್ದಗಳನ್ನು ಕೂಟಶಬ್ದಗಳಿಂದಲೇ ಅನುವಾದಿಸಿದ್ದಾರೆ, ಗೌಡರು. ಅವರ 'ಸಗೋತ್ರಜ' ಪದವಂತೂ ಬಹಳ ಅರ್ಥವತ್ತಾಗಿದೆ.

ಹೀಗಾಗಿ ಈ ಮೂವರ ಅನುವಾದಗಳನ್ನು ವಿಮರ್ಶಾತ್ಮಕ ದೃಷ್ಟಿಯಲ್ಲಿ, ತುಲನಾತ್ಮಕವಾಗಿ ಪರಿಶೀಲಿಸಿದಾಗ ನಮಗೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ :

ಶ್ರೀಕಂಠೇಶಗೌಡರ ಕಾಲಕ್ಕೆ ರಂಗಭೂಮಿ ಇನ್ನೂ ಜೀವಂತವಾಗಿತ್ತು. ತಮ್ಮ ಕಾಲಕ್ಕೆ ತಮ್ಮ ಪ್ರೇಕ್ಷಕರಿಗೆ, ನಟರಿಗೆ, ಪರಿಸರಕ್ಕೆ ಹೊಂದಿಕೊಂಡು ಮ್ಯಾಕ್‌ಬೆತ್ ನಾಟಕದ ಅನುವಾದದಲ್ಲಿ ಹಲವಾರು ಮೌಲಿಕ ಬದಲಾವಣೆಗಳನ್ನು ತಂದಿದ್ದಾರೆ. ಇವರ ಅನುವಾದದಲ್ಲಿ ಭಾರತೀಯತೆ ಎದ್ದು ಕಾಣುತ್ತದೆ. ಭಾರತೀಯ ಸನ್ನಿವೇಶಗಳ ಯಥಾರ್ಥ ಜೋಡಣೆ ಇವರ ಅಪಾರ ಕಲ್ಪನೆಯ ದ್ಯೋತಕವಾಗಿದೆ.

ಡಿವಿಜಿಯವರ ಕಾಲಕ್ಕೆ ರಂಗಭೂಮಿ ನಿಶ್ಚೇಷ್ಟಿತವಾಗಿತ್ತು. ಹೀಗಾಗಿ ಅವರು ಓದುಗನನ್ನೇ ತಮ್ಮ ದೃಷ್ಟಿಯಲ್ಲಿರಿಸಿಕೊಂಡಂತಿದೆ. ಅನುವಾದದಲ್ಲಿ ಪಾಂಡಿತ್ಯ ಪ್ರಕಾಂಡತೆ ಎದ್ದು ಕಾಣುತ್ತದೆ. ಭಾಷೆ ಹೊರೆ ಎನಿಸುತ್ತದೆ. ಆದರೆ ಷೇಕ್ಸ್‌ಪಿಯರನನ್ನು ಅವರು ಅನುಸರಿಸುವ ರೀತಿ, ಮೂಲಕ್ಕೆ ತೋರಿಸಿರುವ ನಿಷ್ಠೆ ಪ್ರಶ್ನಾತೀತ. ಮೂಲಕೃತಿಗೆ ಯಾವುದೇ ರೀತಿಯಲ್ಲಿ ಅಪಚಾರ ಮಾಡಿಲ್ಲ. ಬಹಳ ಸೂಕ್ಷ್ಮವಾದ ಅಂಶವೆಂದರೆ ಏನನ್ನೂ ಬಿಟ್ಟಿಲ್ಲ. ಮಿಗಿಲಾಗಿ ಏನನ್ನೂ ಸೇರಿಸಿಲ್ಲ. ಒಂದೊಂದು ಪದ, ಮತ್ತು ಶೈಲಿ, ಎಲ್ಲಕ್ಕೂ ಷೇಕ್ಸ್‌ಪಿಯರನ ಅರ್ಥವನ್ನೇ ತುಂಬಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಕೆಲವು ಕಡೆ ಅದು ಸಾಧ್ಯವಾಗದೇ ಹೋಗಿದೆ ಎಂಬುದು ನಿರ್ವಿವಾದ. ಓದುಗರಿಗಾವಷ್ಟೇ ಉಳಿದ ಇವರ ಅನುವಾದ ರಂಗ ಪ್ರಯೋಗಕ್ಕೆ ತೀರಾ ಅಸಹಜವೆನ್ನಿಸುತ್ತದೆ.

ರಾಮಚಂದ್ರದೇವರ ಅನುವಾದ ಸಾಧಾರಣವಾಗಿದೆ. ಭಾಷೆಯ ಹೊರೆ ಇಲ್ಲವಾದರೂ ಷೇಕ್ಸ್‌ಪಿಯರನನ್ನು ಅನುಸರಿಸುವಲ್ಲಿ ಹಲವಾರು ಕಡೆ ಎಡವಿದ್ದಾರೆ. ಕೆಲವೆಡೆ ರಸಾಭಾಸವಾಗಿದೆ. ಇವರ ಅನುವಾದದಲ್ಲಿ ಮುಖ್ಯ ತೊಡಕು ವಾಕ್ಯರಚನೆಯದು. ಅಸಹಜ ವಾಕ್ಯರಚನೆ. ಸ್ವಾತಂತ್ರ್ಯವನ್ನೇ ತಂತ್ರವಾಗಿ ಬಳಸಿದ್ದಾರೆ. ಆದರೆ ಸಾಮಾನ್ಯ ಓದುಗರಿಗೆ, ಪ್ರೇಕ್ಷಕರಿಗೆ ಇದು ಬಹಳ ಹತ್ತಿರವಾಗಿದೆ. ರಂಗ ಪ್ರಯೋಗಕ್ಕೆ ಬಹಳ ಸುಲಭವಾಗಿದೆ. ಪಾಂಡಿತ್ಯದ ಹೊರೆ ಇಲ್ಲ. ಆದರೆ ಮೂಲದ ರಸಾಸ್ವಾದನೆ ಕೂಡ ಅಷ್ಟಕ್ಕಷ್ಟೆ. ಆದರೆ ಪ್ರಯತ್ನ ಮಾತ್ರ ಸ್ತುತ್ಯಾರ್ಹ.

ರಘುನಾಥಭಟ್ ಎಚ್. ಆರ್.

''ನರಸಿಂಗೇಶ್ವರಾಲಯ''-ಮೈಸೂರು ನಗರದ ಒಂದು ಪ್ರಾಚೀನತಮ ದೇಗುಲ ?

ಹೊಸ ಶಾಸನಗಳ ಸಂಶೋಧನೆ-ಪ್ರಕಟಣೆ ಎಷ್ಟು ಸ್ವಾಗತಾರ್ಹವೋ, ಪ್ರಕಟಿತ ಶಿಲಾಲೇಖಗಳ ಪುನರ್‌ಪರಿಶೀಲನೆ, ವಿಶ್ಲೇಷಣೆ, ಅರ್ಥವಿವರಣೆಕೂಡ ಅಷ್ಟೇ ಅಗತ್ಯ. ಇವೆರಡೂ ಜೊತೆಜೊತೆಯಲ್ಲೇ ಮಾಡಬೇಕಾದ ಕಾರ್ಯಗಳೆಂದರೂ ತಪ್ಪಾಗಲಾರದು. ಒಂದೊಂದು ಪ್ರದೇಶದ ಶಾಸನಗಳನ್ನು ಅಂತರ್‌ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದಲ್ಲಿ ಹಲವು ಹೊಸಸಂಗತಿಗಳೂ ಹೊರಬಿದ್ದಾವು. ಈ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಇದುವರೆಗೆ ದೊರೆತ ನೂರಾರು (೧೦೬) ಶಾಸನಗಳನ್ನು ಹಲವು ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಅಗತ್ಯವಿದೆ. ಪ್ರಸ್ತುತದಲ್ಲಿ ನಗರದಲ್ಲೇ ಅತ್ಯಂತ ಪ್ರಾಚೀನವಾದ (ಚಾಮುಂಡಿ ಬೆಟ್ಟದ ಶಾಸನಗಳನ್ನು ಹೊರತು ಪಡಿಸಿ) ಶಿಲಾಶಾಸನವೊಂದರ ಪುನರ್ ಪರಿಶೀಲನೆ-ಪರಿಷ್ಕರಣಮಾಡಿದಾಗ ಮೂಡಿದ ಸಂಗತಿಗಳನ್ನಿಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಆ ಮೂಲಕ ನರಸಿಂಗೇಶ್ವರಾಲಯದ ಪ್ರಾಚೀನತೆಯನ್ನು ನಿರ್ಧರಿಸಲೂ ಯತ್ನಿಸಲಾಗಿದೆ. ಈ ಶಿಲಾಲೇಖವನ್ನು ಈ ಶತಮಾನದ ಆರಂಭದಲ್ಲೇ (1907-8) ಆರ್. ನರಸಿಂಹಾಚಾರ್ಯರು ಪತ್ತೆ ಮಾಡಿದ್ದು ಕುಕ್ಕರಹಳ್ಳಿ ಗ್ರಾಮಕ್ಕೆ ದಕ್ಷಿಣದಲ್ಲಿರುವ ಹೊಲದಲ್ಲಿ[1]. ಸುಮಾರು ಮೂವತ್ತಾರು ವರ್ಷಗಳ ತರುವಾಯ ಎಂ. ಎಚ್. ಕೃಷ್ಣರವರು ಈ ಶಾಸನ ಪಾಠವನ್ನು ಪ್ರಕಟಿಸಿದರು (1943)[2]. ಆಗಲೂ ಇದು 'ಕುಕ್ಕರಹಳ್ಳಿಗೆ ದಕ್ಷಿಣ ಕಡೆ ತೋಟಿಯ ಹೊಲದಲ್ಲಿತ್ತೆಂದು ತಿಳಿಸುವ ಎಂ. ಎಚ್. ಕೃಷ್ಣರವರು ಮುಂದುವರಿದು 'ಈ ಕಲ್ಲು ಈಚೆಗೆ ತೆಗೆದಿರುವ ಕಾಲುವೆ ಬಳಿ ಮುಚ್ಚಿಹೋಗಿದೆ' ಎಂದಿದ್ದರು.[3] ಅಲ್ಲಿಂದ ಸುಮಾರು ಮೂವತ್ತೆರಡು ವರ್ಷಗಳನಂತರ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಎಪಿಗ್ರಾಫಿಯಂ ಕರ್ನಾಟಕ ಪರಿಷ್ಕರಣ ಹಾಗೂ ಪುನರ್ಮುದ್ರಣ ಯೋಜನೆಯಲ್ಲಿ ಬಾ. ರಾ. ಗೋಪಾಲ್‌ರವರ ನೇತೃತ್ವದ ಶಾಸನ ಸಂಪಾದಕ ವರ್ಗದವರು ಕೂಡ ಇದನ್ನು 'ಕುಕ್ಕರಹಳ್ಳಿ ಶಾಸನ' ಎಂದೇ ಹೆಸರಿಸಿ, ಆ ಗ್ರಾಮಕ್ಕೆ ದಕ್ಷಿಣ ಕಡೆ ಹೊಲದಲ್ಲಿರುವ ಕಲ್ಲಿನ ಮೇಲೆ ಲಿಖಿತವಾಗಿದೆಯೆಂದು ನಿರ್ದೇಶಿಸಿದರು.[4] 1907 ರಿಂದ ಈಚಿನವರೆಗೂ ಈ ಶಾಸನ ವಾಸ್ತವವಾಗಿದ್ದದ್ದು ಹತ್ತಿರದಲ್ಲಿದ್ದ ಮಳಲವಾಡಿ ಗ್ರಾಮದ ನೈರುತ್ಯಕ್ಕಿರುವ ಹೊಲದಲ್ಲಿ. ಆದರೂ ಇದನ್ನು 'ಕುಕ್ಕರಹಳ್ಳಿ ಶಾಸನ' ಎಂದೇ ಕರೆದಿದ್ದಾರೆ. ಅದೇನಿದ್ದರೂ ಸಧ್ಯಕ್ಕೆ ಇದು ಇರುವುದು ಕುವೆಂಪುನಗರ (ಪೂರ್ವಬಡಾವಣೆಯ) ಮೂವತ್ತಡಿ ರಸ್ತೆಯ (ಸಂ. 2-ಎ) ಅಂಚಿನಲ್ಲಿ. ಅಂದರೆ ಅಲ್ಲಿರುವ 'ಐ' ಬ್ಲಾಕಿನ ನೂರಮೂವತ್ತೈದನೆಯ ನಿವೇಶನದ ಎದುರಲ್ಲಿ. ಆದ್ದರಿಂದ ಪ್ರಸ್ತುತದಲ್ಲಿ ಇದನ್ನು ಮೈಸೂರು ನಗರದ 'ಕುವೆಂಪುನಗರ ಶಾಸನ' ಎಂದೇ ಕರೆಯುವುದು ಹೆಚ್ಚು ಸೂಕ್ತವಾದೀತಲ್ಲವೆ?[5]

ಈ ಶಾಸನದ ಪಡಿಯಚ್ಚನ್ನು ಮತ್ತೊಮ್ಮೆ ತೆಗೆದು, ಶಾಸನ ಪಾಠವನ್ನು ಪರಿಷ್ಕರಿಸಲಾಗಿದ್ದು ಅದನ್ನು ಈ ಕೆಳಗಿನಂತೆ ಓದಬಹುದು :[6]

೧. ಸ್ವಸ್ತಿ ಸಮಧಿಗತ ಪಞ್ಚಮಹಾಸಬ್ದ ಮಹಾ

೨. ಸಾಮನ್ತನಾದಿ ವರಾಹಲಾಞ್ಛನನಾಹವ ನಿಬ್ಬರ್ಣಯ

೩. ನಭಿಮಾನವಾಮನ ಮದ್ದಿ(ತ್ತಿ)ನ[7] ಚರಿತನಸತ್ಯವಿದೂರ

೪. ನಾಳ್ದಾಳವೀರ[8] ಚಾಳುಕ್ಯಾರ್ಜುನನಂ ಚಲಕೆ ಮೊದಲಿ

೫. ಗ ಮಾರಟ್ಟಗಣ್ಡ[9]ನ ಕಳಂಕ ಮಹೇಸ್ವರಂ ದ

೬. ಣ್ಡಂ ಮುನ್ನಿಱಿವೊಂ ಶ್ರೀಮತ್ ನರಸಿಂಗಯ್ಯ ನರಸೀಗೇ

೭. ಸ್ವರಮ್ಮಾಡಿಸಿ ಮಣಲೆವಾಡಿಯಸಭ್ಯ

೮. ನರ್ಗ ಸಿದ್ಧಿಯಾಗೆ ಬಿಟ್ಟಂ [।*] ಇ (ಈ) ಧರ್ಮ್ಮವಂ ಮೂ

೯. ವಸ್ನಾ(ರ್)ಗ್ಗಾವುಣ್ಡುಗಳು[10] ಸುಲಿಸುವೊರ್ [।*] ಪೂರ್ವ ಬಾ (ಬ)

೧೦. ಯಲ್ಪಾಡನ ಬೆಟ್ಟದತ್ತ [।*] ಇ (ಈ) ಧರ್ಮವನಟಿಪಿ

೧೧. ದವರ್ ಲಿಂಗವುಂ ಶ್ರೀಪರ್ವತವುಮಂ

೧೨. ಎಟ್ಕೊಟ್ಟಯುಮಂ ಬಾಣರಾಸಿಯುಮಂ

೧೩. ಕವಿಲೆಯುಮನಟಿದ ಪಞ್ಚಮ

೧೪. ಹಾ ಪಾತಕರ್ [।*]

ದೊರಗಾದ ಕಣ ಶಿಲೆಯ ಫಲಕದ ಮೇಲೆ (120 × 90 × 2·5 ಸೆಂ. ಮೀ.) ಸುಮಾರು ಹತ್ತನೆಯ ಶತಮಾನದ ಕನ್ನಡ ಲಿಪಿಯಲ್ಲಿ ಹದಿಮೂರುವರೆ ಸಾಲುಗಳಲ್ಲಿ ಕಂಡರಿಸಿದ ಈ ಕನ್ನಡ ಶಾಸನ ತೀರ ಪರಿಶುದ್ಧವಾಗೇನಿಲ್ಲ. ಶಿಲೆಯ ತೊಡಕೊ, ಭಾಷೆಯ ದೋಷವೊ, ಕಂಡರಣೆಯಲ್ಲಿನ ಕಣ್ತಪ್ಪುಗಳೊ ಅಂತೂ ಕೆಲವೆಡೆ ಈ ಕಾಗುಣಿತ ದೋಷಗಳನ್ನು ಗಮನಿಸಬಹುದು. ಉದಾಹರಣೆಗೆ ಮಹಾಸಬ್ದ–ಮಹಾಶಬ್ದ (ಸಾಲು 1); ಮಟ್ಟಿನ ಚರಿತನ್–ಮತ್ತಿನ ಚಿಂತನ್ (ಸಾಲು 3); ಮಹೇಸ್ವರಂ–ಮಹೇಶ್ವರಂ (ಸಾಲು 5); ಇ ಧರ್ಮವಂ–ಈ ಧರ್ಮವಂ (ಸಾಲು 8, 10); ಮೂವನ್ನಾರ್ಗ್ಗಾವುಣ್ಡುಗಳು–ಮೂವನ್ನಾರ್ಗಾವುಣ್ಡುಗಳು (ಸಾಲು 8 9); ಬಾಣರಾಸಿ–ವಾರಣಾಸಿ (ಸಾಲು–12). ಗದ್ಯ ಶೈಲಿಯಲ್ಲಿರುವ ಈ ಶಾಸನದ ಕನ್ನಡ ಭಾಷೆಯು ಹತ್ತನೆಯ ಶತಮಾನದ (ಹಳಗನ್ನಡದ) ಭಾಷಾ ವೈಲಕ್ಷಣ್ಯಗಳಿಂದ ಕೂಡಿದೆ.

ಈ ಶಾಸನದ ನಾಯಕನಾದ ಚಾಳುಕ್ಯ ಮಹಾಸಾಮಂತ ನರಸಿಂಗಯ್ಯನನ್ನು ಮೊದಲ ಆರು ಸಾಲುಗಳಲ್ಲಿ ಕಾವ್ಯಾತ್ಮಕವಾಗಿ ಬಣ್ಣಿಸಲಾಗಿದೆ. ಪಂಚ ಮಹಾ ಶಬ್ದಗಳ (ಶೃಂಗ, ತಮ್ಮಟೆ, ಶಂಖ, ಭೇರಿ ಮತ್ತು ಜಯಘಾಟ) ಗೌರವಕ್ಕೆ ಪಾತ್ರನಾದ ಈ ಚಾಳುಕ್ಯ ಮಹಾ ಸಾಮಂತನಿಗೆ ಆ ಚಾಳುಕ್ಯರ ರಾಜ ಲಾಂಛನವಾದ 'ಆದಿ ವರಾಹ' ರಾಜಚಿಹ್ನೆಯಾಗಿತ್ತು. ಅವನನ್ನು 'ಚಾಳುಕ್ಯಾರ್ಜುನ' ಎಂದೇ ಕರೆದಿರುವುದೂ ಇಲ್ಲಿ ಅರ್ಥಪೂರ್ಣವಾಗಿದೆ. ಈ ನರಸಿಂಗನ ಸೈನಿಕ–ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಇತರ ಬಿರುದಾವಳಿಗಳಲ್ಲಿ ಆಹವ ನಿಬ್ಬರ್ಣಯ, ಆಳ್ದಾಳ

ವೀರಂ, ಚಲಕೆ ಮೊದಲಿಗ, ಆರಟ್ಟಿಗಳಗಂಡನ್, ದಣ್ಡಿಂ ಮುನ್ನಿರಿವೊಡನ್, ಅಭಿಮಾನವಾಮನ, ಮತ್ತಿನ (ಅತಿಶಯ) ಚರಿತನ್, ಅಸತ್ಯವಿದೂರನ್, ಅಕಳಂಕ ಮಾಹೇಶ್ವರ ಮುಂತಾದವೂ ತುಂಬ ಸ್ವಾರಸ್ಯಕರವಾಗಿದೆ. ಈ ಮಾತುಗಳಿಗೆ ಪುಷ್ಟಿನೀಡುವಂತಹ 'ಚಾಳುಕ್ಯವಂಶಲಲಾಮ,' ಮುಂತಾದ ಇತರ ಬಿರುದುಗಳ ಸಹಿತ ಸುಮಾರು ಹದಿನೈದಕ್ಕೂ ಹೆಚ್ಚು ಸಾಲುಗಳಲ್ಲಿ ಈತನ ಪ್ರಶಸ್ತಿಯನ್ನು ವರುಣದ ಸ್ಮಾರಕ ಶಾಸನದಲ್ಲಿ ಕೊಡಲಾಗಿದೆ.[11] ಅಲ್ಲದೆ ಆತನ ಪತ್ನಿ ಗಾವಲಬ್ಬರಸಿಯನ್ನು ಅದೇ ದಾಟಿಯಲ್ಲಿ ಬಣ್ಣಿಸಲಾಗಿದೆ. ಈತನ ಒಂದು ಸುಂದರ ಉಬ್ಬು ಶಿಲ್ಪವನ್ನು ಈ ಸ್ಮಾರಕ ಶಾಸನದ ಎರಡನೆಯ ಹಂತದಲ್ಲಿ ಕಂಡರಿಸಲಾಗಿದೆ. ಒಂದು ಸ್ತಂಭ ಮಂಡಪದಲ್ಲಿ ಸುಖಾಸನ (ರಾಜಲೀಲಾಸನ) ದಲ್ಲಿ ಶಿವಭಕ್ತಿಯಲ್ಲಿ ಕರಜೋಡಿಸಿ ಕುಳಿತ ನರಸಿಂಗನ ಕೇಶಾಲಂಕಾರ, ಕರ್ಣಕುಂಡಲ, ಕಂಠಹಾರ, ಭುಜಬಂಧ, ಕೈಬಳೆ, ಕಾಲುಕಡಗ, ಕಟಿವಸ್ತ್ರ—ಎಲ್ಲವೂ ರಾಜಗಾಂಭೀರ್ಯಕ್ಕೆ ತಕ್ಕಂತಿವೆ. ನಡುಪ್ರಾಯದ ಸುಂದರಕಾಯ, ಮುದ್ದಾದ ದುಂಡುಮುಖಮುದ್ರೆ ಹಾಗೂ ಈತನ ಆಚೀಚೆ ಗೌರವದಿಂದ ನಿಂತ ಚಾಮರಧಾರಿಗಳೂ ನರಸಿಂಗನ ರಾಜವೈಭವಕ್ಕೆ ಪೂರಕವಾಗಿವೆ. ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈತ ವರುಣ-ಮೈಸೂರು ಪ್ರದೇಶದಲ್ಲಿ ಹತ್ತನೆಯ ಶತಮಾನದಲ್ಲಿ ಆಳಿದ ಚಾಳುಕ್ಯಾನ್ವಯ ಸಾಮಂತರಲ್ಲೇ ಅದ್ವಿತೀಯನೂ, ಅತ್ಯಂತ ಶ್ರೇಷ್ಠನೂ ಆಗಿದ್ದನೆಂಬುದು ವೇದ್ಯವಾಗುತ್ತದೆ.

ಕುವೆಂಪುನಗರದ ಶಿಲಾಶಾಸನ ಸ್ಪಷ್ಟವಾಗಿ ತಿಳಿಸುವಂತೆ ಚಾಳುಕ್ಯಾರ್ಜುನನಾದ ಶ್ರೀಮತ್ ನರಸಿಂಗಯ್ಯನು ನರಸಿಂಗೇಶ್ವರ ದೇಗುಲವನ್ನು ನಿರ್ಮಿಸಿದ. ಅಲ್ಲದೆ ಆ ಶಾಸನವಿದ್ದ ಮಣಲೆವಾಡಿಯನ್ನು 'ಅಭ್ಯಂತರ ಸಿದ್ಧಿಯಾಗಿ'[12] ದತ್ತಿ ಬಿಟ್ಟ. ಈತನು ಮಾಡಿದ ಈ ಧರ್ಮವನ್ನು ನಾಡಗೌಡರು ಪರಿಪಾಲಿಸಿಕೊಂಡು ಹೋಗುವಂತೆ ಅಪ್ಪಣೆಮಾಡಿದ. ಸಾಲದೆಂಬಂತೆ ಪೂರ್ವದ ಬಯಲು ನಾಡಿನಲ್ಲೂ ದತ್ತಿ ಬಿಟ್ಟ.

ನರಸಿಂಗಯ್ಯ ಕಟ್ಟಿಸಿದ ನರಸಿಂಗೇಶ್ವರಾಲಯ ಯಾವುದು? ಎಲ್ಲಿದೆ? ಆತ ಅಭ್ಯಂತರ ಸಿದ್ಧಿಯಾಗಿ ಬಿಟ್ಟ 'ಮಣಲೆವಾಡಿ' ಯಾವುದು? ಈ ದೇವಾಲಯವನ್ನು ಮತ್ತು ಅದು ಇದ್ದ ಗ್ರಾಮವನ್ನು ಗುರುತಿಸುವಲ್ಲಿ ಕುವೆಂಪುನಗರದ ಪೂರ್ವಬಡಾವಣೆಯಲ್ಲಿ ನಾನು ಕೈಗೊಂಡ ಕ್ಷೇತ್ರಕಾರ್ಯ ಪ್ರತ್ಯಕ್ಷ ಪರಿಶೀಲನೆ ಹಾಗೂ ಅಂತರ ಶಾಸ್ತ್ರೀಯ ಅಧ್ಯಯನ ಒಂದೆಡೆ, ಮೈಸೂರಿನಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿರುವ ವರುಣದಲ್ಲಿ ಕಂಡುಬರುವ ನರಸಿಂಗನ ಶಾಸನ ಶಿಲ್ಪ ಬೂತೇಶ್ವರ ದೇಗುಲದಲ್ಲಿರುವ ಮೂರ್ತಿಶಿಲ್ಪ ಶೈಲಿ ಮತ್ತು ವಾಸ್ತುವಿನ್ಯಾಸ ಶೈಲಿಗಳ ತೌಲನಿಕ ಅಧ್ಯಯನ ಇನ್ನೊಂದೆಡೆ ಪ್ರಬಲ ಸಾಕ್ಷ್ಯಾಧಾರಗಳನ್ನೊದಗಿಸುವಲ್ಲಿ ತುಂಬಾ ನೆರವಾದವು.[13] ಈ ಬಗೆಯ ಸಂಶೋಧನೆ ಇನ್ನೂ ಹೆಚ್ಚಿನ ಪ್ರತ್ಯಕ್ಷ ಪರಿಶೀಲನೆ ಹೆಚ್ಚಿನ ಸಾಮಗ್ರಿ ಸಂಗ್ರಹ, ಪರೀಕ್ಷೆ ಹಾಗೂ ಖಚಿತತೆಗಳನ್ನು ಬಯಸುತ್ತದೆಯಾದರೂ ಸಧ್ಯಕ್ಕೆ ಸಂಗ್ರಹಿಸಿದ ಸಾಕ್ಷಿ ಸಾಮಗ್ರಿಗಳ ಮೇಲಿಂದ ಈ ಮೇಲಿನ ಸಮಸ್ಯೆಗಳನ್ನು ವಿಶ್ಲೇಷಿಸಿ, ನರಸಿಂಗೇಶ್ವರಾಲಯವನ್ನು ಮಣಲೆವಾಡಿ ಯನ್ನು ಗುರುತಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ,

ಕುವೆಂಪುನಗರದ ಪೂರ್ವಬಡಾವಣೆಯಲ್ಲಿರುವ ಕೆ. ಬ್ಲಾಕಿನಲ್ಲಿ ಒಂದು ಶಿವಾಲಯವಿದ್ದು ಅದನ್ನೀಗ ಊರವರು ಮರಳೇಶ್ವರಾಲಯವೆಂದು ಕರೆಯುತ್ತಾರೆ, ಇದನ್ನು 1955 ರಿಂದೀಚೆಗೆ

ಜೀರ್ಣೋದ್ಧಾರ ಮಾಡಿದ್ದರೂ ಅದಕ್ಕೂ ಪೂರ್ವಕಾಲದಲ್ಲೇ ದೇಗುಲವಿತ್ತೆಂಬುದು ಆ ಪ್ರದೇಶದ ಹಿರಿಯ ಜನರ ಅಭಿಪ್ರಾಯವಾಗಿದೆ.[14] ಅಲ್ಲದೆ 1881ರ ಹಾಗೂ 1921ರ ರಿಸರ್ವೆ ನಕಾಶೆಯಲ್ಲಿಯಲ್ಲಿಯೂ ಮಾಜಿ ಮಳಲವಾಡಿಗೆ (ಸಮ್ಮತು ಮೈಸೂರು) ತಾಗಿದಂತೆ 189ನೆಯ ಸರ್ವೇ ನಂಬರಿನಲ್ಲಿದ ಪ್ರಾಚೀನ ದೇಗುಲವನ್ನು ಅದರ ಪಕ್ಕದ ಬಾವಿಯನ್ನು ನಿರ್ದೇಶಿಸಲಾಗಿದೆ.[15] ಆದರಿಂದಾಗಿ ನಕಾಶೆಯನ್ನು ತಯಾರಿಸಿದ ಕಾಲಕ್ಕಿಂತಲೂ ಹಿಂದೆಯೇ ಅಲ್ಲೊಂದು ಶಿವಾಲಯವಿತ್ತು ಎಂಬುದು ಅಧಿಕೃತವಾಯಿತು. ಜೀರ್ಣೋದ್ಧಾರವಾಗಿದ್ದರೂ, ಆ ದೇವಾಲಯದ ವಾಸ್ತು ವಿನ್ಯಾಸವನ್ನು, ಗರ್ಭಗೃಹ, ನವರಂಗ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ[16] ಅವು ವರುಣದ ಬೂತೇಶ್ವರಾಲಯಕ್ಕೆ ಹತ್ತಿರವಾಗಿರುವಂತೆ ತೋರುತ್ತವೆ. ಈ ಎರಡೂ ದೇವಾಲಯಗಳಲ್ಲಿ ಪುಟ್ಟ ಚತುರ ಸ್ರಾಕಾರದ ಗರ್ಭಗೃಹದ ಅದರ ಮುಂದೆ ಆಯತಾಕಾರದ ನವರಂಗ ಮಂಟಪ ಮಾತ್ರವಿದ್ದು, ವಾಸ್ತು ರಚನೆಯ ಒಳಭಾಗ ಸರಳವಾಗಿದೆ. ಮರಳೇಶ್ವರಾಲಯದ ನವರಂಗದಲ್ಲಿ ಕಂಬಗಳು ಈಗಿಲ್ಲವಾದರೂ ಹಿಂದೆ ಇದ್ದುದರ ಕುರುಹಾಗಿ ಬಿಡಿ ಸ್ತಂಭ ಪೀಠಗಳು ಈಗಲೂ ನೋಡಸಿಗುತ್ತವೆ.[17] ಅದರ ಮೇಲೆ ವಿನ್ಯಾಸ ಕೂಡ ವರುಣದ ಬೂತೇಶ್ವರಾಲಯದಲ್ಲಿರುವ ಸ್ತಂಭ ಪೀಠಗಳಂತಿವೆ.

ಇನ್ನು ಈ ದೇವಾಲಯವಲ್ಲಿರುವ ಶಿವಲಿಂಗ, ನಂದಿ, ಗಣೇಶ, ಮಹಿಷಾಸುರಮರ್ಧಿನಿ, ವೀರಭದ್ರ ಹಾಗೂ ಸಪ್ತಮಾತೃಕೆ ವಿಗ್ರಹಗಳಲ್ಲಿ ಈಗ ಉಳಿದಿರುವ ವಾರಾಹಿ, ಇಂದ್ರಾಣಿ, ಬ್ರಹ್ಮಾಣಿ ಹಾಗೂ ಪಾರ್ವತಿ ಬಿಡಿಶಿಲ್ಪಗಳು ಇನ್ನು ಖಚಿತವಾದ ಸಾಕ್ಷ್ಯಾಧಾರಗಳನ್ನು ಒದಗಿಸುತ್ತವೆ.[18] ಶಿವಲಿಂಗದ ರುದ್ರಭಾಗ. ಅದರ ಮೇಲಣ ಬ್ರಹ್ಮಸೂತ್ರವಿನ್ಯಾಸ ಹಾಗೂ ಆದರ ಪಾಣಿಪೀಠ ವಿನ್ಯಾಸಗಳು ವರುಣದ ಬೂತೇಶ್ವರಲಿಂಗದಂತಿದೆ. ಹಾಗೆಯೇ ಲಿಂಗದ ಮುಂದೆ ಇಟ್ಟಿರುವ ನಂದಿಶಿಲ್ಪದ ಮುಖಮುದ್ರೆ, ಕೊರಳಲ್ಲಿರುವ ಗೆಜ್ಜೆ ಸರ, ಪುಟ್ಟ ಕರವೀರ ಹೂವಿನಾಕಾರದ ಗಂಟೆ ಸರಗಳೆರಡನ್ನು ಬೆನ್ನ ಮೇಲಿಂದ ಹಿಂದಕ್ಕೆ ಹಾಗೂ ಮುಂದಕ್ಕೆ (ಕೊರಳಿಗೆ) ಹಾಕಿರುವ ಕ್ರಮ, ಅವೆರಡನ್ನೂ ಸೇರಿಸಿ ಬೆನ್ನ ಮೇಲೆ ಹಾಕಿರುವ ಗಂಟು. ಮುಂತಾದವೂ ವರುಣದ ಬೂತೇಶ್ವರಾಲಯದಲ್ಲಿರುವ ಎರಡು ನಂದಿ ವಿಗ್ರಹಗಳಲ್ಲಿರುವಂತಿವೆ. ಅಲ್ಲದೆ ನರಸಿಂಗಯ್ಯನ ಶಾಸನ ಶಿಲೆಯ ಮೇಲ್ಪುದಿಯಲ್ಲಿ ಕಂಡರಿಸಿದ ಶಿವಲಿಂಗ, ನಂದಿಗಳೊಡನೆ ಇರುವ ಸಾಮ್ಯವನ್ನು ಗಮನಿಸಬೇಕು. ಇನ್ನುಳಿದ ಸಪ್ತಮಾತೃಕೆಯರ ಬಿಡಿಶಿಲ್ಪಗಳ ಅಂಗಾಂಗ ಸೌಷ್ಠವ, ಆಭರಣ ವಿನ್ಯಾಸ, ಕುಚಬಂಧ, ಕಿರೀಟ, ಕರ್ಣಕುಂಡಲ, ಕಂಠಹಾರ, ಭುಜಬಂಧ, ಕಟಿಸೂತ್ರ, ಕಾಲು ಮತ್ತು ಕೈಬಳೆ, ಈ ಮಾತೃಕೆಯರ ವಾಹನ ಶಿಲ್ಪಗಳು ಹಾಗೂ ಮಾತೃಕೆಯರು ಕೈಗಳಲ್ಲಿ ಹಿಡಿದಿರುವ ಆಯುಧಗಳ ವಿನ್ಯಾಸ ಮತ್ತು ಅವನ್ನು ಹಿಡಿದಿರುವ ನಾಟಕೀಯ ಶೈಲಿ ಮುಂತಾದವಂತೂ ವರುಣದ ಬೂತೇಶ್ವರಾಲಯದ ಮೂರ್ತಿಶಿಲ್ಪಗಳಲ್ಲಿರುವಂತಿವೆ. ಗಣೇಶ ಮಹಿಷಾಸುರಮರ್ಧಿನಿ, ವೀರಭದ್ರ ವಿಗ್ರಹಗಳ ಬಗೆಗೂ ಈ ಮಾತನ್ನು ಅನ್ವಯಿಸಬಹುದು.[19] ಈ ಬಗೆಯ ತೌಲನಿಕ ಅಧ್ಯಯನ ಹಾಗೂ ಸೂಕ್ಷ್ಮ ಪರಿಶೀಲನೆಗಳಿಂದ ಕುವೆಂಪುನಗರದ 'ಮರಳೇಶ್ವರಾಲಯ'ವೆಂದು ಹೇಳಲಾದ ದೇಗುಲವೇ ಶಾಸನೋಕ್ತ ನರಸಿಂಗೇಶ್ವರಾಲಯ ವಾಗಿರಬಹುದೆಂದು ಹೇಳಬಹುದು.[20] ದೇಗುಲವೇ

ಶಾಸನೋಕ್ತ ನರಸಿಂಗೇಶ್ವರಾಲಯ ವಾಗಿರಬಹುದೆಂದು ಹೇಳಬಹುದು.[20] ಇದಕ್ಕೆ ಪೂರಕವಾಗಿ ಈ ದೇಗುಲಕ್ಕೆ ಸಮೀಪದಲ್ಲಿ, ಅಂದರೆ ಈಗಿನ ಬಡಾವಣೆಯ ಐ ಬ್ಲಾಕಿನಲ್ಲಿ ಸಂಬಂಧಪಟ್ಟ ಶಾಸನ ಶಿಲೆ ನಿಂತಿರುವುದು ಕೂಡ ಗಮನಾರ್ಹವಾಗಿದೆ.

ಈ ನರಸಿಂಗೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟ 'ಮಣಲೆವಾಡಿ,' ಮೂಲತಃ ಅದರ ಈಶಾನ್ಯ ಭಾಗವಲ್ಲಿತ್ತೆಂದು ಹೇಳಲಾದ ಮೌಜೆಮಳವಾಡಿಯೇ ಆಗಿದ್ದಿರಬೇಕು. ಹತ್ತನೆಯ ಶತಮಾನದ ಮಣಲೆವಾಡಿ<ಮಳಲವಾಡಿಯಾಗಿ ಕಾಲಾಂತರದಲ್ಲಿ 'ಮಳ್ಳೋಡಿ'ಯಾಗಿ ಇತ್ತೆಂಬುದು ನಿಶ್ಚಿತವಾಗಿ ತಿಳಿದುಬರುತ್ತದೆ. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (1127ರಲ್ಲಿ) ಚಾಮುಂಡಿ ಬೆಟ್ಟದ ಮೇಲಿರುವ ಮೈಸುನಾಡಿನ ಮಾಬ್ಬಳತೀರ್ಥಕ್ಕೆ (ಬಹುಶಃ ಅಲ್ಲಿರುವ ಮಹಾಬಲೇಶ್ವರಾಲಯಕ್ಕೆ) ಇದೇ ಮಣಲೆವಾಡಿಯನ್ನು ಅಭ್ಯಂತರ ಸಿದ್ಧಿಯಾಗಿಯೇ ದತ್ತಿ ಬಿಡಲಾಗಿತ್ತೆಂಬುದೂ ಅಲ್ಲಿರುವ ಶಿಲಾಶಾಸನದಿಂದ ತಿಳಿದುಬರುತ್ತದೆ.[21] ಮೈಸೂರು ಚಿಕ್ಕದೇವರಾಜವಡೆಯರ ಕಾಲದ (ಡಿಸೆಂಬರ್ 5, 1674)[22] ತಾಮ್ರಪಟವೊಂದರಲ್ಲಿಯೂ ಮಳಲವಾಡಿಯ ಉಲ್ಲೇಖ ಮಾತ್ರ ಕಂಡುಬರುತ್ತದೆ. ಕೆಲ ಶತಮಾನಗಳ ನಂತರದಲ್ಲಿ (1881) ತಯಾರಿಸಿದ ಹಾಗೂ 1921ರಲ್ಲಿ ಪುನಃ ಸಿದ್ಧಪಡಿಸಿದ ಮೌಜೆಮಲಳವಾಡಿಯ ನಕಾಶೆಯಲ್ಲಿ ಮಳಲವಾಡಿ ಊರನ್ನು ಅದಕ್ಕೆ ಸಂಬಂಧಿಸಿದ ಸುಮಾರು 211 ಭೂ ಹಿಡುವಳಿಗಳನ್ನು ಅಧಿಕೃತವಾಗಿ ನಿರ್ದೇಶಿಸಲಾಗಿದೆಯಷ್ಟೆ. ಕಾಲಾಂತರದಲ್ಲಿ ಈ ಊರಿನ ಕೆಲಭಾಗವನ್ನೊಳಗೊಂಡಂತೆ ಕನ್ನೇಗೌಡನ ಕೊಪ್ಪಲಾಗಿ ರೂಪಾಂತರ ಹೊಂದಿರಬೇಕು. ಈ ಊರಿನ ಕೆಲವರು ಜಯನಗರದ ಅಂಚಿನತ್ತ ವಲಸೆ ಹೋಗಬೇಕಾಗಿ ಬಂತೆಂದೂ, ಅಲ್ಲಿರುವ ಹರಿಜನರನ್ನು ಇಂದಿಗೂ ಮಳ್ಳೋಡಿಯವರೆಂದೂ ಹೇಳಲಾಗುತ್ತಿದೆಯೆಂದು ತಿಳಿದುಬರುತ್ತದೆ. ಇನ್ನೂ ಈ ಮಳಲವಾಡಿಯ ಸುಮಾರು 211 ಭೂಹಿಡುವಳಿ ಹೊಲಗಳೆಲ್ಲ ಕುವೆಂಪು ನಗರದ ಪೂರ್ವದಂಚಿನ ಬಡಾವಣೆಯಾಗಿ ರೂಪಾಂತರ ಹೊಂದಿದ್ದು ಅಲ್ಲಲ್ಲಿ ನವನವೀನ ಮನೆಗಳು ತಲೆಯೆತ್ತುತ್ತಿವೆ. ಹೀಗೆ ಕನಿಷ್ಠ ಸಾವಿರ ವರ್ಷಗಳಷ್ಟು ಪುರಾತನ ಗ್ರಾಮವಾಗಿದ್ದ ಮಣಲೆವಾಡಿ ಭಾಗಶಃ ಕನ್ನೇಗೌಡನ ಕೊಪ್ಪಲಾಗಿಯೂ ಅದರ ಹೊಲವೆಲ್ಲ ಕುವೆಂಪು ನಗರವಾಗಿಯೂ ರೂಪಾಂತರ ಹೊಂದುತ್ತಿದ್ದುದನ್ನು ನರಸಿಂಗನ ಶಾಸನ ಹಾಗೂ ನರಸಿಂಗೇಶ್ವರಾಲಯಗಳು ಮೂಕ ಸಾಕ್ಷಿಗಳಾಗಿ ನೋಡುತ್ತಿರುವಂತಿವೆ ![23] ಭರದಿಂದ ಬೆಳೆಯುತ್ತಿರುವ ಮೈಸೂರು ಕುವೆಂಪು ನಗರೀಕರಣದ ಅಬ್ಬರದಲ್ಲಿ ಈ ಸಾವಿರ ವರ್ಷದ ಶಾಸನಕಲ್ಲು ಕೂಗುತ್ತಿರುವ ಸೊಲ್ಲಾಗಲಿ, ಅದಕ್ಕೆ ಸಂಬಂಧಿಸಿದ ನರಸಿಂಗೇಶ್ವಾರಲಯದ ವಾಸ್ತು ಶಿಲ್ಪದ ಸೊಬಗಾಗಲಿ, ಅದಕ್ಕೆ ದತ್ತಿ ಬಿಟ್ಟಿದ್ದ ಮಣಲೆವಾಡಿಯ ನೆನಪಾಗಲಿ ನಮ್ಮ ಸ್ಮೃತಿಪಟಲದಿಂದ ಜಾರಿ ಹೋಗುವ ಮುನ್ನ ಅವುಗಳ ಮಹತ್ವವನ್ನರಿಯಬೇಕು ಮತ್ತು ಅವನ್ನು ಅಧಿಕೃತವಾಗಿ ದಾಖಲಾತಿಗೊಳಿಸಬೇಕು ; ಕುವೆಂಪುನಗರದ ಐ ಬ್ಲಾಕಿನ ರಸ್ತೆಯಂಚಿನಲ್ಲಿ ಒಂಟಿಯಾಗಿ ನಿಂತಿರುವ ನರಸಿಂಗಯ್ಯನ ಶಾಸನ ಶಿಲೆಯನ್ನು (ಮೈ 223) ಆದಷ್ಟು ಬೇಗ ಆತ ಕಟ್ಟಿಸಿದ ನರಸಿಂಗೇಶ್ವರಾಲಯದ ಆವರಣದಲ್ಲಿ ತಂದಿಡಬೇಕು. ಸ್ಥಳೀಯರು ಈಚೆಗೆ ಇಟ್ಟಿರುವ ಮರಳೇಶ್ವರಾಲಯ ಎಂಬುದಕ್ಕಿಂತ ಶಾಸನೋಕ್ತ ನರಸಿಂಗೇಶ್ವರಾಲಯ ಎಂಬ ಹೆಸರನ್ನೇ ಪುನಃ ಜಾರಿಗೆ ತರುವುದು ಸೂಕ್ತ. ಶಾಸನ ನಾಯಕನಾದ

ನರಸಿಂಗಯ್ಯನ ಆದೇಶದಂತೆ ನರಸಿಂಗೇಶ್ವರಾಲಯಕ್ಕೆ ಬಿಟ್ಟ ಮಣಲವಾಡಿಗ್ರಾಮ ದತ್ತಿಯನ್ನು ಆ ಮೂವರು ನಾಡಗೌಡರು ಪರಿಪಾಲಿಸಿಕೊಂಡು ಹೋಗಿದ್ದಿರಬಹುದು. ಇಂದು ಕೊನೆಯ ಪಕ್ಷ ಈ ಪ್ರಾಚೀನ ದೇವಾಲಯ-ಶಿಲ್ಪ-ಶಾಸನಗಳನ್ನಾದರೂ ನಾವು ಸಂರಕ್ಷಿಸಿಕೊಂಡು ಮುಂಬರುವ ದಿನಗಳಲ್ಲಿ ಆ ದೇಗುಲವು ಆ ಬಡಾವಣೆಯ ಸಾಮಾಜಿಕ-ಧಾರ್ಮಿಕ–ಸಾಂಸ್ಕೃತಿಕ ಕೇಂದ್ರವಾಗುವಂತೆ ಬೆಳೆಸಿಕೊಂಡು ಹೋಗಬೇಕು. ಈ ದಿಶೆಯಲ್ಲಿ ಕನ್ನೇಗೌಡನಕೊಪ್ಪಲಿನವರು ಈ ದೇಗುಲಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿಕೊಂಡಿದ್ದಾರೆ. ದೇಗುಲದ ಸುತ್ತಮುತ್ತಲಿನ ಪ್ರದೇಶವನ್ನು ಮೈಸೂರು ನಗರಾಭಿವೃದ್ಧಿ ಸಮಿತಿಯವರಿಂದ ಪಡೆದು ಕೊಂಡದ್ದಲ್ಲದೆ, ವಾರ್ಷಿಕವಾಗಿ ಈ ದೇಗುಲದಲ್ಲಿ ಉತ್ಸವವನ್ನಾಚರಿಸಬೇಕೆಂದು ತೀರ್ಮಾನಿಸಿರುವುದು ನಿಜಕ್ಕೂ ಸ್ತುತ್ಯರ್ಹ.[24] ಬೆಳೆಯುತ್ತಿರುವ ಮೈಸೂರು ನಗರದಲ್ಲಿಂದು ಹಲವು ಸುಂದರ ದೇವಾಲಯಗಳೂ ಕೆಲವು ಮಸೀದಿಗಳೂ, ಚರ್ಚುಗಳು ಕಂಗೊಳಿಸುತ್ತಿದ್ದು ನಗರದ ಸಾಮಾಜಿಕ ಧಾರ್ಮಿಕ ತೇಜಸನ್ನೂ ಹಾಗೂ ಪ್ರವಾಸಿ ಆಕರ್ಷಣೆಯನ್ನು ಹೆಚ್ಚಿಸುತ್ತಿರುವುದು ನಿಜವಾದರೂ ಈಗಿನ ಕುವೆಂಪು ನಗರದ ಈ ನರಸಿಂಗೇಶ್ವರ ದೇಗುಲವು ಮೈಸೂರು ನಗರದ ಒಂದು ಪ್ರಾಚೀನತಮ ಶಿವಾಲಯ ಎಂಬುದನ್ನು ಶಾಸನೀಯವಾಗಿ ಸ್ಪಷ್ಟಪಡಿಸಬಹುದು. ಅಲ್ಲದೆ ಅದರ ನಿರ್ಮಾತೃ ಹತ್ತನೆಯ ಶತಮಾನದ ಚಾಳುಕ್ಯ ಮಹಾ ಸಾಮಂತ ನರಸಿಂಗಯ್ಯ ಎಂಬುದೂ ಖಚಿತವಾಗಿ ತಿಳಿದುಬರುವುದು. ಅತ ಈ ದೇಗುಲಕ್ಕೆ ಅಭ್ಯಂತರ ಸಿದ್ಧಿಯಾಗಿ ದತ್ತಿ ಬಿಟ್ಟ ಮಣಲವಾಡಿಗ್ರಾಮ. ನಿರ್ನಾಮವಾಗಿ ಹೋಯಿತು; ಪೂರ್ವದ ಬಯಲು ನಾಡು ತರಕಾರಿ ತೋಟವಾಗಿ ಹೋಗಿರಬಹುದು. ಈ 'ಧರ್ಮ'ವನ್ನು ಸಲ್ಲಿಸುತಿದ್ದ ಆ ಮೂವರು ನಾಡಗೌಡರು ಹೇಳಹೆಸರಿಲ್ಲದವರಾಗಿರಬಹುದು. ಆದರೆ ದೇವಾಲಯ ಮತ್ತು ಈ ಎಲ್ಲ ಸಂಗತಿಗಳನ್ನು ಅಧಿಕೃತವಾಗಿ ತಿಳಿಸುವ ಶಾಸನ ಶಿಲೆ ಇನ್ನೂ ಉಳಿದಿದೆಯಲ್ಲ! ಅವನ್ನು ಪರಿಪಾಲಿಸಿಕೊಂಡು ಬರುವಲ್ಲಿ ಇಡೀ ಮೈಸೂರು ನಗರ ಮುಂದಾಗಬೇಕು. ಕಾರಣ ಅದರಲ್ಲಿ ಇಷ್ಟೊಂದು ಪ್ರಾಚೀನತಮ ಶಿವಾಲಯವೊಂದು ಅಂತರ್ಗತ ವಾಗಿರುವುದು ಈ ನಗರದ ಸಾಂಸ್ಕೃತಿಕ ಕಲಾ ಇತಿಹಾಸದ ದೃಷ್ಟಿಯಿಂದ ತುಂಬ ಮಹತ್ವದ್ದಲ್ಲವೆ?[25]

ಟಿಪ್ಪಣಿಗಳು

*ಮೈಸೂರಿನಲ್ಲಿ ನಡೆದ (ಫೆ 9–11, 1985) ಐದನೆಯ ದಕ್ಷಿಣ ಭಾರತೀಯ ಇತಿಹಾಸ ಸಮ್ಮೇಳನದಲ್ಲಿ ಮಂಡಿಸಿದ ಸಂಪ್ರಬಂಧ)

1. **ಎಂಎಆರ್** 1907–8, 1912, 1916
2. **ಎಕ** XIV ಮೈಸೂರು 1943, ಮೈ 127
3. **ಅದೇ** ಪು. 115–16
4. **ಎಕ** V (ಪರಿಷ್ಕೃತ ಮುದ್ರಣ). ಮೈಸೂರು. 1976 ಪು. 1, 321.
5. ಪುರಾತತ್ವ ಶಾಸ್ತ್ರದ ಸಾಮಾನ್ಯ ನಿಯಮದಂತೆ ಪ್ರಾಕ್ತನ ವಸ್ತು ವಿಶೇಷವನ್ನು ಮೊದಲ ಬಾರಿಗೆ ಒಂದು ಸ್ಥಳದಲ್ಲಿ ಕಂಡುಹಿಡಿದಾಗ ಆ ಸ್ಥಳದ ಹೆಸರು ಆ ವಸ್ತುವಿನೊಟ್ಟಿಗೆ

ಸೇರಿಕೊಂಡಿರುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಶಾಸನ ಕುಕ್ಕರಹಳ್ಳಿಯಲ್ಲಿ ಸಿಗದಿದ್ದರಿಂದ 'ಕುಕ್ಕರಹಳ್ಳಿ ಶಾಸನ' ಎಂದು ಹೆಸರಿಸುವುದೂ ಸೂಕ್ತವಲ್ಲ. 'ಮಣಲೆವಾಡಿ ಶಾಸನ' ಎಂದು ಬೇಕಾದರೆ ಕರೆಯಬಹುದು. ಆದರೆ ಆ ಮಣಲೆವಾಡಿ ಈಗಿಲ್ಲವಾದ್ದರಿಂದ 'ಕುವೆಂಪುನಗರ ಶಾಸನ' ಎನ್ನುವುದೇ ಈಗ ಸರಿಯೆನ್ನಿಸುವುದಲ್ಲವೇ?

6. ಶಾಸನ ಕಂಡರಿಸಿದ ಶಿಲೆ ಬೆಣಚುಕಲ್ಲು ಮಿಶ್ರಿತ ದೊರಗು ಕಣಶಿಲೆಯಾಗಿದ್ದು ಅಕ್ಷರ ಕಂಡರಣೆಗೆ ತೊಡಕಾಗಿರುವುದು. ಕೆಲವು ಅಕ್ಷರಗಳನ್ನು ಕೊರೆಯುವಾಗ ಚಕ್ಕೆಗಳು ಎದ್ದಿವೆ, ಆದರೂ ಹೊಸದಾಗಿ ತೆಗೆದ ಪಡಿಯಚ್ಚನ್ನಾಧರಿಸಿ ಶಾಸನ ಪಾಠವನ್ನು ಓದಲಾಗಿದೆ.

7. ಅಕ್ಷರ ಅಷ್ಟು ಸ್ಪಷ್ಟವಾಗಿಲ್ಲ. 'ಮಟ್ಟಿನ ಚರಿತನ್' ಎಂದು ಈ ಹಿಂದೆ ಓದಲಾಗಿದೆ. ಆದರೆ ಇದರ ಅರ್ಥ ಅಸ್ಪಷ್ಟವಾಗುತ್ತದೆ. ಆದ್ದರಿಂದ ಮತ್ತಿನ ಚರಿತನ್ ಎಂದಿಟ್ಟುಕೊಂಡರೆ ಸೂಕ್ತ.

8. –'ನಾಳ್ಡಾನಿವೀರಂ' ಎಂದು ಓದಲಾಗಿತ್ತು.

9. ಎಂ. ಎಚ್. ಕೃಷ್ಣರು ಹೀಗೇ ಓದಿದ್ದು ಸರಿಯೆನ್ನಿಸುತ್ತದೆ. 'ವಾರವ್ವಿಗಣ್ಡ' ಎಂಬುದು ಅರ್ಥವಾಗದು.

10. ಇದನ್ನು ಆರ್. ನರಸಿಂಹಾಚಾರ್ ಹಾಗೂ ಎಂ.ಎಚ್. ಕೃಷ್ಣ ಅವರು 'ಮುನ್ನೂರ್ ಗಾವುಣ್ಡುಗಳು' ಎಂದಿಟ್ಟುಕೊಂಡಿದ್ದಾರೆ. ಆದರೆ ಮೂವರ್ನ್ನಾರ್ಗ್ಗಾವುಣ್ಡ > ಮೂವರ್ನಾಟ್ಗಾವುಣ್ಣುಗಳು ಎನ್ನುವುದೇ ಸರಿ.

11. ಈ ನರಸಿಂಗನು ಪಂಪನ ಆಶ್ರಯದಾತನಾದ ಅರಿಕೇಸರಿಯ ತಂದೆಯಾದ ನರಸಿಂಗನಾಗಿರಬಹುದೆಂದು ಆರ್. ನರಸಿಂಹಚಾರ್ ಅವರು ಒಂದು ಊಹೆ ಮಾಡಿದ್ದುಂಟು. ಅದನ್ನು ಒಪ್ಪಿಕೊಳ್ಳುವುದಾದರೆ ಕನ್ನಡ ಸಾಹಿತ್ಯದ ಇತಿಹಾಸದ ದೃಷ್ಟಿಯಿಂದಲೂ ಈ ಶಾಸನ ಗಣನೀಯ ಮಹತ್ವವನ್ನು ಪಡೆದೀತು. ಪಂಪನ **ವಿಕ್ರಮಾರ್ಜುನ ವಿಜಯ**ದಲ್ಲೂ ನರಸಿಂಗನ ಉಲ್ಲೇಖವಿದೆ. ಈ ಊಹೆಯನ್ನು ಪುನರ್ ಪರಿಶೀಲನೆಗೆ ಒಳಪಡಿಸುವುದು ಅಗತ್ಯವೆಂದು ತೋರುತ್ತದೆ.

12. ನೋಡಿ. ಡಿ. ಸಿ. ಸರ್ಕಾರ್ **ಇಂಡಿಯನ್ ಎಪಿಗ್ರಾಫಿಕಲ್ ಗ್ಲಾಸರಿ**, ದೆಹಲಿ, 1966 ಈ ಶಾಸನೋಲ್ಲಿಖಿತ ಪದ ಅಂದಿನ ಸಾಮಾಜಿಕ, ಆರ್ಥಿಕ ಇತಿಹಾಸ ದೃಷ್ಟಿಯಿಂದ ಸ್ವಾರಸ್ಯಕರವಾಗಿದೆ. ಮಣಲೆವಾಡಿ ಗ್ರಾಮದ ಆದಾಯ ತೆರಿಗೆ, ಕಂದಾಯ ರೂಪದಲ್ಲಿ ಆ ಮೂವರು ನಾಡಗೌಡರಿಗೆ ಸಲ್ಲಿಸಬಹುದಾಗಿತ್ತು. ನರಸಿಂಗಯ್ಯನಿಗೆ ಕೊಡುವುದು ಅನಗತ್ಯವಾಗಿದ್ದಿರಬಹುದು. ಮಣಲವಾಡಿಯನ್ನು ಹೊಯ್ಸಳ ಕಾಲದಲ್ಲಿ ಮಾರ್ಬಳ ತೀರ್ಥಕ್ಕೆ ಮತ್ತೆ ದತ್ತಿ ಬಿಟ್ಟಿರುವುದೂ ಸ್ವಾರಸ್ಯಕರವಾಗಿದೆ.

13. ವರುಣದ ವಾಸ್ತು–ಶಿಲ್ಪ ಶಾಸನ ಮುಂತಾದವುಗಳನ್ನೊಳಗೊಂಡಂತೆ ಒಂದು ಅಧ್ಯಯನವನ್ನು ಕೈಕೊಂಡಿದ್ದು ಅದನ್ನು ಪ್ರತ್ಯೇಕ ಪುಸ್ತಕದಲ್ಲಿ ಪ್ರಕಟಿಸಲಾಗುವುದು.

14. ಕನ್ನೇಗೌಡನ ಕೊಪ್ಪಲಿನ ದ್ಯಾವಪ್ಪಿಗೌಡ ಹಾಗೂ ದೇವಾಲಯದ ಟ್ರಸ್ಟಿನ ಕಾರ್ಯದರ್ಶಿ–ಎಂ. ಕೃಷ್ಣ ಮುಂತಾದವರಿಂದ ಈ ಮಾಹಿತಿಗಳನ್ನು ಸಂಗ್ರಹಿಸಲಾಯಿತು.

15. ಮೈಸೂರು ನಗರದ ಅಠಾರಾ ಕಚೇರಿಯಲ್ಲಿರುವ ಪ್ರಾಚೀನ ನಕಾಶೆಗಳನ್ನಾಧರಿಸಲಾಗಿದೆ.

16. ಈ ದೇಗುಲವನ್ನು ಪುನರುಜ್ಜೀವನ ಗೊಳಿಸುವಾಗ ಮೂಲಗರ್ಭಗೃಹವನ್ನಾಗಲಿ, ನವರಂಗವನ್ನಾಗಲಿ ಅವುಗಳ ಪ್ರಮಾಣದ ದೃಷ್ಟಿಯಿಂದ ಬದಲಾಯಿಸಿಲ್ಲವೆಂದು ತಿಳಿದುಬರುತ್ತದೆ.

17. ಈಗ ಪೀಠಭಾಗಗಳನ್ನು ನಂದಿಯಡಿಯ ಪೀಠವನ್ನಾಗಿ ಬಳಸಲಾಗಿದೆ.

18. ಹಲವು ವಿಗ್ರಹಗಳನ್ನು ಬಳಪದ ಕಲ್ಲಿನಲ್ಲಿ ಕೆತ್ತಲಾಗಿದ್ದು, ವರುಣದಲ್ಲಿರುವ ಬೂತೇಶ್ವರ ದೇಗುಲ ಹಾಗೂ ಶಿಲ್ಪಗಳನ್ನು ಬಳಪದ ಕಲ್ಲಿನಲ್ಲೇ ನಿರ್ಮಿಸಲಾಗಿರುವುದನ್ನು ಗಮನಿಸಬೇಕು.

19. ಮಹಿಷಾಸುರ ಮರ್ದಿನಿಯ ಶಿಲ್ಪದಲ್ಲಿ ಕುಚಬಂಧವಿರುವುದು ಅಸ್ಪಷ್ಟವಾಗಿದೆ. ಆದರೂ ಮೂರ್ತಿ ಶೈಲಿಯ ದೃಷ್ಟಿಯಿಂದ ಅದು ಹತ್ತನೆಯ ಶತಮಾನಕ್ಕೆ ಸೇರಬಹುದು.

20. ಬಹುಶಃ ಪ್ರಾಚೀನ ಊರಾದ ಮಣಲಿವಾಡಿಯನ್ನು ನೆನಪಿಸಿಕೊಳ್ಳಲು ಈ ಹೆಸರನ್ನು ಇಟ್ಟಿರಬಹುದೇ?

21. ಎಕ V (1976) ಮೈ 135 (III ಮೈ 16)

22. ಅದೇ ಮೈ 99 (XIV–ಮೈ 115)

23. ಪೂರ್ವದ ಬಯಲುನಾಡಿನಲ್ಲಿ ಮಾತ್ರ ಈಗ ತರಕಾರಿ ತೋಟ-ತೆಂಗಿನ ತೋಟ ಎದ್ದಿದೆ.

24. ಕನ್ನೇಗೌಡನ ಕೊಪ್ಪಲಿನ ಗೌಡರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಶಾಸನ ಶಿಲೆಯನ್ನು ತರುವಲ್ಲಿ ಕೊಪ್ಪಲಿನ ಹಲವರು ವಿಶೇಷ ಆಸಕ್ತಿ ತೋರಿದ್ದಾರೆ. ಟ್ರಸ್ಟ್ ಬೋರ್ಡಿನವರೂ ಕಾಳಜಿ ತೋರಿದ್ದಾರೆ.

25. ಇದಕ್ಕಿಂತ ಪ್ರಾಚೀನವಾದ ಸಿಮಾರ್ತ್ಯವಿನ ಹೆಸರನ್ನೊಳಗೊಂಡಂತೆ ಶಿವಾಲಯ–ಮೈಸೂರು ನಗರದಲ್ಲಿರುವುದು ಇದುವರೆಗೂ ನನಗೆ ತಿಳಿದು ಬಂದಿಲ್ಲ.

ಆರ್. ರಾಜಪ್ಪ ದಳವಾಯಿ

ಆಸಂದಿಯ ಎರಡು ತಾಮ್ರ ಶಾಸನಗಳು

ಆಸಂದಿ, ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಇದು ಅಜ್ಜಂಪುರ–ಹೊಸದುರ್ಗ ರಸ್ತೆಯಲ್ಲಿರುವ ಬೇಗೂರು ಗ್ರಾಮದಿಂದ ಸುಮಾರು ಎರಡು ಮೈಲಿ ದೂರದಲ್ಲಿದೆ. ಊರನ್ನು ಪ್ರವೇಶಿಸುತ್ತಿದ್ದಂತೆಯೇ ಹಾಳು ಬಿದ್ದಿರುವ ಹೊಯ್ಸಳ ದೇವಾಲಯಗಳು, ತುಂಡು ತುಂಡಾಗಿರುವ ಶಿಲಾವಿಗ್ರಹಗಳು, ದೊಡ್ಡ ದೊಡ್ಡ ಶಿಲಾಶಾಸನಗಳು ಆಸಂದಿ ಗ್ರಾಮದ ಮೇಲ್ನೋಟ. ಸುಮಾರು ನೂರಕ್ಕೂ ಹೆಚ್ಚು ಕುಟುಂಬಗಳಿರುವ ಈ ಊರಿನಲ್ಲಿ, ತಮ್ಮ ಮನೆಯ ಮುಂಭಾಗಕ್ಕೆ ಗೋಡೆ ಕಟ್ಟುವ ಸಲುವಾಗಿ ಇಟ್ಟಿಗೆಗಳ ಅವಶ್ಯಕತೆಯಿಂದ ಊರಿನಿಂದ ಸುಮಾರು ಅರ್ಧಮೈಲಿ ದೂರದಲ್ಲಿರುವ 'ಕ್ವಾಟೆಹಾಳು' ಎಂಬ ಪ್ರದೇಶದಲ್ಲಿ ದಿಬ್ಬವೊಂದನ್ನು ಅಗೆಯುತ್ತಿದ್ದ ರೇವಣ್ಣರ ಮರಳು ಸಿದ್ದಪ್ಪನವರ ಮಗ ರಾಜಪ್ಪ ಎಂಬುವರಿಗೆ ಸಿಕ್ಕ ಈ ಎರಡು ಶಾಸನಗಳು ಮೊದಲಿಗೆ ಬಂಗಾರವೆಂದು ಕುತೂಹಲ ಹುಟ್ಟಿಸಿದವುಗಳಾದವು. ಆದ ಕಾರಣವೇ ಮೊದಲಿನ ಶಾಸನದ ಮೊದಲಿನ ಹಲಗೆ ಮೂರು ತುಂಡಾಗಿ ಕತ್ತರಿಸಲ್ಪಟ್ಟಿದೆ. ಕದಂಬರ ತಾಮ್ರ ಶಾಸನಗಳು ಸಿಕ್ಕಿರುವ ಮುದಿಗೆರೆ ಎಂಬ ಗ್ರಾಮವೂ ಆಸಂದಿಯ ಪಕ್ಕದಲಿಯೇ ಇದೆ. 'ಕ್ವಾಟೆಹಾಳು' ಪ್ರದೇಶ ಗತಿಸಿ ಹೋಗಿರುವ ಸಂಸ್ಕೃತಿಯೊಂದನ್ನು ಸಾರುತ್ತಿದೆ. ಸಂಶೋಧಕರಿಗೆ ಈ ಸ್ಥಳ ಉತ್ತಮವಾದ್ದೆಂದು ನನ್ನ ಭಾವನೆ. ಅಲ್ಲದೇ ಇಲ್ಲಿ ಹಲವಾರು ಜೈನ ವಿಗ್ರಹಗಳು ಉರ್ದುವಿನಂತಹ ಲಿಪಿಯನ್ನೊಳಗೊಂಡಂತ ನಾಣ್ಯಗಳು ಮುಂತಾದ ಪ್ರಾಚ್ಯ ವಸ್ತುಗಳು ದೊರೆತಿವೆ. ಈ ಎರಡು ತಾಮ್ರ ಶಾಸನಗಳು ಆಸಂದಿಯಲ್ಲೇ ಹೈಸ್ಕೂಲ್ ಮಾಸ್ಟರಾಗಿರುವ ಎಸ್. ಚಂದ್ರಪ್ಪ ಎಂಬುವರ ನೆರವಿನಿಂದ ನನಗೆ ಡಿಸೆಂಬರ್ 20, 1984ರಂದು ದೊರಕಿದವು. ಇವುಗಳ ಶಾಸನ ಪಾಠವನ್ನು ಸಿದ್ಧಪಡಿಸಿ ಕೊಟ್ಟವರು ಕನ್ನಡ ಅಧ್ಯಯನ ಸಂಸ್ಥೆಯ ಶಾಸನ ವಿಭಾಗದ ಶ್ರೀ ಸೀತಾರಾಮು ಜಾಗೀರ್‌ದಾರ್ ಮತ್ತು ಶ್ರೀ ಎಚ್. ಎಂ. ನಾಗರಾಜರಾವ್.

ಒಂದನೆಯ ಶಾಸನ

ಇದು ಮೂರು ತಾಮ್ರದ ಹಲಗೆಗಳಿಂದ ಕೂಡಿದೆ. ಇವುಗಳ ಎರಡೂ ಕಡೆಗಳಲ್ಲಿಯೂ ಅಕ್ಷರಗಳನ್ನು ಕೊರೆಯಲಾಗಿದೆ. ಅಕ್ಷರಗಳು ಎರಡನೆಯ ಶಾಸನದಷ್ಟೇನೂ ಮುದ್ದಾಗಿಲ್ಲ. ಮೊದಲ ಹಲಗೆ ಮೂರು ತುಂಡುಗಳಾಗಿ ಕತ್ತರಿಸಲ್ಪಟ್ಟಿದೆ. ಕೊನೆಯ ಹಲಗೆಯ ಕೊನೆಯ ಭಾಗದಲ್ಲಿ ಮಾತ್ರ ಐದು ಸಾಲುಗಳನ್ನು ಬರೆಯಲಾಗಿದೆ. ಉಳಿದ ಭಾಗಗಳಲ್ಲಿ ನಾಲ್ಕು ನಾಲ್ಕು ಸಾಲುಗಳನ್ನು ಬರೆಯಲಾಗಿದೆ. ಈ ಹಲಗೆಗಳನ್ನು ತಾಮ್ರದ ಉಂಗುರದಿಂದ ಜೋಡಿಸಲಾಗಿದೆ. ಈ ಉಂಗುರ ಗಜ ಮುದ್ರೆಯನ್ನು ಉಳ್ಳದ್ದಾಗಿದೆ. ಇದರಲ್ಲಿರುವ ಲಿಪಿ ಕನ್ನಡ. ಭಾಷೆ ಸಂಸ್ಕೃತ

ಹಾಗೂ ಕನ್ನಡವಾಗಿದೆ. ಇದರ ಕಾಲ ಸುಮಾರು ಎಂಟನೆಯ ಶತಮಾನ. ಇದು ಗಂಗ ವಂಶಕ್ಕೆ ಸಂಬಂಧಪಟ್ಟ ಶಾಸನವಾಗಿದೆ. ಇದರ ವಂಶಾವಳಿ ಹಾಗೂ ವಿವರವೆಂದರೆ, ಕೊಙ್ಗಣಿವರ್ಮ–ಮಾಧವ–ಹರಿವರ್ಮ–ವಿಷ್ಣುಗೋಪ–ಮಾಧವ- ಅವಿನೀತ–ದುರ್ವಿನೀತ- ಮೊಕ್ಕರ (ಮುಷ್ಕರ) –ಶ್ರೀವಿಕ್ರಮ–ಶ್ರೀವಲ್ಲಭ-(ಕಟ್ಟಾಣೆ)–ಅರಸಾಣೆ. ಕಟ್ಟಾಣೆ ಎಂಬುದು ಸ್ತ್ರೀ ಪುರುಷನ ಹೆಸರು. ಅಲ್ಲದೇ ಅರಸಾಣೆ ಎಂಬ ಹೆಸರು ಈ ವರೆಗೆ ಬೇರಾವ ಶಾಸನದಲ್ಲೂ ಉಕ್ತವಾಗಿಲ್ಲ. ಈತ ನೀತಿಶಾಸ್ತ್ರ, ತರ್ಕ, ವ್ಯಾಕರಣ, ನಾಟಕ, ಇತಿಹಾಸ, ಪುರಾಣಗಳಲ್ಲಿ ಪಾಂಡಿತ್ಯ ಹೊಂದಿದವನೆಂದು ಶಾಸನ ವರ್ಣಿಸುತ್ತದೆ. ಮತ್ತು ಕೇದಿಭಾಗದ 'ರಾಹುಕೊಳುಂ ಪಾಣಿಗ್ರಹಣ' ಎಂಬುದು ಗಮನಾರ್ಹ.

ಅರಸಾಣೆ ಮಹಾರಾಜ ಮಣುಗೆಜ಼ೆ ವಿಷಯಕ್ಕೆ ಸೇರಿದ ಪೆರು ಎಂಬ ಹೆಸರಿನ ಗ್ರಾಮದಲ್ಲಿನ ಚೈತ್ಯಾಲಯಕ್ಕೆ ಸಂಬಂಧಪಟ್ಟಂತೆ ಮೂಲ ಸಂಘದ ಗುಣನನ್ದಿ ಮುನಿಗೆ ಭೂಮಿದಾನ ನೀಡಿದುದರ ವಿವರವಿದೆ.

ಇದರಲ್ಲಿನ ಹಲಗೆಗಳ ಉದ್ದ 20.5 ಸೆಂ. ಮೀ. ಅಗಲ 4.7 ಸೆಂ. ಮೀ. ದಪ್ಪ 2 ಮಿ. ಮೀ. ಅಲ್ಲದೆ ಮುಖ್ಯವಾದೊಂದು ಅಂಶವೆಂದರೆ ಈ ಶಾಸನದ ಲಿಪಿ ಹಾಗೂ ಭಾಷೆ ಸಂದೇಹಕ್ಕೆ ಅಸ್ಪದ ನೀಡುತ್ತದೆಯಾದ್ದರಿಂದ ಇದನ್ನು ಸ್ವಜ ಶಾಸನ ಎಂದು ಹೇಳಲಾಗುವುದಿಲ್ಲ.

ಶಾಸನ ಪಾಠ

(ಕನ್ನಡ ಲಿಪಿ-ಸಂಸ್ಕೃತ, ಕನ್ನಡ ಭಾಷೆ-ಗಜಮುದ್ರೆ)

ಮೊದಲ ಹಲಗೆ–ಮುಂಭಾಗ :

1. ಸ್ವಸ್ತಿ ಶ್ರೀಮತ್ ಉದಿತೋದಿತಕುಲ ಪ್ರ [ ] ತವೀರ್ಯೋಯಶಸಾ ಶ್ರೀಮತ್ ಜಾನ್ಹವೇಯ

2. ಯೋತ್ತುಙ್ಗಕುಲವ್ಯೋಮಾವ ಬಾಸ [ ] ಶಶಾಙ್ಕಸ್ಯ ಅವಿನೀತಲ ದ್ವಿಜಾತಿ ವಯೋ

3. ವಾಸವೃಕ್ಷಸ್ಯ ಸ್ವ ಬಾಹ್ವ ಪ್ರಹಾ [ರ]ಖಣ್ಡಿತ ಶಿಲಾಸ್ತಮ್ಬಲಬ್ದ ಪರಾಕ್ರಮದಾರು

4. ಣಾರಿಣರಣೋಪಲಬ್ಧವ್ರಣ ವಿಭೂಷಿತಸ್ಯ ಕಾಣ್ವಾಯನಸಗೋತ್ರಸ್ಯ ಶ್ರೀಮತ್

ಮೊದಲ ಹಲಗೆ–ಹಿಂಭಾಗ :

5. ಕೊಙ್ಗಣಿವರ್ಮಧರ್ಮಮಹಾಧಿರಾಜಸ್ಯ ಪುತ್ರಃ ಶ್ರೀಮತ್ಮಾಧ [..] ನುದ್ಧ್ಯಾತೋ ಮಾಧವಾದಿ ಮಹಾರಾಜಸ್ಯ

6. ತಸ್ಯಪುತ್ರಸ್ಯ ಶ್ರೀಮತ್ ಹರಿವ [ರ್ಮ್ಮಮ] ಹಾಧಿರಾಜಸ್ಯ ತಸ್ಯಪುತ್ರಸ್ಯವಿ

7. ಷ್ಣುಗೋಪಮಹಾಧಿರಾಜಸ್ಯ ತ [ಸ್ಯ] ಪುತ್ರಸ್ಯ ಶ್ರೀಮತ್ ಮಾಧವಾದಿ ಮ

8. ಹಾರಾಜಸ್ಯ ತಸ್ಯ ಪುತ್ರಸ್ಯ ಕದಮ್ಬ ಕೃಷ್ಣವರ್ಮ್ಮ ಭಾಗಿನೇಯಸ್ಯ ಶ್ರೀಮತ್ಕೊಙ್ಗಣಿ

ಎರಡನೆಯ ಹಲಗೆ–ಮುಂಭಾಗ :

9. ಮಹಾರಾಜಸ್ಯ ಅವಿನೀತಸ್ಯ ತಸ್ಯ ಪುತ್ರಸ್ಯ ಆನ್ದರಿಯ ಮಹಾಯುದ್ಧ ವಿಜ

10. ಯ ವಲ್ಲಧಿ ಲಕ್ಷ್ಮಿ ವಧುಗ್ರಹಣ ಲಬ್ಧಪತಾಕಸ್ಯ ದುರ್ವ್ವಿನೀತಸ್ಯ ಶ್ರೀಕೊಙ್ಗು

11. ಣಿ ಮಹಾಧಿರಾಜಸ್ಯ ತಸ್ಯಪುತ್ರಸ್ಯ ಶ್ರೀಮತ್ಮೊಕ್ಕರಾಜ್ಯಸ್ಯ ತಸ್ಯಪುತ್ರಸ್ಯ

12. ಶ್ರೀ ವಿಕ್ರಮ [ಮ] ಹಾಧಿರಾಜಸ್ಯ ತಸ್ಯ ಪ್ರ [ತ್ರ]ಸ್ಯ ಶ್ರೀವಲಭಸ್ಯ ಮಹಾರಾಜಸ್ಯ ಶ್ರೀಮತ್ ಕ

ಎರಡನೆಯ ಹಲಗೆ–ಹಿಂಭಾಗ:

13. ಟ್ಟಾಣಿಮಹಾಧಿರಾಜಸ್ಯ ತಸ್ಮಪುತ್ರಸ್ಯ ತಸ್ಯ ಅರಸಾಣಿ ನಾಮಧೇಯಸ್ಯ

14. ಮ [ಹಾ]ರಜಯೋಪಲಬ್ಧ ವಿಭೂಷಿತಸ್ಯ ನೀತಿ ಶಾಸ್ತ್ರ ಕುಶಲಾನೇಕತರ್ಕ್ಕಸಮ

15. ಯ ವ್ಯಾಕರಣ ನಾಟಕಾಖ್ಯಾಯಿಕೇತಿಹಾಸ ಪುರಾಣ ಕೋಶಲಸ್ಯ ವಿ

16. ದ್ಯ ವೃತ್ತಪರಾಯಣಸ್ಯ ಶಙ್ಕಕ್ಷೀರ ಸಮಾನ ಮಾತೃಪಿತೃ ಪಕ್ಷೋಭಯಶುದ್ಧ

ಮೂರನೆಯ ಹಲಗೆ–ಮುಂಭಾಗ :

17. ಕುಲಾನ್ವಿತಸ್ಯ ಅನೇಕ ಭೂಮಣ್ಡ[ಲ]ರಾಜಾಧಿಪ ಶ್ರೀಮತ್ ಕೊಙ್ಗುಣಿ ಮಹಾಧಿರಾ

18. ಜಸ್ಯ ಮಜುಗರೆ ವಿಷಯೇ ಪೆರು ನಮ ಗ್ರಾಮ ಚೈತ್ರಾಲಯ ಪಾಲ್ಗುನಾಮಾ

19. ಸೇ ರಾಹುಕೊಳುಂ ಪಾಣಿಗ್ರಹಾಣೇ ಗುಣನನ್ದಿಮುನಿ ಪೆಣ್ಣಲ್ಲ ಮೂಲ ಸ[ಂ]ಘೇ

20. ಅರಸಾಣಿ ಮಹರಾಜ್ಯೇ ದತ್ತಿಪಜನ್ತ ನಾಮಗ್ರಾಮೇ ಪೂರ್ವ್ವೋತ್ತರೇ ಘತ್ಮತಟಾಕೇ ಮಹಾತ

ಮೂರನೆಯ ಹಲಗೆ–ಹಿಂಭಾಗ:

21. ಟಾಕೇ ಪನಿರ್ರಕಣ್ಣುಕಪೋಪಮಾತ್ರಸ್ಯ ಎರಡು ಪಾಟುಂ ಪೇರೆಲದಾ ಅಲ್ಲಿ ಒನ್ದು ಅದವುಂ ಬಡಗೇರಿಯು[ಂ] ಕ

22. ಞ್ಞೊಟ್ಟಿಯುಂ ನಾಡಡರುಂ ಸೀಮೆ ಆಗೆ ಕಾಡಕೆಯುಂ ಮರೆಕೆಜ಼ಿ ಏಕಭುಕ್ತ್ತಂ ಕೆವಿಗಣ ಸೀಮೆಯುಂ

23. ಲಡಿ ಕೆಜ಼ಿವರೇಉಂ ತಾಮಗೆಜ಼ಿಯ ವಯಲುಂ ಎರಡುಂ ಕ

24. ಡೆಗೋಡೆ ಮೇರೆ ಇ ವಿಕ್ಕೆಯ ಪರುಪಾಯುಂ ಕೊಟ್ಟರ್ವ್ವೇದಿಯಕ್ಕೆ ಅರಸಾಣಿ ಮಹಾ

25. ರಾಜರ್ ಇದನ ಟಿಪ್ಪೋನ್ ಪಞ್ಚಮಹಾಪಾತ [ಕ] ನಕಂ.

ಎರಡನೆಯ ಶಾಸನ

ಇದು ಒಟ್ಟು ಐದು ಹಲಗೆಗಳನ್ನು ಹೊಂದಿದೆ. ಮೊದಲ ಹಾಗೂ ಕೊನೆಯ ಹಲಗೆಗಳ ಹೊರಮೈಯಲ್ಲಿ ಅಕ್ಷರಗಳನ್ನು ಬರೆದಿಲ್ಲ. ಅಕ್ಷರಗಳು ತುಂಬಾ ಮುದ್ದಾಗಿ, ಸ್ಪಷ್ಟವಾಗಿ ಇವೆ. ಹಲಗೆಗಳ ಒಂದೊಂದು ಮಗ್ಗುಲಲ್ಲೂ ಹನ್ನೆರಡು, ಹನ್ನೆರಡು ಸಾಲುಗಳಿವೆ. ಐದನೆಯ ಹಲಗೆಯ

ಮುಂಭಾಗದಲ್ಲಿ ಪತ್ತು ಸಾಲುಗಳಿವೆ. ಈ ಹಲಗೆಗಳನ್ನು ಗಟ್ಟಿಯಾದ ತಾಮ್ರದ ಉಂಗುರದಿಂದ ಬಂಧಿಸಲಾಗಿದೆ. ಉಂಗುರ ಗಜಲಾಂಛನವುಳ್ಳದ್ದಾಗಿದೆ. ಶಾಸನದ ಲಿಪಿ ಕನ್ನಡ, ಭಾಷೆ ಸಂಸ್ಕೃತ ಹಾಗೂ ಕನ್ನಡದಲ್ಲಿದೆ. ಈ ಹಲಗೆಗಳ ಉದ್ದ 24 5 ಸೆಂ. ಮಿ. ಅಗಲ 10.6 ಸೆಂ. ಮಿ. ದಪ್ಪ 4. ಮಿ. ಮಿ.

ಈ ಶಾಸನ ಇಮ್ಮಡಿ ಶಿವಮಾರನ ಆಳ್ವಿಕೆಗೆ ಸೇರಿದುದು. ಇದರಲ್ಲಿ ಹೇಳಿರುವ ವಂಶಾವಳಿ ಈ ರೀತಿ ಇದೆ: ಕೊಙ್ಗಣಿವರ್ಮ-ಮಾಧವ ಹರಿವರ್ಮ–ವಿಷ್ಣುಗೋಪ–ಮಾಧವ–ಅವಿನೀತ–ದುರ್ವಿನೀತ–ಮುಷ್ಕರ–ಶ್ರೀವಿಕ್ರಮ-ಭೂವಿಕ್ರಮ–ಶ್ರೀವಲ್ಲಭ-ಶಿವಮಾರ. ಈ ಕೊನೆಯ ಅರಸನ ಪೌತ್ರ ಶ್ರೀಪುರುಷ. ಈತನ ಮಗ ಶಿವಮಾರ. ಶಿವಮಾರನ ಮಗ ಜಯಸಿಂಹ. ಈ ಜಯಸಿಂಹ ಮಾರಸಿಂಹ ಇದ್ದಿರಬೇಕು. ಶಾಸನದಲ್ಲಿ ಉಕ್ತವಾದ ತೇದಿ ವಿವರಣೆಗಳೆಂದರೆ: ಶಕ 717 ಆಷಾಢ ಮಾಸದ ಅಯನ ಸಂಕ್ರಾಂತಿ (ಕ್ರಿ. ಶ. 795–ಜೂನ್ 24 ಅಥವಾ ಜುಲೈ 25) ಈ ಉಲ್ಲೇಖ ನಾಲ್ಕನೆಯ ಹಲಗೆಯ ಮುಂಭಾಗದ ಎಂಟು–ಒಂಭತ್ತನೇ ಸಾಲಿನಲ್ಲಿ ಬರೆದಿದೆ.

ಮಗ ಜಯಸಿಂಹನ ವಿಜ್ಞಾಪನೆಯ ಮೇರೆಗೆ ಅರಸ ಶಿವಮಾರ ಅಸಂದಿ ವಿಷಯಕ್ಕೆ ಸೇರಿದ ತೋಱುಗಲ್ಲು ಎಂಬ ಗ್ರಾಮವನ್ನು ವೃತ್ತಿಗಳಾಗಿ ವಿಂಗಡಿಸಿ ನಂದಿಗ್ರಾಮದ ಅತ್ರೇಯ ಗೋತ್ರದ ಪನಂಕಾಟದತ್ತಶರ್ಮ, ದಾಯಣೇಯಕುಲದ ಇಂದ್ರಪ್ರಮದ, ವಸಿಷ್ಠಗೋತ್ರದ ವಿಷ್ಣುದಾಸಶರ್ಮ, ಪಟೂರು ಗ್ರಾಮದ ವಸಿಷ್ಠಗೋತ್ರದ ವಿಂಧ್ಯಕುಮಾರಶರ್ಮ, ಚಾಂದೂರು ಗ್ರಾಮದ ಭಾರದ್ವಾಜ ಗೋತ್ರದ ದ್ರೋಣಶರ್ಮ, ಪರನ್ನೂರು ಗ್ರಾಮದ ಭಾರದ್ವಾಜಗೋತ್ರದ ಭಾಸ್ಕರ, ಕುಮುಳೂರು ಗ್ರಾಮದ ಕೌಶಿಕ ಗೋತ್ರದ ಶಿವಕುಮಾರಶರ್ಮ, ಆಳಂಪೂರು ಗ್ರಾಮದ ಕಾಶ್ಯಪಗೋತ್ರದ ನಾರಾಯಣಶರ್ಮ, ಮುಡುಂಬಿ ಗ್ರಾಮದ ಕಾಮುಕಾಯನಗೋತ್ರದ ಶಿವಶರ್ಮ, ಅದೇ ಗ್ರಾಮದ ಕೌಶಿಕ ಗೋತ್ರದ ನಾರಾಯಣಶರ್ಮ ಹಾಗೂ ಬಾದಾಮಿಗ್ರಾಮದ ಭಾರದ್ವಾಜಗೋತ್ರದ ನಾಗಶರ್ಮರಿಗೆ ದಾನವಿತ್ತುದು ಈ ಶಾಸನದ ಸಾರಾಂಶ. ಈ ಪ್ರತಿಗ್ರಹಿಗಳು ಪರೋಪಕಾರಿಗಳು, ಯಮನಿಯಮ ತತ್ಪರರು ಹಾಗೂ ದೇವದ್ವಿಜಗುರು ಪೂಜನಾರತರು. ಈ ದಾನಕ್ಕೆ ಸಾಕ್ಷಿಗಳು ಗಂಗಾವಾಡಿಯ (ಷಣ್ಣವತಿ ಸಹಸ್ರ ವಿಷಯ) ಜನರು. ಇಲ್ಲಿ ಗ್ರಾಮಸೀಮೆಯನ್ನು ಕನ್ನಡದಲ್ಲಿ ವಿವರಿಸಲಾಗಿದೆ.

ಶಾಸನ ಪಾಠ

(ಕನ್ನಡ ಲಿಪಿ–ಸಂಸ್ಕೃತ, ಕನ್ನಡ ಭಾಷೆ–ಗಜಮುದ್ರೆ)

ಮೊದಲ ಹಲಗೆ–ಹಿಂಭಾಗ :

1. ಸ್ವಸ್ತಿ ಜಿತಮ್ಭಗವತಾಗತ ಘನಗಗನಾಭೇನ ಪದ್ಮನಾಭೇನ ಶ್ರೀ ಮಜ್ಜಾಹ್ನವೇಯಂ ಕುಲಾಮಲವ್ಯೋಮಾ

2. ವಭಾಸನ ಭಾಸ್ಕರಃ ಸ್ವಖಡ್ಗೈಕ ಪ್ರಹಾರ ಖಣ್ಡಿತ ಮಹಾ ಶಿಲಾಸ್ತಮ್ಭಲಬ್ಧಬಲ ಪರಾಕ್ರಮೋ ದಾರುಣಾರಿಗಣ

3. ವಿದಾರಣೋಪಲಬ್ಧವ್ರಣ ವಿಭೂಷಣ ವಿಭೂಷಿತಃ ಕಾಣ್ವಾಯನಸಗೋತ್ರಃ ಶ್ರೀಮತ್ಕೊಙ್ಗಣಿವರ್ಮ್ಮ ಧರ್ಮ್ಮಮಹಾಧಿರಾ

4. ಜಃ ತಸ್ಯಪುತ್ರಃ ಪಿತುರನ್ವಾಗತಗುಣಯುಕ್ತೋ ವಿದ್ಯಾವಿನಯವಿಹಿತ ವೃತ್ತಃ ಸಮ್ಯಕ್ಪ್ರಜಾಪಾಲನ ಮಾತ್ರಾಧಿಗತ ರಾಜ್ಯ

5. ಪ್ರಯೋಜನೋ ವಿದ್ವತ್ಕವಿಕಾಞ್ಚನ ನಿಕಷೋ ಪಲಭೂತೋ ನೀತಿಶಾಸ್ತ್ರಸ್ಯ ವಕ್ತೃಪ್ರಯೋಕ್ತೃ ಕುಶಲೋ ದತ್ತಕ ಸೂತ್ರ ವೃತ್ತಿ [ಃ]

6. ಪ್ರಣೇತಾ ಶ್ರೀಮನ್ಮಾಧವಮಹಾಧಿರಾಜಃ ತಸ್ಯಪುತ್ರಃ ಪಿತೃಪೈತಾಮಹಾಗುಣ ಯುಕ್ತೋನೇಕ ಚಾ

7. ತುರ್ದನ್ತಯುದ್ಧಾವಾಪ್ತ ಚತುರುದಧಿ ಸಲಿಲಾಸ್ವಾದಿತಯಶಃ ಶ್ರೀಮದ್ಧರಿವರ್ಮ್ಮ ಮಹಾಧಿರಾಜಃ ತಸ್ಯಪು

8. ತ್ರೋ ದ್ವಿಜಗುರು ದೇವತಾ ಪೂಜನಪರೋ ನಾರಾಯಣ ಚರಣಾನುಧ್ಯಾತಃ ಶ್ರೀ ಮಾನ್ವಿಷ್ಣುಗೋಪಮಹಾಧಿರಾಜಃ ತಸ್ಯಪು

9. ತ್ರ(ಃ) ಸ್ತ್ರಿಯಮ್ಬಕ ಚರಣಾಮ್ಭೋರುಹರಜಃ ಪವಿತ್ರೀ ಕ್ರಿತೋತ್ತಮಾಙ್ಗಃ ಸ್ವಭುಜಬಲ ಪರಾಕ್ರಮ ಕ್ರಯಕ್ರೀತರಾಜ್ಯಃ

10. ಕಲಿಯುಗಬಲಪಂಕಾವಸನ್ನಧರ್ಮ್ಮ ವೃಷೋದ್ಧರಣ ನಿತ್ಯ ಸನ್ನದ್ಧಃ ಶ್ರೀ ಮಾನ್ಮಾಧವಮಹಾಧಿರಾಜಃ ತಸ್ಯಪುತ್ರಃ ಶ್ರೀ

11. ಮತ್ಕದಮ್ಬಕುಲಗಗನಗಭಸ್ತಿಮಾಲಿನಃ ಕೃಷ್ಣವರ್ಮ್ಮ ಮಹಾಧಿರಾಜಃ ತಸ್ಯಪ್ರಿಯ ಭಾಗಿನೇಯೋ ವಿದ್ಯಾವಿನಯಾ

12. ತಿಶಯ ಪರಿಪೂರಿತಾನ್ತರಾತ್ಮಾ ನಿರವಗ್ರಹಪ್ರಧಾನಶೌರ್ಯ್ಯೋ ವಿದ್ವತ್ಸು ಪ್ರಥಮ ಗಣ್ಯಃ ಶ್ರೀ ಮಾನ್ಕೊಙ್ಗಣಿಮಹಾ

ಎರಡನೆಯ ಹಲಗೆ ಮುಂಭಾಗ :

13. ಧಿರಾಜಃ ಅವಿನೀತನಾಮಾ ತಸ್ಯಪುತ್ರಃ ಅನ್ದರಿ ಅಲತ್ತೂರ್ಪೊರುಳರೆಪೆನ್ನಿಗ ರಾದ್ಯನೇಕ ಸಮರಮುಖಮುಖ

14. ಹುತ ಪ್ರಹತಶೂರಪುರುಷಪಶೂಪಹಾರ ವಿಘಸವಿಹಸ್ತೀಕೃತಕೃತಾನ್ತಾಗ್ನಿ ಮುಖಃ 'ಕಿರಾತಾರ್ಜುನೀಯ ಪಞ್ಚದ

15. ಶಸರ್ಗ್ಗಟೀಕಾಕಾರೋ ದುರ್ವ್ವಿನೀತ ನಾಮಧೇಯಃ ತಸ್ಯಪುತ್ರೋದುರ್ದ್ದಾನ್ತ ವಿಮರ್ದ್ದವಿಮೃದಿತ ವಿಶ್ವಮ್ಭರಾಧಿಪ ಮೌಲಿಮಾ

16. ಲಾಮಕರನ್ದರಜಃ ಪುಞ್ಜೀಕ್ರಿಯಮಾಣ ಚರಣ ನಳಿಣಯುಗಲೋ ಮುಷ್ಕರ ನಾಮಧೇಯಃ ತಸ್ಯಪುತ್ರಃ ಚತುರ್ದ್ದಶ ವಿದ್ಯಾ

17. ಸ್ಥಾನಾಧಿಗತ ವಿಮಲಮತಿಃ ವಿಶೇಷತೋನವಶೇಷಸ್ಯ ನೀತಿಶಾಸ್ತ್ರಸ್ಯ ವಕ್ತೃ ಪ್ರಯೋಕ್ತೃಕುಶಲೋ ರಿಪುತಿಮಿರನಿಕರ

18. ನಿರಾಕರಣೋದಯಿ ಭಾಸ್ಕರಃ ಶ್ರೀ ವಿಕ್ರಮ ಪ್ರಥಿತನಾಮಧೇಯಃ ತಸ್ಯಪುತ್ರಃ ಅನೇಕ ಸಮರಸಮ್ಪ್ರಾ

19. ದಿತ ವಿಜೃಮ್ಭಿತದ್ವಿರದರದನಕುಲಿಶಾಭಿಘಾತವ್ರಣಸಂರೂ[ಡ] ಭಾಸ್ವದ್ವಿಜಯ ಲಕ್ಷಣ ಲಕ್ಷೀಕೃತ ವಿಶಾ

20. ಲ ವಕ್ಷಸ್ಥಲಃ ಸಮಧಿಗತಸಕಲಶಾಸ್ತ್ರಾರ್ಥತತ್ವಃ ಸಮಾರಾಧಿತ ತ್ರಿವರ್ಗ್ಗ ನಿರವದ್ಯಚರಿತೇ ಪ್ರತಿದಿವಸಮಭಿ

21. ವರ್ದ್ಧಮಾನ ಪ್ರಭಾವೋ ಭೂವಿಕ್ರಮನಾಮಧೇಯಃ ಅಪಿ ಚ ನಾನಾಹೇತಿ ಪ್ರಹಾರಪ್ರವಿಘಟಿತಭಟೋರಃ

22. ಕವಾಟೋತ್ಥಿತಾಸೃಗಾಸವಪ್ರಮತ್ತ ದ್ವಿಪಶತಚರಣ ಕ್ಷೋದ ಸಮ್ಮರ್ದ್ದ ಭೀಮೇ ಸಂಗ್ರಾಮೇ ಪಲ್ಲವೇನ್ದ್ರನ್ನರಪ

23. ತಿಮಜಯದ್ಯೋ ವಿಳನ್ದಾಭಿಧಾನೇ ರಾಜಶ್ರೀವಲ್ಲಭಾಖ್ಯಃ ಸಮರಶತಜಯಾ ಪ್ರಾಪ್ತ ಲಕ್ಷ್ಮೀವಿಲಾಸಃ ತಸ್ಮಾನು

24. ಜೋ ನತನರೇನ್ದ್ರ ಕಿರೀಟಕೋಟಿರತ್ನಾರ್ಕದೀಧತಿ ವಿರಾಜಿತ ಪಾದಪದ್ಮಃ ಲಕ್ಷ್ಮ್ಯಾ ಸ್ವಯಂವ್ರತಪತಿರ್ನ್ನವಕಾಮ ನಾಮಾ

ಎರಡನೆಯ ಹಲಗೆ–ಹಿಂಭಾಗ :

25. ಶಿಷ್ಟ ಪ್ರಿಯೋರಿಗಣದಾರಣಗೀತಕೀರ್ತ್ತಿಃ ತಸ್ಯಕೊಙ್ಗಣಿ ಮಹಾರಾಜಸ್ಯ ಶಿವ ಮಾರಾಪರ ನಾಮಧೇಯಃ (ಃ)

26. ಸ್ಯ ಪೌತ್ರಃ ಸಮವನತಸಮಸ್ತಸಾಮನ್ತಮಕುಟತಟಘಟಿತ ಬಹಲರತ್ನವಿಲಸದ ಮರಧನುಃ ಖಣ್ಡಮ

27. ಣ್ಡಿತ ಚರಣನಖಮಣ್ಡಲೋ ನಾರಾಯಣ ಚರಣ ನಿಹಿತಭಕ್ತಿಃ ಶೂರಪುರುಷ ತುರಗ ನರವಾರಣ ಘಟಾಸಂಘ

28. ಟ್ಟದಾರುಣಸಮರ ನಿಹಿತಾತ್ಮಕೋಪೋ ಭೀಮಕೋಪಃ ಪ್ರಕಟ ರತಿಸಮಯ್ಯ ಸಮನುವರ್ತ್ತನ ಚತುರಯುವತೀ ಜನ

29. ಲೋಕಧೂರ್ತ್ತೋ ಲೋಕಧೂರ್ತ್ತಃ ಸುದುರ್ಧರಾನೇಕ ಯುದ್ಧ ಮೂರ್ಧಲಬ್ಧ ವಿಜಯ ಸಮ್ಪದಹಿತ ಗಜಘಟಕೇಸರೀರಾಜಕೇಸ

30. ರೀ ಅಪಿ ಚ ಯೋ ಗಙ್ಗಾನ್ವಯ ನಿರ್ಮ್ಮಲಾಮ್ಬರತಲವ್ಯಾ ಭಾಸನ ಪ್ರೋಲ್ಲ ಸತ್ಕಾರ್ತ್ತಿಕೇನ್ದ್ರೋರಿ ಭಯಂಕರಃ ಶು

31. ಭಕರಃ ಸನ್ಮಾರ್ಗ್ಗರಕ್ಷಾಕರಃ ಸೌರಾಜ್ಯಂ ಸಮುಪೇತ್ಯರಾಜಸಮಿತೋ ರಾಜಾನ್ನು ಣೈರುತ್ತಮೋ ರಾಜ ಶ್ರೀ ಪುರು

32. ಷಃ ಚಿರಂ ವಿಜಯತೇ ರಾಜನ್ಯ ಚೂಡಾಮಣಿಃ ಅಪಿ ಚ ಕಾಮೋರಾಮಾಸು ಚಾಪೇ ದಶರಥತನಯೋ ವಿಕ್ರಮೇ ಜಾಮ

33. ದಗ್ನ್ಯಃ ಪ್ರಾಜ್ಯೈಶ್ವರ್ಯೋ ಏಲಾರಿರ್ಬಹು ಮಹಶಿರವಿಃ ಸ್ವಪ್ರಭುತ್ವೇ ಧನೇಶಃ ಭೂಯೋ ವಿಖ್ಯಾತ ಶಕ್ತಿ ಸ್ಫುಟತರಮ

34. ಖಿಲಂ ಪ್ರಾಣಭಾಜಾಂ ವಿಧಾತಾ ಧಾತ್ರಾ ಸ್ಪಷ್ಟಃ ಪ್ರಜಾನಾಂ ಪತಿರಿತಿ ಕವಯೋ ಯಂ ಪ್ರಶಂಶನ್ತಿ ನಿತ್ಯಂ ಸ ತು ಪೃತಿ

35. ದಿನ ಪ್ರವೃತ್ತಮಹಾದಾನ ಜನಿತ ಪುಣ್ಯಾಹಘೋಷಮುಖರಿತ ಮನ್ದಿರೋದರೇಣ ಶ್ರೀಪುರುಷ ಪ್ರಥಮ ನಾಮಧೇಯೇನ

36. ಪ್ರಿಥವೀಕೋಙ್ಗಣಿಮಹಾಧಿರಾಜಃ ತಸ್ಯ ಪುತ್ರಃ ಪ್ರತಾಪ ವಿನಮಿತ ಸಕಲ ಮಹೀಪಾಲ ಮೌಲಿಲಾಲಿತ ಚರಣಾ

ಮೂರನೆಯ ಹಲಗೆ–ಮುಂಭಾಗ :

37. ರವಿನ್ದಯುಗಲೋ ನಿಜಭುಜವಿರಾಜಿತನಿಹಿತಖಡ್ಗ ಪಟ್ಟ ಸಮಾಕ್ರಿಷ್ಟ ನಿಷ್ಪಧ ರಾಪಾಲವಲ್ಲಭಜಯಶ್ರೀಸಮಾ

38. ಲಿಙ್ಗಿತಸ್ಸಮರಮುಖ ಸಮ್ಮುಖಾಗತರಿಪುನೃಪತಿಗಜ ಘಟಾಕುಮ್ಬನಿರ್ಭೇದ ನೋತ್ಸಲಿತರಕ್ತಚ್ಛಿಟಾಪಾತಪಾಟಲಿತ ನಿಜ

39. ಭುಜಸ್ತಮ್ಬಃ ಅಕರ್ಣ್ಣಸಮಾಕ್ರಿಷ್ಟಚಾಪಚಕ್ರವಿನಿರ್ಮ್ಮುಕ್ತನಾರಾ ಚ ಪರಮ್ಪರಾಪಾತ ಪಾತಿ ತಾರಾತಿಮಣ್ಡಲೋ

40. ಬಹುಸಮರಸಮಾರ್ಜಿತಜಯಪತಾಕಾಶತಶಬಲಿತನಭಸ್ಥಲೋ ಯಸ್ಮಿನ್ ಪ್ರಯಾತ ವತಿ ಕೋಪವಶಮ್ಮಹೀಶೇ

41. ಯಾನ್ತಿ ಕ್ಷಣಾದಹಿತ ಭೂಮಿಭುಜೋರಣಾಗ್ರೇ ಅನ್ತ್ರಾವಲೀವಲಯ ಭೀಷಣ ಮನ್ತಕಸ್ಯ ವಕ್ತ್ರಾನ್ತರಂ ಕ್ಷತಜಕ

42. ರ್ದ್ದಮದುರ್ನ್ನಿರೀಕ್ಷ್ಯಂ ಸತು ಶಿಶಿರಕರನಿಕರನಿರ್ಮ್ಮಲನಿಜಯಶೋರಾಶಿ ವಿಶದೀ ಕ್ರಿತದಶಾಶಾಚಕ್ರಃ ಸಮಸ್ತ ಚಕ್ರ

43. ವರ್ತ್ತಿ ಲಕ್ಷಣೋಪಲಕ್ಷಿತೋ ನಿರಪೇಕ್ಷಾ ಪರೋಪಕಾರ ಸಮ್ಪಾದನೈಕ ವ್ಯಸನಃ ಪ್ರವರ್ತ್ತಿತ ನ್ಯಾಯ ಬಾ

44. ಲ ಸಮುನ್ಮೂಲಿತ ಕಲಿಕಾಲ ವಿಲಸಿತೋ ನಿಪುಣನಿಜನೀತಿ ಪ್ರಯೋಗಾಪಹಸಿತ ಬೃಹಸ್ಪತಿಃ ಕುನೃಪತಿ ಕ

45. ದಮ್ಬಕಪಟಕೋಟಿವಿಘಟಿತಧರ್ಮ್ಮಾವಲಮ್ಬನಶಿಲಾಸ್ತಮ್ಭಾಯಮಾನಚರಿತಃ ಸತತ ಪ್ರವೃತ್ತ ಸನ್ತರ್ಪ್ಪಿತದ್ವಿಜಾ

46. ತಿಲೋಕಃ ಪ್ರೋನ್ಮೂಲಿತವಿಕಾರೇಣ ಸರ್ವ್ವಲೋಕೋಪಕಾರಿಣಾಯಸ್ಯ ದಾನೇನ ದಿಙ್ನಾಗದಾನಧಾರಾಪ್ಪದಃ ಕೃತಾ

47. ಅಪಿ ಚ ಜಟಾನಾಂ ಸಂಘಾತೈರಿಹ ಭುವಿ ಕ್ರಿತಾನೂನವಿಪದಾಕಲಾನಾಮಾಧಾರೋ ಬುಧ ಜನಹಿತಾಪಾದನಪರಃ

48. ಗುಣಾನಾಂ ಶುದ್ಧನಾಮಪಿ ನಯುತಮುತ್ಪತ್ತಿ ಭವನಂ ನೃಪಾಣಾನ್ಮಾತಾಯಃ ಕವಿರಿತಿಮತಃ ಕಾವ್ಯಕುಶಲೈಃ ದುರ್ವ್ವಿಗಾಹ

ಮೂರನೆಯ ಹಲಗೆ–ಹಿಂಭಾಗ :

49. ಫಣಿಸುತಮತಪಾರಾಪಾರಪಾರದೃಶ್ವಾ ಪ್ರಮಾಣಶಾಸ್ತ್ರಶಾಣ ನಿಶಾತಿಕ್ರಿತ ಧೀರಧಿಷಣಃ ಸಾಮಜತನ್ತ್ರ ತ

50. ತ್ವಾವ ಬೋಧವಿಮರ್ದ್ದಿಕ್ರಿತಬುಧೋ ಹಸ್ತಿನಿವಕ್ರ್ಯೋತ್ಸವಯತಿ ಪ್ರವರ ಮತಾವಬೋಧನಗಭೀರಮತಿಃ ವಿದ್ವನ್ಮತಿ ವಿ

51. ಪತ ವಿಕಲ್ಪಿತ ಯತಜಾತ ವಿಚಾರ ವಿಚಕ್ಷಣಃ ಅಙ್ಗೀಕ್ರಿತ ತುರುಙ್ಗಮಾಗಮ ಪ್ರಯೋಗ ಪರಿಣಿತೋ ಧನುರ್ವ್ವಿದ್ಯಾವೈಃ

52. ರುಹವನಗಹನವಿಕಾಸನವಿದಗ್ಧ ಮರೀಚಿಮಾಲಿರ್ನ್ನಿಜ ನಿರ್ಮ್ಮಿತಗಜದನ್ತ ಕಲ್ಪನಾ ಗಮಾನಲ್ಪಚೇತಾಃ ವಿರಚಿ

53. ತಸೇತುಬನ್ಧನಿಬಸ್ಥನಾಸನ್ನಿತವಿಪಶ್ಚಿನ್ಮಣ್ಡಲಃ ಸಕಲನಾಟಕ ವಿಷಯ ಸನ್ಧಿ ಸನ್ಧ್ಯಙ್ಗಧಿ ಯೋಜನಾತಿಚತುರೋ

54. ನಿರುಪಮನಿಜರೂಪನಿರ್ಜ್ಜಿತ ಮಕರಧ್ವಜೋಮಕರಧ್ವಜ ಗುರುಚರಣ ಸರೋಜ ವಿನಮನಪವಿತ್ರೀಕ್ರ

55. ತೋತ್ರಮಾಙ್ಗಃ ಮುದುಗನ್ಧರ್ನ್ನಾಮಗ್ರಾಮೋಪವಿಷ್ಟ ರಾಷ್ಟ್ರಕೂಟ ಚಾಲುಕ್ಯ ಹೈಹಯಪ್ರಮುಖ ಪ್ರವೀರಸನಾ

56. ಥವಲ್ಲಭಸೈನ್ಯವಿಜಯವಿಖ್ಯಾಪಿತಪ್ರಭಾವಃ ಅಪಿ ಚ ಥೋರಾಶ್ವೀಯಂ ಸಮಸ್ತಾ ತ್ರಬಲಮುಪಗತಂ ವ್ಯಾಪ್ತ

57. ದಿಗ್ಚಕ್ರಪಾಲಂ ನಿರ್ಜ್ಜಿತ್ಯಾನೇಕ ಸಂಖ್ಯೈರ್ನ್ನಿಶಿತ ನಿಜಭುಜೋನ್ಮುಕ್ತ ನಾರಾಚಜಾಲೈ: ದೇವೋ ಯಃ ಪ್ರಾಜ್ಯತೇಜ (ಃ) ಸ್ತಿಮಿರಮಿ

58. ವ ಮಹನ್ತೀವ್ರ ಭಾನುರ್ಮ್ಮಯೂಖೈಃ ದುರ್ವ್ವಾರೋದಾರಪಾತ್ರೈರುದಯ ಮಖಿಲಪನ್ಸನ್ನಿವೇಶಂ ವಿವೇಶಂ ಸ ತು ಹರಿರಿವ

59. ಸತತಸಮ್ಭಾವಿತದ್ವಿಜಪತಿಃ ಸಹಸ್ರಕಿರಣ ಇವ ಪ್ರತಿದಿವಸೋದಯಃ ಭುಜಗ ಲೋಕ ಇವ ವಿಗತಭಯಃ

60. ರತ್ನಾಕರ ಇವ ಅಸ್ಪೃಷ್ಟಕಳಂಕಃ ದುರ್ಯೋಧನೋಪ್ಯಜಿನನ್ದಿತಾರ್ಜುನ ಗುಣೋಪಾಹಿನಿಪತಿರಪ್ಯಜಡಾಯಃ ಶೀತಕರೋ

ನಾಲ್ಕನೆಯ ಹಲಗೆ–ಮುಂಭಾಗ :

61. ಪ್ಯನಾಲಿಙ್ಗಿತಮಲಿನಭಾವೋ ರಾಷ್ಟ್ರಕೂಟ ಪಲ್ಲವಾನ್ವಯತಿಲಕಾಭ್ಯಾಂ ಮೂರ್ದ್ಧಾಭಿ ಷಿಕ್ತ ಗೋವಿನ್ದರಾಜ ನನ್ದಿವರ್ಮ್ಮ

62. ಭಿದೇಯಾಭ್ಯಾಂ ಸಮನುಷ್ಠಿತರಾಜ್ಯಾಭಿಷೇಕಾಭ್ಯಾಂ ನಿಜಕರಘಟಿತಪಟ್ಟವಿಭೂಷಿತ ಲಲಾಟಪಟ್ಟೋ ವಿಖ್ಯಾತ

63. ವಿಮಲಗಙ್ಗಾನ್ವಯನ[ಭ]ಸ್ಥಲಗಭಸ್ತಿಮಾಲಿ ಕೊಙ್ಗಣಿಮಹಾರಾಜಾಧಿರಾಜ ಪರಮೇಶ್ವರ ಶ್ರೀ ಶಿವಮಾರ ನಾಮಧೇಯಃ

64. ತಸ್ಯಪುತ್ರಃ ಆತ್ಮೀಯಪೂರ್ವ್ವ ಜಾಶೇಷಗುಣಗಣಾಶ್ರಯಃ ಸಕಲಾ ಏನೀಪಾಲ ಮಕುಟಮಲಾ ಪ್ರವೃತಮಕರನ್ದ

65. ಪರಾಗಪಿಞ್ಜರೀಕೃತಪಾದಯುಗಳಃ ಸಕಲರಾತಿ[ಟಿ]ದ್ರಾವಿಭಾಸುರಾಸಿಲತಾ ಸಮಾ ಕೃಷ್ಟಾವನಿಪಾಲಲಕ್ಷ್ಮೀ ಸ

66. ಮಾಲಿಙ್ಗತ ವಕ್ಷಃ ಜ್ಯೋಜ್ಞಾನ ಪ್ರವೀಣಃ ಸಕಲಾಶಾಚಕ್ರವಾಳವಿಸರ್ಪ್ಪಿಯಶಾಃ ಅಶೇಷ ಶಾಸ್ತ್ರಾ

67, ರ್ತ್ಥತತ್ವಾವಬೋಧನ ವಿಶುದ್ಧಬುದ್ಧಿಃ ಸಮಾರಾಧಿತತ್ರಿವರ್ಗೋ ನಾರಾಯಣ ಪದಾಮ್ಭೋಜಪರಾಗ ಪವಿತ್ರೀಕೃ

68. ತೋತ್ತಮಾಙ್ಗಃ ಶ್ರೀ ಜಯಸಿಂಹ ನಾಮಧೇಯಃ ತಸ್ಯವಿಜ್ಞಾಪನಯಾ ಶ್ರೀ ಶಿವ ಮಾರದೇವೇನ ಸಪ್ತದಶೋತ್ತರಸಪ್ತಶತಶ

69. ಕಾಬ್ದೇಷ್ವತೀತೇಷು ಆಷಾಢಮಾಸೇ ಅಯನ ಸಂಕ್ರಾನ್ತ್ಯಾನ್ನನ್ದಿಗ್ರಾಮವಾಸೀ ಆತ್ರೇಯ ಗೋತ್ರೋ ವೇದವೇದಾಂಗವಿತ್ಸಕಲಕಲಾದಿ

70. ಷ್ಟಾನಭೂತಃ ಪನಂಕಾಟ ದತ್ತಶರ್ಮ್ಮಾ ತಸ್ಯದ್ವೇಭಾಗೇ ದಾಯಣೇಯಕುಲೋ ತ್ಪನ್ನಃ ಇನ್ದ್ರಪ್ರಮುದವಸಿಷ್ಠ ಗೋತ್ರಃ ಸಾಮವೇದ

71. ಪಾರಗೋ ವಿಷ್ಣುದಾಸಶರ್ಮ್ಮಾ ತಸ್ಯ ದ್ವೇ ಭಾಗೇ ಏಟುರೂ ಗ್ರಾಮವಾಸೀ ವಸಿಷ್ಠಗೋತ್ರೋ ಯಜುರ್ವ್ವೇದ ಪಾರಗ ವಿನ್ದ್ಯಕುಮಾರಶರ್ಮ್ಮಾ

72. ಚಾನ್ದೂರ್ಗ್ರಾಮವಾಸೀ ಭಾರದ್ವಾಜಗೋತ್ರೋ ಯಜುರ್ವ್ವೇದ ಪಾರಗ [ಃ] ದ್ರೋಣಶರ್ಮ್ಮಾ ಪಜಿನ್ನುಗ್ರಾಮವಾಸೀ ಭಾರದ್ವಾಜ ಗೋತ್ರೋಭಾಸ್ಕ

ನಾಲ್ಕನೆಯ ಹಲಗೆ–ಹಿಂಭಾಗ :

73. ತದ್ವಟೀ ಕುಮುಟಾಗ್ರಾಮವಾಸೀ ಕೌಶಿಕಗೋತ್ರೋ ವಾಜಸನೇಯ ಪಾರಗಃ ಶಿವಕುಮಾರ ಶರ್ಮ್ಮಾಬಿಂಪೂಗ್ರಾಮವಾಸೀ ಕೌಶಪಗೋ

74. ತ್ರೋ ಋಗ್ವೇದಪಾರಗೋ ನಾರಾಯಣಶರ್ಮ್ಮಾ ಮುಡುಂಬಿಯ ಗ್ರಾಮವಾಸೀ ಕಾಮಕಾಯನಗೋತ್ರೋ ಋಗ್ವೇದಪಾರಗಃ ಶಿವಶರ್ಮಾ

75. ಮುಡುಂಬಿಯ ಗ್ರಾಮವಾಸೀ ಕೌಶಿಕಗೋತ್ರೋ ಯಜುರ್ವೇದಪಾರಗೋ ನಾರಾಯಣಶರ್ಮ್ಮಾ ಬಾದಾಮಿ ಗ್ರಾಮವಾಸೀ ಭಾರದ್ವಾಜ

76. ಗೋತ್ರೋ ಋಗ್ವೇದಪಾರಗಃ ನಾಗಶರ್ಮ್ಮಾ ಏತೇಷಾಮಷ್ಟಾನಾಮೇಕೈಕಂ ಭಾಗ ಮಿತ್ಯೇತೇಭ್ಯಷ್ಟರೋಷ ಕಾರ್ಯೈಕರತೇಭ್ಯಃ

77. ಯಮನಿಯಮತತ್ಪರೇಭ್ಯಃ ದೇವದ್ವಿಜಗುರುಪೂಜನಾರತೇಭಃ ಆಸನ್ದೀವಿಷಯೇ ತೋಙುಗಲ್ನಾಮಗ್ರಾಮಃ ಸ್ವಹ

78. ನ್ಸನೋದಕಪೂರ್ವ್ವಂ ಸರ್ವ್ವಬಾಧಪರಿಹಾರಸಂಯೋಕ್ತ್ಯಾ ದತ್ತಃ ಅಸ್ಯ ಸಾಕ್ಷಿಣಃ ಷಣ್ಣವತಿ ಸಹಸ್ರವಿಷ

79. ಯ ಪ್ರಕೃ[ತ್ರ]ಯಃ ತಸ್ಯ ಗ್ರಾಮಸ್ಯ ಸೀಮಾವಧಾಯಃ ಇಶಾನ್ಯಾನ್ದಿಶಿ ಬಾರದಾ ಗಟ್ಟದ ತೆಙ್ಕಣ ಕಡೆಗೋಡಱ

80. ಳಗಿಟ್ಟ ಪುಣಸೆಯಿಪ್ಪ ತೆಙ್ಕಣದಿ ಕೋಸಗೞಿಯೆ ಸವಸಿಬೆಟ್ಟ ಅಡಿವಟ್ಟತ್ತಿಯ ಕೊಡಲೆ ಪರಿಯಟ್ಟನ ಕೆಱೆಯೆ ಬೇಡ

81. ಗೆಱೆಯೆ ತಾಱೆಪೊಱೆಯ ಮೂಡಣ ಮಾವಿನ ಮರಡಿನ್ದೆ ತೊಱೆಯೊಳ್ಗಾಡಿ ಪಡುವಾಯ್ಗೋಡಿ ಆ ತೊಱೆವೀಡಿದೆ ಪೋಗಿಟ

82. ಳ್ಗಟ್ಟದಾ ಪೆರಿಯ ನೇಱಲಮರನನೆಯ್ದಿ ಬಡಗಾಯ್ಗೋಡಿ ಒಱ್ಬಿಯೆ ಆಲದಱಿಯೆ ಎಱಕೇಸಿಗೆಱಿಗೆ ವನ್ದು ಮೂಡಾಯ್ಗೋಡಿ

83. ದೆಣ್ಣಸಾಲಿಗೆಱಿಯ ಪಡುವಣ ಕಡೆಗೋಡಾ ಕೆಱಗಣ ದಾರಿಯು ಕಲ್ಲೆ ಎರಡುನ್ನೞ ಮೊಱಡಿಯ ಎಡೆಯೆ ಪೋಗಿ

84. ಬಾರದಗಟ್ಟದ ತೆಙ್ಕಣ ಕಡೆಗೋಟ ಒಳಗಿಟ್ಟ ಪುಣಸೆಯ ಮರಕ್ಕೆ ವನ್ದು ಕೂಡಿ ಎನ್ದಿಜ್ಞನಿನ್ದತ್ತು.

ಐದನೆಯ ಹಲಗೆ–ಮುಂಭಾಗ :

85. ಬಹುಭಿರ್ವ್ವಸುಧಾದತ್ತಾ ರಾಜಭಿಸ್ಸಗರಾದಭಿಃ ಯಸ್ಯಯಸ್ಯಯದಾಭೂಮಿಃ ತಸ್ಯ ತಸ್ಯ ತದಾ ಫಲ

86. ಸ್ವನ್ದಾತುಂ ಸುಮಹಚ್ಛಕ್ಯಂ ಕೃಚ್ಛ್ರಮನ್ಯಸ್ಯ ಪಾಲನಂ ದಾನಂ ವಾ ಪಾಲನಂ ದೇತಿ ದಾನಾಚ್ಛ್ರೇಯೋನುಪಾಲನ

87. ಅದ್ಭಿರ್ದ್ದತ್ತಂ ತ್ರಿಭಿರ್ಭುಕ್ತ [ಂ] ಸದ್ಭಿಚ್ಚ ಪರಿಪಾಲನಂ ಏನಾನಿನ ನಿವರ್ತ್ತನ್ತೇ ಪೂರ್ವರಾಜಕೃತಾನಿ ಚ

88. ಸಾಮಾ[ನ್ಯೋ] ಯಂ ಧರ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವಾನೇತಾನ್ಭಾವಿನಂ ಪಾರ್ತ್ಥಿವೇನ್ದ್ರಾ ಭೂಯೋ ಭೂಯೋ ಯಾಚತೇ ರಾಮ ಭದ್ರಃ

89. ಸುವರ್ಣ್ಣರಜತಂ ವಸ್ತ್ರಮಣಿ ಮುಕ್ತ್ಯಾವಸುನಿವ ಸರ್ವ್ವಮೇತತ್ಮಹಾಪ್ರಾಜ್ಞೋ ಭೂಮಿದಾನೇ ಪ್ರತಿಷ್ಠತಿ

90. ಯೋ ಹರ್ತ್ತಾ ಭೂಮಿನಾನನ್ತು ಸರ್ವ್ವಪಾತಕ ಭಾಜನಃ ಪಚ್ಯತೇ ನರಕೇಘೋರೇ ಪ್ರಲಯಾನ್ತಮಿತಿ ಸ್ಥಿತಿಃ

91. ನ ವಿಷಂ ವಿಷಮಿತ್ಯಾಹು ಬ್ರಹ್ಮಸ್ವಂ ವಿಷಮುಚ್ಯತೇ ವಿಷಮೇಕಾಕಿನೋಹನ್ತಿ ಬ್ರಹ್ಮಸ್ವಂ ಪುತ್ರಪೌತ್ರಿಕಂ


92. ಯೇ ಪುನಃ ಕ್ರೂರಕರ್ಮ್ಮಾಣಃ ಭೂವಿದಾನ ವಿನಾಶಕ ತೇ ಯಾನ್ತಿ ನರಕಂ ಕ್ಷಿಪ್ರ ಸಪುತ್ರಪಶುಬಾನ್ಧವೈಃ

93. ಯೋ ಹರ್ತ್ತ ಭೂಮಿದಾನನ್ತು ಸ್ವರ್ವದಾನಫಲಪ್ರದಂ ನರೋನರಕಗಾಮಿ ಸ್ಯಾತ್ ತಸ್ಯ ಸಂಭಾಷಣಾದಪಿ

94. ಸ್ವದತ್ತಂ ಪರದತ್ತಂ ವಾ ಯೋ ಹರೇತಿ ಬಸುನ್ಧರಾ ಷಷ್ಟಿಂ ಬರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ

ಶಾಸನಗಳನ್ನು ಸಂಗ್ರಹಿಸುವ ಕಾರ್ಯ ಕರ್ನಾಟಕದಲ್ಲಿ ಬಹು ಹಿಂದೆಯೇ ಆರಂಭವಾಯಿತು. ಮೈಸೂರಿನ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅನೇಕ ಶಾಸನಗಳನ್ನು ಪ್ರತಿ ಮಾಡಿಸಿ ಇಟ್ಟಿದ್ದರೆಂಬ ಪ್ರತೀತಿ ಇದೆ. ಆದರೆ ಅವರು ಆಗ ಸಂಗ್ರಹಿಸಿದ ಉದ್ದೇಶ ದಾನದತ್ತಿಗಳ ಬಗೆಗೆ ಖಚಿತವಾದ ದಾಖಲೆಗಳನ್ನು ಹೊಂದಿರುವುದು. ಅರಮನೆಯ ಇತರ ದಾಖಲೆಗಳೊಂದಿಗೆ ಇವು ಮುಂದೆ ನಾಶವಾದವು. ಶಾಸನಗಳನ್ನು ಅಭ್ಯಾಸಮಾಡಿ ಅವುಗಳಲ್ಲಿನ ವಿಷಯಗಳನ್ನು ಸಂಗ್ರಹಿಸ ಲೆಂದೇ ಕ್ರಮಬದ್ಧವಾಗಿ ಅವುಗಳ ಅನ್ವೇಷಣೆಯ ಕೆಲಸವನ್ನು ಆರಂಭಿಸಿದವರು ಪಾಶ್ಚಾತ್ಯ ವಿದ್ವಾಂಸರು. ಕರ್ನಲ್ ಮೆಕೆಂಜಿ 1783 ರಿಂದ 1821 ರ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿನ ನಾನಾ ಭಾಗಗಳಲ್ಲಿ ಪ್ರಾಚೀನ ಹಸ್ತಪ್ರತಿಗಳು, ದಾಖಲೆಗಳ ಜೊತೆಗೆ ಶಾಸನಗಳ ಪ್ರತಿಗಳನ್ನು ಸಂಗ್ರಹಿಸಿದ. 'ಏಷಿಯಾಟಿಕ್ ರಿಸರ್ಚ್' ಪತ್ರಿಕೆಯ ಒಂಬತ್ತನೆಯ ಸಂಪುಟದಲ್ಲಿ ತಾನು ಸಂಗ್ರಹಿಸಿದ ಕೆಲವು ಶಾಸನಗಳ ಬಗೆಗೆ ಬರೆದಿದ್ದಾನೆ. ಕವೆಲ್ಲಿ ಬೋರಯ್ಯನು ಶ್ರವಣಬೆಳಗೊಳದ ಬುಕ್ಕರಾಯನ ಶಾಸನವನ್ನು ಭಾಷಾಂತರಿಸಿದ ಸಂಗತಿ ಅದೇ ಪತ್ರಿಕೆಯಿಂದ ತಿಳಿದು ಬರುತ್ತದೆ. 1821 ರಲ್ಲಿ ಸ್ಟೂವರ್ಟ್ ಎಲ್ಫಿನ್‌ಸ್ಟನ್ ಎಂಬುವನು ಜಿಲ್ಲಾಧಿಕಾರಿಗಳ ಮೂಲಕ ಹಲವಾರು ಶಾಸನಗಳ ಪಡಿಯಚ್ಚುಗಳನ್ನು ತರಿಸಿದ. ಕರ್ನಾಟಕದಿಂದಲೂ ಹದಿನಾಲ್ಕು ಇಂಥ ಪ್ರತಿಗಳು ಅವನಿಗೆ ತಲುಪಿದ್ದವು. ಅವುಗಳಲ್ಲಿ ಕೆಲವನ್ನು ಹೆನ್ರಿವಥೆಸ್ ಓದಿ ಸಾರಾಂಶವನ್ನು 1835 ರಲ್ಲಿ ಪ್ರಕಟಿಸಿದ. ಕರ್ನಾಟಕದ ಶಾಸನಗಳ ಬಗೆಗೆ ಸುವ್ಯವಸ್ಥಿತವಾದ ಅಧ್ಯಯನ ಆರಂಭ ವಾದುದು ವಾಲ್ಟರ್ ಇಲಿಯಟ್‌ನಿಂದ...... ಅನಂತರ ಕಾಲದಲ್ಲಿ ಮೇಜರ್ ಡಿಕನ್‌ಸನ್ ಬಿ. ಎಲ್. ರೈಸ್, ಜೆ. ಎಫ್. ಫ್ಲೀಟ್, ಆರ್. ನರಸಿಂಹಾಚಾರ್, ಎಂ. ಎಚ್. ಕೃಷ್ಣ ಇವರುಗಳ ಸೇವೆ ಅಗಾಧವಾದುದು. ರೈಸ್, ನರಸಿಂಹಾಚಾರ್ ಇವರ ಕಾರ್ಯಗಳ ಫಲವೇ 'ಎಪಿಗ್ರಾಫಿಯ ಕರ್ನಾಟಕ' ಸಂಪುಟಗಳು; ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ಅಧ್ಯಯನಕ್ಕೆ ಇವು ಅನಾದೃಶ ಸೇವೆಯನ್ನು ಸಲ್ಲಿಸುತ್ತಿವೆ.

ಕರ್ನಾಟಕ ವಿಶ್ವಕೋಶ ಪುಟ 1384-5.



ಹೊಯ್ಸಳ ಕಾಲದ ರಥಗಳ ಮಾದರಿಗಳು

[ಚಿತ್ರ: ಜರ್ನಲ್ ಆಫ್ ಆರ್ಕೆಯಾಲಜಿಕಲ್ ಸ್ಟಡೀಸ್ ಅವರ ಕೃಪೆಯಿಂದ]

ಟಿ. ದಯಾನಂದ ಪಾಟೀಲ್

ಸೋಮನಾಥಪುರ ದೇವಾಲಯದಲ್ಲಿ ಕೆತ್ತಲಾಗಿರುವ ರಥಗಳು

ಹೊಯ್ಸಳ ವಾಸ್ತುಶಿಲ್ಪದ ಸಾಂಸ್ಕೃತಿಕ ಅಧ್ಯಯನದಲ್ಲಿ ರಥಗಳ ಸ್ವರೂಪವನ್ನು–ವಿಶೇಷವಾಗಿ ಸೋಮನಾಥಪುರ ದೇವಾಲಯಕ್ಕೆ ಸಂಬಂಧಿಸಿದಂತೆ–ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಿದೆ. ಸೋಮನಾಥ ದಣಾಯಕ ಕ್ರಿ. ಶ. 1268ರಲ್ಲಿ ಸೋಮನಾಥ ದೇವಾಲಯವನ್ನು ಕಟ್ಟಿಸಿದನು.

(a) **ಪಟ್ಟದ ರಥ :** ಈ ರೀತಿಯ ಪಟ್ಟದ ರಥದಲ್ಲಿ (ಚಿತ್ರ 1) ನಾಲ್ಕು ಚಕ್ರಗಳಿವೆ. ಪ್ರತಿಯೊಂದು ಚಕ್ರದಲ್ಲಿ ಪವಿ, ಪರಿಧಿಗಳಿದ್ದು, ಇದು ನೇಮಿಯನ್ನು ರೂಪಿಸಿವೆ. ಅರ ಮತ್ತು ನಾಭಿಗಳಿವೆ ; ನಾಭಿಗೆ ಇರಚಿಯ (axle) ತುದಿಯನ್ನು ಸೇರಿಸಲಾಗಿದೆ. ನಾಭಿಯನ್ನು ಮರದಿಂದ ಮಾಡಿರಬೇಕು. ಅರಗಳು ಚೆನ್ನಾಗಿ ಕಾಣುತ್ತವೆ. ಈ ರಥದಲ್ಲಿನ ಚಕ್ರಗಳು 2 ಸೆಂ,ಮೀ. ಮಂದವಾಗಿದ್ದು, ಹೊರವಿನ್ಯಾಸದಿಂದ ಕೂಡಿದ ಮರದ ಅಚ್ಚುಗಳಿಂದ ಮಾಡಿರುವಂತೆ ತೋರುತ್ತದೆ. ಪವಿಯನ್ನು ಕಬ್ಬಿಣದಿಂದ ಮಾಡಿರಬೇಕು. ರಥದ ಕಟಕಟೆ (ಪುಟೀಪು) ಮರದಿಂದ ಮಾಡಿದುದಾಗಿದ್ದು, ಇದಕ್ಕೆ ಹೊದಿಕೆ ಯಾವುದೂ ಇಲ್ಲ. ರಥದ ಕಟ್ಟು (ಚೌಕಟ್ಟು) ಕಾಣುವಂತಿರುವ ರೀತಿಯು ಇರಚಿಯ ಮೇಲೆ ಕೆಳಗಡೆಗೆ ಕಾಣುವಂತೆ ಆಧಾರಿತವಾಗಿದ್ದು, ಇದರಿಂದ ಕೋಚ್‌ಬಗೆ ರೂಪಿತವಾಗಿದೆ. ಚೌಕಟ್ಟಿನ ವಿನ್ಯಾಸ ಸರಳವಾಗಿದೆ. ರಾಜವಂಶಿಕರು ಕುಳಿತುಕೊಳ್ಳಲು ನಾಲ್ಕು ಆಸನಗಳಿವೆ. ಚೌಕಟ್ಟಿನ ಮೇಲುಭಾಗವು ಸುಂದರವಾಗಿ ಕೆತ್ತನೆಮಾಡಿರುವ ಚಾಮರಗಳಿಂದ ಆವೃತವಾಗಿದೆ. ಈಚಿನ (ಮೂಕಿಯ) ಒಂದು ಕೊನೆಯು ನೊಗಕ್ಕೆ ಸೇರಿದ್ದು ಮತ್ತೊಂದು ಕೊನೆಯು ಇರಚಿಗೆ ಸೇರಿಸಿರುವುದಾಗಿದೆ. ನೊಗವನ್ನು ಎರಡು ಕುದುರೆಗಳ ಕತ್ತುಗಳ ಮೇಲಿಡಲಾಗಿದೆ. (ಈ ರಥವನ್ನು ನಾಲ್ಕು ಕುದುರೆಗಳು ಎಳೆಯುತ್ತಿದ್ದಿರಬಹುದಾದರೂ ಮತ್ತೆರಡು ಕುದುರೆಗಳು ತೋರುತ್ತಿಲ್ಲ). ಸಾರಥಿ ಲಗಾಮುಗಳು, ಚಾವಟಿಯನ್ನು ಹಿಡಿದು ರಥದಲ್ಲಿ ಕುಳಿತಿರುವುದು ಕಾಣುತ್ತದೆ. ಕುದುರೆಗಳು ಚಲನೆಯಲ್ಲಿರುವಂತೆ ಕೆತ್ತಲಾಗಿದೆ.

(b) **ರಾಜವಂಶಿಕರು ಸಮರದಲ್ಲಿ ಬಳಸುತ್ತಿದ್ದುದು :** ಈ ಬಗೆಯ ರಥದಲ್ಲಿ ನಾಲ್ಕು ಚಕ್ರಗಳಿವೆ. (ಚಿತ್ರ 2) ಪವಿಯ ಭಾಗದ ನಂತರ ಚಕ್ರದ ಅಂಚಿನಲ್ಲಿ ವಿನ್ಯಾಸ ಬಿಡಿಸಲಾಗಿದೆ. ಅರೆಗಳು ಕಾಣುತ್ತಿಲ್ಲ; ಆದರೆ ಅರೆಯಂತರಗಳು ಮಂದವಾದ ಮರದಿಂದ ಆವೃತವಾಗಿದೆ; ಚಕ್ರಗಳು ಇರಚಿಯನ್ನಾಧರಿಸಿವೆ. ರಥದ ಕಟಕಟೆಯನ್ನು ಇರಚಿಗಳ ಮೇಲೆ ನಿರ್ಮಿಸಲಾಗಿದೆ. ಚೌಕಟ್ಟಿನಲ್ಲಿ ಪುಷ್ಪವಿನ್ಯಾಸಗಳಿಂದ ಸುಂದರವಾಗಿ ಅಲಂಕರಿಸಲಾಗಿದೆ ಮತ್ತು ಅಂಕಣಗೊಳಿಸಲಾಗಿದ್ದು, ನಡುನಡುವೆ ಪಟ್ಟಿಗಳಿವೆ. ಮರದ ಚೌಕಟ್ಟಿನಲ್ಲಿ, ಯೋಧರು ನಿಂತಾಗ ಅವರ ದೇಹ

ಮಟ್ಟ ಮುಚ್ಚುವಂತೆ ಚಿತ್ರಿಸಲಾಗಿದೆ. ಸಾರಥಿ ಮೂಕಿಯ ಮೇಲೆ ಕುಳಿತಿದ್ದು, ಕೈಯಲ್ಲಿ ಚಾವಟಿ ಹಾಗೂ ಲಗಾಮುಗಳನ್ನು ಹಿಡಿದಿರುವನು; ಲಗಾಮುಗಳು ಹೆಣಿಗೆಗೊಂಡಿರುವಂತಿವೆ. ಒಂದೇ ಒಂದು ಕುದುರೆ ಮಾತ್ರವೇ ಕಾಣುತ್ತದು; ಆದರೆ ರಥಕ್ಕೆ ನಾಲ್ಕು ಕುದುರೆಗಳಿದ್ದಿರಬೇಕು. ಚಕ್ರಗಳು, ಕಟಕಟೆ ಹಾಗೂ ಕುದುರೆಯ ಲಗಾಮುಗಳ ಹೆಣಿಗೆ ವಿನ್ಯಾಸವನ್ನು ಗಮನಿಸಿದರೆ ಇದು ರಾಜವಂಶೀಕರು ಸಾಗಣೆ ಹಾಗೂ ಸಮರಕ್ಕಾಗಿ ಬಳಸುತ್ತಿದ್ದ ರಾಜರಥವೆಂದು ಕಾಣುತ್ತದೆ.

(c) **ಸಮರರಥಗಳು :** ಹೊಯ್ಸಳರು ಅನುಸರಿಸಿದ ಸಮರವಿಧಾನ ಅವರ ಇತಿಹಾಸದ ಕುತೂಹಲಕಾರಿ ಅಂಶವಾಗಿದೆ. ಸೇನೆಯ ನಾಲ್ಕು ವಿಭಾಗಗಳಲ್ಲಿ (ರಥಗಳು, ಗಜಗಳು, ಅಶ್ವಗಳು ಮತ್ತು ಪದಾತಿ ಪಡೆ) ರಥ, ಅಥವಾ ರಥದಲ್ಲಿ ಕುಳಿತು ಹೋರಾಡುವ ವೀರನೇ (ರಥಿ) ಸಮರದಲ್ಲಿ ಅತ್ಯಂತ ಗಮನಾರ್ಹವಾದ ಹಾಗೂ ನಿರ್ಣಾಯಕ ಪಾತ್ರ ವಹಿಸುತ್ತಿದ್ದದ್ದು. ಕಾಳಗದಲ್ಲಿ ಕೈಕೈ ಹತ್ತುವ ಸಂದರ್ಭ ಬಂದಾಗ ಕತ್ತಿ ಗುರಾಣಿಗಳೇ ಮುಖ್ಯವಾಗುತ್ತಿದ್ದವು. ಸೋಮನಾಥಪುರ ದೇವಾಲಯದ ಕೆತ್ತನೆಗಳಲ್ಲಿ ಸಮರರಥಗಳು ವಿವಿಧ ಬಗೆಯವಾಗಿದ್ದು. ಇವು ಆ ಯುಗದಲ್ಲಿ ಬಳಸಲಾಗುತ್ತಿದ್ದ ರಥಗಳ ವೈವಿಧ್ಯದ ಬಗ್ಗೆ ಬೆಳಕು ಬೀರುತ್ತವೆ. ಕೆಲವು ರಥಗಳು ನಾಲ್ಕು ಚಕ್ರದವಾಗಿದ್ದು, ಅನೇಕ ಯೋಧರು ಅವುಗಳಲ್ಲಿದ್ದರೆ ಮತ್ತೆ ಕೆಲವು ರಥಗಳಿಗೆ ಎರಡೇ ಚಕ್ರಗಳಿದ್ದು ಒಬ್ಬ ಅಥವಾ ಇಬ್ಬರು ವೀರರು ಮಾತ್ರ ರಥದಲ್ಲಿರುವುದು ಕಂಡುಬರುತ್ತವೆ. ಈ ದೇವಾಲಯದಲ್ಲಿ ಆರು ಬಗೆಯ ಸಮರರಥಗಳನ್ನು ಕೆತ್ತಲಾಗಿದೆ.

(d) **ನಾಲ್ಕು ಚಕ್ರಗಳ ಸಮರರಥ :** ಈ ರೀತಿಯ ರಥದಲ್ಲಿ (ಚಿತ್ರ 3) ಮರದ ನಾಲ್ಕು ಚಕ್ರಗಳು ಅರೆಗಳಿಲ್ಲದಿರುವ ಆದರೆ ಸಂಪೂರ್ಣವಾಗಿ ಅಲಂಕೃತವಾಗಿರುವ ಸರಳವಾದ ರೀತಿಯವಾಗಿವೆ. ಇರಚಿಯ ಮೇಲೆ ಆಧಾರಿತವಾಗಿರುವ ಗಾಡಿಯ ಚೌಕಟ್ಟು ಅಥವಾ ಕಟಕಟೆ ಚೌಕಾಕಾರವಾಗಿದೆ ಮತ್ತು ಚೌಕಟ್ಟು ಮಧ್ಯಮಧ್ಯೆ ಪುಟ್ಟ (ಅಡ್ಡಪಟ್ಟಿ) ಗಳಿಂದ ಕೂಡಿದ ಪುಷ್ಪವಿನ್ಯಾಸಗಳಿಂದ ಅಲಂಕೃತವಾಗಿದೆ. ಕೆಳಗಿನ ಚೌಕಟ್ಟು ಅಥವಾ ಮೂಕಿಯನ್ನು ಮೂಲೆಕಟ್ಟಾಗಿಸಲಾಗಿದ್ದು, ರಥ ಹೆಚ್ಚು ಬಲಯುತವಾಗಲು ಇದನ್ನು ಇರಚಿಗಳ ಮೇಲೆ ಕೂರಿಸಲಾಗಿದೆ. ಮೂಕಿಯ ಕೋಲಿಗೆ ಕುದುರೆಯನ್ನು ನೊಗದ ಮೂಲಕ ಕಟ್ಟಲಾಗಿದೆ; ಒಂದೇ ಒಂದು ಕುದುರೆಯು ಕಾಣುತ್ತದೆ. ಅದು ನಾಲ್ಕು ಚಕ್ರಗಳ ರಥವಾಗಿರುವುದರಿಂದ ಅದನ್ನು ಎರಡು ಅಥವಾ ನಾಲ್ಕು ಕುದುರೆಗಳು ಎಳೆಯುತ್ತಿರಬೇಕು. ಕುದುರೆಯನ್ನು ಮೂಕಿಯ ಮೇಲೆ ಕುಳಿತು ಲಗಾಮುಗಳು ಮತ್ತು ಚಾವಟಿಯನ್ನು ಹಿಡಿದಿರುವ ಸಾರಥಿಯು ನಿಯಂತ್ರಿಸುತ್ತಿರುವನು. ಈ ರಥದಲ್ಲಿ ಮೂಕಿಯ ಮೇಲೆ ಸಾರಥಿಯ ಹಿಂದೆ ಒಬ್ಬ ವ್ಯಕ್ತಿ ಕಹಳೆಯನ್ನೂದುತ್ತಿರುವುದು ಹಾಗೂ ರಥದ ಒಳಗಡೆ ನಾಲ್ವರು ಧನುರ್ಧಾರಿಗಳಿರುವುದೂ ಕಂಡುಬರುತ್ತದೆ. ಹೆಚ್ಚಿನ ಸಂಖ್ಯೆಯ ಬಿಲ್ಲಾಳುಗಳೊಡನೆ ಈ ಬಗೆಯ ರಥಗಳನ್ನು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಬಳಸುತ್ತಿದ್ದಿರಬೇಕು. ಈ ರಥವು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಕೆತ್ತಲಾಗಿರುವ ರಥಕ್ಕಿಂತ ದೊಡ್ಡದಾಗಿದೆ.[4]

(e) **ಅರೆಗಳಿರುವ ಚಕ್ರಗಳ ಸಮರರಥ:** ಈ ಬಗೆಯ ರಥ (ಚಿತ್ರ 4) ನಾಲ್ಕು ಚಕ್ರಗಳಿಂದ ಕೂಡಿದ್ದು ಪ್ರತಿ ಚಕ್ರದಲ್ಲೂ ಎಂಟೆಂಟು ಅರೆಗಳಿವೆ. ಪವಿಯು ಮುಂದವಾಗಿದೆ ಮತ್ತು

ಪರಿಧಿಯಲ್ಲಿ ಸರಳ ವಿನ್ಯಾಸವಿದೆ. ಇರಚಿಯ ಮೇಲೆ ಚೌಕಟ್ಟಿನ ಸಪಾಟ ಮೂಕಿಯು (ದೂರಿ) ಮಂದವಾಗಿದೆ ಮತ್ತು ಅದರ ತಳಭಾಗದಲ್ಲಿ ತೆಳುವಾದ ದೂರಿಯನ್ನು ಲಗತ್ತಿಸಿದ್ದು, ಇದನ್ನು ಸ್ವಲ್ಪ ಬಾಗಿಸಲಾಗಿದೆ. ಇದು ರಥಕ್ಕೆ ಹೆಚ್ಚಿನ ಬಲವನ್ನು ನೀಡುತ್ತದೆ. ಚೌಕಟ್ಟಿನ ಮುಂಭಾಗದಲ್ಲಿ ಸಾರಥಿಯು ಕುಳಿತುಕೊಳ್ಳುವ ಸ್ಥಳದ ತಳಭಾಗದಲ್ಲಿ ಮರದ ದೂರಿಯಿದ್ದು ಇದು ಲಂಬಕೋನದಲ್ಲಿ ಮೇಲೆ ಹೋಗಿದೆ (ವಿಸ್ತರಿಸಿದೆ). ಪ್ರಾಯಃ ಇದು ಯೋಧರು ರಥ ಹತ್ತಲು ಉಪಯೋಗಿಸುತ್ತಿದ್ದ ಕಾಲೂರಿಯಾಗಿರಬಹುದು. ಚೌಕಟ್ಟು ಮರದ ಪಟ್ಟಿಗಳಿಂದ ವಿನ್ಯಾಸಗೊಂಡಿದೆ. ಚೌಕಟ್ಟಿನ ಅತ್ಯಂತ ಮೇಲ್ಭಾಗದಲ್ಲಿ ಚೌಕಟ್ಟಿಗೆ ಹೆಚ್ಚಿನ ಎತ್ತರ ಅಥವಾ ಔನ್ನತ್ಯವನ್ನು ನೀಡಲು ಹಾಗೂ ಯೋಧರನ್ನು ಶತ್ರುದಾಳಿಯಿಂದ ರಕ್ಷಿಸುವ ಸಲುವಾಗಿ, ಎರಡು ಸಪಾಟ ದೂರಿಗಳನ್ನು ನೀಡಲಾಗಿದೆ. ಎರಡು ಕುದುರೆಗಳು ಮಾತ್ರ ಕಾಣುತ್ತಿದ್ದು, ಇವನ್ನು ಮೂಕಿಗೆ ನೊಗದಿಂದ ಕಟ್ಟಲಾಗಿದೆ. ಸಾರಥಿಯು ಲಗಾಮುಗಳು ಹಾಗೂ ಚಾವಟಿಯ ಸಮೇತ ಮೂಕಿಯ ಮೇಲೆ ಕುಳಿತಿರುವನು; ರಥದ ಒಳಗಡೆ ವಿವಿಧ ಬಗೆಯ ಸಮರಾಸ್ತ್ರಗಳನ್ನು ಹಿಡಿದು ಯೋಧರಿರುವುದು ಕಂಡುಬರುತ್ತದೆ. ಈ ರಥದಲ್ಲಿ ಮೂಕಿಯು ಮೇಲ್ಭಾಗದಿಂದ ಕಡಿದಾಗಿ ಬಾಗಿದೆ ಮತ್ತು ಚೌಕಟ್ಟು ದೋಣಿಯಾಕಾರವಾಗಿ ಕಾಣುತ್ತದೆ. ನೊಗ ಮತ್ತು ಚೌಕಟ್ಟಿನ ನಡುವೆ ಸಾಕಷ್ಟು ಸ್ಥಳಾವಕಾಶ ಮೂಕಿಯಿಂದ ದೊರತಿದೆ.

(f) **ಎರಡು ಚಕ್ರಗಳಿರುವ ಸಮರರಥ :** ಇದು ಸರಳವಾದ ಎರಡು ಚಕ್ರಗಳಿರುವ ರಥ (ಚಿತ್ರ 5). ಇರಚಿಯ ಮೇಲೆ ಇರಿಸಲಾಗಿರುವ ರಥದ ಚೌಕಟ್ಟನ್ನು ಮರದಲ್ಲಿನ ತಿರುವುಗಳಿಂದ ವಿನ್ಯಾಸಗೊಳಿಸಲಾಗಿದೆ. ದೂರಿಯು ಮಂದವು ರಥದ ಬಾಳಿಕೆ ಹಾಗೂ ಶಕ್ತಿಸೂಚಕವಾಗಿದೆ. ಚೌಕಟ್ಟಿನ ಮೇಲುಭಾಗವನ್ನು ಪುಷ್ಪವಿನ್ಯಾಸಗಳಿಂದ ಕೆತ್ತಲಾಗಿದೆ ಹಾಗೂ ಅದರ ಔನ್ನತ್ಯದಿಂದಾಗಿ ಅದು ಯೋಧರನ್ನು ಶತ್ರುಗಳಿಂದ ರಕ್ಷಿಸುತ್ತದೆ. ಒಂದೇ ಒಂದು ಕುದುರೆಯು ಈ ರಥದಲ್ಲಿ ತೋರುತ್ತಿರುವುದಾದರೂ ಇದನ್ನು ಎರಡು ಕುದುರೆಗಳು ಎಳೆಯುತ್ತಿದ್ದಿರಬೇಕು. ಸಾರಥಿಯು ಮೂಕಿಯ ಮೇಲೆ ಕುಳಿತಿದ್ದು, ರಥದಲ್ಲಿ ಇಬ್ಬರು ಯೋಧರು ಕುಳಿತಿರುವಂತೆ ತೋರುತ್ತಿದೆ.

(g) **ಸಾರಥಿಗೆ ಮಾತ್ರ ಚಾಮರಗಳಿರುವ ಸಮರರಥಗಳು :** ಈ ಬಗೆಯ ರಥದಲ್ಲಿ ಅರೆಗಳಿಲ್ಲದಿರುವ ತುಂಬ ಸರಳ ವಿನ್ಯಾಸದ ನಾಲ್ಕು ಚಕ್ರಗಳಿವೆ. ರಥದ ಚೌಕಟ್ಟು ತೆರೆದಿರುವ ಬಗೆಯದಾಗಿದ್ದು, ಸಪಾಟದೂರಿಯು ತುಂಬಾ ದಪ್ಪವಾಗಿದ್ದು, ಯೋಧರು ಕುಳಿತುಕೊಳ್ಳಲು ಅಥವಾ ನಿಂತುಕೊಳ್ಳಲು ಅಟ್ಟಣೆಯಿದೆ. ಮೂಕಿಯ ಮೇಲೆ ಸಾರಥಿಯು ಕುಳಿತಿರುವುದು ಕಂಡುಬರುತ್ತದೆ. ಮೂಕಿಯ ಮಧ್ಯಭಾಗದಲ್ಲಿ ಲಂಬವಾಗಿರುವ ದಂಡವಿದ್ದು, ಇದರ ತುದಿಯಲ್ಲಿ ಚಾಮರವಿರಿಸಲಾಗಿದೆ. ತೆರೆದ ಚೌಕಟ್ಟಿನ ಹಿಂಭಾಗದಲ್ಲಿ ಲಂಬವಾಗಿರುವ ದಂಡವೊಂದಿದ್ದು, ಇದರ ತುದಿಯಲ್ಲಿ ಒಂದು ಧ್ವಜ ಕಂಡುಬರುತ್ತದೆ. ಇದು ರಾಜ ಲಾಂಛನವಾಗಿರಬಹುದು ಇಲ್ಲವೇ ರಾಜವಂಶದ ಸಂಕೇತವಾಗಿರಬಹುದು. ಇಬರು ಯೋಧರು ಕುಳಿತಿರುವುದು; ಇವರ ಪೈಕಿ ಒಬ್ಬ ಬಿಲ್ಲು ಬಾಣ ಹಿಡಿದು ಯುದ್ಧ ಮಾಡುತ್ತಿರುವುದು ಮತ್ತೊಬ್ಬ ದೇವರ ಪ್ರಾರ್ಥನೆ ಮಾಡುತ್ತಿರುವುದು ಕಾಣುತ್ತದೆ. ಸುತ್ತಲೂ ಕಟಾಂಜನವಿಲ್ಲದ ತೆರೆದ ರೀತಿಯ ರಥ ಇದಾಗಿರುವುದರಿಂದ ಅಗತ್ಯವಾದಾಗ

ರಥದಲ್ಲಿರುವವರು ತಪ್ಪಿಸಿಕೊಂಡು ಹೋಗಲು ಸಹಾಯಕವಾಗಿರುವಂತಿದೆ. ಒಂದೇ ಒಂದು ಕುದುರೆ ಕಾಣುತ್ತಿರುವುದಾದರೂ ರಥವನ್ನು ಎರಡು ಕುದುರೆಗಳು ಎಳೆಯುತ್ತಿದ್ದಿರಬೇಕು.

(h) **ಮುಂದೆ ಮತ್ತು ಹಿಂದೆ ಚಾಮರಗಳಿರುವ ಸಮರರಥಗಳು :** ಅರೆಗಳಿಲ್ಲದೆ ತುಂಬ ಸರಳವಾದ ಚಕ್ರಗಳಿಂದ ಕೂಡಿರುವ ರಥ ಇದಾಗಿದೆ (ಚಿತ್ರ 7). ನಾಲ್ಕು ಚಕ್ರಗಳಿವೆ. ತೆರೆದ ಬಗೆಯದಾಗಿರುವುದರಿಂದ ಸಪಾಟದೂರಿಯು ಇರಚಿ ಮತ್ತು ಮೂಕಿಯ ಮೇಲೆ ಆಧಾರಿತವಾಗಿದ್ದು, ಮರದಲ್ಲಿ ತುಂಬ ಸುಂದರವಾಗಿ ಕೆತ್ತಲಾಗಿರುವ ಸಣ್ಣ ಕಟಾಂಜನವಿದೆ. ದೂರಿಯ ತಳಭಾಗವು ಕೆಳಮುಖವಾಗಿ ಬಾಗಿದೆ; ಇದು ರಥಕ್ಕೆ ಮತ್ತಷ್ಟು ಶಕ್ತಿಯನ್ನು ನೀಡುತ್ತದೆ. ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಲಂಬವಾಗಿರುವ ದಂಡವಿದ್ದು, ಇವುಗಳ ತುದಿಯಲ್ಲಿ ಚಾಮರಗಳಿವೆ. ಈ ಬಗೆಯ ರಥದಲ್ಲಿ ಒಬ್ಬನೇ ವೀರನಿರುವುದರಿಂದ ಇದನ್ನು ರಾಜರು ಅಥವಾ ದಳಪತಿಗಳು ಯುದ್ಧದಲ್ಲಿ ಬಳಸುತ್ತಿದ್ದಿರಬೇಕು. ಚಾಮರವಿರುವುದರಿಂದ ಇದು ರಾಜಮನೆತನಕ್ಕೆ ಸೇರಿದುದೆಂಬುದನ್ನು ಸೂಚಿಸುತ್ತದೆ. ಒಂದೇ ಒಂದು ಕುದುರೆಯನ್ನು ಮಾತ್ರ ಕೆತ್ತಲಾಗಿದೆ, ಆದರೆ ಇದನ್ನು ಎರಡು ಕುದರೆಗಳು ಸೆಳೆಯುತ್ತಿದ್ದಿರಬೇಕು.

(i) **ಧ್ವಜವಿರುವ ಸಮರರಥ :** ಈ ಬಗೆಯ ರಥಗಳಲ್ಲಿ ಸರಳ ವಿನ್ಯಾಸದ ನಾಲ್ಕು ಚಕ್ರಗಳಿವೆ. ಚೌಕಟ್ಟಿನಲ್ಲಿ ವಿನ್ಯಾಸವಿಲ್ಲದ ದಪ್ಪದಾದ ಮರದ ಅಟ್ಟಣೆಯಿದ್ದು, ತೆರೆದ ರೀತಿಯದಾಗಿದೆ. ರಥದ ಹಿಂಬದಿಯಲ್ಲಿ ಲಂಬವಾಗಿರುವ ದಂಡವಿದ್ದು, ಇದು ರಾಜನ ಲಾಂಛನ ಅಥವಾ ರಾಜವಂಶದ ಚಿಹ್ನೆಯನ್ನು ತೋರಿಸುತ್ತದೆ. ಮೂಕಿಯ ಮೇಲೆ ಸಾರಥಿ ಕುಳಿತಿದ್ದು, ರಥದಲ್ಲಿ ಒಬ್ಬ ವೀರ ಮಾತ್ರ ಕುಳಿತಿರುವುದು ಕಂಡುಬರುತ್ತದೆ. ಈ ರೀತಿಯ ರಥಗಳನ್ನು [ತಮ್ಮ ರಥದ ಹಿಂಬದಿಯಲ್ಲಿ ರಾಜಲಾಂಛನ ಅಥವಾ ಚಿಹ್ನೆಯಿರುವ] **ಹೊಯ್ಸಳ** ದೊರೆಗಳು, ಅಥವಾ ರಾಜರ, ರಕ್ಷಣೆಗಾಗಿ ಗರುಡರು ಎಂದು ಕರೆಯಲಾಗುತ್ತಿದ್ದ ಸಿಪಾಯಿವಂಶ ಅಂಗರಕ್ಷಕರು ಬಳಸುತಿದ್ದಿರಬೇಕು.

ಎಲ್. ಎನ್. ಕಪನಿಗೌಡ

ಗುಡ್ಡಗಾಡು ಜನಾಂಗ ಅಥವಾ ಆದಿವಾಸಿಗಳು

ಕಾಡುಕುರುಬರು

ಆದಿವಾಸಿ ಜನಾಂಗ ತನ್ನದೇ ಒಂದು ಸಂಸ್ಕೃತಿಯನ್ನು ಹೊಂದಿರುತ್ತದೆ. ಈ ಸಂಸ್ಕೃತಿಯನ್ನು ವಂಶಪಾರಂಪರ್ಯವಾಗಿ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುತ್ತದೆ. ಭಾರತದ ಜನ ಸಂಖ್ಯೆಯಲ್ಲಿ ಶೇ. ಏಳರಷ್ಟು ಆದಿವಾಸಿಗಳಿದ್ದಾರೆ.

ಈ ಜನಾಂಗವನ್ನು ನಾಲ್ಕು ಪಂಗಡಗಳಾಗಿ ವಿಂಗಡಿಸಬಹುದು :

1) ಪ್ರೋಟೋ ಆಸ್ಟ್ರಲಾಯ್ಡ್
2) ಮಂಗಲಾಯ್ಡ್
3) ನೆಗ್ರಿಟೋ ಮತ್ತು
4) ನಾರ್ಡಿಕ್

ಈ ಜನಾಂಗವು ಪರಿಸರದಿಂದ ಪರಿಸರಕ್ಕೆ ಬದಲಾಯಿಸುತ್ತಾ ಹೋಗುತ್ತದೆ; ಅಂದರೆ ಒಂದೆಡೆ ನೆಲಸದೆ ಅಲೆಮಾರಿಗಳಾಗಿರುತ್ತಾರೆ. ಈ ವಲಸೆ ಹೋದಂತ ಜನರು ಕೆಲವು ಕಾಲ ಒಂದೆಡೆ ಇದ್ದಾಗ ವ್ಯವಸಾಯ, ಬೇಟೆಯಾಡುವುದು, ಮೀನು ಹಿಡಿಯುವ ಕಸಬುಗಳನ್ನು ಮಾಡಿಕೊಂಡಿರು ತ್ತಿದ್ದರು. ಕೆಲವು ವರ್ಷ ಕಳೆದ ನಂತರ ಬೇರೊಂದೆಡೆಗೆ ಹೋಗುವಾಗ ತಮ್ಮ ಜೊತೆಯಲ್ಲಿರುವ ಆಡು, ಕುರಿ, ದನಕರುಗಳು, ಇತ್ಯಾದಿ ಪ್ರಾಣಿಗಳನ್ನು ತಮ್ಮ ಜೊತೆಯಲ್ಲೇ ತೆಗೆದುಕೊಂಡು ಹೋಗುತ್ತಿದ್ದರು. ಇವರು ವಾಸಕ್ಕೆ ಕಾಡಿನಲ್ಲಿ ಸಿಗುವ ಬಿದಿರುಗಳನ್ನು ಕಡಿದು ಮನೆ, ಗುಡಿಸಲು ಗಳನ್ನು ನಿರ್ಮಿಸುತ್ತಿದ್ದರು. ಗುಡಿಸಿಲಿನ ಮೇಲ್ಭಾಗದ ಚಾವಣಿಗೆ ಮರದ ಎಲೆ, ಹುಲ್ಲು ಇತ್ಯಾದಿಯನ್ನು ಬಳಸಿಕೊಂಡು ಮಳೆ–ಗಾಳಿಯಿಂದ ರಕ್ಷಿಸಿಕೊಳ್ಳುತ್ತಿದ್ದರು.

ಈ ಆದಿವಾಸಿಗಳು ತಮ್ಮದೇ ಆದ ಕುಲಸಂಬಂಧ, ರಕ್ತಸಂಬಂಧ ಹೊಂದಿದ್ದು ತಮ್ಮದೇ ಆದ ಕುಲದೇವತಾ ಚಿಹ್ನೆ, ಹಬ್ಬಹರಿದಿನ, ಶವಸಂಸ್ಕಾರಪದ್ಧತಿ, ಲೋಕಾರೂಢಿ, ವಿವಾಹ, ಕುಟುಂಬ ವ್ಯವಸ್ಥೆ, ಧಾರ್ಮಿಕ ಆಚರಣೆಗಳನ್ನು ಹೊಂದಿರುತ್ತಾರೆ. ಈ ಎಲ್ಲಾ ಆಧಾರಗಳ ಮೇಲೆ ಜನಾಂಗಗಳ ಅಧ್ಯಯನ ಮಾಡಬಹುದು. ಇದನ್ನೇ ಮಾನವಶಾಸ್ತ್ರಜ್ಞರು (Anthropologist) ಮಾನವಶಾಸ್ತ್ರ ಸಮೀಕ್ಷೆ ಎಂದಿದ್ದಾರೆ. ಇಂಥ ಒಂದು ಸಮೀಕ್ಷೆಯನ್ನು ಮಾಡಿದವರಲ್ಲಿ (1948 ರಲ್ಲಿ) ಬಿ. ಎಸ್. ಗುಹಾ ಮೊದಲನೆಯವರಾಗಿದ್ದಾರೆ. ಇವರ ಸಮೀಕ್ಷೆ ಪ್ರಕಾರ ಆದಿವಾಸಿಗಳು ತಮ್ಮದೇ ಆದ ರಕ್ತಸಂಬಂಧ, ಉಡಿಗೆ ತೊಡಿಗೆ, ಶಾರೀರಿಕ ಲಕ್ಷಣ, ಭಾಷೆಗಳನ್ನು ಹೊಂದಿರುತ್ತಾರೆಂದು ತಿಳಿದು ಬಂದಿದೆ.

ಭಾರತ ಸರ್ಕಾರವು 1951ರ ಈಚೆಗೆ ಗುಡ್ಡಗಾಡಿನ ಅಂದರೆ ಕಾಡಿನಲ್ಲಿ ವಾಸ ಮಾಡುವ ಬೆಟ್ಟಕುರುಬ, ಜೇನುಕುರುಬ, ಮುಳ್ಳುಕುರುಬ, ಸೋಲಿಗರು, ತೋಡರು, ಕೊರಚರು, ಅಂಡಮಾನ್ ದ್ವೀಪದಲ್ಲಿ ವಾಸವಾಗಿರುವ ಅಂಡಮಾನಿಗಳು ಇತ್ಯಾದಿ ಆದಿವಾಸಿಗಳ ಅಧ್ಯಯನ ಕ್ಕೋಸ್ಕರ ಅನೇಕ ಯೋಜನೆಗಳನ್ನು ಹಾಕಿಕೊಂಡು ಆದಿವಾಸಿಗಳ ಕಲ್ಯಾಣಕ್ಕೋಸ್ಕರ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದರ ಮೇಲ್ವಿಚಾರಣೆಗೆ ಟ್ರೈಬಲ್ ಇನ್ಸ್‌ಪೆಕ್ಟರ್‌ಗಳನ್ನು (tribal inspector) ನೇಮಿಸಲಾಗಿದೆ. ಕರ್ನಾಟಕದಲ್ಲಿರುವ ಇಂಥ ಗುಡ್ಡಗಾಡು ಜನಾಂಗಗಳಲ್ಲಿ ಒಂದು ಪ್ರಮುಖ ಪಂಗಡ ಕಾಡು ಕುರುಬರು.

ಕಾಡು ಕುರುಬರು : ಇವರು ಕರ್ನಾಟಕದ ಹೆಗ್ಗಡದೇವನಕೋಟೆ, ಸೋಮವಾರಪೇಟೆ, ಬಿಳಿಗಿರಿರಂಗನ ಬೆಟ್ಟ, ಬಂಡೀಪುರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಇವರು ನೀಲಗಿರಿ ಬೆಟ್ಟದಲ್ಲೂ, ಕೇರಳದ ವೈನಾಡು ಮತ್ತು ಮಲಬಾರಿನಲ್ಲೂ ವಾಸವಾಗಿದ್ದಾರೆ. ಇವರಲ್ಲಿ ಪ್ರಧಾನವಾಗಿ ಮೂರು ಪಂಗಡಗಳಿರುತ್ತವೆ : ಬೆಟ್ಟಕುರುಬರು, ಜೇನುಕುರುಬರು ಮತ್ತು ಮುಳ್ಳುಕುರುಬರು.

ಬೆಟ್ಟಕುರುಬರು : ಕನ್ನಡದಲ್ಲಿ ಬೆಟ್ಟಕುರುಬ ಎಂದು ಕರೆದರೆ ಇವರನ್ನು ಕೇರಳದಲ್ಲಿ ಊರಾಳಿಕುರುಬ ಎಂತಲೂ, ಉತ್ತರ ಮಲಬಾರ್‌ನಲ್ಲಿ ಕುರುಂಬಾನ್ ಎಂದೂ ಕರೆಯುತ್ತಾರೆ. ಯಾವ ಕುರುಬರನ್ನೂ ವಿಚಾರಿಸಿದಾಗ ತಮ್ಮ ಮೂಲ ಜನಾಂಗದ ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಾರೆ. ಬೆಟ್ಟಕುರುಬರಲ್ಲಿ ಪ್ರಧಾನವಾಗಿ ಎರಡು ಪಂಗಡಗಳಿವೆ. 1) ಮುನಪಾಡಿ 2) ಬೆಲ್ಲಾಡಿ. ಇವರು ಕಾಡಿನಲ್ಲಿ ಬೆಳೆಯುವ ಬಿದಿರು ಅಥವಾ ಬಂಬೂಗಳನ್ನು ಕಡಿದು ಅದರಿಂದ ಬುಟ್ಟಿ ಹೆಣೆಯುವುದು, ಕುಕ್ಕೆ, ಬೀಸಣಿಗೆ, ಮೊರ, ಇತ್ಯಾದಿಗಳನ್ನು ತಯಾರಿಸಿ ಮಾರುವುದು ಇವರ ವೃತ್ತಿಯಾಗಿದೆ. 1961ರ ಜನಗಣತಿಯ ಪ್ರಕಾರ ಇವರ ಸಂಖ್ಯೆ 4000 ಎಂದು ತಿಳಿದು ಬಂದಿದೆ. ಇವರು ಕನ್ನಡ, ತೆಲುಗು, ತಮಿಳು, ಮಲೆಯಾಳ ಈ ಭಾಷೆಗಳಲ್ಲಿ ಮಾತನಾಡುತ್ತಾರೆ. ಆದರೆ ಇವರಿಗೆ ಓದುವುದು ತಿಳಿದಿಲ್ಲ.

ಇವರು ತಮ್ಮದೇ ಆದಂತಹ ಒಂದು ವಾಸಸ್ಥಳವನ್ನು ಹೊಂದಿದ್ದು, ಆ ಒಂದು ಪ್ರದೇಶವನ್ನು 'ಹಾಡಿ' ಎಂದು ಕರೆಯುತ್ತಾರೆ. ಪ್ರತಿಯೊಂದು ಹಾಡಿಯಲ್ಲಿಯೂ 8-10 ಮನೆಗಳು ಇರುತ್ತವೆ. 3-4 ಹಾಡಿ ಸೇರಿಸಿ ಒಬ್ಬ ಯಜಮಾನ ಇರುತ್ತಾನೆ. ಈತನು ಪ್ರತಿಯೊಂದು ಕಾರ್ಯದಲ್ಲೂ ಮುಖ್ಯಸ್ಥನಾಗಿರುತ್ತಾನೆ. ಈತನು ಹೇಳಿದಂತೆ ಇತರರು ನಡೆಯಬೇಕು. 'ಹಾಡಿ' ಯಲ್ಲಿ ಮುಖ್ಯಸ್ಥನು ಕೊಡುವ ಶಿಕ್ಷೆಗೆ ಎಲ್ಲರೂ ಬದ್ಧರಾಗಿರುತ್ತಾರೆ.

ಇವರು ಮನೆಯನ್ನು ನಿರ್ಮಿಸುವಾಗ ನಾಲ್ಕು ಮೂಲೆಯಾಕಾರದ ಮನೆಯನ್ನು ನಿರ್ಮಿಸುತ್ತಾರೆ ಮಧ್ಯಭಾಗದಲ್ಲಿ ವಿಶಾಲವಾದ ಜಾಗ ಇರುತ್ತದೆ. ಇದನ್ನು 'ಅಂಬಾಲ' (Ambala) ಎಂದು ಕರೆಯುತಾರೆ. ಈ 'ಅಂಬಾಲ'ವನ್ನು ಹಬ್ಬ ಹರಿದಿನಗಳಲ್ಲಿ ಬಳಸುತ್ತಾರೆ. ಇದರೊಳಗಡೆ ಚಪ್ಪಲಿ ಹಾಕಿಕೊಂಡು ಹೋಗುವಂತಿಲ್ಲ. ಈ ಜಾಗದಲ್ಲಿ ತಮ್ಮ ನ್ಯಾಯಗಳ ತೀರ್ಪುಮಾಡುತ್ತಾರೆ. ಪ್ರತಿಯೊಂದು ಹಾಡಿಯೂ ಒಂದೊಂದು ಚಾವಡಿ ಇರುತ್ತದೆ. ಇದರೊಳಗಡೆ ಚಪ್ಪಲಿ ಹಾಕಿಕೊಂಡು ಹೋಗುವಂತಿಲ್ಲ, ಹಬ್ಬಹರಿದಿನಗಳಲ್ಲಿ 'ದೇವರು ಕರೆಯುವುದು,' ಕುಣಿದಾಟ, ಇತ್ಯಾದಿ ಕಾರ್ಯ

ಕ್ರಮಗಳು ಚಾವಡಿಯಲ್ಲೂ ಜರುಗುತ್ತವೆ. ಈ ಒಂದು ಚಾವಡಿಯಲ್ಲಿ ದೇವರಿಗೆ ಸಂಬಂಧಪಟ್ಟ ತಮಟೆ, ಕರೆಯುವ ಕೊಂಗ, ತಾಳಮದ್ದಳೆ, ಇತ್ಯಾದಿಗಳನ್ನು ಇಟ್ಟಿರುತ್ತಾರೆ.

ಬೆಟ್ಟಕುರುಬರ ಶಾರೀರಿಕ ಲಕ್ಷಣಗಳು : ಈ ಜನಾಂಗವು ಕಪ್ಪು ಬಣ್ಣದಿಂದ ಕೂಡಿರುತ್ತದೆ. ಉಬ್ಬಿದ ತುಟಿ, ಗುಂಗುರು ಕೂದಲು. ಉದ್ದವಾದ ತಲೆ, ಉದ್ದವಾದ ಮೂಗು, ಅಗಲವಾದ ಹಣೆ ಇವುಗಳನ್ನು ಹೊಂದಿದ್ದು 4-5 ಅಡಿ ಎತ್ತರವಾಗಿರುತ್ತಾರೆ. ಒಟ್ಟಿನಲ್ಲಿ ದ್ರಾವಿಡ ಬುಡಕಟ್ಟಿನ ಹೋಲಿಕೆಯನ್ನು ಹೊಂದಿರುತ್ತಾರೆ. ಆದ್ದರಿಂದ ದ್ರಾವಿಡ ಜನಾಂಗಕ್ಕೆ ಸೇರಿದವರೆನ್ನ ಬಹುದು.

ಇವರ ಉಡುಪಿನಲ್ಲಿ ಅನೇಕ ಬದಲಾವಣೆ ನೋಡಬಹುದು. ಹೆಂಗಸರು ಸೀರೆಯನ್ನು ಹಿಂಭಾಗದಿಂದ ಬಳಸಿ ಎದೆಯ ಮೇಲೆ ಬಿಗಿದು ಕಟ್ಟುತ್ತಾರೆ. ರವಿಕೆಯನ್ನು ಧರಿಸುತ್ತಾರೆ, ಚಿನ್ನದ ಆಭರಣಗಳನ್ನು ಧರಿಸುವುದಿಲ್ಲ. ಅದಕ್ಕೆ ಬದಲಾಗಿ ಮಣಿಗಳಿಂದ ಮಾಡಿದ ಕಂಠಾಭರಣ ಗಳನ್ನು ಸಾಣ್ಯದಿಂದ ಮಾಡಿದ ಆಭರಣಗಳನ್ನು ಧರಿಸುತ್ತಾರೆ. ಗಾಜಿನ ಅಥವಾ ಪ್ಲಾಸ್ಟಿಕ್ ಆಭರಣಗಳನ್ನು ಬಳಸುವುದಿಲ್ಲ. ಇವರು ದೇವರ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿರುತ್ತಾರೆ. ಇವರು ಮಾಟ–ಮಂತ್ರಗಳಲ್ಲಿಯೂ ನಂಬಿಕೆ ಹೊಂದಿರುತ್ತಾರೆ.

ಬೆಟ್ಟಕುರುಬರು ಅನೇಕ ವಿಧವಾದ ದೇವರುಗಳನ್ನು ಪೂಜಿಸುತ್ತಾರೆ. ಉದಾಹರಣೆಗೆ ಸೂಲಗಿತ್ತಮ್ಮ, ಮಾರಮ್ಮ, ಹುಲ್ಲುಮಾಸ್ತಮ್ಮ, ಇತ್ಯಾದಿ. ಇವರಿಗೆ ದೆವ್ವ ಅಥವಾ ಪಿಶಾಚಿ, ಮಾಟಮಂತ್ರ ಇತ್ಯಾದಿಗಳಲ್ಲಿ ನಂಬಿಕೆ ಇದೆ. ಉಳಿಸುವವನು, ಆಳಸುವವನು ದೇವರೇ ಎಂದು ನಂಬುತ್ತಾರೆ.

ಎಲ್ಲ ಆದಿವಾಸಿಗಳೂ ತಮ್ಮದೇ ಆದ ಕುಟುಂಬ ವ್ಯವಸ್ಥೆ, ವಿವಾಹ, ಧಾರ್ಮಿಕ ನಂಬಿಕೆ, ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುತ್ತಾರೆ,

ಆರ್ಥಿಕ ವ್ಯವಸ್ಥೆ : ನಮ್ಮ ದೇಶದ ಜನ ಸಂಖ್ಯೆಯಲ್ಲಿ ಶೇಕಡ 80ರಷ್ಟು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಅವರ ಕಸುಬು ವ್ಯವಸಾಯವಾಗಿರುತ್ತದೆ. ಆದೇ ರೀತಿ ಬೆಟ್ಟಕುರುಬರು ಕಾಡಿನಲ್ಲಿ ದೊರೆಯುವ ಬಿದಿರು ಅಥವಾ ಬಂಬುಗಳನ್ನು ಕಡಿದು ಅದರಿಂದ ಕುಕ್ಕೆ, ಮೊರ, ಬೀಸಣಿಗೆ, ತೊಟ್ಟಿಲು, ಇತ್ಯಾದಿಗಳನ್ನು ಹೆಣೆದು ಪಕ್ಕದ ಹಳ್ಳಿಗಳಿಗೆ ಹೋಗಿ ದವಸಕ್ಕೆ ಅಥವಾ ಹಣಕ್ಕೆ ಮಾರಿ ಅದರಿಂದ ಜೀವನ ಸಾಗಿಸುತ್ತಾರೆ. ಬೇರೆಯವರು ಕೂಲಿ ಕೆಲಸ ಮಾಡುತ್ತಾರೆ. ಭಾರತ ಸರ್ಕಾರವು 1952 ರಿಂದೀಚೆಗೆ ಹಿಂದುಳಿದವರ ಏಳಿಗೆಗಾಗಿ ಅಲ್ಪಸ್ವಲ್ಪ ಜಮೀನನ್ನು ನೀಡಿ ವ್ಯವಸಾಯಕ್ಕೆ ಬೇಕಾದ ಸಲಕರಣೆಯನ್ನು ಕೊಟ್ಟಿದೆ. ಇವರಿಗೆ ಸರ್ಕಾರವು ಮನೆಯನ್ನೂ ಸಹ ಒದಗಿಸಿದೆ. ಕೆಲವರಿಗೆ ಅರಣ್ಯ ವಿಭಾಗದಲ್ಲಿ ಉದ್ಯೋಗ ಸಹ ಕೊಟ್ಟಿದ್ದಾರೆ. ಇವರಿಗೆ ಶಾಲಾ ಸೌಕರ್ಯ, ವೈದ್ಯಕೀಯ ಸೌಲಭ್ಯಗಳು ಇತ್ಯಾದಿ ಕಲ್ಪಿಸಿಕೊಟ್ಟಿದ್ದಾರೆ. ಕುಡಿಯಲು ನೀರಿಗೋಸ್ಕರ ಬೋರ್‌ವೆಲ್ ಬಾವಿಗಳನ್ನು ಹಾಕಿಸಿದ್ದಾರೆ. ಇವರ ಆರ್ಥಿಕ ಪರಿಸ್ಥಿತಿ ಹಿಂದೆ ಬಿದ್ದಿರಲು ಮುಖ್ಯ ಕಾರಣವೆಂದರೆ ಇವರಲ್ಲಿ ಬೀಡಿ ಸೇದುವುದು, ಹೆಂಡ ಕುಡಿಯುವುದು ಇತ್ಯಾದಿ ದುಶ್ಚಟಗಳಿವೆ. ಇವರು ತಮ್ಮ ಜಮೀನಿನಲ್ಲಿ ರಾಗಿ, ಅವರೆಗಿಡ್ಡೆ. ಬಾಳೆ ಇತ್ಯಾದಿಯನ್ನು ಬೆಳೆಯುತ್ತಾರೆ.

ಕುಟುಂಬ ವ್ಯವಸ್ಥೆ : ಬೆಟ್ಟ ಕುರುಬರಲ್ಲಿ ಕುಟುಂಬ ವ್ಯವಸ್ಥೆಯಲ್ಲಿ ವಾಸ್ತವಿಕವಾಗಿ ಏಕ ಪ್ರಧಾನ ಕುಟುಂಬಗಳು ಜಾಸ್ತಿ; ಅವಿಭಕ್ತ ಕುಟುಂಬಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಒಬ್ಬ ವ್ಯಕ್ತಿಯು ಎರಡು ಮೂರು ಸಲ ವಿವಾಹ ಮಾಡಿಕೊಳ್ಳುತ್ತಾನೆ. ಇವರಲ್ಲಿ ಅಂತರ್ ಜಾತಿಯ ವಿವಾಹವಿಲ್ಲ. ವರದಕ್ಷಿಣೆ ನಿಷೇಧಿಸಲಾಗಿದೆ ವರದಕ್ಷಿಣೆ ತೆಗೆದುಕೊಂಡು ವಿವಾಹವಾದವರನ್ನು ತಮ್ಮ ಹಾಡಿಗೆ ಸೇರಿಸುವುದಿಲ್ಲ. ಬೇರೊಂದು ಮದುವೆಯಾದರೆ ಮೊದಲ ಹೆಂಡತಿಯನ್ನು ಬಿಡಬೇಕು. ಇವರ ಅಕ್ಕ, ಅಣ್ಣ, ತಂಗಿ, ಭಾವ ಇತ್ಯಾದಿಯಾಗಿ ಸಂಬೋಧಿಸುತ್ತಾರೆ. ಇವರಲ್ಲಿ ಒಂದೂ ಸಂಪ್ರದಾಯವೇ ಕಂಡುಬರುತ್ತದೆ. ಕುಟುಂಬದಲ್ಲಿ ತಂದೆಯೇ ಪ್ರಧಾನನಾಗಿರುತ್ತಾನೆ. ಈತನನ್ನು ಕೇರಳದಲ್ಲಿ ತಂಬಲ್ ಎಂದು ಕರೆಯುತ್ತಾರೆ. ತಂದೆಯ ಆಸ್ತಿ ಮಗನಿಗೆ ಬರುತ್ತದೆ.

ಧಾರ್ಮಿಕ ಜೀವನ : ಇವರಲ್ಲಿ ಪ್ರಪಂಚವನ್ನು ಸೃಷ್ಟಿಸಿದವನು ಹಾಗೂ ನಾಶ ಮಾಡುವವನು ದೇವರೇ ಎಂಬ ನಂಬಿಕೆ ಇದೆ. ಹುಟ್ಟು ಸಾವು ದೇವರಿಗೆ ಸಂಬಂಧಿಸಿದ್ದು ಎಂದು ನಂಬುತ್ತಾರೆ. ಪ್ರತಿಯೊಂದು ಕ್ರಿಯೆಯೂ ದೇವರಿಂದ ನಡೆಯುತ್ತದೆ, ದೇವರಿಗೆ ವ್ಯತಿರಿಕ್ತವಾಗಿ ನಡೆದರೆ ತೊಂದರೆಯಾಗುತ್ತದೆ ಎಂದು ನಂಬುತ್ತಾರೆ. ಇವರು ಗೌರಿ (ಬಣ) ಯುಗಾದಿ (ಬೆಸು) ಶಿವರಾತ್ರಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಶಿವ, ವಿಷ್ಣು ದೇವರುಗಳನ್ನು ಪೂಜಿಸುತ್ತಾರೆ. ಜೊತೆಗೆ ಊರದೇವತೆಗಳು ಕಾಡುದೇವತೆಗಳನ್ನು ಪೂಜಿಸುತ್ತಾರೆ. ಉದಾ :– ಹುಲ್ಲುಮಾಸ್ತಮ್ಮ, ಮಾರಿಯಮ್ಮ ಇತ್ಯಾದಿ.

ಒಂದೊಂದು ದೇವತೆಯೂ ಒಂದೊಂದು ಕುಟುಂಬಕ್ಕೆ ಕುಲದೇವತೆ. ಹಾಗೂ ಮನೆದೇವತೆ ಆಗಿರುತ್ತದೆ. ಮನೆದೇವರ ಹೆಸರನ್ನು ತಮ್ಮ ಮಕ್ಕಳಿಗೆ ಇಡುತ್ತಾರೆ. ಬೆಟ್ಟಕುರುಬರು ಪೂಜಿಸುವ ದೇವತೆಗಳು ಹಾಡಿಯಲ್ಲಿರುವ ಒಬ್ಬ ವ್ಯಕ್ತಿಯ (ಶ್ಯಾಮನ್) ಮೈಮೇಲೆ ಬಂದು ಜನರೊಡನೆ ಮಾತನಾಡುತ್ತವೆ. ದೇವತೆಗಳು ಮೈಮೇಲೆ ಬರುವವನಿಗೆ 'ದೇವರಗುಡ್ಡ' ಎಂದು ಕರೆಯುತ್ತಾರೆ. ದೇವರನ್ನು ಕರೆಯುವುದು ರೂಢಿಯಲ್ಲಿದೆ. ಜೇನುಕುರುಬರಲ್ಲೂ ಈ ಪದ್ಧತಿ ಜಾರಿಯಲ್ಲಿದೆ. ಇದಕ್ಕೆ 'ಬುಂಡೆ' ಕರೆಯುವಿಕೆ ಎನ್ನುತ್ತಾರೆ. ಬೆಟ್ಟಕುರುಬರಲ್ಲಿ 'ನೆರಳು' ಕರೆಯುವ ಪದ್ಧತಿ ಎಲ್ಲಾ ಸಂದರ್ಭದಲ್ಲಿಯೂ ಆಚರಣೆಯಲ್ಲಿರುವುದರಿಂದ ಪ್ರಸಿದ್ಧವಾದ ಪದ್ಧತಿಯಾಗಿದೆ.

ಶವಸಂಸ್ಕಾರ : ಸತ್ತ ವ್ಯಕ್ತಿಯ ಸಂಸ್ಕಾರ ಮಾಡುವುದು ಎಲ್ಲಾ ಜನಾಂಗಗಳಲ್ಲೂ ಕಂಡುಬರುವಂತೆ ಆದಿವಾಸಿಗಳಲ್ಲೂ ಕಂಡುಬರುತ್ತದೆ. ಸತ್ತವರನ್ನು ಹೂಳುವುದು ಸಂಪ್ರದಾಯವಾಗಿದೆ, ಆದರೆ ತೊನ್ನಿದ್ದವರು, ಬಾಣಂತಿ. ಬಸುರಿಯರು ಸತ್ತಾಗ ನೀರು ಹರಿಯುವ ಜಾಗದಲ್ಲಿ ಮಾತ್ರ ಹೂಳುತ್ತಾರೆ. ಕಾರಣ ಬೇರೆಡೆ ಹೂಳಿದರೆ ಹೆಣ ಕರಗುವುದಿಲ್ಲ, ನಾಡಿಗೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಉಳ್ಳವರಾಗಿದ್ದಾರೆ. ಸತ್ತ ಶವವನ್ನು ಹೂಳಲು ಮೊದಲು ಹಾಡಿಯ ಯಜಮಾನ ಸ್ವಲ್ಪ ಗುಂಡಿಯನ್ನು ಅಗೆಯುತ್ತಾನೆ. ಅನಂತರ ಇತರರು ಗುಂಡಿಯನ್ನು ಅಗೆದು ಪೂರ್ಣಮಾಡುತ್ತಾರೆ. ಶವವನ್ನು ಗುಂಡಿಯ ಪಕ್ಕದಲ್ಲಿ ಇರಿಸಿ ಹಾಡಿಯ ಯಜಮಾನ ಸತ್ತ ಹೆಣವನ್ನು ಉದ್ದೇಶಿಸಿ ಈ ರೀತಿ ಹೇಳುತ್ತಾನೆ "ನೀನು ಜೀವಿಸಿದ್ದಾಗ ನಿನ್ನ ಮಕ್ಕಳು ನಿನ್ನನ್ನು ಚೆನ್ನಾಗಿ

ನೋಡಿಕೊಳ್ಳುತ್ತಿದ್ದವರು, ಈಗ ಅವರು ಪ್ರೀತಿಯಿಂದ ಸತ್ಕರಿಸಿ ಸ್ವರ್ಗಕ್ಕೆ ಕಳುಹಿಸುತ್ತಿದ್ದಾರೆ,'' ಪ್ರೀತಿಯ ಕಾಣಿಕೆಯಾಗಿ ನಿನ್ನ ಬಾಯಿಗೆ ಹಣ ಇಡುತ್ತಾರೆ, ಬಾಯಿ ಬಿಡು ಎಂದು ಹೇಳುತ್ತಾನೆ.'' ಆಗ ಹಣ ಬಾಯಿ ಬಿಡುತ್ತದೆ ಎಂಬ ನಂಬಿಕೆ ಅವರಲ್ಲಿದೆ.

ಹಾಡಿಯ ಯಜಮಾನನು ಮೊದಲು ಶವವನ್ನು ಗುಂಡಿಯಲ್ಲಿ ಇಳಿಸುತ್ತಾನೆ. ಅನಂತರ ಇತರರು ಇಳಿಸುತ್ತಾರೆ. ಮೊದಲು ಯಜಮಾನ ಹೆಣಕ್ಕೆ ಮಣ್ಣು ಕೊಡುತ್ತಾನೆ. ಅನಂತರ ಇತರರು ಮಣ್ಣು ಕೊಡುತ್ತಾರೆ. ಇವರು ಸಮಾಧಿಯನ್ನು ಮಾಡುತ್ತಾರೆ. ಶವಸಂಸ್ಕಾರದ ನಂತರ ಎಲ್ಲಾ ಜನಗಳು ತಮ್ಮ 'ಹಾಡಿಗೆ' ಬಂದು ಅಲ್ಲಿಂದ **'ಚಾವಡಿ'** ಅಥವಾ **'ಅಂಬಾಲೆಗೆ'** ಹೋಗಿ ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತಾರೆ. ಅನಂತರ ಎಲ್ಲರೂ ಅವರವರ ಗುಡಿಸಲುಗಳಿಗೆ ತೆರಳುತ್ತಾರೆ. ಅಲ್ಲಿಯವರೆವಿಗೂ ಹಾಡಿಯವರು ನೀರು ತರವಂತಿಲ್ಲ, ಊಟ ಮಾಡುವಂತಿಲ್ಲ. ಶವ ಸಂಸ್ಕಾರದ ನಂತರ ಒಂಬತ್ತು ದಿವಸಕ್ಕೆ ತಿಥಿಯನ್ನು ಮಾಡುತ್ತಾರೆ. ಇಂತಹ ದಿವಸ ತಾನು ಬದುಕಿದ್ದಾಗ ಏನನ್ನು ಸೇವಿಸುತ್ತಿದ್ದನೋ ಅದನ್ನೆಲ್ಲ ಅಂದು ಸಮಾಧಿಯ ಪಕ್ಕ ಇಡುತ್ತಾರೆ. ವಿಧಿ ಸಂಸ್ಕಾರವನ್ನು ಕ್ರಮವಾಗಿ ಮಾಡದಿದ್ದರೆ ಭೂತ ಅಥವಾ ದೆವ್ವವಾಗುತ್ತದೆ ಎಂಬ ನಂಬಿಕೆ ಇವರಲ್ಲುಂಟು. ಇದು ಮಾನವನ ರೂಪದಲ್ಲಿರುತ್ತದೆ ಎಂದು ನಂಬುತ್ತಾರೆ. ಈ ಭೂತ ರಾತ್ರಿ ವೇಳೆಯಲ್ಲಿ ಹಾಡಿಗೆ ಬರುತ್ತದೆ. ಅದು ಬಂದಾಗ ನಾಯಿ ಬೊಗಳುತ್ತದೆ ಎಂದು ತಿಳಿಯುತ್ತಾರೆ. ಹಾಡಿಯಲ್ಲಿ ಯಾರಾದರೂ ಸತ್ತರೆ ಆ ಜಾಗವನ್ನು ಬದಲಾಯಿಸಲಾಗುತ್ತದೆ. ಬಹಿಷ್ಟೆಯಾದರೆ ಐದು ದಿವಸಗಳು ಗುಡಿಸಲಿಗೆ ಹೋಗುವಂತಿಲ್ಲ, ನೀರು ತರುವಂತಿಲ್ಲ, ಶುಭಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ, ಇಂತಹ ಒಂದು ಸಂಪ್ರದಾಯ ಇವರಲ್ಲಿದೆ; ಇಂತಹ ಸಂಪ್ರದಾಯವನ್ನು ಕಡ್ಡಾಯವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ.

ವಿವಾಹ ಪದ್ಧತಿ : ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಪ್ರಾಪ್ತ ವಯಸ್ಸಿಗೆ ಬಂದ ನಂತರ ವಿವಾಹಗಳನ್ನು ಮಾಡಿಕೊಳ್ಳುತ್ತಾರೆ. ಸರಳ ವಿವಾಹಗಳು ಜಾಸ್ತಿ. ತಂದೆ ತಾಯಿಗಳು ಹೆಣ್ಣನ್ನು ಒಪ್ಪಿ ವಿವಾಹ ಮಾಡುತ್ತಾರೆ. ಒಪ್ಪಂದವಾದ ಒಂದು ತಿಂಗಳಲ್ಲಿ ವಿವಾಹ ನೆರವೇರಬೇಕು. ಇವರಲ್ಲಿ ಏಕ ವಿವಾಹ ಮತ್ತು ಬಹು ವಿವಾಹ ಪದ್ಧತಿಗಳು ರೂಢಿಯಲ್ಲಿವೆ. ಸಾಮಾನ್ಯವಾಗಿ ಏಕ ಪತ್ನಿತ್ವ ವಿವಾಹ ಜಾಸ್ತಿ. ಕೆಲವು ಸಂದರ್ಭದಲ್ಲಿ ಅಂದರೆ ಮೊದಲನೆಯ ಹೆಂಡತಿ ಕಾಯಿಲೆಯಿಂದ ನರಳುತ್ತಿದ್ದರೆ, ಬಂಜೆಯಾಗಿದ್ದರೆ ಮರುವಿವಾಹ ಮಾಡಿಕೊಳ್ಳುತ್ತಾರೆ. ಇಬ್ಬರು ಹೆಂಡತಿಯರು ಒಂದೇ ಮನೆಯಲ್ಲಿ ವಾಸವಾಗಿರುವುದಿಲ್ಲ. ಬೇರೊಂದು ಮನೆಯಲ್ಲಿ ವಾಸಿಸುತ್ತಾರೆ. ಇಬ್ಬರು ಹೆಂಡತಿಯರು ಅಡಿಗೆ ಮಾಡಿದರೆ ಎಲ್ಲಿ ಬೇಕಾದರೂ ಈತ ಊಟ ಮಾಡುತ್ತಾನೆ. ಆದರೆ ಮೊದಲನೆ ಹೆಂಡತಿಯು ಅಡಿಗೆ ಮಾಡಿದರೆ ಎರಡನೆಯವಳು ಊಟ ಮಾಡುವುದಿಲ್ಲ, ಹಾಗೆಯೇ ಎರಡನೆಯವಳು ಮಾಡಿದ ಅಡಿಗೆಯನ್ನು ಮೊದಲನೆಯವಳು ಊಟ ಮಾಡುವುದಿಲ್ಲ. ಇವರಿಬ್ಬರಲ್ಲಿ ಕಲಹ ಉಂಟಾದರೆ ಹಾಡಿಯ ಯಜಮಾನನಲ್ಲಿ ದೂರು ಸಲ್ಲಿಸಿ ಅನಂತರ ಯಜಮಾನ ಹೇಳಿದಂತೆ ನಡೆದುಕೊಳ್ಳುತ್ತಾರೆ.

ಜೇನುಕುರುಬರಲ್ಲಿ ಬಾಲ್ಯವಿವಾಹ, ಋತುಮತಿ ವಿವಾಹ, ಸಾಂಪ್ರದಾಯಿಕ ವಿವಾಹ, ಒಲವಿನ ವಿವಾಹಗಳು ನಡೆಯುತ್ತವೆ. ಬೇರೆ ಬೇರೆ ಕುಲದಲ್ಲಿ ವಿವಾಹ ಮಾಡಿಕೊಳ್ಳುವುದಿಲ್ಲ. ತಮ್ಮ ಕುಲದಲ್ಲೇ ವಿವಾಹ ಮಾಡಿಕೊಳ್ಳುತ್ತಾರೆ.

ಕುಲದಿಂದ ಹೊರಹಾಕುವುದು: ಪ್ರತಿಯೊಂದು ಆದಿವಾಸಿ ಜನಾಂಗದಲ್ಲೂ ಕುಲನಿಷೇಧಗಳು ಇದ್ದಂತೆ ಈ ಆದಿವಾಸಿ ಜನಾಂಗದಲ್ಲೂ ಕುಲನಿಷೇಧವನ್ನು ಕಾಣಬಹುದು ಸ್ತ್ರೀ ಅಥವಾ ಪುರುಷ ಬೇರೆ ಜಾತಿಯಲ್ಲಿ ವಿವಾಹವಾದರೆ, ಚಪ್ಪಲಿಯಿಂದ ಹೊಡೆಸಿಕೊಂಡರೆ, ಅಸ್ಪೃಶ್ಯರಿಂದ ಅವಮಾನ ಹೊಂದಿದರೆ ಅಂತಹ ವ್ಯಕ್ತಿಯನ್ನು ತಮ್ಮ ಜೊತೆಗೆ ಸೇರಿಸುವುದಿಲ್ಲ. ಈತನು ಕುಲಕ್ಕೆ ಸೇರಬಯಸಿದರೆ ತಮ್ಮ ಕುಲದ (ಪೂಜಾರಿ) ಗುರುಗಳನ್ನು ಕರೆತಂದು ಅವರಿಂದ ತೀರ್ಥವನ್ನು ಸ್ವೀಕರಿಸಿ ತಮ್ಮ ಹಾಡಿಯವರಿಗೆಲ್ಲಾ ಹಂಚಬೇಕು. ಅನಂತರ ಹಾಡಿಯವರಿಗೆ ಊಟ ಹಾಕಬೇಕು. ಕುಲಗೆಟ್ಟವರನ್ನು ಹಾಡಿಯ ಸಮೀಪದ ಅಂಗಳದಲ್ಲಿ ಕುಳ್ಳಿರಿಸಿ, ಜುಟ್ಟು ತೆಗೆಸಿ ಮತ್ತು ಉಡುದಾರವನ್ನು ಕತ್ತರಿಸುತ್ತಾರೆ. ಅನಂತರ ಸ್ನಾನ ಮಾಡಿ, ಏಳು ದೊನ್ನೆಗೆ ಸಗಣಿ ನೀರು ಮತ್ತು ಏಳು ಪಾವಲಿ ನಾಣ್ಯವನ್ನು ಹಾಕಿ ತಮ್ಮ ದೇವರ ಹೆಸರನ್ನು ಹೇಳಿ ಪೂಜೆ ಮಾಡಿಸುತ್ತಾರೆ. ಕೊನೆಗೆ ಆತನಿಗೆ ಸಗಣಿ ನೀರನ್ನು ಕುಡಿಸುತ್ತಾರೆ. ಇಷ್ಟಾದರೆ ಸೂತಕ ಕಳೆಯಿತು ಎಂದು ಭಾವಿಸಿ ತಮ್ಮ ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ಸೂತಕ ಕಳೆದ ನಂತರ ಹಾಡಿಯವರಿಗೆ ಊಟಕ್ಕೆ ಹಾಕಬೇಕು. ಪ್ರತಿಯೊಬ್ಬರು 'ಚಾವಡಿ' ಯಲ್ಲಿ ಕುಳಿತು ಊಟ ಮಾಡುತ್ತಾರೆ. ಈ ಎಲ್ಲಾ ವೆಚ್ಚವನ್ನು ಕುಲಗೆಟ್ಟವನು ಖರ್ಚು ಮಾಡಬೇಕು. ಪ್ರತಿಯೊಂದು ಅಕ್ಕ ಪಕ್ಕದ ಹಾಡಿಯವರಿಗೆ ನಾಲ್ಕು ಆಣೆ ದಂಡ, ಎಲೆ ಅಡಿಕೆ ಕೊಟ್ಟು ಅವರ ಕುಲಕ್ಕೆ ಸೇರಿಕೊಳ್ಳುತ್ತಾನೆ. ಕೊನೆಗೆ ಹಾಡಿಯ ಯಜಮಾನ ಸೇರಿಸಿಕೊಳ್ಳುತ್ತಾನೆ. ಹೀಗೆ ಕುಲನಿಷೇಧ ಪದ್ಧತಿ ಜಾರಿಯಲ್ಲಿದೆ.

ಶಿಶು ಜನನ ಸಂಪ್ರದಾಯ : ಇವರ ಸಂಪ್ರದಾಯದ ಪ್ರಕಾರ ಯಾವ ಗರ್ಭಿಣಿಯೇ ಆಗಿರಲಿ ಅವಳು ಹೆರಿಗೆಯ ಸಮಯದಲ್ಲಿ ಮನೆ ಬಿಟ್ಟು ಬೇರೊಂದು ಗುಡಿಸಲಿನಲ್ಲಿ ವಾಸಿಸಬೇಕು. ಯಾರೂ ಜೊತೆಯಲ್ಲಿ ಇರಕೂಡದು. ಜನನವಾದ 5-10 ದಿನಗಳ ನಂತರ ಆಕೆಯು ಸ್ನಾನಮಾಡಿಕೊಂಡು ಮನೆಗೆ ಬರಬೇಕು. ಆಕೆಯು ಮನೆಗೆ ಬರುವ ದಿವಸ ತಮ್ಮ ಹಾಡಿಯವರಿಗೆ ಅಥವಾ ತಮಗೆ ಬೇಕಾದವರಿಗೆ ಊಟ ಏರ್ಪಡಿಸಬೇಕು. ಗಂಡು ಮಗುವಾದರೆ ಮಾದ, ಕೇಟ, ಬೋಮ, ಮಾರ ಎಂದು ಹೆಸರಿಡುತ್ತಾರೆ. ಹೆಣ್ಣು ಮಗುವಾದರೆ. ಮಾರಿ, ಮಾದಿ, ಇತ್ಯಾದಿಯಾಗಿ ಹೆಸರಿಡುತ್ತಾರೆ.

ಈ ಮೇಲ್ಕಂಡ ಎಲ್ಲಾ ಸಂಪ್ರದಾಯವನ್ನು ಬೇರೆ ಜನಾಂಗದಲ್ಲಿ ನಾವು ನೋಡಲಾಗುವುದಿಲ್ಲ. ಪ್ರತಿಯೊಂದು ಆದಿವಾಸಿಗಳು ತಮ್ಮ ತಮ್ಮದೇ ಆದ ಕುಲಪದ್ಧತಿಯನ್ನು ಇಂದಿಗೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಗ್ರಂಥ ಋಣ

1. Castes and Tribes of Southern India, 1909, E. Thunston.
2. Mysore Tribes and Castes, 1935, Anantha Krishna Iyer.
3. The Scheduled Tribe-1965, G. S. Ghurye.
4. Coorg Tribes and Castes, L. A. Krishna Iyer.

ಲಕ್ಷ್ಮೀನಾರಾಯಣ ಅರೋರಾ

ವ್ಯಾಕರಣ ರಚನೆ ಮತ್ತು ವಿಶ್ಲೇಷಣೆ

1. **ರಚನೆ ಎಂದರೇನು ?** ಭಾಷೆಯಲ್ಲಿ ಅರ್ಥಪೂರ್ಣವಾಗಿ ವಿಭಜಿಸಲು ಸಾಧ್ಯವಾಗುವ ಘಟಕಗಳಿಗೆ ವ್ಯಾಕರಣ ರಚನೆ ಅಥವಾ ಸಂರಚನೆ (grammatical structure) ಎನ್ನಬಹುದು. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ ಅರ್ಥಪೂರ್ಣವಾದ ಭಾಷಾಘಟಕಗಳನ್ನು ವ್ಯವಸ್ಥಿತವಾಗಿ ಸೇರಿಸುವಾಗ ದೊರೆಯುವ ಸಂಯೋಜನೆಯೇ 'ವ್ಯಾಕರಣ ರಚನೆ'. ಈ ನಿಟ್ಟಿನಲ್ಲಿ 'ಜಾಣತನ' 'ಹಾಡುಗಾರ', 'ಮಹಡಿ ಮನೆ', 'ಬೆಕ್ಕು ಹಾರಿತು' ಮೊದಲಾದ ಉದಾಹರಣೆಗಳನ್ನು ಪರಿಗಣಿಸಬಹುದು. ಜಾಣ + ತನ, ಹಾಡು + ಕಾರ ಇವುಗಳನ್ನು ಅರ್ಥಪೂರ್ಣ ಘಟಕಗಳಲ್ಲಿ ಒಡೆಯಬಹುದು. ಜಾಣ, ಹಾಡು, ಮಹಡಿ, ಬೆಕ್ಕು ಇವೆಲ್ಲ ಕೋಶಪದಗಳೆ ಹೊರತು ವ್ಯಾಕರಣ ರಚನೆಗಳಾಗಲಾರವು. ಏಕೆಂದರೆ ಅವುಗಳನ್ನು ಮತ್ತೆ ಅರ್ಥವತ್ತಾದ ತುಣುಕುಗಳಾಗಿ ಒಡೆಯಲು ಸಾಧ್ಯವಾಗಲಾರದು. ಇದೇ ರೀತಿಯಲ್ಲಿ –ತನ,–ಕಾರಗಳು ಸಹ ವ್ಯಾಕರಣ ರಚನೆಗಳಲ್ಲ.

ಹೀಗೆಯೇ, 'ಹೆದರಿಕೆ' ಎಂಬ ರಚನೆಯಲ್ಲಿ 'ಹೆದರು' ಮತ್ತು 'ಇಕೆ' ಘಟಕಗಳಾದರೆ, 'ಸಾಹಸಿ' ಎಂಬ ರಚನೆಯಲ್ಲಿ 'ಸಾಹಸ' ಮತ್ತು 'ಇ' ಘಟಕಗಳಾಗುತ್ತವೆ. ರಚನೆಯ ಅರ್ಥದಲ್ಲಿ ಘಟಕಗಳ ಅರ್ಥ ಒಂದೆಡೆ ಸೇರಿಕೊಂಡಿರಬೇಕು, ಇದು ತುಂಬ ಅಗತ್ಯ. ಏಕೆಂದರೆ ಈ ನಿಬಂಧನೆಯಿಲ್ಲದಿದ್ದರೆ 'ಹಸಿವು', 'ಅತ್ತಿಗೆ', 'ಬೀಗರು' ಇಂಥ ಪದಗಳೆಲ್ಲ ರಚನೆಗಳು ಆಗಿಬಿಡುತ್ತವೆ. 'ಹಸಿ + ವು', 'ಅತ್ತಿ (ಅತ್ತಿಹಣ್ಣು) + ಗೆ', 'ಬೀಗ + ರು' ಇವುಗಳಲ್ಲಿ ವು, ಗೆ, ರು, ಪ್ರತ್ಯಯಗಳಾದರೆ ಹಸಿ, ಅತ್ತಿ, ಬೀಗ ಇವೆಲ್ಲ ಕೋಶಪದಗಳು. ಆದರೆ ಈ ಪದಗಳ ಸಂಯೋಜನೆಯಿಂದ ನಾವು ನಿರೀಕ್ಷಿಸುವ ಅರ್ಥದೊರೆಯದೆ ಹೋಗುತ್ತಿರುವುದರಿಂದ ಇವು ರಚನೆಗಳಲ್ಲ. 'ಬೆಕ್ಕು ಹಾರಿತು' ಎಂಬುವುದು ಸಹ ರಚನೆಯೆ. ಏಕೆಂದರೆ ಅದನ್ನು 'ಬೆಕ್ಕು' ಮತ್ತು 'ಹಾರಿತು' ಎಂಬ ಎರಡು ಪದಗಳಾಗಿ ಒಡೆಯಬಹುದು ಹಾಗೂ ಒಟ್ಟಾರೆಯಾಗಿ ಈ ಜೋಡಣೆ ಸರಳವಾದ ಅರ್ಥವನ್ನು ಕೊಡುತ್ತದೆ.

2. **ರಚನೆ ಮತ್ತು ಅರ್ಥ :** ಸಾಮಾನ್ಯಪದದ ಅರ್ಥಕ್ಕೆ ಹೋಲಿಸಿದರೆ ರಚನೆಯ ಅರ್ಥ ವ್ಯಾಪಕವಾದುದು. ರಚನೆಯಲ್ಲಿರುವ ಪ್ರತ್ಯೇಕ ಘಟಕಗಳ ಅರ್ಥವನ್ನು ಹೊರತೆಗೆದ ಮೇಲೂ ಸ್ವಲ್ಪ ಅರ್ಥ ಉಳಿಯುತ್ತದೆ. ಈ 'ಉಳಿಕೆ ಅರ್ಥವೇ ರಚನಾತ್ಮಕ ಅರ್ಥ' (structural meaning). ರಚನೆಯ ಅರ್ಥ ಅದರಿಂದ ಹೊರಗಿರಲಾರದು. ಆದರೆ ಘಟಕಗಳ ಅರ್ಥ ರಚನೆಯ ಹೊರಗಿರಲೂ ಸಾಧ್ಯ. ಉದಾಹರಣೆಗೆ, 'ಮನೆ ಎಲ್ಲಿದೆ ?' ಮತ್ತು 'ಸೊಗಸಾದ ಮನೆ' ಎಂಬ ಜೋಡಣೆಗಳ ರಚನೆಯ ಅರ್ಥ ಬೇರೆಯಾದರೂ 'ಮನೆ' ಎಂಬ ಘಟಕದ ಅರ್ಥ ಒಂದೇ. ಘಟಕದ ಇಂಥ ಅರ್ಥವನ್ನು 'ಕೋಶಾರ್ಥ' ಎಂದು ಸಹ ಅನ್ನಬಹುದು.

ಕೆಳಗಿನ ಉದಾಹರಣೆಗಳನ್ನು ಪರಿಶೀಲಿಸಿ :

I. 1. ಆನೆ ಹುಲಿ ಕೊಂದಿತು.
   2. ಹುಲಿ ಆನೆ ಕೊಂದಿತು.

II. 1. ನಾನು ಮಾವಿನ ಹಣ್ಣು ತಿನ್ನುತ್ತೇನೆ.
   2. ಮಾವಿನ ಹಣ್ಣು ನಾನು ತಿನುತ್ತೇನೆ.

III. 1. ಅವನು ಮನೆಗೆ ಹೋಗುತ್ತಾನೆ.
   2. ಮನೆಗೆ ಅವನು ಹೋಗುತ್ತಾನೆ.

IV. 1. ಹುಲಿ ಕುರಿ ತಿನ್ನುತ್ತದೆ.
   2. ಕುರಿ ಹುಲಿ ತಿನ್ನುತ್ತದೆ.

V. 1. ನನ್ನ ಪುಸ್ತಕ ಎಲ್ಲಿದೆ ?
   2. ಪುಸ್ತಕ ನನ್ನ ಎಲ್ಲಿದೆ ?

VI. 1. ಬಿಳಿ ಬಣ್ಣದ ಹಸುರೆಲೆ ಬಾಯಿ ಮುಚ್ಚಿ ಗರ್ಜಿಸಿತು.
   2. ಫೆಬ್ರುವರಿ 30ರಂದು ಗೆಳೆಯ ಗೋಪಿಯ ಮದುವೆ.

ಈ ವಾಕ್ಯಗಳಲ್ಲಿ I ಮತ್ತು IV ನೇ ಜೋಡಿಗಳನ್ನು ಗಮನಿಸಿ, ಮೊದಲನೆಯದರಲ್ಲಿ ಕರ್ತೃಪದವಾದ 'ಆನೆ' ಕರ್ಮಪದವಾದ 'ಹುಲಿ'ಯನ್ನು ಕೊಂದಿತು. ಎರಡನೆಯ ವಾಕ್ಯದಲ್ಲಿ ಕರ್ತೃವಾದ 'ಹುಲಿ' ಕರ್ಮವಾದ 'ಆನೆ'ಯನ್ನು ಕೊಂದಿತು. ಸಂಭಾವ್ಯತೆಯ ದೃಷ್ಟಿಯಿಂದ ಇವೆರಡೂ ಸಾಧ್ಯ. ಇಡೀ ವಾಕ್ಯದ ಒಟ್ಟು ಅರ್ಥವನ್ನು ಒಂದೊಂದು ಪದಗಳ ಅರ್ಥವನ್ನು ಗ್ರಹಿಸಿ ಹೇಳಲಾಗದು. ಪದಗಳ ಪರಸ್ಪರ ಸಂಬಂಧ ವ್ಯಕ್ತವಾಗುವುದು ವಾಕ್ಯದ ರಚನೆಯಲ್ಲಿಯೇ. ಅಂದ ಮೇಲೆ, ಒಂದೊಂದು ಪದದ ಮೂಲಾರ್ಥವನ್ನು (intrinsic meaning) ಕೋಶಾರ್ಥ (lexical meaning) ಎಂದೂ, ಕರ್ತೃ-ಕರ್ಮಗಳ ಸಂಬಂಧದ ಆಧಾರದ ಮೇಲೆ ಒದಗುವ ಅರ್ಥವನ್ನು ರಚನಾತ್ಮಕ ಅರ್ಥ (structural meaning) ಎಂದೂ ಕರೆಯಬಹುದು. ನಾಲ್ಕನೇ ಜೋಡಿಯನ್ನು ಗಮನಿಸಿದರೆ ಹುಲಿ ಕುರಿಯನ್ನು ತಿನ್ನುವ ಸಂಭಾವ್ಯತೆ ಕುರಿ ಹುಲಿಯನ್ನು ತಿನ್ನುವ ಸಂಭಾವ್ಯತೆಗಿಂತಲೂ ಹೆಚ್ಚು. ಮೊದಲನೇ ಜೋಡಿಯಲ್ಲಿ ಕಂಡುಬರುವ ಸಂಭಾವ್ಯತೆಗಿಂತಲೂ (ಅಂದರೆ ಆನೆ ಹುಲಿಯನ್ನು ಕೊಲ್ಲುವುದಕ್ಕಿಂತಲೂ ಹುಲಿಯೆ ಆನೆಯನ್ನು ಕೊಲ್ಲುವ ಸಂಭಾವ್ಯತೆ ಹೆಚ್ಚು ಎಂಬ ಅಂಶ) ಈ ಜೋಡಿಯಲ್ಲಿ ಸಂಭಾವ್ಯತೆಯ ಮಟ್ಟ (degree) ಕಡಮೆ. ಕುರಿ ಹುಲಿಯನ್ನು ತಿನ್ನುವ ಸಂದರ್ಭ (context) ಒದಗದೆ ಹೋಗುವುದರಿಂದ ಸಾಂದರ್ಭಿಕ ಅರ್ಥದ (contextent meaning) ದೃಷ್ಟಿಯಿಂದ ಎರಡನೇ ವಾಕ್ಯ ಸೋಲುತ್ತದೆ.

ಸಂಭಾವ್ಯತೆಯ ದೃಷ್ಟಿಯಿಂದಲೂ ರಚನೆಯ ಅರ್ಥವನ್ನು ಒಟ್ಟು ವಾಕ್ಯದ ರಚನಾತ್ಮಕ ಅರ್ಥದ ಹಿನ್ನೆಲೆಯಲ್ಲಿ ಗಮನಿಸಬೇಕಾದ್ದು ಅವಶ್ಯಕವೆನಿಸುತ್ತದೆ.

ಹೀಗೆಯೇ II ಮತ್ತು IIIನೇ ಜೋಡಿಗಳನ್ನು ನೋಡೋಣ. ಇವೆರಡು ಜೋಡಿಗಳಲ್ಲಿ ಕರ್ಮಪದ ಸೂಚಕವಾದ 'ಅನ್ನು' ಪ್ರತ್ಯಯ ಅಧ್ಯಾಹಾರವಾಗುವಂತೆ ಇಲ್ಲಿಯೂ ಅಧ್ಯಾಹಾರವಾಗುತ್ತದೆ. ಆದರೆ ಇಲ್ಲಿ ಗಮನಾರ್ಹವಾದುದೇನೆಂದರೆ, 'ನಾನು' ಎಂಬ ಪದ ಕರ್ಮದ ಸ್ಥಾನದಲ್ಲಿ ಬಂದರೂ ಕರ್ಮದ ಪ್ರತ್ಯಯವಾದ 'ಅನ್ನು' ಎಂಬುದನ್ನು ಅಧ್ಯಾಹಾರವಾಗಿ ಸ್ವೀಕರಿಸದೆ ತನ್ನ

ಕರ್ತೃತ್ವವನ್ನೇ ಉಳಿಸಿಕೊಳ್ಳುತ್ತದೆ. ಹಾಗೆಯೇ 'ತಿನ್ನುತ್ತದೆ' ಎಂಬುದರ ಕೊನೆಯಲ್ಲಿರುವ ವರ್ತಮಾನಕಾಲದ ಉತ್ತಮ ಪುರುಷ ಸೂಚಕವಾದ 'ತ್ತೇನೆ' ಕರ್ತೃವಾದ 'ನಾನು' ಎಂಬುದನ್ನು ಆ ಸ್ಥಾನದಲ್ಲೇ ಭದ್ರಪಡಿಸುತ್ತದೆ. ಆದ್ದರಿಂದ ಅರ್ಥಬದಲಾಗದು. ಮೂರನೇ ಜೋಡಿಯಲ್ಲಂತೂ ದ್ವಿತೀಯಾ ವಿಭಕ್ತಿಯನ್ನು ಸೂಚಿಸುವ 'ಗೆ' ಪ್ರತ್ಯಯ ಇನ್ನೂ ಅನಿವಾರ್ಯವಾದುದರಿಂದ ಪದಗಳ ಪಲ್ಲಟದಿಂದ ರಚನೆಯ ಅರ್ಥದಲ್ಲಿ ವ್ಯತ್ಯಾಸ ಬರುವಂತೆಯೆ ಇಲ್ಲ.

ಈಗ V ಮತ್ತು VI ನೇ ಜೋಡಿಗಳನ್ನು ನೋಡಿ. ಮೊದಲನೇ ಜೋಡಿಯ 'ನನ್ನ ಪುಸ್ತಕ' ಎಂಬಲ್ಲಿ 'ನನ್ನ' ಷಷ್ಠಿವಿಭಕ್ತಿಯ ಪ್ರತ್ಯಯವನ್ನು ಒಳಗೊಂಡಿರುವುದಲ್ಲದೆ 'ಪುಸ್ತಕ' ಎಂಬ ನಾಮ ಪದದ ವಿಶೇಷಣವೂ ಹೌದು. ಆದ್ದರಿಂದ 'ನನ್ನ ಪುಸ್ತಕ' ಎಂಬುದು ಸಲ್ಲುವ ಪ್ರಯೋಗವೆ ಹೊರತು 'ಪುಸ್ತಕ ನನ್ನ' ಎಂಬುದು ಸಲ್ಲುವಂತಹದಲ್ಲ. ಅಷ್ಟೇ ಅಲ್ಲದೆ 'ನನ್ನ ಪುಸ್ತಕ' ಒಂದು ಬದ್ಧರಚನೆ (bound structure) ಎನಿಸುತ್ತದೆ. 'ನಾನು ಮನೆಗೆ' ಅನ್ನುವುದಕ್ಕಿಂತಲೂ 'ನನ್ನ ಪುಸ್ತಕ' ಎಂಬುದು ಹೆಚ್ಚು ಸಂಸಕ್ತಿಯುಳ್ಳ (adhesim) ಹಾಗೂ ಅರ್ಥ ಪೂರ್ಣವಾದ ರಚನೆ ಎನಿಸಿಕೊಳ್ಳುತ್ತದೆ. ಬದ್ಧರಚನೆಗಳ ಸಂಬಂಧ ಸಾಮೀಪ್ಯಗಳನ್ನು ಮುಂದೆ ಶಾಖಾನಿರೂಪಣೆಗಳ ಮೂಲಕ ನೋಡೋಣ. ಆರನೇ ಜೋಡಿ ವಿಶಿಷ್ಟವಾದುದು. 'ಬಿಳಿ ಬಣ್ಣದ ಹಸುರೆಲೆ ಬಾಯಿಮುಚ್ಚಿ ಘರ್ಜಿಸಿತು' ಎಂಬ ವಾಕ್ಯ ವ್ಯಾಕರಣದ ರಚನೆಯ ದೃಷ್ಟಿಯಿಂದ ಸರಿಯಾದದ್ದೆ. ಆದರೆ ವಾಕ್ಯದ ಒಟ್ಟು ರಚನೆಯ ಅರ್ಥವನ್ನು ಪರಿಗಣಿಸಿದಾಗ ವೈಷಮ್ಯಗಳು (contrasts) ಎದುರಾಗುತ್ತದೆ. 'ಬಿಳಿ ಬಣ್ಣದ ಹಸುರೆಲೆ' ಹೇಗೆ ಸಾಧ್ಯ ? 'ಬಾಯಿ ಮುಚ್ಚಿ ಗರ್ಜಿಸುವುದು' ಸಾಧ್ಯವೇ—ಎಂಬ ಪ್ರಶ್ನೆಗಳೇಳುತ್ತವೆ. ಅಂದರೆ ವ್ಯಾಕರಣ ಹಾಗೂ ರಚನೆಯ ದೃಷ್ಟಿಯಿಂದ ಸಿದ್ಧಿಸಬಹುದಾದ ವಾಕ್ಯಗಳೆಲ್ಲವೂ ಉಪಯುಕ್ತವಾದ ರಚನೆಗಳೆನಿಸಲಾರವು. ಅವುಗಳ ರಚನಾತ್ಮಕ ಅರ್ಥ ಸಲ್ಲುವಂತಿದ್ದರೆ ಮಾತ್ರ ಅವು ಗ್ರಾಹ್ಯವಾಗುತ್ತದೆ. ಆರನೇ ಜೋಡಿಯ ಎರಡನೇ ವಾಕ್ಯವನ್ನು ನೋಡಿದರೆ ಮೇಲಿನ ವೈಷಮ್ಯಗಳಿಗೆ ಹೋಲಿಸಿದರೆ ಇದು ರಚನಾತ್ಮಕವಾಗಿ ಇನ್ನೂ ಹೆಚ್ಚು ಸಲ್ಲುವಂಥದು. ಮೇಲ್ನೋಟಕ್ಕೆ 'ತೇರ್ಗಡೆ'ಯಾಗುವ ವಾಕ್ಯ ಇದು. ಆದರೆ ರಚನಾತ್ಮಕ ಅರ್ಥಕ್ಕಿಂತಲೂ ಹೆಚ್ಚು ದೂರದಲ್ಲಿರುವ 'ವ್ಯಾವಹಾರಿಕ ಅರ್ಥ'ವೊಂದು (conventional meaning) ಈ ವಾಕ್ಯರಚನೆಯನ್ನು ನಿರರ್ಥಕಗೊಳಿಸುತ್ತದೆ. ಫೆಬ್ರವರಿ ತಿಂಗಳಲ್ಲಿ 30ನೇ ತಾರೀಖು ಎಂದೂ ಬರಲಾರದು ಎಂಬುದನ್ನು ನಾವು ವ್ಯಾವಹಾರಿಕ ಪ್ರಜ್ಞೆಯಿಂದ ಕಂಡುಕೊಳ್ಳಬೇಕೆ ವಿನಾ ರಚನೆಯ ವಿನ್ಯಾಸದಿಂದಲ್ಲ.

3. **ರಚನೆಯ ವಿಶ್ಲೇಷಣೆ:** ವ್ಯಾಕರಣ ರಚನೆಯ ವಿಶ್ಲೇಷಣೆಯನ್ನು ಪರಿಗಣಿಸಬೇಕೆಂದರೆ ಈ ಕೆಳಕಾಣಿಸಿರುವ ಅಂಶಗಳ ಬಗೆಗೆ ವಿಚಾರ ಮಾಡುವುದು ಅಗತ್ಯ:

(1) ರಚನೆಯನ್ನು ವಿಶ್ಲೇಷಣೆ ಮಾಡಿದರೆ ಎಷ್ಟು ಘಟಕಗಳು (constituents) ದೊರಕುತ್ತದೆ ?

(2) ಈ ಘಟಕಗಳ ಸ್ವರೂಪವೇನು ? ಅವು ಸರಳ ಘಟಕಗಳೆ ಅಥವಾ ಮಿಶ್ರ ಘಟಕಗಳೆ ? ನಾಮಪದ, ವಿಶ್ಲೇಷಣೆ, ಪ್ರತ್ಯಯ ಇತ್ಯಾದಿಗಳಲ್ಲಿ ಇವು ಯಾವುದಕ್ಕೆ ಸೇರುತ್ತದೆ ?

(3) ಯಾವ ನಿಯಮ ಅಥವಾ ನಿಯಮಗಳ ಅನ್ವಯ ಈ ಘಟಕಗಳು ಒಂದುಗೂಡಿ ರಚನೆಯಲ್ಲಿ ಭಾಗವಹಿಸುತ್ತವೆ ?

(4) ರಚನೆಯ ಘಟಕಗಳನ್ನು ವಿಶ್ಲೇಷಿಸಿದ ಅನಂತರ ಆ ರಚನೆ ಪ್ರಯೋಗದ ದೃಷ್ಟಿಯಿಂದ ಯಾವ ರೀತಿಯಲ್ಲಿದೆ ?

ಈ ಉದಾಹರಣೆಗಳನ್ನು ನೋಡಿ—(ಅ) ಹಣವಂತ (ಆ) ತುಂಬಾ ಸಣ್ಣ ಮಗು

(ಅ) ಹಣವಂತ (1) ಈ ರಚನೆಯಲ್ಲಿ 'ಹಣ' ಮತ್ತು 'ವಂತ' ಎಂಬ ಎರಡು ಘಟಕಗಳಿವೆ.

(2) 'ಹಣ' ವಸ್ತುವಾಚಕವಾದ ನಾಮಪದ, 'ವಂತ' ಅದನ್ನು ವಿಶೇಷಣವಾಗಿರುವ ಅಥವಾ 'ಉಳ್ಳವ' ಎಂಬರ್ಥದ ಇನ್ನೊಂದು ನಾಮಪದವನ್ನು ಉತ್ಪಾದಿಸುವ ಪ್ರತ್ಯಯ. 'ಹಣವಂತ' ಎಂದರೆ 'ಹಣ ಉಳ್ಳವನು' ಎಂದರ್ಥ—ಗುಣವಂತ, ಸತ್ಯವಂತ, ಪುಣ್ಯವಂತ ಎಂಬ ಹಾಗೆ. 'ಹಣ' ಮತ್ತು 'ವಂತ' ಎರಡೂ ಸರಳ ಘಟಕಗಳು, ಏಕೆಂದರೆ ಇವುಗಳನ್ನು ಅರ್ಥಪೂರ್ಣವಾದ ಘಟಕಗಳಾಗಿ ಮತ್ತೆ ಒಡೆಯಲು ಸಾಧ್ಯವಿಲ್ಲ.

(3) 'ಹಣ' ಮತ್ತು 'ವಂತ' ಘಟಕಗಳನ್ನು ಒಂದುಗೂಡಿಸುವ ನಿಯಮವೆಂದರೆ—'ವಂತ' ಎಂಬುದು 'ಹಣ'ವಾದ ಮೇಲೆ ಮಾತ್ರ ಬರಲು ಸಾಧ್ಯ. ಮುಂಚೆ ಬರಲಾರದು. ಆದ್ದರಿಂದ 'ವಂತ' ಪ್ರತ್ಯಯದ ರೀತಿಯಲ್ಲಿ ಪ್ರಯೋಗವಾಗಿದೆ. ಇವೆರಡನ್ನು ಒಟ್ಟುಗೂಡಿಸಿದಾಗ ಯಾವುದೇ ಒಳಬದಲಾವಣೆ ಆಗುವುದಿಲ್ಲ. ಕೆಲವು ಘಟಕಗಳನ್ನು ಒಂದುಗೂಡಿಸಿದರೆ ಬದಲಾವಣೆಯಾಗುತ್ತದೆ. ಉದಾಹರಣೆಗೆ, ಪುಸ್ತಕ + ಇಂದ = ಪುಸ್ತಕದಿಂದ. ದೊಡ್ಡ + ಅಪ್ಪ = ದೊಡ್ಡಪ್ಪ, ಕಾಲು + ಉಗುರು = ಕಾಲುಗುರು ಇತ್ಯಾದಿ. ಒಳಬದಲಾವಣೆಯ ಅಂಗವಾಗಿ ವ್ಯತ್ಯಯವನ್ನೂ ಲೋಪವನ್ನೂ ನೋಡಬಹುದು.

(4) ಪ್ರಯೋಗದ ದೃಷ್ಟಿಯಿಂದ 'ಹಣವಂತ' ನಾಮಪದ. 'ಅವನು ಹಣವಂತ' ಎಂಬುದಾಗಿ ಪ್ರಯೋಗ ಮಾಡಬಹುದು. ಹಾಗೆಯೇ ವಿಶೇಷಣವಾಗಿಯೂ ಇದರ ಪ್ರಯೋಗ ಸಾಧ್ಯ. ಉದಾಹರಣೆ, 'ಹಣವಂತ ಮನುಷ್ಯ'.

(ಆ) ತುಂಬಾ ಸಣ್ಣ ಮಗು : ಈ ರಚನೆಯನ್ನು ಮೇಲಿನ ನಾಲ್ಕು ದೃಷ್ಟಿಗಳಿಂದ ಪರಿಶೀಲಿಸೋಣ.

(1) ಇದರ ವಿಶ್ಲೇಷಣೆಯಲ್ಲಿ ರಚನೆ 'ತುಂಬಾ ಸಣ್ಣ' ಮತ್ತು 'ಮಗು' ಎಂಬ ಎರಡು ಘಟಕಗಳನ್ನು ಹೊಂದಿರುವುದಾಗಿ ಕಂಡುಬರುತ್ತದೆ. 'ತುಂಬಾ ಸಣ್ಣ' ಎಂಬುವನ್ನು ಮರು ವಿಶ್ಲೇಷಣೆಗೆ ಒಳಪಡಿಸಿದರೆ ಎರಡು ಘಟಕಗಳಾಗಿ ಒಡೆಯುತ್ತದೆ. 'ತುಂಬಾ' ಮತ್ತು 'ಸಣ್ಣ'.

(2) 'ಮಗು' ಒಂದು ಸರಳ ಘಟಕ. 'ತುಂಬಾ ಸಣ್ಣ' ಎಂಬುದು ಮಿಶ್ರ ಘಟಕ. ಏಕೆಂದರೆ ಇದು ಎರಡು ಹೋಳಾಗಿ ಒಡೆಯಬಲ್ಲದು. 'ಮಗು' ಎಂಬುದು ನಾಮಪದ. 'ತುಂಬಾ ಸಣ್ಣ' ಎಂಬುದು ವಿಶೇಷಣ.

(3) ರಚನೆಯಲ್ಲಿ ಮೊದಲು ವಿಶೇಷಣ ಬಂದು ಅನಂತರವೇ ನಾಮಪದ ಬರುತ್ತದೆ. ಘಟಕಗಳ ನಡುವೆ ವಿಶೇಷಣ—ವಿಶೇಷ್ಯಗಳ ಸಂಬಂಧ ಉಂಟು.

(4) ಪ್ರಯೋಗದ ದೃಷ್ಟಿಯಿಂದ 'ತುಂಬಾ ಸಣ್ಣಮಗು' ಒಂದು ನಾಮಪದ. ಬೇರೆ ನಾಮ ಪದಗಳಂತೆ ಭಿನ್ನ ಕಾರಕಗಳಲ್ಲಿ ಇದು ಪ್ರಯೋಗವಾಗಬಲ್ಲದು.

ರಚನೆಯನ್ನು ಕುರಿತು ಪರಿಶೀಲನೆ ನಡೆಸುವ ಮೇಲಿನ ನಾಲ್ಕು ಅಂಶಗಳಲ್ಲಿ ಮೊದಲ ಮೂರು ರಚನೆಯ ಆಂತರಿಕ ವಿಚಾರಗಳಿಗೆ ಸಂಬಂಧಪಟ್ಟವೆ. ನಾಲ್ಕನೆಯದು ಹೊರ ವಿಚಾರ ಅಂದರೆ ಪ್ರಯೋಗ ಇಲ್ಲವೇ ಬಳಕೆಗೆ ಸಂಬಂಧಪಟ್ಟಿದ್ದು. ರಚನೆ ತನಗಿಂತ ದೊಡ್ಡದಾದ ರಚನೆಯೊಳಗೆ ಸೇರಿಕೊಂಡು ಹೇಗೆ ಪ್ರಯೋಗವಾಗುತ್ತದೆ ಎಂಬ ಬಗೆಗೆ ಇಲ್ಲಿ ಪರಿಶೀಲಿಸುತ್ತೇವೆ. ಕೋಟೆಯೊಳಗಿನ ಕೋಟೆಯಿದ್ದ ಹಾಗೆ. 'ತುಂಬಾ ಸಣ್ಣಮಗು' ಈ ದೃಷ್ಟಿಯಲ್ಲಿ ಒಂದು ಪದವೃಂದ (phrase) ಪದವೃಂದಕ್ಕಿಂತ ದೊಡ್ಡ ರಚನೆಯೆಂದರೆ ಉಪವಾಕ್ಯ (clause). ಆದ್ದರಿಂದ ಸಾಮಾನ್ಯವಾಗಿ ಪದವೃಂದ ಉಪವಾಕ್ಯದ ರಚನೆಯ ಅಂಗವಾಗಿ ಪ್ರಯೋಗವಾಗುತ್ತದೆ.

4. ಭಿನ್ನ ರಚನೆಗಳು — ಒಂದೇ ಪ್ರಯೋಗ :

ಒಳನೋಟಕ್ಕೆ ತೀರ ಭಿನ್ನವೆನಿಸುವ ರಚನೆಗಳು ಕೂಡ ಪ್ರಯೋಗದ ದೃಷ್ಟಿಯಿಂದ ಒಂದೇ ರೀತಿಯಲ್ಲಿರಬಹುದು. ಈ ವಾಕ್ಯಗಳಲ್ಲಿ ಕೆಳಗೆ ಗೀಟೆಳೆದಿರುವ ಭಾಗಗಳನ್ನು ನೋಡಿ

1. ಆ ಹುಡುಗರು ಪಾಠ ಓದುತ್ತಾರೆ.

ಈ ರೀತಿಯ ವಿಶ್ಲೇಷಣೆಯನ್ನು ನಿಕಟತಮ ಅವಯುವ ವಿಶ್ಲೇಷಣೆ (Immediate constituent Analysis) ಅಥವಾ IC ವಿಶ್ಲೇಷಣೆ (IC Analysis) ಎನ್ನುತ್ತಾರೆ. ಈ ವಿಷಯವಾಗಿ ವಾಕ್ಯಗಳ ಭಾಷಾಂತರಗಳ ವಿವೇಚನೆಯಲ್ಲಿ ವಿವರವಾಗಿ ನೋಡಬಹುದು.

6. ಒಳಮುಖ ರಚನೆ ಮತ್ತು ಹೊರಮುಖ ರಚನೆ :

ರಚನೆಯ ಪ್ರಯೋಗದ ವೈಶಿಷ್ಟ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎರಡು ರೀತಿಯಲ್ಲಿ ವಿಭಜನೆ ಮಾಡಬಹುದು—ಒಳಮುಖ ರಚನೆ ಮತ್ತು ಹೊರಮುಖ ರಚನೆ. ಪ್ರಯೋಗದ ದೃಷ್ಟಿಯಿಂದ ತನ್ನ ಪ್ರತಿಯೊಂದು ಘಟಕದ ರೀತಿಯಲ್ಲೇ ರಚನೆ ಬಳಕೆಯಾದರೆ ಅದನ್ನು ಒಳಮುಖ ರಚನೆ (Endocentric construction) ಎನ್ನುತ್ತಾರೆ. ಉದಾಹರಣೆಗೆ ಕೆಳಗಿನ ವಾಕ್ಯಗಳನ್ನು ನೋಡಿ.

1. ಸಿಹಿಯಾದ ಹಣ್ಣನ್ನು ತಿನ್ನು.
2. ಅವನು ಸಿಹಿಯಾದ ಹಣ್ಣನ್ನು ತಿಂದ.
3. ಸಿಹಿಯಾದ ಹಣ್ಣು ಎಲ್ಲಿ ಸಿಗುತ್ತದೆ ?
4. ಸಿಹಿಯಾದ ಹಣ್ಣಿನ ರಸ ತುಂಬಾ ಚೆನ್ನಾಗಿತ್ತು.

ಈ ವಾಕ್ಯಗಳಲ್ಲಿ 'ಸಿಹಿಯಾದ ಹಣ್ಣು' ಎಂಬ ಪ್ರಯೋಗವಿರುವೆಡೆಗಳಲ್ಲೆಲ್ಲಾ ಕೇವಲ 'ಹಣ್ಣು' ಎಂದು ಬಳಸಿದರೆ ಯಾವುದೇ ರೀತಿಯ ವ್ಯಾಕರಣ ಸಂಬಂಧಪಾದ ದೋಷ ವಾಕ್ಯದಲ್ಲಿ ಉಂಟಾಗುವುದಿಲ್ಲ. ಹಣ್ಣು ಮತ್ತು 'ಸಿಹಿಯಾದ ಹಣ್ಣು' ಪ್ರಯೋಗದ ದೃಷ್ಟಿಯಿಂದ ಒಂದೇ.

'ಹಣ್ಣು' ಎಂಬುದು 'ಸಿಹಿಯಾದ ಹಣ್ಣು' ಎಂಬ ಮಿಶ್ರಘಟಕದಲ್ಲಿ ಒಂದು ಘಟಕ. ಅಂದಮೇಲೆ ಇದು ಒಳಮುಖಿ ರಚನೆ, 'ಸಿಹಿಯಾದದ್ದು' ಪ್ರಯೋಗದ ದೃಷ್ಟಿಯಿಂದ 'ಹಣ್ಣು' ಎಂಬುದಕ್ಕೆ ಸರಿಸುಮಾರಾಗಿ ಸಮಾನವಾದುದು, ಅಷ್ಟೆ ಹೊರತು ಪೂರ್ತಿಯಾಗಿ ಸಮಾನವೆಂದಲ್ಲ. ಅಂದರೆ 'ಹಣ್ಣು' ಎಂಬ ಪ್ರಯೋಗ ಮಾಡುವ ಕಡೆಗಳಲ್ಲೆಲ್ಲಾ 'ಸಿಹಿಯಾದ ಹಣ್ಣು' ಎಂದು ಬರೆಯಲು ಸಾಧ್ಯವಿಲ್ಲ.

ಹೊರಮುಖಿ ರಚನೆಯಲ್ಲಿ ಬರುವ ಘಟಕಗಳು ಪ್ರಯೋಗದ ದೃಷ್ಟಿಯಿಂದ ತನ್ನ ಯಾವುದೆ ಸಹಘಟಕಕ್ಕೆ ಸಮಾನವಾಗಿರುವುದಿಲ್ಲ. ಉದಾಹರಣೆಗೆ 'ಅವನು ಮನೆಗೆ ಹೋಗುತ್ತಿದ್ದಾನೆ' ಎಂಬ ವಾಕ್ಯವನ್ನು ಪರಿಗಣಿಸಿ. ಇಲ್ಲಿ 'ಮನೆಗೆ' ಎಂಬ ರಚನೆಯಲ್ಲಿರುವ 'ಮನೆ' ಇಲ್ಲವೇ 'ಗೆ' ಎಂಬ ಯಾವುದೇ ಒಂದು ಘಟಕವನ್ನು ಪ್ರಯೋಗಿಸಿ ವಾಕ್ಯದ ಸಿಂಧುತ್ವವನ್ನು ವ್ಯಾಕರಣದ ದೃಷ್ಟಿಯಿಂದ ಕಾಪಾಡಲು ಸಾಧ್ಯವಿಲ್ಲ.

1. ಅವನು ಮನೆಗೆ ಹೋಗುತ್ತಿದ್ದಾನೆ.
§ 2. ಅವನು ಮನೆ ಹೋಗುತ್ತಿದ್ದಾನೆ.
§ 3. ಅವನು ಗೆ ಹೋಗುತ್ತಿದ್ದಾನೆ.

§ ಚಿಹ್ನೆಯಿರುವ ವಾಕ್ಯಗಳು ಸಿಂಧುವಲ್ಲ.

7. **ಅನುಕ್ರಮ :** ಈ ಕೆಳಗಿನ ರಚನೆಗಳನ್ನು ಪರಿಶೀಲಿಸಿ :

1. ಶೂರ
2. ಶೂರ ರಾಜ
3. ಶೂರ ರಾಜ ಶತ್ರುಗಳ ಮೇಲೆ ದಂಡೆತ್ತಿ ಹೋಗಿ
4. ಶೂರ ರಾಜ ಶತ್ರುಗಳ ಮೇಲೆ ದಂಡೆತ್ತಿ ಹೋಗಿ ಜಯಗಳಿಸುತ್ತಾನೆ.

ರಚನೆ 1 ರಚನೆ 2ರ ಘಟಕ, ರಚನೆ 2 ರಚನೆ 3ರ ಘಟಕ, ಮತ್ತು ರಚನೆ 3 ರಚನೆ 4ರ ಘಟಕ. ಬೇರೆ ರೀತಿಯಲ್ಲಿ ಹೇಳಬಹುದಾದರೆ ಮೊದಲ ರಚನೆಗಿಂತ ಎರಡನೆಯದು ದೊಡ್ಡದು. ಎರಡನೆಯದಕ್ಕಿಂತ ಮೂರು ಹಾಗೂ ಮೂರನೆಯದಕ್ಕಿಂತ ನಾಲ್ಕನೆಯದು ದೊಡ್ಡದು, ಪ್ರತಿಯೊಂದು ರಚನೆಯಾಗಿ ಅನುಕ್ರಮವಾಗಿ ಮುಂದಿನ ದೊಡ್ಡ ರಚನೆಯ ಒಂದು ಘಟಕ. ಈ ರಚನೆಗಳಲ್ಲಿ ಅನುಕ್ರಮವಾದ ಬೆಳವಣಿಗೆ ಕಂಡುಬರುತ್ತದೆ. ಅಂದಮೇಲೆ ವ್ಯಾಕರಣ ರಚನೆಗಳು ಯಾವಾಗಲೂ ಒಂದೇ ಮಟ್ಟದ್ದಾಗಿರುವುದಿಲ್ಲ. ಅವುಗಳಲ್ಲಿ ಅನುಕ್ರಮ (Hierarchy) ಕಂಡುಬರುತ್ತದೆ. ಇದನ್ನು ಹೀಗೆ ನಿರೂಪಿಸಬಹುದು :

ಅನುಕ್ರಮ ↑

ವಾಕ್ಯ — ಶೂರರಾಜ ಶತ್ರುಗಳ ಮೇಲೆ ದಂಡೆತ್ತಿ ಹೋಗಿ ಜಯಗಳಿಸುತ್ತಾನೆ.
|
ಉಪವಾಕ್ಯ — ಶೂರರಾಜ ಶತ್ರುಗಳ ಮೇಲೆ ದಂಡೆತ್ತಿ ಹೋಗಿ
|
ಪದಗುಚ್ಛ — ಶೂರರಾಜ
|
ಪದ — ಶೂರ

ಸಾಮಾನ್ಯವಾಗಿ ಆಕೃತಿಮ ಶಬ್ದದ ಘಟಕವಾಗುತ್ತದೆ, ಹಾಗೆಯೇ ಶಬ್ದ ಪದವೃಂದದ, ಪದವೃಂದ ಉಪವಾಕ್ಯದ ಮತ್ತು ಉಪವಾಕ್ಯ ವಾಕ್ಯದ ಘಟಕವಾಗುತ್ತದೆ. ಆಕೃತಿಮ ವ್ಯಾಕರಣ ರಚನೆಯಲ್ಲ. ಏಕೆಂದರೆ ಅದನ್ನು ಮತ್ತೆ ವಿಭಜಿಸಲು ಸಾಧ್ಯವಿಲ್ಲ. ಹಾಗೆಯೇ ವಾಕ್ಯ ಒಂದು ಘಟಕವಲ್ಲ. ಏಕೆಂದರೆ ವಾಕ್ಯಕ್ಕಿಂತ ದೊಡ್ಡ ರಚನೆಯನ್ನು ಇಲ್ಲಿ ಕಲ್ಪಿಸಿಕೊಳ್ಳಲಾಗಲಿಲ್ಲ. ಪದಗಳು, ಪದವೃಂದಗಳು ಮತ್ತು ಉಪವಾಕ್ಯಗಳು ಘಟಕಗಳೂ ಹೌದು, ರಚನೆಗಳೂ ಹೌದು. ಆಕೃತಿಮ ಮತ್ತು ಪದವನ್ನು ಒಟ್ಟಿಗೆ ನೋಡಿದರೆ ಪದ ಒಂದು ರಚನೆ, ಏಕೆಂದರೆ ಪದವನ್ನು ವಿಶ್ಲೇಷಿಸಿದರೆ ಆಕೃತಿಮಗಳು ಘಟಕಗಳಾಗಿ ದೊರೆಯುತ್ತವೆ. ಶಬ್ದ ಮತ್ತು ಪದವೃಂದಗಳನ್ನು ಒಟ್ಟಿಗೆ ನೋಡಿದರೆ ಶಬ್ದಗಳು ಘಟಕಗಳಾಗುತ್ತವೆ. ಏಕೆಂದರೆ ಪದವೃಂದವನ್ನು ವಿಶ್ಲೇಷಿಸಿದರೆ ಘಟಕಗಳ ರೂಪದಲ್ಲಿ ಶಬ್ದಗಳು ದೊರೆಯುತ್ತವೆ. ಹೀಗೆಯೇ ಪದ ಮತ್ತು ಪದವೃಂದವನ್ನು ಒಟ್ಟಿಗೆ ನೋಡಿದರೆ ಪದವೃಂದ ಒಂದು ರಚನೆಯಾಗುತ್ತದೆ. ಪದವೃಂದ ಮತ್ತು ಉಪವಾಕ್ಯಗಳನ್ನು ಒಟ್ಟಿಗೆ ನೋಡಿದರೆ ಪದವೃಂದ ಘಟಕವಾಗಿಯೂ ಉಪವಾಕ್ಯ ರಚನೆಯಾಗಿಯೂ ಕಾಣುತ್ತದೆ.

ಆಕೃತಿಮಗಳಿಂದ ಹಿಡಿದು ವಾಕ್ಯದವರೆಗಿನ ವ್ಯಾಕರಣಾಂಶಗಳ ವಿವೇಚನೆಯಲ್ಲಿ ಪದ ಮತ್ತು ವಾಕ್ಯ ಇವೆರಡು ಪ್ರಮುಖವಾದ ಘಟ್ಟಗಳು. ಪದ ವಸ್ತುಗಳನ್ನು ನಮ್ಮ ಮುಂದಿಟ್ಟರೆ ವಾಕ್ಯ ಈ ವಸ್ತುಗಳ ನಡುವಣ ಸಂಬಂಧವನ್ನೂ ಕ್ರಿಯೆಯನ್ನೂ ಸೂಚಿಸುತ್ತದೆ.

8. ಭಾಷಾ ಏಕಕಗಳು :

ಒಟ್ಟಿನಲ್ಲಿ ಕ್ರಿಯೆಯ ದೃಷ್ಟಿಯಿಂದ ಭಾಷೆಯಲ್ಲಿ ಶಬ್ದ ಮತ್ತು ವಾಕ್ಯ ಮೂಲಭೂತವಾದ ಏಕಕಗಳು (units). ಆದರೆ ಶಬ್ದ ಮತ್ತು ವಾಕ್ಯಗಳಷ್ಟೆ ಭಾಷೆಯ ಅಭಿವ್ಯಕ್ತಿಗೆ ಸಾಕಾಗಲಾರವು. ಒಂದೇ ವಸ್ತು ಬಗೆಬಗೆಯ ರೂಪದಲ್ಲಿ ಕಂಡುಬರಬಹುದು. ಈ ಒಂದೊಂದು ರೂಪಕ್ಕೂ ಹೆಸರನ್ನು ಕೊಡುತ್ತಾ ಹೋದರೆ ಅದಕ್ಕೆ ಕೊನೆಮೊದಲಿಲ್ಲ. ಉದಾಹರಣೆಗೆ :

1) ನನ್ನ ತಿಂಡಿ	4) ತಟ್ಟೆಯೊಳಗಿರುವ ತಿಂಡಿ
2) ಆರಿಹೋದ ತಿಂಡಿ	5) ಮೇಜಿನ ಮೇಲಿರುವ ತಿಂಡಿ
3) ಕೃಷ್ಣನ ತಿಂಡಿ	6) ಅಮ್ಮ ಮಾಡುವ ತಿಂಡಿ

ಇಲ್ಲಿ ಆರು ಬಗೆಯ ತಿಂಡಿಗಳನ್ನು ಸೂಚಿಸಲಾಗಿದೆ. ಭಾಷೆಯಲ್ಲಿ ಈ ಆರು ಬಗೆಗಳಿಗೂ ಬೇರೆ ಬೇರೆ ಹೆಸರುಗಳನ್ನು ಕೊಡುವುದು ಅಸಾಧ್ಯ ಮತ್ತು ಅವ್ಯವಹಾರಿಕ. ಇವೆಲ್ಲ ಪದವೃಂದಗಳು. ಇಲ್ಲಿ ಪದಗಳಂತೆ ಪದವೃಂದಗಳೂ ಬೇರೆ ಬೇರೆ ವಸ್ತುಗಳನ್ನು ನಿರ್ದೇಶಿಸುತ್ತವೆ. ಪದಗಳಿಂದ ಸೂಚಿಸಲು ಸಾಧ್ಯವಾಗದೆ ಹೋಗುವುದನ್ನು ನಾವು ಪದವೃಂದಗಳಿಂದ ಸೂಚಿಸುತ್ತೇವೆ. ಹಾಗಾಗಿ ಕಾರ್ಯತಃ ಪದ ಮತ್ತು ಪದಬಂಧಗಳು ಒಂದೇ ಬಗೆಯ ಭಾಷಾ ಏಕಕಗಳು (Linguistic units) ಎನಿಸಿಕೊಳ್ಳುತ್ತವೆ.

ವಾಕ್ಯ ನಮ್ಮ ಮುಂದೆ ಒಂದು ಪ್ರಸ್ತಾಪವನ್ನು (proposition) ಇಡುತ್ತದೆ. ಒಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ಪ್ರಸ್ತಾಪಗಳು ಇರಬಹುದು. ಒಂದು ಪ್ರಸ್ತಾಪವಿರುವ ವಾಕ್ಯವನ್ನು

ಉಪವಾಕ್ಯ ಎನ್ನುತ್ತೇವೆ. ಒಂದಕ್ಕಿಂತ ಹೆಚ್ಚು ಉಪವಾಕ್ಯಗಳಿರುವ ವಾಕ್ಯವನ್ನು ಸಂಯುಕ್ತವಾಕ್ಯ (complex sentence) ಇಲ್ಲವೆ ಮಿಶ್ರವಾಕ್ಯ (compound sentence) ಎನ್ನುತ್ತೇವೆ. ಅಂದಮೇಲೆ ಕಾರ್ಯತಃ ಉಪವಾಕ್ಯ ಮತ್ತು ವಾಕ್ಯ ಒಂದೇ ಬಗೆಯಲ್ಲಿ ಕೆಲಸಮಾಡುತ್ತವೆ. ಪದ ಮತ್ತು ಪದಬಂಧಗಳ ನಡುವೆ ಸಾಮೀಪ್ಯ ಇರುವ ಹಾಗೆಯೇ ಉಪವಾಕ್ಯ ಮತ್ತು ವಾಕ್ಯಗಳ ನಡುವೆ ಸಾಮೀಪ್ಯ ಉಂಟು. ಇದರಿಂದ ನಾವು ಮಾಡಬಹುದಾದ ತೀರ್ಮಾನವೆಂದರೆ ಯಾವುದೇ ಭಾಷೆಯಲ್ಲಿ ಪದಮಟ್ಟ ಮತ್ತು ಪದವೃಂದ–ಮಟ್ಟ ಇಲ್ಲವೆ ಉಪವಾಕ್ಯ–ಮಟ್ಟ ಮತ್ತು ವಾಕ್ಯ–ಮಟ್ಟ ಒಂದಾಗಿ ಹೋಗುವ ಸಾಧ್ಯತೆ ಇರಬಹುದಾದರೂ ಪದವೃಂದ–ಮಟ್ಟ ಮತ್ತು ವಾಕ್ಯ–ಮಟ್ಟ ಒಂದಾಗುವ ಸಂಭಾವ್ಯತೆ ಕಡಮೆ. ಅಂದರೆ ಪದವೃಂದ ಮತ್ತು ಉಪವಾಕ್ಯಗಳ ನಡುವೆ ಎಳೆಯಬಹುದಾದ ಗಡಿರೇಖೆ ಹೆಚ್ಚು ದೃಢವಾದದ್ದು.

ಸೀತಾರಾಮ ಜಾಗೀರ್‌ದಾರ್

ಕಲ್ಯಾಣದ ಚಾಳುಕ್ಯರ ಇತಿಹಾಸದ ಮೇಲೆ ಹೊಸ ಬೆಳಕು

ನಮ್ಮ ಪ್ರಚಲಿತ ಇತಿಹಾಸದ ಪುಟಗಳನ್ನು ಹೊಸಹೊಸ ಆಧಾರಗಳು ದೊರೆತಾಗ ಆಗಾಗ್ಗೆ ಮಾರ್ಪಡಿಸಿಕೊಂಡು ಅಧ್ಯಯನ ಮಾಡಬೇಕಾಗುತ್ತದೆ—ಅಭ್ಯಾಸಿಗಳು. ಇಂತಹ ಒಂದು ಸಂದರ್ಭವು ನಮಗೆ ಇತ್ತೀಚೆಗೆ ರಾಯಚೂರು ಜಿಲ್ಲೆಯ ಎಲಬುರ್ಗಿ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ಉಪಲಬ್ಧವಾಗಿರುವ ಶಾಸನದಿಂದ ಈಗ ಉಂಟಾಗಿದೆ.[1] ಈ ಶಾಸನವು ಕಲ್ಯಾಣದ ಚಾಳುಕ್ಯರ ಇತಿಹಾಸದ ಮೇಲೆ ಹೊಸ ಬೆಳಕನ್ನು ಬೀರುತ್ತದೆ. ಈ ಅರಸು ಮನೆಗೆ ಸಂಬಂಧ ಪಟ್ಟಂತೆ ಯಾವುದೇ ಇತಿಹಾಸದ ಪುಸ್ತಕವನ್ನು ತೆರೆದು ನೋಡಿದರೆ ನಮಗೆ ಕಂಡುಬರುವ ಸಂಗತಿ ಯೆಂದರೆ ರಾಷ್ಟ್ರಕೂಟರಿಂದ ಸಾಮ್ರಾಜ್ಯವನ್ನು ಕಸಿದುಕೊಂಡಮೇಲೆ ಇಮ್ಮಡಿ ತೈಲಪನ ಅನಂತರ ಆತನ ಮಗ ಸತ್ಯಾಶ್ರಯ ಇರಿವಬೆಡಂಗನು ಪಟ್ಟಕ್ಕೆ ಬರುವನು ಮತ್ತು ಅವನ ತರುವಾಯ ದಶವರ್ಮನ ಪುತ್ರ ಐದನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದನು. ದಶವರ್ಮ ಅಥವಾ ಯಶೋವರ್ಮನು ಸತ್ಯಾಶ್ರಯನ ತಮ್ಮ ಎಂಬ ವಿಷಯವನ್ನು ಬಿಟ್ಟರೆ ಹೆಚ್ಚಿನ ಅಂಶಗಳೇನು ಕಾಣದೊರೆಯವು. ಆತನ ಬಗ್ಗೆ ಇತಿಹಾಸಗ್ರಂಥಗಳಲ್ಲಿ ಈಗ ಇರುವುದು ಕೇವಲ ನಾಮ ಮಾತ್ರ ಉಲ್ಲೇಖಗಳು; ಉದಾ :

೧. ತೈಲನಿಗೆ ಜಾಕವ್ವೆಯ ಉದರದಲ್ಲಿ ಇಬ್ಬರು ಮಕ್ಕಳು. ಒಬ್ಬನು ಹಿರಿಯ—ಸತ್ಯಾಶ್ರಯನು; ಇವನು ತೈಲಪನ ಅನಂತರ ಕ್ರಿ.ಶ. 997ರಲ್ಲಿ ಪಟ್ಟಕ್ಕೆ ಬಂದನು; ಇನ್ನೊಬ್ಬನು ಕಿರಿಯ—ದಶವರ್ಮ ಇಲ್ಲವೇ ಯಶೋವರ್ಮ. ಈತನ ಹೆಂಡತಿ ಭಾಗ್ಯವತೀ; ಇವಳು ಐದನೆಯ ವಿಕ್ರಮಾದಿತ್ಯನ ತಾಯಿ. ಈ ವಿಕ್ರಮಾದಿತ್ಯನು ಸತ್ಯಾಶ್ರಯನ ತರುವಾಯ ಸಿಂಹಾಸನದ ಮೇಲೆ ಕುಳಿತನು.[2]

೨. [ಸತ್ಯಾಶ್ರಯನ] ಕಿರಿಯ ಸೋದರ, ಯಶೋವರ್ಮನೆಂದೂ ಕರೆಯಲ್ಪಡುವ ದಶವರ್ಮ ಭಾಗ್ಯವತೀ ಅಥವಾ ಭಾಗಲಾದೇವೀ ಎಂಬವಳನ್ನು ಮದುವೆಯಾಗಿದ್ದನು. ಆತನು ಸಿಂಹಾಸನವನ್ನು ಏರಲಿಲ್ಲವೆಂದು ತೋರುತ್ತದೆ. ಆತನಿಗೆ ವಿಕ್ರಮಾದಿತ್ಯ, ಇಮ್ಮಡಿ ಅಯ್ಯಣ, ಅಕ್ಕಾದೇವೀ, ಮತ್ತು ಇಮ್ಮಡಿ ಜಯಸಿಂಹ ಎಂಬ ನಾಲ್ಕು ಜನ ಮಕ್ಕಳಿದ್ದರು. ದಶವರ್ಮನ ಹಿರಿಯ ಮಗ ಐದನೆಯ ವಿಕ್ರಮಾದಿತ್ಯನು 'ತ್ರಿಭುವನಮಲ್ಲ' ಎಂಬ ಬಿರುದನ್ನು ಧರಿಸಿ ಕ್ರಿ.ಶ. 1009ರಲ್ಲಿ ಸತ್ಯಾಶ್ರಯನ ಅನಂತರ ಪಟ್ಟವನ್ನೇರಿದನು.[3]

೩. ಸತ್ಯಾಶ್ರಯನಿಗೆ ಗಂಡುಮಕ್ಕಳಿಲ್ಲದ್ದರಿಂದ ಅವನು ತಮ್ಮ ದಶವರ್ಮನ ಮಗನಾದ ಐದನೆಯ ವಿಕ್ರಮಾದಿತ್ಯ (1008-1015) ಪಟ್ಟಕ್ಕೆ ಬಂದ.[4]

೪. ಇಮ್ಮಡಿ ತೈಲಪನು ಕ್ರಿ.ಶ. 973-997ರ ವರೆಗೆ 24 ವರ್ಷ ರಾಜ್ಯಭಾರ ಮಾಡಿದನು. ಆತ ಧೀರಯೋಧನಾಗಿದ್ದು ಬಂದ ಸಮಸ್ಯೆಗಳನ್ನು ಎದುರಿಸಿ ನಿಶ್ಚಿತ ಮನಸ್ಸಿನಿಂದ ಒದಗಿದ ಅಡೆತಡೆಗಳನ್ನು ನಿವಾರಿಸಿಕೊಂಡನು ಮತ್ತು ರಾಜ್ಯಾಡಳಿತಕ್ಕೆ ಸ್ಥಿರತೆಯನ್ನು ತಂದುಕೊಟ್ಟನು. ಅವನು 'ಆಹವಮಲ್ಲ' ಎಂಬ ಬಿರುದನ್ನು ಧರಿಸಿದ್ದನು. ಜಾಕವ್ವೆ ಇಲ್ಲವೆ ಜಾಕಲದೇವಿ ರಾಷ್ಟ್ರಕೂಟ ಭಮ್ಮಹನ ಪುತ್ರಿ; ಆತನ ರಾಣಿಯಾಗಿದ್ದಳು. ಆಕೆಗೆ ಸತ್ಯಾಶ್ರಯ ಮತ್ತು ದಶವರ್ಮ ಎಂಬ ಇಬ್ಬರು ಮಕ್ಕಳಿದ್ದರು. ಕ್ರಿ.ಶ. 996ರ ಕಾರಜೋಳ ಶಾಸನದಲ್ಲಿ 'ಮಹಾಸಾಮನ್ತಾಧಿಪತಿ ದಶವರ್ಮ' ಎಂದು ಕಾಣಿಸಿಕೊಂಡಿರುವ ವ್ಯಕ್ತಿ ಪ್ರಾಯಃ ಇಮ್ಮಡಿ ತೈಲಪನ ಕಿರಿಯ ಪುತ್ರ ದಶವರ್ಮನೇ ಆಗಿರಬಹುದು.

* * * *

ಇವನಿಗೆ ವಿಕ್ರಮಾದಿತ್ಯನಲ್ಲದೆ ಅಯ್ಯಣ ಮತ್ತು ಜಯಸಿಂಹ ಎಂಬ ಇನ್ನಿಬ್ಬರು ಮಕ್ಕಳು ಇದ್ದರು.[೫]

ಮೇಲಿನ ಈ ಉಲ್ಲೇಖಗಳು, ದಶವರ್ಮನು ರಾಜನಾಗಿ ರಾಜ್ಯವಾಳುತ್ತಿದ್ದ ಸಂಗತಿಯನ್ನು ತಿಳಿಸುವುದಿಲ್ಲ. ಆದರೆ ಆತನು ಹಿರಿಯ ಸೋದರ ಇರಿವಬೆಡಂಗ ಸತ್ಯಾಶ್ರಯನ ಜೊತೆಗೆ ಸಾಮ್ರಾಜ್ಯವನ್ನು, ಎಲ್ಲ ಬಿರುದಾವಳಿಗಳನ್ನು ಧರಿಸಿ, ಕ್ರಿ.ಶ. 1002ರಲ್ಲಿ ಆಳುತ್ತಿದ್ದನೆಂಬ ಸಂಗತಿ ಇದೀಗ ಬೆಳಕಿಗೆ ಬಂದಿರುವ ಕಲ್ಲೂರ ಶಾಸನದಿಂದ ಪ್ರಕಟವಾಗಿದೆ. ಶಾಸನದಲ್ಲಿಯ ಒಕ್ಕಣೆಯು ಹೀಗಿದೆ :

ಶಾಸನ ಪಂಕ್ತಿಗಳು : 1 ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ
2 ತ್ರೈಳೋಕ್ಯನಗರಾರಂಭ ಮೂಲಸ್ತಂಭಾಯ ಸಂ
3 ಭವೇ ॥ ಶ್ರೀ ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ ಪ್ರಿ
4 ಥ್ವೀವಲ್ಲಭಂ ಮಹಾರಾಜಾಧಿರಾಜಪರಮೇಸ್ವರ ಪರ
5 ಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚರಿತಂ
6 ನಿಜಿವಬೆಡಂಗಂನಮ್ಮನಗನ್ಧವಾರಣಂ ಶ್ರೀಮತ್ಯಶ [ವ*]
7 ರ್ಮ್ಮದೇವರಸರು ಸಮುದ್ರಪರ್ಯ್ಯನ್ತ ಭೂಮಾ....
8 ನಿಜ ಪ್ರಚಂಡದೋರ್ದ್ದಂಡ ಭುಜದಂಡದಿಂದೆಯು ..
9 ರಾಧ್ಯಮರ ಸಾಮ್ರಾಜರಾಜ್ಯಮುತ್ತರೋತ್ತರಾಭಿವ್ರ[ದ್ಧಿ]
10 ಪ್ರವರ್ದ್ಧಮಾನಮಾಚಂದ್ರಾರ್ಕ ತಾರಂಬರಂ ಸಲು
11 ತ್ತಮಿರೆ ತತ್ಪಾದ ಪದ್ಮೋಪಜೀವಿ॥

* * * *

32 ...ಸ್ವಸ್ತಿ ಸಕವರ್ಷ ೯೨೪ ಸು
33 ಬಕ್ರುದ್ ಪುಸ್ಯ ಬಹುಳ ೫ ಆದಿವಾರ ..
34 ಣ ಸಂಕ್ರಾಂತಿಯಂದು............ಇತ್ಯಾದಿ


ದಶವರ್ಮ<ಯಶವರ್ಮ< ಯಶೋವರ್ಮನು ಚಾಳುಕ್ಯದೊರೆ ಸತ್ಯಾಶ್ರಯದೇವನ ಎಲ್ಲ ಬಿರುದಾವಳಿಗಳನ್ನು ಧರಿಸಿ ಆ ಸಮುದ್ರಪರ್ಯಂತ ಅಣ್ಣನೊಂದಿಗೆ ಸಾಮ್ರಾಜ್ಯವನ್ನು ಆಳುತ್ತಿದ್ದನು. ಈ ಶಾಸನದಲ್ಲಿ ಬಂದಿರುವ ತೇದಿ ವಿವರಗಳು ಭಾನುವಾರ ಡಿಸೆಂಬರ್ ೨೭ ಕ್ರಿ.ಶ. ೧೦೦೨ಕ್ಕೆ ಸರಿಯಾಗಿ ಹೊಂದುತ್ತವೆ. ಇದು ಸದ್ಯ ದಶವರ್ಮನ ಏಕೈಕ ಶಾಸನ.

ಹೀಗೆಯೇ ಈಗಾಗಲೇ ಪ್ರಕಾಶಕ್ಕೆ ಬಂದ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ರೂಗಿ ಗ್ರಾಮದ ಶಾಸನದಲ್ಲಿಯ ದಶವರ್ಮನಿಗೆ 'ದೇವಣರಸ' ಎಂಬ ಇನ್ನೊಬ್ಬ ಮಗನಿದ್ದ ಸಂಗತಿಯನ್ನು ಮತ್ತು ಅಲ್ಲಿನ ಇತರ ವಿಷಯಗಳನ್ನು ಸ್ವೀಕರಿಸಿ ಇತಿಹಾಸದ ಪುಟಗಳನ್ನು ಮಾರ್ಪಡಿಸಿ ಬರೆಯಬೇಕಾಗುತ್ತದೆ. ಶಾಸನದಲ್ಲಿ ಆ ವಿಷಯಗಳು ಹೀಗಿವೆ :

ಶಾಸನ ಪಂಕ್ತಿಗಳು :

22 — ಸತ್ಯಾಶ್ರಯದೇವ । ನಾತನ ತಮ್ಮಂ ಭುವನಯ್ಕ
23 ಮಲ್ಲನೆನಿಸಿದ ದಸವರ್ಮ್ಮದೇವ । ನಾತನ ಮಗಂ ತ್ರಿಭುವ
24 ನಮಲ್ಲನೆನಿಸಿದ ವಿಕ್ರಮಾದಿತ್ಯದೇವ । ನಾತನ ತ
25 ಮ್ಮಂ ವಸುಧೈಕಮಲ್ಲನೆನಿಸಿದಯ್ಯಣ ದೇವ । ನಾತ
26 ನ ತಮ್ಮಂ
27 ಶ್ರೀಸ್ವಸ್ತಿ ಸಮಧಿಗತ ಪಂಚಮ
28 ಹಾ ಶಬ್ದದ ಮಹಾಸಾಮನ್ತಂ
29 ತೇಜಮಾರ್ತಣ್ಡಂ ಕರಹಾಟ ವಜ್ರ
30 ಕವಾಟ ಕೊಂಕಣಭಯಂಕರಂ ಧಳಮು
31 ಟ್ಟೆಗಣ್ಡನಣ್ಣನಬಂಟಂ ಶ್ರೀಮತ್ವ ಸು
32 ಧೈಕ ಮಲ್ಲದೇವಪಾದಪಂಕಜಭ್ರ
33 ಮರಂ ಶ್ರೀಮತ್ ದೇವಣರಸರ್ । ಸಕ
34 ವರ್ಷ ೯೩೭ ನೆಯಾನನ್ದ ಸಂವ
35 ತ್ಸರದ ಫಾಲ್ಗುಣದಮಾವಾಸ್ಯೆಯಾ
36 ದಿತ್ಯವಾರಂ............. ಇತ್ಯಾದಿ.[6]

ಸತ್ಯಾಶ್ರಯದೇವನ ಇತರ ಬಿರುದುಗಳೊಂದಿಗೆ ದಶವರ್ಮನಿಗೆ 'ಭುವನೈಕಮಲ್ಲ' ಎಂಬ ಬಿರುದೊಂದು ಇಲ್ಲಿ ಹೊಸದಾಗಿ ಕಾಣಬಂದಿದೆ. ಈ ಶಾಸನದ ಕಾಲ ಕ್ರಿ.ಶ. 1015 ಆಗಿದ್ದು ಅಯ್ಯಣನ ಆಳ್ವಿಕೆಗೆ ಸಂಬಂಧಿಸಿದೆ. ಈ ಎರಡು ಶಾಸನಗಳು ಮತ್ತು ಇತರ ದಾಖಲೆಗಳಿಂದ ಈ ಚಾಳುಕ್ಯ ಮನೆತನದ ಆರಂಭದ ವಂಶವೃಕ್ಷವು ಹೀಗಿರುತ್ತದೆ.



ಅಡಿ ಟಿಪ್ಪಣಿಗಳು

1. ಶ್ರೀ ತುಪಾಕಿಯವರು ಡಾ|| ಜಿ. ವರದರಾಜರಾಯರಿಗೆ ಶಾಸನದ ಪ್ರತಿಯನ್ನು ಪರಿಶೀಲಿಸಲು ಕಳಿಸಿರುವರು. ಡಾ|| ಜಿ. ವರದರಾಜರಾಯರು ಪ್ರೀತಿಯಿಂದ ನನಗೆ ಶಾಸನವನ್ನು ಪರಿಶೀಲಿಸಲು ಕೊಟ್ಟರು. ಈ ಶಾಸನದ ಪೂರ್ಣಪಾಠ, ವಿಶೇಷ ಟಿಪ್ಪಣಿಗಳು, ಬೇರೊಂದು ಲೇಖನದಲ್ಲಿ ಬರುತ್ತವೆ. ಚರಿತ್ರಕಾರರ ಗಮನದಲ್ಲಿ ಅಧ್ಯಯನಕ್ಕೆ ಈ ವಿಷಯವು ತೀವ್ರ ಬರಲಿಯೆಂದು ಮುಖ್ಯವಾದ ಐತಿಹಾಸಿಕಾಂಶವನ್ನು ಕುರಿತ ಟಿಪ್ಪಣಿಯನ್ನು ಇಲ್ಲಿ ಪ್ರಸ್ತುತ ಪಡಿಸಿದೆ.

2. Early History of the Deccan (Ed. G. Yazdani), Vol. I, p. 323.

3. Karnataka through the Ages, pp. 271–72.

4. ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ. ಚಾಳುಕ್ಯವಂಶ, ಪು. ೫೭೬–೭೭.

5. A History of Karnataka (Ed. Dr. P. B. Desai) pp. 162 and 164 (1981).

6. S. I. I. Vol. XX, No. 19, pp. 18–19.

7. ibid, No. 21, p. 22. ಈ ದಾಸರಸನು ತನ್ನನ್ನು 'ಸುವರ್ಣಗರುಡಧ್ವಜ' ಎಂದು ಹೇಳಿಕೊಂಡಿರುವುದರಿಂದ ಆತ ರಾಷ್ಟ್ರಕೂಟವಂಶದ ರಾಣಿಯ ಉದರದಲ್ಲಿ ಜನಿಸಿರಬಹುದು. ಇದೇ ವಂಶದ ಮೂರನೆಯ ಸೋಮೇಶ್ವರನ 'ನಂದಗಿರಿನಾಥ' 'ಕೊವಳಾಲಪುರವೇಶ್ವರ' ''ಮದಗಜೇಂದ್ರಲಾಂಛನ'' ಮುಂತಾದ ಗಂಗರ ಮನೆತನದ ಬಿರುದಾವಳಿಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಯಮುನಾಬಾಯಿ ಆರ್. ರಾವ್.

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರೆದುದು)

25. ಗ್ರೀಸಿನ ವೈಭವ

ಪರ್ಷಿಯದ ಪರಾಜಯದನಂತರ ನೂರೈವತ್ತು ವರ್ಷಗಳು ಗ್ರೀಸಿನ ನಾಗರೀಕತೆ ಮಹತ್ತರ ವೈಭವವನ್ನು ಪಡೆಯಿತು. ಅಥೆನ್ಸ್, ಸ್ಪಾರ್ಟಾ ಮತ್ತಿತರ ರಾಜ್ಯಗಳ ನಡುವೆ ಉಚ್ಚಸ್ಥಾನಕ್ಕೋಸ್ಕರ ಕಿತ್ತಾಟಗಳು ನಡೆಯುತ್ತಲೇ ಇದ್ದು ಗ್ರೀಸ್ ಛಿದ್ರಛಿದ್ರವಾಗಿಹೋಗಿತ್ತೆಂಬುದೇನೋ ನಿಜ, (ಕ್ರಿ.ಪೂ. 431 ರಿಂದ 404ರ ವರೆಗೆ ಪೆಲೊಪೊನ್ನೇಸಿಯನ್ ಯುದ್ಧ ನಡೆಯಿತು). ಮತ್ತು ಕ್ರಿ.ಪೂ. 338ರಲ್ಲಿ ಗ್ರೀಸೆಲ್ಲಾ ಹೆಚ್ಚುಕಡಿಮೆ ಮ್ಯಾಸಿಡೋನಿಯನ್ನರ ವಶವಾಯಿತು. ಆದರೂ ಗ್ರೀಕರ ಕಲಾಭಿರುಚಿ, ರಚನಾಶಕ್ತಿ ಮತ್ತು ವಿಚಾರ ಪ್ರವೃತ್ತಿ ಇದೇ ಕಾಲದಲ್ಲಿಯೇ ಉನ್ನತ ಮಟ್ಟಕ್ಕೇರಿದುವು. ಇವರ ಸಾಧನೆಗಳು ಮಾನವ ವರ್ಗಕ್ಕೆ ಬೆಳಕು ತೋರುವ ದೀವಿಗೆಗಳಾಗಿ ಪರಿಣಮಿಸಿದುವು.

ಅಥೆನ್ಸ್ ಇದೆಲ್ಲಾ ಚಟುವಟಿಕೆಗಳ ಕೇಂದ್ರವಾಗಿತ್ತು. ಕ್ರಿ.ಪೂ. 466ರಿಂದ 428ರವರೆಗೆ ಅಥೆನ್ಸಿನ ಆಡಳಿತ ಉತ್ಸಾಹಶಾಲಿಯೂ ಉದಾತ್ತಹೃದಯಿಯೂ ಆದ ಪೆರಿಕ್ಲಿಸನ ಕೈಯಲ್ಲಿತ್ತು. ಪರ್ಷಿಯನ್ನರು ಸುಟ್ಟುಹಾಕಿ ಹಾಳುಮಾಡಿದ್ದ ಈ ನಗರವನ್ನು ತಿರುಗಿ ಕಟ್ಟುವುದರಲ್ಲಿ ಈತನು ನಿರತನಾದನು. ಇಂದಿಗೂ ನಾವು ಅಥೆನ್ಸಿನಲ್ಲಿ ಕಾಣುವ ಸುಂದರವಾದ ಕಟ್ಟಡಗಳ ಅವಶೇಷಗಳು ಈತನ ಈ ಬೃಹತ್ ಪ್ರಯತ್ನದ ನೆನಪಾಗಿ ಉಳಿದಿವೆ. ಈತನು ಅಥೆನ್ಸನ್ನು ಬರಿಯ ಭೌತಿಕವಾಗಿ ಪುನರ್ರಚಿಸಿದ್ದಷ್ಟೇ ಅಲ್ಲ; ಅದಕ್ಕಿಂತ ಮುಖ್ಯವಾಗಿ ಅದರ ಬೌದ್ಧಿಕ ಜೀವನಕ್ಕೆ ಪುನರ್ಜನ್ಮ ಕೊಟ್ಟನು. ಈತನು ಮೂರ್ತಿ ಶಿಲ್ಪಿಗಳು ಮತ್ತು ವಾಸ್ತುಶಿಲ್ಪಿಗಳಿಗಷ್ಟೇ ಅಲ್ಲದೆ ಕವಿಗಳು, ನಾಟಕಕಾರರು ತತ್ತ್ವಶಾಸ್ತ್ರಜ್ಞರು ಮತ್ತು ಶಿಕ್ಷಣತಜ್ಞರಿಗೂ ಆಶ್ರಯದಾತನಾಗಿದ್ದನು. ಕ್ರಿ.ಪೂ. 438ರಲ್ಲಿ ಹೆರೊಡೋಟಸ್ ಅಲ್ಲಿ ಬಂದು ತನ್ನ ಚರಿತ್ರೆಯನ್ನು ವಾಚನಮಾಡಿದನು. ಅನಕ್ಸಗೋರಾಸ್ ಸೂರ್ಯ ಮತ್ತು ನಕ್ಷತ್ರಗಳನ್ನು ಮೊದಲ ಬಾರಿಗೆ ಶಾಸ್ತ್ರೀಯ ರೀತಿಯಲ್ಲಿ ವರ್ಣಿಸಿದನು. ಈಸ್ಕೈಲಸ್, ಸೊಫೋಕ್ಲಿಸ್ ಮತ್ತು ಯೂರಿಪಿಡಿಸ್ ಇವರು ಮೂವರ ಕೈಯಲ್ಲಿ ಗ್ರೀಕ್ ನಾಟಕ ಅತ್ಯುನ್ನತ ಮಟ್ಟದ ಸೌಂದರ್ಯವನ್ನೂ ಉದಾತ್ತಭಾವವನ್ನೂ ತೋರಿತು.

ಬಳಿಕ ಗ್ರೀಸಿನಲ್ಲಿ ಶಾಂತಿ ಕಾಲ ಮುಗಿದು ಹೋಯಿತು. ಪೆಲೊಪೊನೇಷಿಯನ್ ಯುದ್ಧ ನಡೆದು, ತಾವು ಮೇಲು ತಾವು ಮೇಲು ಎಂದು ಗ್ರೀಕ್ ಸಂಸ್ಥಾನಗಳಲ್ಲಿ ಬಹು ಕಾಲ ನಿರರ್ಥಕವಾದ

ಒಳಜಗಳ ನಡೆಯಿತು. ಆದರೂ ಅಥೆನ್ಸಿನ ಬೌದ್ಧಿಕ ಜೀವನಕ್ಕೆ ಪೆರಿಕ್ಲಿಸನಿಂದ ಬಂದ ಪ್ರೋತ್ಸಾಹ ಆತನ ಮರಣಾನಂತರವೂ ಮುಂದುವರೆಯಿತು. ರಾಜಕೀಯ ಜೀವನ ಕೆಟ್ಟುಹೋದರೂ ಮಾನವರ ಮನಸ್ಸಿಗೆ ನಿರುತ್ಸಾಹ ತೋರುವುದರ ಬದಲು ಉತ್ತೇಜನವೇ ಉಂಟಾದಂತೆ ಎನಿಸುತ್ತದೆ.

ಪೆರಿಕ್ಲಿಸನ ಕಾಲಕ್ಕಿಂತ ಬಹು ಮುಂಚಿನಿಂದಲೂ ಗ್ರೀಸಿನಲ್ಲಿ ಚರ್ಚೆಮಾಡುವ ಕಲೆಗೆ ಬಹು ಪ್ರಾಮುಖ್ಯತೆ ಇದ್ದಿತು. ಗ್ರೀಕ್ ಸಂಪ್ರದಾಯದಲ್ಲಿದ್ದ ವಿಶಿಷ್ಟರೀತಿಯ ವ್ಯಕ್ತಿಸ್ವಾತಂತ್ರ್ಯವೇ ಇದಕ್ಕೆ ಕಾರಣವಾಗಿತ್ತು. ಯಾವುದೇ ವಿಷಯದ ಬಗ್ಗೆ ಅಂತಿಮ ನಿರ್ಧಾರಮಾಡುವ ಹಕ್ಕು ದೊರೆಗಳಿಗೂ ಇರುತ್ತಿರಲಿಲ್ಲ, ಪುರೋಹಿತವರ್ಗಕ್ಕೂ ಇರುತ್ತಿರಲಿಲ್ಲ; ಸಾಮಾನ್ಯ ಜನರ ಅಥವಾ ಜನ ನಾಯಕರ ಸಭೆಗೆ ಮಾತ್ರ ಇರುತ್ತಿತ್ತು. ಇವರಿಂದ ವಾಗ್ವೈಖರಿಗೂ ವಾದ ಸಾಮರ್ಥ್ಯಕ್ಕೂ ಬಹು ಪ್ರಾಮುಖ್ಯ ಬಂದಿತು. ಹೀಗಾಗಿ ಭಾಷಣ ಕಲೆಯಲ್ಲಿ ಯುವಕರನ್ನು ತರಬೇತು ಮಾಡುವುದಕ್ಕೋಸರ ಸೋಫಿಸ್ಟರೆಂಬ ಹೊಸ ಬಗೆಯ ಶಿಕ್ಷಕರ ಒಂದು ವರ್ಗ ಹುಟ್ಟಿಕೊಂಡಿತು. ಆದರೆ ವಿಷಯ ಜ್ಞಾನವಿಲ್ಲದೆ ತರ್ಕಮಾಡುವುದು ಸಾಧ್ಯವಿಲ್ಲವಾದುದರಿಂದ ಜ್ಞಾನಾರ್ಜನೆ ಮುಂದು ವರಿಯಿತು. ಸೋಫಿಸ್ಟರ ಚಟುವಟಿಕೆಗಳು ಮತ್ತು ಪ್ರತಿಸ್ಪರ್ಧೆಗಳ ಫಲವಾಗಿ ಸಹಜವಾಗಿಯೇ ಶೈಲಿ, ಯೋಜನಾ ವಿಧಾನಗಳು ಮತ್ತು ವಾದಗಳ ಸಮಂಜಸತೆಗಳ ಕಡೆ ಗಮನ ಹೊರಳಿ ಇವುಗಳನ್ನು ಜನರು ಆಳವಾಗಿ ಅಧ್ಯಯನ ಮಾಡಿದರು. ಪೆರಿಕ್ಲಿಸ್ ಮರಣ ಹೊಂದಿದ ಕಾಲದಲ್ಲಿ ಸಾಕ್ರೆಟಿಸನೆಂಬಾತನು ಸರಿಯಲ್ಲದ ವಾದ ಸರಣಿಯನ್ನು ಟೀಕಿಸಿ ಖಂಡಿಸುವುದರಲ್ಲಿ ಶಕ್ತನೆಂದು ಹೆಸರು ಪಡೆದಿದ್ದನು. ತೀಕ್ಷ್ಣಬುದ್ಧಿಯ ಯುವಕರನೇಕರು ಸಾಕ್ರೆಟಿಸನ ಸುತ್ತಲೂ ಸೇರಿಕೊಂಡರು. ಸೋಫಿಸ್ಟರ ಬೋಧನೆಯಲ್ಲಿ ಹೆಚ್ಚುಭಾಗ ದುರ್ಮಾರ್ಗದವೇ ಆಗಿರುತ್ತಿತ್ತು. ಅಂತೂ ಕಡೆಗೆ ಜನಗಳ ಮನಸ್ಸನ್ನು ಕೆಡಿಸುತ್ತಿದ್ದನೆಂಬ ಆಪಾದನೆಯ ಮೇಲೆ ಸಾಕ್ರೆಟಿಸನಿಗೆ ಮರಣ ದಂಡನೆ ವಿಧಿಸಲಾಯಿತು (ಕ್ರಿ.ಪೂ. 399). ಅಂದಿನ ಗ್ರೀಕರಲ್ಲಿ ಮರಣ ದಂಡನೆಗೊಳಗಾದವರು ತಮ್ಮ ಮನೆಯಲ್ಲಿಯೇ ಬಂಧುಮಿತ್ರರ ಮಧ್ಯೆ ಹೆಮ್ಲಾಕ್ ಎಂಬ ಸಸ್ಯದಿಂದ ತಯಾರಿಸಿದ ವಿಷವನ್ನು ಕುಡಿದು ಸಾಯಬೇಕೆಂಬ ಗೌರವಯುತ ಪದ್ಧತಿ ಇದ್ದಿತು. ಅದೇ ರೀತಿಯಲ್ಲಿ ಸಾಕ್ರೆಟಿಸ್ ಮರಣ ಹೊಂದಿದನು. ಆದರೆ ಇದರಿಂದೇನೂ ಜನರ ಮನಸ್ಸು ಕದಡಿಹೋಗುವುದು ನಿಂತುಹೋಗಲಿಲ್ಲ. ಆತನ ಶಿಷ್ಯರು ಈ ಕಾರ್ಯವನ್ನು ಮುಂದುವರಿಸಿದರು.

ಅವರಲೆಲ್ಲಾ ಮುಖ್ಯವಾದವನು ಪ್ಲೇಟೋ (ಕ್ರಿ.ಪೂ. 427ರಿಂದ 347). ಈತನು "ಅಕ್ಯಾಡೆಮಿಯ ತೋಪಿ" ನಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸಲಾರಂಭಿಸಿದನು. ಈತನ ಬೋಧನೆಯನ್ನು ಮುಖ್ಯವಾಗಿ, ಎರಡು ಭಾಗಮಾಡಬಹುದು: (1) ಮಾನವನ ಯೋಚನೆಯ ಮೂಲಗಳು ಮತ್ತು ಮಾರ್ಗಗಳು. (2) ರಾಜಕೀಯ ಸಂಸ್ಥೆಗಳ ವಿಷಯ ಪರಿಶೀಲನೆ. 'ಯುಟೋಪಿಯ'ವೊಂದನ್ನು ಬರೆದವರಲ್ಲಿ ಈತನೇ ಮೊದಲಿಗನು ; 'ಯುಟೋಪಿಯ' ಎಂದರೆ ಯಾವುದೇ ಕಾಲದಲ್ಲಿನ ಜನಜೀವನಗಳೆಲ್ಲದಕ್ಕಿಂತಲೂ ಉತ್ತಮವಾದ ಬೇರೆ ಒಂದು ಜನ ಜೀವನವನ್ನು ಕಲ್ಪಿಸಿಕೊಂಡು ಚಿತ್ರಿಸಿರುವ ಗ್ರಂಥ. ಅಂದಿನವರೆಗೂ ಎಲ್ಲರೂ ಮೊದ ಲಿಂದ ಬಂದ ಸಮಾಜ ಸಂಪ್ರದಾಯಗಳು ಮತ್ತು ಪದ್ಧತಿಗಳನ್ನು ಯಾವ ಸಂದೇಹವೂ

ಇಲ್ಲದೆ ಒಪ್ಪಿಕೊಳ್ಳುತ್ತಿದ್ದರು. ಈ ಗ್ರಂಥ ಮಾನವನ ಮನಸ್ಸು ಅದುವರೆಗೂ ಎಂದೂ ಇಲ್ಲದಿದ್ದ ಧೈರ್ಯವನ್ನು ತಳೆಯಿತೆಂಬುದಕ್ಕೆ ಸಾಕ್ಷಿ. "ಅನೇಕ ಸಾಮಾಜಿಕ ಮತ್ತು ರಾಜಕೀಯ ಕೆಡುಕುಗಳನ್ನು ನೀವೇ ತಿದ್ದಿಕೊಳ್ಳಬಲ್ಲಿರಿ. ಅವುಗಳನ್ನು ಬದಲಾಯಿಸಲು ನೀವು ಮನಸ್ಸುಮಾಡಿ ಧೈರ್ಯ ಮಾಡಬೇಕು. ನಿಧಾನವಾಗಿ ಪರಿಶೀಲಿಸಿ ಒಂದು ಯೋಜನೆ ಹಾಕಿಕೊಂಡಲ್ಲಿ ಈಗ ನೀವು ಜೀವಿಸುತ್ತಿರುವುದಕ್ಕಿಂತ ಉತ್ತಮ ರೀತಿಯಲ್ಲಿ ಜೀವನ ನಡಸಬಲ್ಲಿರಿ, ನಿಮ್ಮ ಶಕ್ತಿ ಎಷ್ಟೆಂದು ನಿಮಗೇ ತಿಳಿಯದು" ಎಂದು ಪ್ಲೇಟೋ ಮುಚ್ಚುಮರೆಯಿಲ್ಲದೆ ನೇರವಾಗಿ ಜನಂಗೆ ಹೇಳಿದನು. ಇಂತಹ ಧೈರ್ಯದ ಮನೋಭಾವ ಇಂದೂ ಸಹ ಸಾಮಾನ್ಯಜನತೆಯ ಮಟ್ಟಕ್ಕೆ ಮೀರಿದುದಾಗಿದೆ. 'ರಿಪಬ್ಲಿಕ್' ಈತನು ಮೊದಲು ಬರೆದ ಪುಸ್ತಕಗಳಲ್ಲೊಂದು. ಇದರಲ್ಲಿ ಶ್ರೀಮಂತ ಪ್ರಭುತ್ವವುಳ್ಳ ಆದರೆ ಪ್ರತಿಯೊಬ್ಬನೂ ತನ್ನ ಶಕ್ತಿಯಿದ್ದಷ್ಟು ದುಡಿದು ತನಗೆ ಅವಶ್ಯಕವಿದ್ದಷ್ಟು ಮಾತ್ರವೇ ಪ್ರತಿಫಲ ಪಡೆಯಬೇಕೆಂಬ ಕಮ್ಯೂನಿಸ್ಟ್ ತತ್ತ್ವವನ್ನು ಪಾಲಿಸುವಂತಹ ಕನಸಿನ ರಾಜ್ಯವನ್ನು ಈತನು ವರ್ಣಿಸಿದ್ದಾನೆ. "ನ್ಯಾಯ ನಿಯಮಗಳು" (Laws) ಎಂಬ ಮತ್ತೊಂದು ಅಂತಹ ಪುಸ್ತಕವನ್ನು ಈತನು ಬರೆದು ಮುಗಿಸುವ ಮುನ್ನವೇ ತೀರಿಕೊಂಡನು. ಇದು ಸ್ವಪ್ನರಾಜ್ಯವೊಂದರ ಕಾನೂನುಗಳ ವ್ಯವಸ್ಥೆಯನ್ನು ವರ್ಣಿಸುವುದಾಗಿತ್ತು.

ಪ್ಲೇಟೋವಿನ ಅನಂತರ ಅವನ ಶಿಷ್ಯ ಅರಿಸ್ಟಾಟಲ್ ಹೀಗೆಯೇ ಮನುಷ್ಯನ ಯೋಚನಾಮಾರ್ಗಗಳನ್ನು ಮತ್ತು ರಾಜಕೀಯ ವ್ಯವಸ್ಥೆಗಳನ್ನು ವಿಮರ್ಶಿಸುವ ಕಾರ್ಯಗಳನ್ನು ಮುಂದುವರಿಸಿದನು. ಈತನು ಅಥೆನ್ಸಿನ ಲೈಸೀಯಂನಲ್ಲಿ ತನ್ನ ಶಾಲೆಯನ್ನು ನಡೆಸುತ್ತಿದ್ದನು. ಈತನು ಮ್ಯಾಸಿಡೋನಿಯದ ಸ್ಟಾಗಿರಾ ಪಟ್ಟಣದವನು. ಈತನ ತಂದೆ ಮೆಸಿಡೋನಿಯ ರಾಜನ ವೈದ್ಯನಾಗಿದ್ದನು. ಅರಿಸ್ಟಾಟಲ್ ಕೆಲವು ಕಾಲ ರಾಜಕುಮಾರ ಅಲೆಕ್ಸಾಂಡರನ ಗುರುವಾಗಿದ್ದನು. ಅಲೆಕ್ಸಾಂಡರನ ಮಹತ್ಸಾಧನೆಗಳನ್ನು ಮುಂದೆ ಹೇಳಲಾಗುವುದು. ಮಾನವನ ಮನಸ್ಸು ಹೇಗೆ ಯೋಚಿಸುತ್ತದೆ ಎಂಬುದನ್ನು ಚೆನ್ನಾಗಿ ಪರಿಶೀಲಿಸಿ ಅರಿಸ್ಟಾಟಲ್ ತರ್ಕಶಾಸ್ತ್ರವನ್ನು ಬಹುಮುಂದಕ್ಕೆ ತಂದನು. ಮುಂದೆ ಸಾವಿರದ ಐನೂರು ವರ್ಷಗಳು ಅಥವಾ ಅದಕ್ಕೂ ಹೆಚ್ಚುಕಾಲ—ಅಂತೂ ಮಧ್ಯಯುಗದ ಪಂಡಿತರು ಈ ವಿಷಯವನ್ನು ತಿರುಗಿ ಅಧ್ಯಯನಮಾಡುವವರೆಗೂ—ಈ ಶಾಸ್ತ್ರ ಇದಕ್ಕಿಂತ ಮುಂದಕ್ಕೆ ಹೋಗಲಿಲ್ಲ. ಕಾಲ್ಪನಿಕ ರಾಜ್ಯಗಳನ್ನು ವರ್ಣಿಸುವ ಗೋಜಿಗೆ ಇವನು ಹೋಗಲಿಲ್ಲ. ಪ್ಲೇಟೋ ಹೇಳಿದಂತೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವಷ್ಟು ಶಕ್ತನಾಗಬೇಕಾದಲ್ಲಿ ಮನುಷ್ಯ ಕಲಿಯಬೇಕಾದದ್ದು ಇನ್ನೂ ಬಹಳ ಇದೆಯೆಂದೂ ಅದಕ್ಕೆ ನಿಖರ ಜ್ಞಾನ ಬಹಳ ಮುಖ್ಯವೆಂದೂ ಈತನು ಗ್ರಹಿಸಿ ತಾನು ತಿಳಿದುಕೊಂಡದ್ದನೆಲ್ಲಾ ಒಂದು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿಡುವುದಕ್ಕೆ ಪ್ರಾರಂಭಿಸಿದನು. ಈ ರೀತಿಯ ಜ್ಞಾನಸಂಗ್ರಹಕ್ಕೇ ಈಗ 'ವಿಜ್ಞಾನ' ಎಂದು ಹೆಸರಾಗಿರುವುದು. ನಿಜಾಂಶಗಳನ್ನು ಸಂಗ್ರಹಿಸಲು ಈತನು ಜನರನ್ನು ಬೇರೆ ಬೇರೆಡೆಗಳಿಗೆ ಕಳುಹಿಸಿದನು. ಈತನೇ ಪ್ರಕೃತಿಶಾಸ್ತ್ರದ ಪಿತಾಮಹ. ಅಂತೆಯೇ ರಾಜಕೀಯ ಶಾಸ್ತ್ರದ ತಳಹದಿ ಹಾಕಿದವನೂ ಈತನೇ. ಲೈಸೀಯಂನಲ್ಲಿದ್ದ ಈತನ ಶಿಷ್ಯರು ನೂರೈವತ್ತೆಂಟು ಬೇರೆ ಬೇರೆ ಸಂಸ್ಥಾನಗಳ ರಾಜ್ಯಾಂಗಗಳನ್ನು ಹೋಲಿಸಿ ನೋಡಿದ್ದರು.

ಅಂತೂ ಕ್ರಿ.ಪೂ. 4ನೇ ಶತಮಾನದಲ್ಲಿಯೇ ಆಧುನಿಕ ಕಾಲದ ಚಿಂತಕರಂತಹ ಮನುಷ್ಯರಿದ್ದರೆಂದು ನಾವು ಕಾಣುತ್ತೇವೆ. ಪ್ರಪ್ರಥಮ ಮಾನವನ ಮಗುವಿನಂತಹ ಮನಸ್ಸು ಹಾಗೂ ಸ್ವಪ್ನಜೀವನದ ಸ್ಥಾನದಲ್ಲಿ ಮಾನವನು ಜೀವನದ ಸಮಸ್ಯೆಗಳನ್ನು ನಿಯಮಬದ್ಧವಾದ ರೀತಿಯಲ್ಲಿ ವಿಮರ್ಶಿಸಿ ಎದುರಿಸುವುದು ಇಲ್ಲಿ ತೋರಿಬರುತ್ತದೆ. ವಿಚಿತ್ರ ಭಯಂಕರ ಸಂಕೇತಗಳು ಮತ್ತು ದೇವತೆಗಳು, 'ಟ್ಯಾಬೂ'ನಿಯಮಗಳು, ನಿರ್ಬಂಧಗಳು,ಭಯಗಳು ಒಟ್ಟಿನಲ್ಲಿ ಮಾನವ ನಿರಾತಂಕವಾಗಿ ಯಾವುದೇ ವಿಷಯವಾಗಿ ಯೋಚನೆ ಮಾಡಲು ಪ್ರತಿಬಂಧಕವಾಗಿದ್ದ ಅಡಚಣೆಗಳೆಲ್ಲವೂ ಒಂದೆಡೆ ಸರಿದುಹೋಗಿ ಸ್ವತಂತ್ರವಾದ, ಸ್ಪಷ್ಟವಾದ, ನಿಯಮಬದ್ಧ ಯೋಚನಾಸರಣಿ ಮುಂದೆ ಬಂದಿತು. ಉತ್ತರದ ಕಾಡುಗಳಿಂದ ಬಂದ ಈ ಜನರ ನವೀನ ಸ್ವತಂತ್ರಚಿಂತನ, ಹಳೆಯ ನಾಗರಿಕತೆಗಳ, ದೇವಾಲಯಗಳ ಅಂಧಕಾರವನ್ನು ಭೇದಿಸಿ ಒಳಗೆ ಬೆಳಕು ಪ್ರವೇಶಿಸಲು ಅವಕಾಶಮಾಡಿ ಕೊಟ್ಟಿತು.

26. ಅಲೆಕ್ಸಾಂಡರ್ ಮಹಾಶಯನ ಚಕ್ರಾಧಿಪತ್ಯ

ಕ್ರಿ.ಪೂ. 431ರಿಂದ 404ರ ವರೆಗೂ ಪೆಲೊಪೊನ್ನೇಷಿಯನ್ ಯುದ್ಧದ ಫಲವಾಗಿ ಗ್ರೀಸ್ ಹಾಳಾಗಿಹೋಗಿತ್ತು. ಈ ಸಮಯದಲ್ಲಿ ಗ್ರೀಕರಂತಹ ಜನರು ವಾಸಿಸುತ್ತಿದ್ದ ಗ್ರೀಸಿನ ಉತ್ತರಕ್ಕಿದ್ದ ಮ್ಯಾಸಿಡೋನಿಯ ದೇಶ ಕ್ರಮೇಣ ಶಕ್ತಿಯುತವೂ, ಸುಸಂಸ್ಕೃತವೂ ಆಗುತ್ತಾ ಬಂದಿತು. ಇವರಾಡುತ್ತಿದ್ದ ಭಾಷೆಗೂ ಗ್ರೀಕ್ ಭಾಷೆಗೂ ಬಹಳ ಸಾಮ್ಯವಿತ್ತು. ಮ್ಯಾಸಿಡೋನಿಯನ್ ಕ್ರೀಡಾಸ್ಪರ್ಧಿಗಳು ಹಲವುಬಾರಿ ಒಲಂಪಿಕ್ ಕ್ರೀಡಾಪಂದ್ಯಗಳಲ್ಲಿ ಭಾಗವಹಿಸಿದ್ದುದೂ ಉಂಟು. ಕ್ರಿ.ಪೂ. 359ರಲ್ಲಿ ಶಕ್ತಿವಂತನೂ ದಕ್ಷನೂ ಮಹಾಕಾಂಕ್ಷಿಯೂ ಆದ ಫಿಲಿಪ್ ಎಂಬ ದೊರೆ ಈ ಪುಟ್ಟ ರಾಜ್ಯದ ಅಧಿಪತಿಯಾದನು. ಹಿಂದೆ ಕೆಲವು ಕಾಲ ಈತನು ಗ್ರೀಸಿನಲ್ಲಿ ಒತ್ತೆಯಾಳಾಗಿ ನಿರ್ಬಂಧದಲ್ಲಿಡಲ್ಪಟ್ಟಿದ್ದನು. ಆಗ ಈತನಿಗೆ ಗ್ರೀಕ್ ವಿದ್ಯಾಭ್ಯಾಸ ಸಿಕ್ಕಿತ್ತು. ಗ್ರೀಸೆಲ್ಲಾ ಒಗ್ಗಟ್ಟಾಗಿ ಪರ್ಷ್ಯವನ್ನು ಜಯಿಸಬೇಕೆಂಬ ಹೆರೋಡೋಟಸ್ಸನ ಸಲಹೆ–ಐಸೋಕ್ರೇಟಿಸ್ ಎಂಬಾತನೂ ಇದೇ ವಿಷಯವನ್ನೇ ಒತ್ತಿ ಹೇಳಿದ್ದನು–ಬಹುಶಃ ಈತನಿಗೆ ಗೊತ್ತಿತ್ತು.

ಮೊದಲು ಈತನು ತನ್ನ ರಾಜ್ಯವನ್ನು ವ್ಯವಸ್ಥಿತಗೊಳಿಸಿ ಸೈನ್ಯವನ್ನು ಹೊಸರೀತಿಯಲ್ಲಿ ಸಜ್ಜುಮಾಡಿ ರಾಜ್ಯವನ್ನು ವಿಸ್ತರಿಸತೊಡಗಿದನು. ಇದಕ್ಕೆ ಹಿಂದೆ ಸುಮಾರು ಸಾವಿರ ವರ್ಷಗಳಿಂದಲೂ ಯುದ್ಧಗಳಲ್ಲಿ ರಭಸದಿಂದ ನುಗ್ಗಿ ಬರುವ ಕುದುರೆ ರಥಗಳು ಮತ್ತು ಕೈಕೈಮಿಲಾಯಿಸಿ ಹೋರಾಡುತ್ತಿದ್ದ ಪದಾತಿಗಳನ್ನೇ ಮುಖ್ಯವಾಗಿ ನೆಚ್ಚಿಕೊಂಡಿರುತ್ತಿದ್ದರು. ಸೈನ್ಯದಲ್ಲಿ ಕುದುರೆ ಸವಾರರಿರುತ್ತಿದ್ದರೂ ಅವರೆಲ್ಲಾ ಯಾವ ಶಿಸ್ತೂ ಇಲ್ಲದೆ ಗುಂಪು ಗುಂಪಾಗಿಯೋ ಅಥವಾ ಪ್ರತಿಯೊಬ್ಬನೂ ತನಗಿಷ್ಟಬಂದಂತೆ ಹೋರಾಡುತ್ತಿದ್ದರು. ಫಿಲಿಪ್ ತನ್ನ ಪದಾತಿಗಳ ಒತ್ತಾಗಿ ಸೇರಿಕೊಂಡು ಯುದ್ಧಕ್ಕಿಳಿಯುವಂತೆ ಮಾಡಿದನು. ಇದಕ್ಕೆ ಮ್ಯಾಸಿಡೋನಿಯನ್ ಪಂಕ್ತಿವ್ಯೂಹ (Macedonian phalanx) ಎನ್ನುತ್ತಾರೆ. ಕುದುರೆಗಳ ಮೇಲೇರಿಬರುತ್ತಿದ್ದ ಉತ್ತಮ ವರ್ಗಕ್ಕೆ ಸೇರಿದ ಕಾಲಾಳುಗಳೂ ಸಹ ವ್ಯೂಹರಚಿಸಿಕೊಂಡು ಯುದ್ಧಮಾಡುವಂತೆ ಫಿಲಿಪ್ ತರಬೇತಿಕೊಟ್ಟನು. 'ರಾವುತದಳ' (Cavalry)ವನ್ನು ಮೊದಲು ನಿಯೋಜಿಸಿದವನು ಈತನೇ.

ಫಿಲಿಪ್ ಮತ್ತು ಈತನ ಮಗ ಅಲೆಕ್ಸಾಂಡರ್ ಕೈಗೊಂಡ ಯುದ್ಧಗಳಲ್ಲೆಲ್ಲಾ ಮುಖ್ಯವಾದ ಸೈನ್ಯ ಚಲನೆ ಕುದುರೆ ಸವಾರರದಾಗಿರುತ್ತಿತ್ತು. ಇವರ ಪದಾತಿದಳದ ಪಂಕ್ತಿವ್ಯೂಹ ಎದುರಾಳಿಗಳ ಪದಾತಿ ಸೈನ್ಯವನ್ನು ಹಿಡಿದು ನಿಲ್ಲಿಸುತ್ತಿತ್ತು. ಆಗ ಇವರ ರಾವುತದಳ ಶತ್ರುಸೈನ್ಯದ ಪಕ್ಕದಲ್ಲಿರುತ್ತಿದ್ದ ಕುದುರೆ ಸವಾರರನ್ನು ಕೊಚ್ಚಿಕೊಂಡುಹೋಗಿ ಅವರ ಪದಾತಿದಳದ ಮೇಲೆ ಪಾರ್ಶ್ವದಿಂದಲೂ ಹಿಂದಿನಿಂದಲೂ ಆಕ್ರಮಣ ಮಾಡುತ್ತಿತ್ತು : ಶತ್ರುಗಳ ರಥಗಳಿಗೆ ಹೂಡಿದ ಕುದುರೆಗಳನ್ನು ಇವರ ಬಿಲ್ಲುಗಾರರು ಬಾಣಗಳಿಂದ ಹೊಡೆದು ಕೊಂದು ರಥಗಳು ನಿಷ್ಪ್ರಯೋಜಕವಾಗುವಂತೆ ಮಾಡುತ್ತಿದ್ದರು.

ಇಂತಹ ಹೊಸ ಮಾದರಿ ಸೈನ್ಯದ ಸಹಾಯದಿಂದ ಫಿಲಿಪ್ ತನ್ನ ರಾಜ್ಯವನ್ನು ಥೆಸಲಿ ಮುಖಾಂತರ ಗ್ರೀಸಿನವರೆಗೂ ವಿಸ್ತರಿಸಿದನು. ಕ್ರಿ.ಪೂ. 338ರಲ್ಲಿ ಕೇರೊನಿಯಾ (Chaeronia) ದಲ್ಲಿ ಅಥೆನ್ಸ್ ಮತ್ತು ಅದರ ಸಹಾಯಕರಿಗೂ ಈತನಿಗೂ ನಡೆದ ಕದನದಲ್ಲಿ ಈತನಿಗೇ ಗೆಲುವಾಗಿ ಇಡೀ ಗ್ರೀಸ್ ಈತನ ವಶಕ್ಕೆ ಬಂದಿತು. ಹೆರೋಡೋಟಸ್ಸಿನ ಕನಸು ನನಸಾಗುವ ಕಾಲಬಂದಿತು. ಗ್ರೀಕ್ ಸಂಸ್ಥಾನಗಳೆಲ್ಲವೂ ಸೇರಿ ರಚಿತವಾದ ಮಂಡಲಿಯು ಪರ್ಷಿಯದ ಮೇಲೆ ದಂಡಯಾತ್ರೆ ನಡೆಸುವ ಸಲುವಾಗಿ ಗ್ರೀಕರು ಮತ್ತು ಮ್ಯಾಸಿಡೋನಿಯನ್ನರು ಸೇರಿ ಕಟ್ಟಿದ ಸೈನ್ಯಕ್ಕೆ ಫಿಲಿಪ್ಪನನ್ನು ಮುಖ್ಯ ಸೇನಾಪತಿಯನ್ನಾಗಿ ನೇಮಿಸಿತು. ಬಹುಕಾಲದಿಂದ ಯೋಜಿಸಿದ್ದ ಈ ಸಾಹಸಕೃತ್ಯವನ್ನು ಸಾಧಿಸಲು ಈ ದೊಡ್ಡ ಸೈನ್ಯದ ಮೊದಲ ಪಡೆ ಕ್ರಿ.ಪೂ. 381ರಲ್ಲಿ ಏಷ್ಯಕ್ಕೆ ಹೊರಟಿತು. ಆದರೆ ಈ ಕಾರ್ಯ ಸಾಧಿಸುವುದು ಫಿಲಿಪ್ಪನ ಹಣೆಯಲ್ಲಿ ಬರೆದಿರಲಿಲ್ಲ. ಅಷ್ಟರಲ್ಲೇ ಅವನನ್ನು ಯಾರೋ ಕೊಲೆ ಮಾಡಿಬಿಟ್ಟರು. ಫಿಲಿಪ್ ಎರಡನೆ ಮದುವೆ ಮಾಡಿಕೊಂಡಿದ್ದರಿಂದ ಸಿಟ್ಟಿಗೆದ್ದ ಮೊದಲ ಪತ್ನಿ, ಅಲೆಕ್ಸಾಂಡರನ ತಾಯಿ, ಒಲಂಪಿಯಾಸ್ ಆತನನ್ನು ಕೊಲೆ ಮಾಡಿಸಿದಳೆಂದು ಹೇಳುತ್ತಾರೆ.

ತನ್ನ ಮಗನ ಶಿಕ್ಷಣಕ್ಕಾಗಿ ಫಿಲಿಪ್ ತುಂಬಾ ಆಸಕ್ತಿವಹಿಸಿದ್ದನು. ಆಗ ಪ್ರಪಂಚದಲ್ಲೆಲ್ಲಾ ಶ್ರೇಷ್ಠಜ್ಞಾನಿಯೆಂದೆನಿಸಿದ್ದ ಅರಿಸ್ಟಾಟಲನ್ನು ಅಲೆಕ್ಸಾಂಡರ ಗುರುವಾಗಿ ನೇಮಿಸಿದ್ದಷ್ಟೇ ಅಲ್ಲದೆ ತನ್ನ ಭಾವನೆಗಳನ್ನು ಮಗನಿಗೆ ತಿಳಿಯಪಡಿಸಿ ಆ ಚಿಕ್ಕ ವಯಸ್ಸಿನಲ್ಲಿಯೇ ಮಗನಿಗೆ ಯುದ್ಧದ ಅನುಭವ ಬರುವಂತೆ ಮಾಡಿದ್ದನು. ಕೇರೋನಿಯದ ಕದನದಲ್ಲಿ ಕೇವಲ ಹದಿನೆಂಟು ವರ್ಷ ವಯಸ್ಸಿನ ಅಲೆಕ್ಸಾಂಡರ್ ರಾವುತದಳದ ಅಧಿಪತಿಯಾಗಿ ಯುದ್ಧ ಮಾಡಿದ್ದನು. ಹೀಗಿದ್ದುದರಿಂದಲೇ ಪಟ್ಟಕ್ಕೆ ಬರುವ ವೇಳೆಗೆ ಬರೀ ಇಪ್ಪತ್ತು ವಯಸ್ಸಾಗಿದ್ದರೂ ಅಲೆಕ್ಸಾಂಡರನಿಗೆ ತನ್ನ ತಂದೆಯ ಕಾರ್ಯಗಳೆಲ್ಲವನ್ನೂ ತಕ್ಷಣ ನಿರ್ವಹಿಸಲು ಸಾಧ್ಯವಾಯಿತು. ಪರ್ಷಿಯ ಮೇಲಿನ ದಂಡಯಾತ್ರೆಯನ್ನು ಈತನು ಜಯಪ್ರದವಾಗಿ ನಡೆಸಿದನು.

ಗ್ರೀಸ್ ಮತ್ತು ಮೆಸಿಡೋನಿಯಾಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಈತನಿಗೆ ಎರಡು ವರ್ಷ ಹಿಡಿಯಿತು. ಬಳಿಕ ಕ್ರಿ.ಪೂ. 344ರಲ್ಲಿ ಈತನು ಏಷ್ಯವನ್ನು ಪ್ರವೇಶಿಸಿದನು. ಗ್ರಾನಿಕಸ್ಸಿನ ಕದನದಲ್ಲಿ ತನ್ನ ಸೈನ್ಯಕ್ಕಿಂತ ಸ್ವಲ್ಪ ದೊಡ್ಡದಾದ ಪರ್ಷಿಯನ್ ಸೈನ್ಯವನ್ನು ಸೋಲಿಸಿ ಏಷ್ಯಾಮೈನರಿನ ಅನೇಕ ನಗರಗಳನ್ನು ವಶಮಾಡಿಕೊಂಡನು. ಒಟ್ಟಿನಲ್ಲಿ ಈತನು ಮೊದಲು ಸಮುದ್ರ ತೀರದಲ್ಲಿಯೇ ಮುಂದೆ ಸಾಗಿದನು. ಮೊದಲು ಸಮುದ್ರ ತೀರದ ನಗರಗಳನ್ನು ಗೆದ್ದು

ಅವುಗಳಲ್ಲಿ ತನ್ನ ಸೈನ್ಯ ಪಡೆಗಳನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿತ್ತು. ಏಕೆಂದರೆ ಟೈರ್ ಮತ್ತು ಸಿಡನ್ನಿನ ನೌಕಾಪಡೆಗಳು, ಅಂದರೆ ಸಮುದ್ರ ಮಾರ್ಗಗಳೆಲ್ಲಾ ಪರ್ಷಿಯನ್ನರ ಕೈಯ್ಯಲ್ಲಿದ್ದುವು, ಸಮುದ್ರತೀರದ ನಗರ ಯಾವುದನ್ನಾದರೂ ಹಿಂದೆ ಹಾಗೆಯೇ ಶತ್ರುಗಳ ಕೈಯಲ್ಲಿ ಬಿಟ್ಟು ಮುಂದೆ ಸಾಗಿದಲ್ಲಿ ಶತ್ರುಗಳು ಸಮುದ್ರ ಮಾರ್ಗವಾಗಿ ತಮ್ಮ ಪಡೆಗಳನ್ನು ತಂದು ಗ್ರೀಕ್ ಸೈನ್ಯಕ್ಕೆ ಆ ಮಾರ್ಗವಾಗಿ ಏನೂ ಸಹಾಯ ಒದಗದಂತೆ ಮಾಡುವ ಸಂಭವವಿತ್ತು. ಕ್ರಿ.ಪೂ 333ರಲ್ಲಿ ಐಸಸ್‌ನಲ್ಲಿ ಮೂರನೆಯ ಡೇರಿಯಸ್ಸನ ದೊಡ್ಡ ಸೈನ್ಯವನ್ನು ಅಲೆಕ್ಸಾಂಡರ್ ನುಚ್ಚುನುರಿ ಮಾಡಿದನು. ನೂರೈವತ್ತು ವರ್ಷಗಳಿಗೂ ಮುಂಚೆ ಡಾರ್ಡನೆಲ್ಸ್‌ನ್ನು ದಾಟಿ ಗ್ರೀಸಿಗೆ ನುಗ್ಗುವ ಕ್ಷಯರ್ಷನ ಸೈನ್ಯದಂತೆ ಇದೂ ಸಹ ಅನೇಕ ರೀತಿಯ ಜನರನ್ನು ಕೂಡಿಸಿ ಮಾಡಿದ ಸೈನ್ಯವಾಗಿತ್ತು. ಅಲ್ಲದೆ ಇದರೊಡನೆ ಆಸ್ಥಾನಿಕರು, ಡೇರಿಯಸ್ಸನ ಅಂತಃಪುರದ ಸ್ತ್ರೀಯರು, ಸೈನ್ಯವನ್ನು ಹಿಂಬಾಲಿಸಿ ಹೋಗುತ್ತಿದ್ದ ಅಪ್ರಯೋಜಕ ಜನರು ಅನೇಕರು ಇರುತ್ತಿದ್ದುದರಿಂದ ಸರಾಗವಾಗಿ ಮುಂದೆ ಮುಂದೆ ಸಾಗಲು ವೃಥಾ ಅಡಚಣೆಯಾಗುತ್ತಿತ್ತು. ಸಿಡನ್ ಬೇಗನೆ ಅಲೆಕ್ಸಾಂಡರನಿಗೆ ಶರಣಾಯಿತು. ಆದರೆ ಟೈರ್ ಅಷ್ಟು ಸುಲಭವಾಗಿ ಜಗ್ಗಲಿಲ್ಲ. ಅಂತೂ ಕೊನೆಗೆ ಈ ನಗರವೂ ಸೋತು ಹೋಯಿತು. ಅಲೆಕ್ಸಾಂಡರನ ಸೈನಿಕರು ಇದನ್ನು ಕೊಳ್ಳೆಹೊಡೆದು ಹಾಳು ಮಾಡಿದರು. ಮುಂದೆ ಗಾಜಾಕ್ಕೂ ಇದೇ ಗತಿಯೇ ಆಯಿತು. ಕ್ರಿ.ಪೂ. 332ರ ಕೊನೆಗೆ ಅಲೆಕ್ಸಾಂಡರ್ ಈಜಿಪ್ಟನ್ನು ಪ್ರವೇಶಿಸಿ ಅದನ್ನು ಪರ್ಷಿಯನ್ನರ ಕೈಯಿಂದ ಕಿತ್ತುಕೊಂಡನು.

ಬಳಿಕ ಈಜಿಪ್ಟಿನ ಅಲೆಕ್ಸಾಂಡ್ರೆಟ್ಟಾ ಮತ್ತು ಅಲೆಕ್ಸಾಂಡ್ರಿಯಗಳಲ್ಲಿ ಈತನು ದೊಡ್ಡ ದೊಡ್ಡ ಪಟ್ಟಣಗಳನ್ನು ಕಟ್ಟಿದನು. ಭೂಮಾರ್ಗವಾಗಿಯೇ ಇವುಗಳಿಗೆ ಸುಲಭವಾಗಿ ಹೋಗುವ ಹಾಗಿದ್ದುದರಿಂದ ಇವುಗಳಲ್ಲಿ ಜನ ದಂಗೆಯೇಳುವ ಹಾಗಿರಲಿಲ್ಲ. ಫೀನಿಷಿಯನ್ ನಗರಗಳ ಮೂಲಕ ನಡೆಯುತ್ತಿದ್ದ ವ್ಯಾಪಾರವೆಲ್ಲಾ ಇವುಗಳ ಮುಖಾಂತರ ನಡೆಯಲು ಮೊದಲಾಯಿತು. ಇದೇ ಸಂದರ್ಭದಲ್ಲಿ ಪಶ್ಚಿಮ ಮೆಡಿಟರೇನಿಯನ್ ಪ್ರದೇಶಗಳಲ್ಲಿದ್ದ ಫೀನಿಷಿಯನ್ನರು ಇದ್ದಕ್ಕಿದ್ದಂತೆ ಕಣ್ಮರೆಯಾಗಿ ಹೋಗಿ ಹೊಸ ವಾಣಿಜ್ಯ ಕೇಂದ್ರಗಳಾದ ಅಲೆಕ್ಸಾಂಡ್ರಿಯ ಮತ್ತಿತರ ಅಲೆಕ್ಸಾಂಡರ್ ಸ್ಥಾಪಿಸಿದ ನಗರಗಳಲ್ಲಿ ಇದ್ದಕ್ಕಿದ್ದಂತೆ ಯಹೂದ್ಯರು ತಲೆ ಯೆತ್ತಿಕೊಂಡರು.

ಕ್ರಿ.ಪೂ. 331ರಲ್ಲಿ ಅಲೆಕ್ಸಾಂಡರ್ ಈಜಿಪ್ಟಿನಿಂದ ಹೊರಟಿದ್ದು ಬೇಬಿಲಾನ್ ಕಡೆಗೆ ನಡೆದನು. ಹಿಂದೆ ಥಾಥ್ಮೆಸ್, ರಾಮೆಸೆಸ್ ಮತ್ತು ನೇಕೊರವರೂ ಹೀಗೆಯೇ ಮಾಡಿದ್ದರು. ಆದರೆ ಈತನು ಟೈರ್ ಪಟ್ಟಣದ ಮಾರ್ಗವಾಗಿ ಹೊರಟನು. ಜನರ ನೆನಪಿನಿಂದ ಆಗಲೇ ಮರೆಯಾಗಿ ಹೋಗಿದ್ದ ನಿನೆವೆ ಪಟ್ಟಣದ ಪಾಳಿನ ಬಳಿ ಅರ್ಬೇಲಾ (Arbela) ದಲ್ಲಿ ಡೇರಿಯಸ್ಸನಿಗೂ ಈತನಿಗೂ ಈ ದಂಡಯಾತ್ರೆಯ ನಿರ್ಣಾಯಕ ಕದನ ನಡೆಯಿತು. ಪರ್ಷಿಯನ್ ರಥಗಳ ರಭಸದ ನುಗ್ಗಾಟ ಸಫಲವಾಗಲಿಲ್ಲ. ಮ್ಯಾಸಿಡೋನಿಯನ್ ರಾವುತದಳದ ಧಾಳಿ ಪರ್ಷಿಯನ್ನರ ದೊಡ್ಡ ಸೈನ್ಯವನ್ನು ಒಡೆದು ಚೆದುರಿಸಿತು. ಪದಾತಿ ವ್ಯೂಹ ಈ ಚದುರಿದ ಸೈನ್ಯವನ್ನು ಸೋಲಿಸಿ ಕಾರ್ಯವನ್ನು ಪೂರ್ತಿ ಮುಗಿಸಿತು. ಆಕ್ರಮಣಕಾರರನ್ನು ತಿರುಗಿ ಎದುರಿಸುವ

ಪ್ರಯತ್ನ ಮಾಡದೆ ಡೇರಿಯಸ್ ಉತ್ತರ ದಿಕ್ಕಿಗೆ ಮೀಡರ ದೇಶಕ್ಕೆ ಓಡಿ ಹೋದನು. ಇನ್ನೂ ಪ್ರಮುಖ ನಗರವೆಂದೆನಿಸಿದ್ದ ಬೇಬಿಲಾನಿಗೂ ಬಳಿಕ ಸೂಸ ಮತ್ತು ಪರ್ಸೆಪೋಲಿಸ್‌ಗೂ ಅಲೆಕ್ಸಾಂಡರ್ ನಡೆದನು. ಪರ್ಸೆಪೋಲಿಸ್‌ನಲ್ಲಿ ಮದ್ಯಪಾನದ ಮತ್ತಿನಲ್ಲಿದ್ದಾಗ ''ರಾಜರ ರಾಜ'' ಡೇರಿಯಸ್ಸಿನ ಅರಮನೆಗೆ ಬೆಂಕಿಯಿಡಿಸಿ ಸುಟ್ಟುಬಿಟ್ಟನು.

ಇನ್ನು ಮುಂದೆ ಪರ್ಷಿಯನ್ ಸಾಮ್ರಾಜ್ಯದ ತುತ್ತ ತುದಿಯವರೆಗೆ ಹೋಗಿ ಮಧ್ಯ ಏಷ್ಯಾವನ್ನು ಅಲೆಕ್ಸಾಂಡರ್ ವಶಪಡಿಸಿಕೊಂಡನು. ಆತನ ದಂಡಯಾತ್ರೆಯು ಈ ಭಾಗವನ್ನು ದಂಡಯಾತ್ರೆ ಎನ್ನುವುದಕ್ಕಿಂತ ಬರಿಯ ''ಮಿಲಿಟರಿ ಪ್ರದರ್ಶನ'' ಎನ್ನಬಹುದಷ್ಟೆ. ಮೊದಲು ಈತನು ಉತ್ತರಕ್ಕೆ ತಿರುಗಿ ಡೇರಿಯಸ್ಸನನ್ನು ಬೆನ್ನಟ್ಟಿಕೊಂಡು ಹೋದನು. ಒಂದು ದಿನ ಬೆಳಗಿನ ಜಾವದ ಹೊತ್ತಿಗೆ ತನ್ನ ಆಸ್ಥಾನಿಕರಿಂದ ಕೊಲ್ಲಲ್ಪಟ್ಟು ರಥದಲ್ಲಿ ಸಾಯುತ್ತಾ ಬಿದ್ದಿದ್ದ ಡೇರಿಯಸ್ಸನನ್ನು ಇವರು ಕಂಡರು. ಗ್ರೀಕ್ ಸೈನ್ಯದ ಮೊದಲಭಾಗ ಹತ್ತಿರ ಬಂದಾಗ ಜೀವ ವಿದ್ದರೂ ಅಲೆಕ್ಸಾಂಡರ್ ಬರುವ ಹೊತ್ತಿಗೆ ಡೇರಿಯಸ್ ಮೃತಪಟ್ಟಿದ್ದನು. ಮುಂದೆ ಕ್ಯಾಸ್ಪಿಯನ್ ಸಮುದ್ರದ ತೀರದಲ್ಲಿ ಮುಂದುವರಿದು ಪಶ್ಚಿಮ ತುರ್ಕಿಸ್ಥಾನದ ಪರ್ವತಗಳನ್ನೇರಿ ಹೇರಾತ್ (ಈ ಪಟ್ಟಣವನ್ನು ಈತನೆ ಸ್ಥಾಪಿಸಿದ್ದು) ಮತ್ತು ಕಾಬೂಲ್ ಮಾರ್ಗವಾಗಿ ಖೈಬರ್ ಕಣಿವೆ ಮೂಲಕ ಈತ ಇಂಡಿಯಾದೇಶಕ್ಕೆ ಬಂದನು. ಸಿಂಧೂ ನದಿ ತೀರದಲ್ಲಿ ಭಾರತೀಯ ದೊರೆ ಪುರೂರವನೊಂದಿಗೆ ದೊಡ್ಡ ಕದನವಾಯಿತು. ಮೆಸಿಡೋನಿಯಾದ ಸೈನ್ಯ ಇಲ್ಲಿಯೇ ಮೊಟ್ಟ ಮೊದಲಬಾರಿ ಆನೆಗಳನ್ನು ಕಂಡು ಅವುಗಳನ್ನು ಸೋಲಿಸಿದರು. ಕೊನೆಗೆ ಹಡಗುಗಳನ್ನು ಕಟ್ಟಿ ಕೊಂಡು ಸಿಂಧೂನದಿಯ ಮಾರ್ಗವಾಗಿ ಸಮುದ್ರ ತೀರವನ್ನು ಸೇರಿ ಅಲ್ಲಿಂದ ಬೆಲೂಚಿಸ್ಥಾನದ ತೀರದಲ್ಲಿ ನಡೆಯುತ್ತಾ ಆರು ವರ್ಷಗಳ ನಂತರ ಎಲ್ಲರೂ ಸೂಸ ಪಟ್ಟಣವನ್ನು ಸೇರಿದರು. ಇನ್ನು ಮುಂದೆ ತಾನು ಗದ್ದಿದ್ದ ಈ ವಿಶಾಲ ಸಾಮ್ರಾಜ್ಯವನ್ನು ರೂಢಿಸುವ ಕಾರ್ಯಕ್ಕೆ ಅಲೆಕ್ಸಾಂಡರ್ ತೊಡಗಿದನು. ಹೊಸ ಪ್ರಜೆಗಳನ್ನು ಪ್ರೀತಿಯಿಂದ ಗೆಲ್ಲಬೇಕೆಂಬುದು ಈತನ ಆಶಯವಾಗಿತ್ತು. ಇದಕ್ಕಾಗಿ ಪರ್ಷಿಯನ್ ರಾಜರುಗಳ ಉಡುಪನ್ನೂ ತಲೆ ಕಿರೀಟವನ್ನೂ ಈತನು ಧರಿಸಿಕೊಂಡನು. ಮೆಸಿಡೋನಿಯನ್ ಸೇನಾಪತಿಗಳು ಇದಕ್ಕೆ ಹೊಟ್ಟೆಕಿಚ್ಚುಪಟ್ಟು ಈತನಿಗೆ ಬಹಳ ತೊಂದರೆಕೊಟ್ಟರು. ಮೆಸಿಡೋನಿಯನ್ ಅಧಿಕಾರಿಗಳು ಪರ್ಷಿಯನ್ ಮತ್ತು ಬೇಬಿಲೋನಿಯನ್ ಮಹಿಳೆಯರುಗಳನ್ನು ವಿವಾಹಮಾಡಿಕೊಳ್ಳುವಂತೆ ಈತನು ಏರ್ಪಾಡು ಮಾಡಿದನು. ''ಪಶ್ಚಿಮಪೂರ್ವ''ಗಳ ವಿವಾಹ ಆಗಬೇಕೆಂದು ಈತನ ಇಚ್ಛೆಯಾಗಿತ್ತು. ಆದರೆ ಈ ಏಕೀಕರಣವನ್ನು ಪೂರ್ತಿ ನನಸಾಗಿ ಮಾಡುವುದು ಈತನ ಭವಿಷ್ಯದಲ್ಲಿರಲಿಲ್ಲ. ಬೇಬಿಲಾನಿನಲ್ಲಿ ಒಂದು ಸಲ ಈತನು ಮಿತಿಮೀರಿ ಮದ್ಯ ಪಾನಮಾಡಿದನಂತರ ಜ್ವರ ಬಂದು ಅದೇ ಕಾರಣವಾಗಿ ಕ್ರಿ.ಪೂ. 323ರಲ್ಲಿ ಮರಣ ಹೊಂದಿದನು.

ತಕ್ಷಣವೇ ಈತನ ವಿಶಾಲ ಸಾಮ್ರಾಜ್ಯ ಚೂರುಚೂರಾಗಿ ಹೋಯಿತು. ಸಿಂಧೂನದಿಯಿಂದ ಎಫೆಸಸ್‌ವರೆಗಿನ ಹಳೆಯ ಪರ್ಷಿಯನ್ ಸಾಮ್ರಾಜ್ಯದ ಬಹುಭಾಗವನ್ನು ಈತನ ಸೇನಾಪತಿ ಗಳಲ್ಲೊಬ್ಬನಾದ ಸೆಲ್ಯೂಕಸ್ ವಶಪಡಿಸಿಕೊಂಡನು. ಮತ್ತೊಬ್ಬ ಸೇನಾಪತಿ ಟಾಲೆಮಿ ಈಜಿಪ್ಟನ್ನು ತೆಗೆದು ಕೊಂಡನು, ಆ್ಯಂಟಿಗೊನಸ್ ಮೆಸಿಡೋನಿಯದ ಅಧಿಕಾರ ವಹಿಸಿದನು. ಇವಿಷ್ಟು ಬಿಟ್ಟು

ಉಳಿದ ಭಾಗವೆಲ್ಲ ಆಯಾಯಾ ದೇಶದ ಜನರಲ್ಲಿ ಬಲಿಷ್ಠರಾದವರ ಕೈಸೇರಿತು. ಅಲ್ಲೆಲ್ಲಿಯೂ ಸ್ಥಿರವಾದ ಆಡಳಿತ ಏರ್ಪಡಲಿಲ್ಲ. ಉತ್ತರ ದಿಕ್ಕಿನಿಂದ ಬರಲಾರಂಭಿಸಿದ ಅನಾಗರಿಕರ ತಂಡಗಳ ಹೊಡೆತ ಜೋರಾಗುತ್ತಾ ಹೋಯಿತು. ಕೆಲವು ಕಾಲ ಪ್ರಪಂಚದ ಪರಿಸ್ಥಿತಿ ಹೀಗೆಯೇ ಇತ್ತು. ಕಡೆಗೆ ಪಶ್ಚಿಮದಿಕ್ಕಿನಲ್ಲಿ ಹೊಸ ಶಕ್ತಿಯೊಂದು ಉದ್ಭವಿಸಿ ಹರಿದು ಹಂಚಿಹೋಗಿದ್ದ ಈ ಭಾಗಗಳನ್ನು ಒಂದಾಗುತ್ತಾ ಲೋಪದಂತೆ ಸ್ವಾಧೀನಪಡಿಸಿಕೊಂಡು ಮೊದಲಿನ ಸಾಮ್ರಾಜ್ಯಕ್ಕಿಂತ ಹೆಚ್ಚು ಕಾಲ ಬಾಳಿದಂಥ ನೂತನ ಸಾಮ್ರಾಜ್ಯವನ್ನು ಕಟ್ಟಿತು. ಅದೇ ರೋಮನ್ನರು ಕಟ್ಟಿದ ರೋಮನ್ ಸಾಮ್ರಾಜ್ಯ. ಇದರ ವಿಷಯ ಮುಂದೆ ನೋಡೋಣ.

27. ಅಲೆಕ್ಸಾಂಡ್ರಿಯದ "ಮ್ಯೂಸಿಯಂ" ಮತ್ತು ಪುಸ್ತಕಭಂಡಾರ

ಅಲೆಕ್ಸಾಂಡರನ ಕಾಲಕ್ಕೂ ಮುಂಚೆಯೇ ಗ್ರೀಕ್ ವ್ಯಾಪಾರಿಗಳು, ಚಿತ್ರಕಾರರು, ಅಧಿಕಾರಿಗಳು ಮತ್ತು ಸೈನಿಕರು ಪರ್ಷಿಯ ಸಾಮ್ರಾಜ್ಯದ ಬಹು ಭಾಗಗಳಲ್ಲಿ ಹರಡಿದ್ದರು. ಕ್ಷಯರ್ಷ ಮರಣದ ನಂತರ ನಡೆದ ರಾಜವಂಶೀಯರ ಕಲಹಗಳಲ್ಲಿ ಜೆನೊಫೋನ್ (Xenophon)ನ ಮುಂದಾಳುತನದಲ್ಲಿ 10,000 ಗ್ರೀಕ್ ಸಿಪಾಯಿಗಳು ಭಾಗವಹಿಸಿದ್ದರು. ಬೇಬಿಲಾನಿನಿಂದ ಏಷದಲ್ಲಿದ್ದ ಗ್ರೀಕ್ ಭಾಗಗಳಿಗೆ ಅವರು ಹಿಂತಿರುಗಿದ್ದನ್ನು "ಹತ್ತು ಸಾವಿರ ಜನರ ಪುನರಾಗಮನ" ಎಂಬ ಪುಸ್ತಕದಲ್ಲಿ ವರ್ಣಿಸಲಾಗಿದೆ. ಸೈನ್ಯಾಧಿಪತಿಯೊಬ್ಬನು ತಾನು ಭಾಗವಹಿಸಿದ ಯುದ್ಧಗಳ ಬಗ್ಗೆ ಬರೆದ ಪುಸ್ತಕಗಳಲ್ಲಿ ಇದು ಮೊಟ್ಟ ಮೊದಲನೆಯದು. ಆದರೆ ಅಲೆಕ್ಸಾಂಡರನ ವಿಜಯ ಯಾತ್ರೆಯಾಗಿ ಆತನ ಸೈನ್ಯಾಧಿಪತಿಗಳು ಚಕ್ರಾಧಿಪತ್ಯವನ್ನು ಹಂಚಿಕೊಂಡಮೇಲೆಯೇ ಗ್ರೀಕ್‌ಭಾಷೆ, ನಡವಳಿಕೆ ಮತ್ತು ಸಂಸ್ಕೃತಿ ಪುರಾತನ ಸಂಸ್ಕೃತಿಗಳೊಡನೆ ಬೆರೆಯಲು ದೊಡ್ಡ ಉತ್ತೇಜನ ಬಂದಿದ್ದು. ಗ್ರೀಕ್ ಸಂಸ್ಕೃತಿ ಅದೆಷ್ಟು ದೂರದವರೆಗೂ ಹರಡಿತೆಂದರೆ ಮಧ್ಯಏಷ್ಯಾ ಮತ್ತು ವಾಯವ್ಯ ಇಂಡಿಯಾದಲ್ಲಿ ಇಂದಿಗೂ ಅದರ ಕುರುಹುಗಳಿವೆ. ಭಾರತೀಯ ಕಲೆಯ ಮೇಲೆ ಇದು ಆಳವಾದ ಪರಿಣಾಮವನ್ನುಂಟು ಮಾಡಿತು.

ಅನೇಕ ಶತಮಾನಗಳು ಅಥೆನ್ಸ್ ಸಾಂಸ್ಕೃತಿಕ ಮತ್ತು ಕಲಾಕೇಂದ್ರವೆಂಬ ಹಿರಿಮೆಯನ್ನು ಉಳಿಸಿಕೊಂಡಿತ್ತು. ಅಲ್ಲಿಯ ಶಾಲೆಗಳು ಕ್ರಿ.ಶ. 529ರ ವರೆಗೂ—ಅಂದರೆ ಹೆಚ್ಚು ಕಡಿಮೆ ಸಾವಿರ ವರ್ಷಗಳು ನಡೆದುಕೊಂಡು ಬಂದವು. ಆದರೆ ಅಲೆಕ್ಸಾಂಡರ್ ಸ್ಥಾಪಿಸಿದ ಅಲೆಕ್ಸಾಂಡ್ರಿಯನಗರ ಬಹುಬೇಗನೆ ಪ್ರಪಂಚದ ಬೌದ್ಧಿಕ ಜೀವನದ ಕೇಂದ್ರವಾಯಿತು. ಮ್ಯಾಸಿಡೋನಿಯನ್ ಸೇನಾಪತಿ ಟಾಲೆಮಿ ಇಲ್ಲಿ "ಫ್ಯಾರೋ" ಸ್ಥಾನವನ್ನು ಸ್ವೀಕರಿಸಿದನು. ಗ್ರೀಕ್ ಈತನ ಆಸ್ಥಾನದ ಭಾಷೆ ಯಾಯಿತು. ಈತನು ಅಲೆಕ್ಸಾಂಡರಿಗೆ ಬಹು ಆಪ್ತನಾಗಿದ್ದುದರಿಂದ ಅರಿಸ್ಟಾಟಲನ ಭಾವನೆಗಳು ಈತನ ಮನಸ್ಸಿನಲ್ಲೂ ಆಳವಾಗಿ ಬೇರೂರಿದ್ದವು. ಶಕ್ತನೂ ಉತ್ಸಾಹಿಯೂ ಆದ ಈತನು ಜ್ಞಾನಾರ್ಜನೆ ಮತ್ತು ವಿಷಯಾನ್ವೇಷಣೆಗಳಿಗೆ ವಿಶೇಷ ಉತ್ತೇಜನಕೊಟ್ಟನು. ಅಲೆಕ್ಸಾಂಡರನ ದಂಡಯಾತ್ರೆಯನ್ನು ವರ್ಣಿಸಿ ಈತನು ತಾನೇ ಒಂದು ಪುಸ್ತಕವನ್ನೂ ಬರೆದನಂತೆ. ಆದರೆ ಇದು ದುರದೃಷ್ಟವಶಾತ್ ಕಳೆದು ಹೋಗಿದೆ.

ಅರಿಸ್ಟಾಟಲನ ಅನ್ವೇಷಣಾಕಾರ್ಯಗಳಿಗೆ ಅಲೆಕ್ಸಾಂಡರ್ ಬೇಕಾದಷ್ಟು ಹಣ ಒದಗಿಸಿ

ಕೊಟ್ಟಿದ್ದನು. ಆದರೂ ವಿಜ್ಞಾನದ ಅಭಿವೃದ್ಧಿಗೆ ಶಾಶ್ವತವಾದ ವ್ಯವಸ್ಥೆ ಮಾಡಿದನು ಟಾಲಮಿ. "ಮ್ಯೂಸ್"[24] ದೇವಿಯರ ಹೆಸರಲ್ಲಿ ನಿರ್ಮಿತವಾದ ಅಲೆಕ್ಸಾಂಡ್ರಿಯದ ಮ್ಯೂಸಿಯಂನ್ನು ಈತನು ಸ್ಥಾಪಿಸಿದನು. ಎರಡು ಮೂರು ತಲೆಮಾರುಗಳು ಇಲ್ಲಿ ಬಹು ಉನ್ನತ ಮಟ್ಟದ ವಿಜ್ಞಾನ ಕಾರ್ಯನಡೆಯಿತು. ಇಲ್ಲಿನ ಅಸಾಮಾನ್ಯ ವಿಜ್ಞಾನಿ ತಾರಾಮಂಡಲದಲ್ಲಿ ಪ್ರಕಾಶಮಾನರಾಗಿ ವಿರಾಜಿಸಿದವರಲ್ಲಿ ಮುಖ್ಯರಾದವರಿವರು; ಯೂಕ್ಲಿಡ್, ಭೂಮಿಯ ವ್ಯಾಸವನ್ನು ಕೇವಲ ಐವತ್ತು ಮೈಲಿಗಳ ವ್ಯತ್ಯಾಸವಿರುವಂತೆ ನಿರ್ಧರಿಸಿದ ಎರಾಟೊಸ್ತೆನೀಸ್, ಶಂಕುಚ್ಛೇದಗಣಿತದ ವಿಷಯ ಬರೆದ ಅಪೊಲೊನಿಯಸ್, ಮೊದಲಬಾರಿಗೆ ತಾರೆಗಳ ನಕ್ಷೆ ಮತ್ತು ಪಟ್ಟಿಯನ್ನು ತಯಾರಿಸಿದ ಹಿಪ್ಪಾಲಸ್, ಮೊದಲ ಸ್ಟೀಮ್ ಎಂಜಿನನ್ನು ತಯಾರಿಸಿದ ಹಿರೋ. ಸೈರಕ್ಯೂಸಿನ ನಿವಾಸಿಯಾದ ಆರ್ಕಿಮಿಡೀಸ್ ಇಲ್ಲಿಗೆ ಬಂದು ವ್ಯಾಸಂಗ ಮಾಡಿದನು; ಮತ್ತು ಅಮೇಲೆ ಸಹ ಇದರೊಡನೆ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದನು. ಗ್ರೀಕ್ ಶರೀರ ಶಾಸ್ತ್ರಜ್ಞರಲ್ಲಿ ಮುಖ್ಯವಾದ ಹಿರೊಫೈಲಸ್ ಇಲ್ಲಿಯವನೇ. ಈತನು ಪ್ರಾಣಿಗಳ ಶರೀರಛೇದನ ಮಾಡುತ್ತಿದ್ದನಂತೆ.

ಒಂದನೆಯ ಮತ್ತು ಎರಡನೆಯ ಟಾಲೆಮಿಗಳ ಕಾಲದಲ್ಲಿ ಒಂದೆರಡು ತಲೆಮಾರುಗಳ ಕಾಲ ಜ್ಞಾನ ಮತ್ತು ವಿಷಯಾನ್ವೇಷಣೆಯ ಜ್ಯೋತಿ. ಇಲ್ಲಿ ಬಹು ಪ್ರಕಾಶಮಾನವಾಗಿ ಪ್ರಜ್ವಲಿಸಿತು. ತಿರುಗಿ ಕ್ರಿ.ಶ. 16ನೆ ಶತಮಾನದವರೆಗೂ ಪ್ರಪಂಚದಲ್ಲಿ ಜ್ಞಾನಜ್ಯೋತಿ ಹೀಗೆ ಬೆಳಗಲಿಲ್ಲ. ಆದರೆ ಈ ಮುನ್ನಡೆ ಬಹುಬೇಗ ನಿಂತು ಹೋಯಿತು. ಇದಕ್ಕೆ ಹಲವಾರು ಕಾರಣಗಳಿದ್ದಿರಬಹುದು. ಪ್ರೊಫೆಸರ್ ಮಹಾಫಿ (Mahaffy) ಯವರು ಅಭಿಪ್ರಾಯಪಟ್ಟಿರುವಂತೆ ಮ್ಯೂಸಿಯಂ ರಾಜನ ಖಾಸಾ ಸಂಸ್ಥೆಯಾಗಿದ್ದುದ್ದೂ ಇದಕ್ಕೆ ಮುಖ್ಯಕಾರಣವಿರಬೇಕು. ಇದರಲ್ಲಿರುತ್ತಿದ್ದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಫ್ಯಾರೋ ತಾನೇ ಖುದ್ದಾಗಿ ನೇಮಕಮಾಡಿ ಸಂಬಳ ಕೊಡುತ್ತಿದ್ದನು. ಅರಿಸ್ಟಾಟಲನ ಸಹವರ್ತಿಯಾಗಿದ್ದ ಒಂದನೆಯ ಟಾಲೆಮಿ ಫ್ಯಾರೋ ಆಗಿರುವವರೆಗೂ ಈ ವ್ಯವಸ್ಥೆ ಸರಿಯಾಗಿ ನಡೆದುಕೊಂಡು ಬಂದಿತು. ಮುಂದೆ ಬರುಬರುತ್ತಾ ಈತನ ಸಂತತಿಯ ರಾಜರು ಈಜಿಪ್ಟಿನ ಪುರೋಹಿತರ ಪ್ರಭಾವಕ್ಕೆ ಒಳಗಾಗಿ ಅಲ್ಲಿಯ ನಡೆನುಡಿಗಳನ್ನೇ ಕಲಿತರು. ಮ್ಯೂಸಿಯಂನಲ್ಲಿ ನಡೆಯುತ್ತಿದ್ದ ಕಾರ್ಯ ಇವರಿಗೆ ಅರ್ಥವಾಗುತ್ತಲೂ ಇರಲಿಲ್ಲ; ಅದರಲ್ಲಿ ಅವರಿಗೆ ಆಸಕ್ತಿಯೂ ಇರುತ್ತಿರಲಿಲ್ಲ. ಇವರ ಕೈಹಿಡಿತದಲ್ಲಿ ಅನ್ವೇಷಣೆಯ ಚಿಲುಮೆ ಬತ್ತಿಹೋಯಿತು. ಮ್ಯೂಸಿಯಂನಲ್ಲಿ ವೈಜ್ಞಾನಿಕ ಕಾರ್ಯ ಭರದಿಂದ ನಡೆದಿದ್ದು ಕೇವಲ ಒಂದು ಶತಮಾನ ಮಾತ್ರ.

ಒಂದನೆ ಟಾಲೆಮಿ ಜ್ಞಾನಾನ್ವೇಷಣೆಗೆ ಅತ್ಯಂತ ಆಧುನಿಕ ರೀತಿಯಲ್ಲಿ ಉತ್ತೇಜನಕೊಟ್ಟಿದ್ದಷ್ಟೆ ಅಲ್ಲದೆ ಅಲೆಕ್ಸಾಂಡ್ರಿಯದಲ್ಲಿ ಒಂದು ಪುಸ್ತಕ ಭಂಡಾರವನ್ನೂ ಸ್ಥಾಪಿಸಿದನು. ಇದು ಸರ್ವಜ್ಞಾನ ಸಂಗ್ರಹಾಲಯವೂ ಆಗಿರಬೇಕೆಂದು ಆತನ ಉದ್ದೇಶವಾಗಿತ್ತು. ಪುಸ್ತಕಸಂಗ್ರಹ ವಷ್ಟೇ ಅಲ್ಲದೆ ಇಲ್ಲಿ ಗ್ರಂಥಗಳ ನಕಲು ಮಾಡುವುದು, ಅವುಗಳ ಮಾರಾಟ ಎಲ್ಲವೂ ನಡೆಯುತ್ತಿತ್ತು. ಅನೇಕ ನಕಲುದಾರರು ಇಲ್ಲಿ ಸಂತತವಾಗಿ ಗ್ರಂಥಗಳ ಪ್ರತಿಮಾಡುವುದರಲ್ಲಿ ನಿರತರಾಗಿದ್ದರು.

ಇಂದು ನಾವು ನಮ್ಮ ಸುತ್ತಲೂ ಕಾಣುವ ಬೌದ್ಧಿಕ ಜೀವನ ಅಲೆಕ್ಸಾಂಡ್ರಿಯದಲ್ಲಿ ಮೊದಲೆನ್ನಬೇಕು. ಒಂದು ನಿರ್ದಿಷ್ಟ ಕ್ರಮಕ್ಕನುಸಾರವಾಗಿ ವಿಷಯಗಳನ್ನು ಶೇಖರಿಸಿ ಶಿಷ್ಯರಿಗೆ ತಿಳಿಸಿಕೊಡುವುದು ಮೊದಲಾಗಿದ್ದು ಆಗಲೇ. ಮಾನವ ಚರಿತ್ರೆಯಲ್ಲಿ ಅಲೆಕ್ಸಾಂಡ್ರಿಯದ ಮ್ಯೂಸಿಯಂ ಮತ್ತು ಲೈಬ್ರರಿಗಳ ಸ್ಥಾಪನೆ ಸಾಮಾನ್ಯ ಘಟನೆಯಲ್ಲ: ಹೊಸದೊಂದು ಕಲ್ಪದ ನಾಂದಿ ಸ್ಥಾಪನೆ, ನವನಾಗರೀಕತೆಯ ಚರಿತ್ರೆ ಮೊದಲಾಗಿದ್ದು ಆಗಲೇ.

ವಿಜ್ಞಾನ ಸಂಶೋಧನೆ ಮತ್ತು ಬೋಧನೆಗಳೆರಡಕ್ಕೂ ಆಗ ಬಹು ದೊಡ್ಡ ಅಡಚಣೆಗಳಿದ್ದವು. ಮೊದಲನೆಯದಾಗಿ ಕುಲೀನ ಮತದವರಾಗಿರುತ್ತಿದ್ದ ವಿಜ್ಞಾನ ಸಂಶೋಧಕರಿಗೂ ಕೈಕೆಲಸಗಾರರಿಗೂ ಸಮಾಜದಲ್ಲಿ ಏನೂ ಸಂಬಂಧವಿರುತ್ತಿರಲಿಲ್ಲ. ಅಂದು ಲೋಹಗೆಲಸ ಮಾಡುವವರು. ಗಾಜಿನ ಸಾಮಾನುಗಳನ್ನು ಮಾಡುವವರು ಬೇಕಾದಷ್ಟು ಜನ ಇರುತ್ತಿದ್ದರು. ಇವರಿಗೂ ಬೌದ್ಧಿಕ ಜೀವಿಗಳಾಗಿರುತ್ತಿರುತ್ತಿದ್ದ ವಿಜ್ಞಾನಿಗಳಿಗೂ ಪರಸ್ಪರ ಭಾವನೆಗಳ ವಿನಿಮಯ ಇರಲೇ ಇಲ್ಲ. ಸುಂದರ ವರ್ಣಗಳ ಮಣಿಗಳನ್ನೂ ಪಾನಪಾತ್ರೆಗಳನ್ನೂ ಮಾಡುತ್ತಿದ್ದರೂ ಗಾಜು ಕೆಲಸದವರು ತೆಳುಗಾಜಿನ ಫ್ಲಾರೆಂಟೈನ್ ಫ್ಲಾಸ್ಕುಗಳನ್ನಾಗಲೀ ಭೂತಗನ್ನಡಿಗಳನ್ನಾಗಲೀ ಮಾಡುವ ತಂಟೆಗೇ ಹೋಗಲಿಲ್ಲ. ಇವರಿಗೆ ಪಾರದರ್ಶಕವಾದ ಗಾಜನ್ನು ಮಾಡಬೇಕೆಂಬ ಯೋಜನೆಯೇ ಬಂದಂತೆ ತೋರುವುದಿಲ್ಲ. ಬಗೆಬಗೆಯ ಆಯುಧಗಳನ್ನೂ ಒಡವೆಗಳನ್ನೂ ಲೋಹಗೆಲಸದವರು ಮಾಡುತ್ತಿದ್ದರೂ ರಸಾಯನ ಶಾಸ್ತ್ರದಲ್ಲಿ ಉಪಯೋಗಿಸುವ ತಕ್ಕಡಿಯನ್ನು ಮಾಡಲಿಲ್ಲ. ಪ್ರಕೃತಿ ತತ್ತ್ವಜ್ಞಾನಿಗಳು ಅಣುಪರಮಾಣುಗಳು ವಸ್ತುಗಳ ಗುಣಗಳು ಇವುಗಳನ್ನು ಕುರಿತು ಉನ್ನತ ಮಟ್ಟದಲ್ಲಿ ಚಿಂತನೆ ಮಾಡುತ್ತಿದ್ದರೂ ಸಾಮಾನುಗಳಿಗೆ ಬಣ್ಣ ಕಟ್ಟುವುದು, "ಎನಾಮೆಲ್" ಮಾಡುವುದು, ಔಷಧಗಳನ್ನು ತಯಾರಿಸುವುದು ಇಂತಹವುಗಳ ಬಗ್ಗೆ ಪ್ರಾಯೋಗಿಕ ಅನುಭವ ಇವರಿಗಿರುತ್ತಲೇ ಇರಲಿಲ್ಲ. ಪದಾರ್ಥಗಳನ್ನು ಪರೀಕ್ಷಿಸಬೇಕೆಂದು ಇವರಿಗೆ ಏನೂ ಆಸಕ್ತಿ ಇರಲಿಲ್ಲ, ಹೀಗಿದ್ದುದರಿಂದಲೇ ಅಲೆಕ್ಸಾಂಡ್ರಿಯಾದ ಈ ಅಲ್ಪಕಾಲದ ವಿಜ್ಞಾನ ಜೀವನದಲ್ಲಿ ರಸಾಯನ ಶಾಸ್ತ್ರದ ಹೆಸರೇ ಇಲ್ಲ. ಹಾಗೆಯೇ ಸೂಕ್ಷ್ಮದರ್ಶಕಗಳನ್ನೂ ಇವರು ತಯಾರಿಸಲಿಲ್ಲ. ಹಿರೋ ಸ್ಟೀಮ್ ಎಂಜಿನ್ನೊಂದನ್ನು ನಿರ್ಮಿಸಿದರೂ ಏನನ್ನಾದರೂ ಪಂಪ್ ಮಾಡುವುದಕ್ಕಾಗಲೀ ದೋಣಿ ನಡೆಸುವುದಕ್ಕಾಗಲೀ ಮತ್ತೆ ಯಾವುದಾದರೂ ಅಂತಹ ಉಪಯುಕ್ತ ಕೆಲಸ ಮಾಡುವುದಕ್ಕಾಗಲೀ ಇದನ್ನು ಉಪಯೋಗಿಸಲು ಪ್ರಯತ್ನಿಸಲೇ ಇಲ್ಲ. ವೈದ್ಯಶಾಸ್ತ್ರ ಒಂದು ಬಿಟ್ಟರೆ ವಿಜ್ಞಾನದ ಬೇರೆ ವಿಭಾಗಗಳಲ್ಲಿ ಕಾರ್ಯೋಪಯುಕ್ತವಾದ ಅಂಶಗಳು ಎಲ್ಲೋ ಒಂದೆರಡು ಮಾತ್ರ ಕಂಡು ಬರುತ್ತವೆ. ಹೊಸಹೊಸ ಸಲಕರಣೆಗಳನ್ನು ಕಂಡುಹಿಡಿಯಬೇಕೆಂಬ ಉತ್ಸಾಹ, ಆಸಕ್ತಿಗಳು ವಿಜ್ಞಾನದ ಮುನ್ನಡೆಗೆ ಅಲ್ಲಿ ಏನೂ ಚೈತನ್ಯದಾಯಕಗಳಾಗಲಿಲ್ಲ. ಒಂದನೆ ಮತ್ತು ಎರಡನೆ ಟಾಲೆಮಿ ಇವರಿಬ್ಬರ ಬೌದ್ಧಿಕ ಆಸಕ್ತಿ ಮತ್ತು ಕುತೂಹಲ ಪ್ರಚೋದನೆ ಇದ್ದಷ್ಟು ದಿನ ವಿಜ್ಞಾನದ ಕಾರ್ಯ ಚೆನ್ನಾಗಿ ನಡೆದು ಅನಂತರ ಹೆಚ್ಚು ಕಡಿಮೆ ನಿಂತೇ ಹೋಯಿತು. ಮ್ಯೂಸಿಯಂನ ಸಂಶೋಧನೆಗಳ ಫಲಗಳನ್ನು ಹಸ್ತಪ್ರತಿಮಾಡಿಟ್ಟಿದ್ದರೂ ಇವು ಅಷ್ಟೇನೂ ಬಳಕೆಗೆ ಬಾರಲಿಲ್ಲ. ಮುಂದೆ ಬೌದ್ಧಿಕ ಕ್ರಾಂತಿ ಯೂರೋಪಿನ ಪುನರುಜ್ಜೀವನ ಕಾಲದಲ್ಲಿ ವೈಜ್ಞಾನಿಕ ಕುತೂಹಲ ಪುನರ್ಜನ್ಮ ಪಡೆಯುವವರೆಗೂ ಈ ಸಂಶೋಧನೆಗಳು ಮಾನವ ವರ್ಗದಲ್ಲಿ ಪ್ರಸಾರವಾಗಲೇ ಇಲ್ಲ.

ಪುಸ್ತಕಗಳನ್ನು ಮಾಡುವುದರಲ್ಲಿಯೂ ಇಲ್ಲಿಯ ಲೈಬ್ರೆರಿ ಏನನ್ನೂ ಸಾಧಿಸಲಿಲ್ಲ. ಅಲ್ಲಿಯುವರೆಗೆ ''ಪಲ್ಪ್'' ತಯಾರಿಸಿ ಬೇರೆಬೇರೆ ಆಳತೆಗಳಲ್ಲಿ ಕಾಗದ ಮಾಡುವುದು ಗೊತ್ತಿರಲಿಲ್ಲ. ಚೈನಾ ದೇಶದಲ್ಲಿ ಮುಂಚೆ ಕಾಗದವನ್ನು ತಯಾರಿಸಿದ್ದು. ಕ್ರಿ.ಶ. 9ನೇ ಶತಮಾನದವರೆಗೂ ಪಾಶ್ಚಿಮಾತ್ಯರಿಗೆ ಈ ವಿಷಯ ತಿಳಿಯಲಿಲ್ಲ. ಆಡು, ಕುರಿಗಳ ಚರ್ಮದಿಂದ ತಯಾರಿಸಿದ ಪಾರ್ಚಮೆಂಟಿನಿಂದ ಅಥವಾ ಪಾಪಿರಸ್ ಜೊಂಡಿನ ಪಟ್ಟಿಗಳನ್ನು ಒಂದಕ್ಕೊಂದು ಸೇರಿಸಿ ಮಾಡಿದ ಹಾಳೆಗಳಿಂದ ಆಗ ಪುಸ್ತಕಗಳನ್ನು ತಯಾರಿಸಬೇಕಾಗಿತ್ತು. ಇಂತಹ ದೊಡ್ಡ ದೊಡ್ಡ ಹಾಳೆಗಳನ್ನು ಸುರುಳಿ ಸುತ್ತಿಡುತ್ತಿದ್ದರು. ಈ ಸುರುಳಿಗಳನ್ನು ಬಿಚ್ಚುವುದು, ತಿರುಗಿ ಸುತ್ತುವುದು ಏನಾದರೂ ಸಂದೇಹ ಬಂದಾಗ ವಿಷಯ ಪರಾಮರ್ಶೆ (ರೆಫರೆನ್ಸ್) ಗೋಸ್ಕರ ಬೇಕಾದ ಅಂಶಗಳನ್ನು ಹುಡಕುವುದು ಎಲ್ಲಾ ಬಹು ಕಷ್ಟವಾಗುತ್ತಿತ್ತು. ಕಾಗದವಿಲ್ಲದುದರಿಂದ ತಿರುವಿ ಹಾಕುವಂತಹ ಪುಟಗಳಿರುವ ಪುಸ್ತಕಗಳು ಮತ್ತು ಮುದ್ರಣ ಎರಡೂ ಹುಟ್ಟಲಿಲ್ಲ. ಹಾಗೆ ನೋಡಿದರೆ ''ಮುದ್ರಣ'' ಪ್ರಾಚೀನ ಶಿಲಾಯುಗದಲ್ಲಿಯೇ ಮಾನವನಿಗೆ ತಿಳಿದಿತ್ತೆನ್ನಬಹುದು. ಪ್ರಾಚೀನ ಸುಮೇರಿಯದಲ್ಲಂತೂ ಬೇಕಾದಷ್ಟು ಮುದ್ರೆಗಳಿದ್ದುವು. ಆದರೆ ಕಾಗದ ಧಾರಾಳವಾಗಿ ಸಿಗುವಂತಿಲ್ಲ ದಿದ್ದರೆ ಮುದ್ರಣದಿಂದ ತಾನೇ ಏನು ಪ್ರಯೋಜನ? ಅದೂ ಅಲ್ಲದೆ ಗ್ರಂಥಗಳನ್ನು ನಕಲು ಮಾಡುವುದನ್ನೇ ಜೀವನೋಪಾಯವನ್ನಾಗಿಟ್ಟುಕೊಂಡಿದ್ದ ಜನ ಒಗ್ಗಟ್ಟಾಗಿ ಮುದ್ರಣವನ್ನು ವಿರೋಧಿಸಿರಬಹುದು. ಅಲೆಕ್ಸಾಂಡ್ರಿಯದಲ್ಲಿ ಪುಸ್ತಕಗಳ ಪ್ರತಿಗಳು ಬೇಕಾದಷ್ಟು ಉತ್ಪಾದನೆ ಯಾಗುತ್ತಿದ್ದವು. ಆದರೆ ಇವು ಕಡಿಮೆ ಬೆಲೆಗೆ ಸಿಗುವಂತೆಯೇ ಇರಲಿಲ್ಲ. ಅಂದಿನ ಜನತೆಯಲ್ಲಿ ಪ್ರಭಾವಿಗಳಾದ ಐಶ್ವರ್ಯವಂತರನ್ನು ಬಿಟ್ಟರೆ ಉಳಿದವರಲ್ಲಿ ಜ್ಞಾನಪ್ರಸಾರ ಆಗಲೇ ಇಲ್ಲ.

ಹೀಗೆ ಟಾಲೆಮಿ ವಂಶದ ಮೊದಲ ಇಬ್ಬರು ದೊರೆಗಳು ಸೇರಿಸಿದ ವಿಜ್ಞಾನಿಗಳ ಪುಟ್ಟ ತಂಡದೊಡನೆ ಸಂಪರ್ಕವಿದ್ದ ಜನರಲ್ಲಿ ಮಾತ್ರ ಈ ಜ್ಞಾನ ಜ್ಯೋತಿ ಬೆಳಗಿತು. ಮೇಲೆ ಮುಸುಕು ಹಾಕಿದ ದೀವಿಗೆಯಂತೆ ಹೊರಗಣ ಪ್ರಪಂಚಕ್ಕೆ ಇದರ ಬೆಳಕು ಬೀರಲಿಲ್ಲ. ಆವರಣದ ಒಳಗೆ ಕಣ್ಣು ಕೋರೈಸುವಷ್ಟು ಬೆಳಕಿದ್ದಿರಬಹುದು. ಹೊರಗೆ ಮಾತ್ರ ಇದು ಕಾಣಿಸುತ್ತಿರಲಿಲ್ಲ. ಉಳಿದ ಜನ ಎಂದಿನಂತೆಯೇ ಜೀವಿಸುತ್ತಾ ಹೋದರು. ಪ್ರಪಂಚವನ್ನೆಲ್ಲಾ ಒಂದು ದಿನ ತಲೆ ಕೆಳಗು ಮಾಡಬಹುದಾದಂತಹ ವಿಜ್ಞಾನಾನ್ವೇಷಣೆಯ ಬೀಜ ಇಲ್ಲ ಬಿತ್ತಲ್ಪಟ್ಟಿತ್ತೆಂದು ಅವರಾರಿಗೂ ತಿಳಿಯಲಿಲ್ಲ. ಕೆಲವು ಕಾಲದಲ್ಲಿಯೇ ಅಲೆಕ್ಸಾಂಡ್ರಿಯದಲ್ಲಿಯೂ ಅಂಥ ಶ್ರದ್ಧೆ ಕವಿದುಕೊಂಡಿತು. ಒಂದು ಸಾವಿರ ವರ್ಷಕಾಲ ಅರಿಸ್ಟಾಟಲ್ ಬಿತ್ತಿದ ಈ ಬೀಜ ಹಾಗೆಯೇ ಅಜ್ಞಾತವಾಗಿತ್ತು. ಬಳಿಕ ಇದು ಎಚ್ಚತ್ತು, ಮೊಳೆತು, ಕೇವಲ ಕೆಲವು ಶತಮಾನಗಳಲ್ಲಿಯೇ ಬೆಳೆದು ವಿಶಾಲವಾಗಿ ಪಸರಿಸಿ ಕೊಂಡಿತು. ಇಂದು ಮಾನವ ಜೀವನವನ್ನೇ ಬದಲಾಯಿಸುತ್ತಿರುವ ಸ್ಫುಟವಾದ ಭಾವನೆಗಳು ಮತ್ತು ಜ್ಞಾನ ಇದರದೇ ಫಲ.

ಕ್ರಿ.ಪೂ. ಮೂರನೆ ಶತಮಾನದಲ್ಲಿ ಅಲೆಕ್ಸಾಂಡ್ರಿಯದಲ್ಲಷ್ಟೇ ಅಲ್ಲದೆ, ಒಡೆದು ಚೂರಾಗಿದ್ದ ಅಲೆಕ್ಸಾಂಡರನ ಸಾಮ್ರಾಜ್ಯದ ಬೇರೆ ಅನೇಕ ನಗರಗಳಲ್ಲಿ ಜ್ಞಾನಾರ್ಜನೆಯ ಕಾರ್ಯ ನಡೆಯುತ್ತಿತ್ತು. ಉದಾಹರಣೆಗೆ ಸಿಸಿಲಿಯ ಗ್ರೀಕ್‌ಪಟ್ಟಣ ಸೈರಕ್ಯೂಸಿನಲ್ಲಿ ಎರಡು ಶತಮಾನಗಳ ಕಾಲ ವಿಜ್ಞಾನ

ಬೆಳೆಯಿತು. ಏಷ್ಯಾಮೈನರಿನ ಪರ್ಗಾಮಮ್‌ನಲ್ಲಿ ದೊಡ್ಡ ಪುಸ್ತಕ ಭಂಡಾರ ಇತ್ತು. ಆದರೆ ಈ ತೇಜಸ್ವಿ ಗ್ರೀಕ್ ಪ್ರಪಂಚದ ಮೇಲೆ ಉತ್ತರ ದಿಕ್ಕಿನಿಂದ ಹೊಸಹೊಸ ಅನಾಗರಿಕ ತಂಡಗಳು ಧಾಳಿ ಮಾಡಲಾರಂಭಿಸಿದುವು ಗ್ರೀಕರು ಫ್ರಿಜಿಯನ್ನರು ಮತ್ತು ಮ್ಯಾಸಿಡೋನಿಯನ್ನರ ಪೂರ್ವಿಕರು ಬಂದಿದ್ದ ಮಾರ್ಗಗಳಲ್ಲಿಯೇ ನಾರ್ಡಿಕ್ ಕುಲದವರೇ ಆದ ಗಾಲರು ನುಗ್ಗಿಕೊಂಡುಬಂದರು. ಇವರು ಧಾಳಿಮಾಡಿದಲ್ಲೆಲ್ಲಾ ಎಲ್ಲವನ್ನೂ ವಿನಾಶಮಾಡುತ್ತಿದ್ದರು. ಇವರನಂತರ ಇಟಲಿಯಿಂದ ರೋಮನ್ನರು ಬಂದ ಡೇರಿಯಸ್ ಮತ್ತು ಅಲೆಕ್ಸಾಂಡರ್ ಕಟ್ಟಿದ್ದ ವಿಶಾಲಚಕ್ರಾಧಿಪತ್ಯದ ಪಶ್ಚಿಮಭಾಗವನ್ನೂ ವಶಪಡಿಸಿಕೊಂಡರು. ಇವರು ಸಶಕ್ತರಾಗಿದ್ದರೂ ಕಲ್ಪನಾ ಶಕ್ತಿಯುಳ್ಳವರಾಗಿರಲಿಲ್ಲ. ವಿಜ್ಞಾನ, ಕಲೆಗಳಿಗಿಂತ ಶಿಸ್ತು ಮತ್ತು ಲಾಭದಾಯಕ ಉದ್ಯಮಗಳಲ್ಲಿ ಇವರಿಗೆ ಆಸಕ್ತಿ ಹೆಚ್ಚಾಗಿತ್ತು. ಸೆಲ್ಯೂಕಸ್ ವಶಪಡಿಸಿಕೊಂಡಿದ್ದ ಅಲೆಕ್ಸಾಂಡರ್‌ನ ಸಾಮ್ರಾಜ್ಯದ ಪೂರ್ವ ಭಾಗದಲ್ಲಿಯೂ ಧಾಳಿಕಾರರ ಹಾವಳಿ ಹೆಚ್ಚಾಗಿ ಇಂಡಿಯಾ ದೇಶಕ್ಕೂ ಪಾಶ್ಚಿಮಾತ್ಯ ಪ್ರಪಂಚಕ್ಕೂ ಬಂದಿದ್ದ ಸಂಪರ್ಕ ತಿರುಗಿ ತಪ್ಪಿ ಹೋಗುವಂತಾಯಿತು. ಈ ಪಾರ್ಥಿಯನ್ ಧಾಳಿಕಾರರು ಮಧ್ಯ ಏಷ್ಯಾ ಕಡೆಯಿಂದ ಕುದುರೆಗಳನ್ನೇರಿ ಬಿಲ್ಲು ಬಾಣಗಳನ್ನು ಹಿಡಿದು ಹಿಂಡು ತಂಡವಾಗಿ ಬರುತ್ತಿದ್ದರು. ಕ್ರಿ.ಪೂ. ಮೂರನೆ ಶತಮಾನದಲ್ಲಿ ಸೂಸ ಮತ್ತು ಪರ್ಸಿಪೊಲಿಸಗಳನ್ನೊಳಗೊಂಡ ಗ್ರೀಕೋ-ಪರ್ಷಿಯನ್ ಸಾಮ್ರಾಜ್ಯದ ಮೇಲೆ ಇವರು ಧಾಳಿ ಮಾಡಿದರು. ಇದು ಇದೇ ಪ್ರದೇಶದ ಮೇಲೆ ಕ್ರಿ.ಪೂ. 6ನೆ ಮತ್ತು 7ನೆ ಶತಮಾನಗಳಲ್ಲಿ ಮೀಡರು ಮತ್ತು ಪರ್ಷಿಯನ್ನರು ಆಕ್ರಮಣ ನಡೆಸಿದ್ದನ್ನು ನೆನಪಿಗೆ ತರುತ್ತದೆ. ಹೆಚ್ಚು ಕಡಿಮೆ ಇದೇ ಸಮಯದಲ್ಲಿಯೇ ಈಶಾನ್ಯ ದಿಕ್ಕಿನಿಂದ ನಾರ್ಡಿಕರಲ್ಲದ ಕಪ್ಪುಕೂದಲಿನ ಹಳದಿಬಣ್ಣದ ಮಂಗೋಲ್ ಭಾಷೆಗಳನ್ನಾಡುತ್ತಿದ್ದ ಬೇರೆ ಬೇರೆ ಸಂಚಾರಿ ಕುಲದವರೂ ದಕ್ಷಿಣಕ್ಕೆ ಬರುತ್ತಿದ್ದರು. ಇವರ ವಿಷಯ ಮುಂದೆನೋಡೋಣ.

28. ಗೌತಮ ಬುದ್ಧ

ಈಗ ಮೂರು ಶತಮಾನ ಹಿನ್ನಡೆದು ಏಷ್ಯಾ ಖಂಡದ ಧಾರ್ಮಿಕ ಜೀವನದಲ್ಲಿಯೇ ದೊಡ್ಡ ಕ್ರಾಂತಿಯನ್ನು ಎಬ್ಬಿಸಿದ ಮಹಾನ್ ಗುರು ಗೌತಮಬುದ್ಧನ ವೃತ್ತಾಂತವನ್ನು ತಿಳಿದುಕೊಳ್ಳೋಣ. ಐಸಯಾ ಪ್ರವಾದಿ ಬೇಬಿಲಾನಿನಲ್ಲಿ ಧರ್ಮೋಪದೇಶಮಾಡುತ್ತಿದ್ದಾಗಲೇ, ಎಫೆಸಸ್ಸಿನಲ್ಲಿ ಹೆರಾಕ್ಲಿಟಸ್ ವಸ್ತುಸ್ವಭಾವವನ್ನು ಕುರಿತು ವಿಚಾರಮಾಡುತ್ತಿದ್ದಾಗಲೇ ವಾರಣಾಸಿಯಲ್ಲಿ ಗೌತಮ ಬುದ್ಧನು ತನ್ನ ಮತವನ್ನು ಶಿಷ್ಯರಿಗೆ ಬೋಧಿಸುತ್ತಿದ್ದನು. ಈ ಮೂವರೂ ಕ್ರಿ. ಪೂ. 6ನೆ ಶತಮಾನದಲ್ಲಿದ್ದವರೇ ಆದರೆ ಒಬ್ಬರಿಗೆ ಮತ್ತೊಬ್ಬರ ಅರಿವು ಸಹ ಇರಲಿಲ್ಲ.

ಅಂತೂ ಕ್ರಿ.ಪೂ. 6ನೆ ಶತಮಾನ ಅತ್ಯಂತ ಗಮನಾರ್ಹವಾದದು. ಪ್ರಪಂಚದೆಲ್ಲೆಡೆಯಲ್ಲಿಯೂ ಮಾನವರಲ್ಲಿ ಹೊಚ್ಚ ಹೊಸತಾದ ಸಾಹಸ ಮನೋಭಾವವನ್ನು ಆಗ ನಾವು ಕಾಣಬಹುದಾಗಿತ್ತು. ರಾಜಪ್ರಭುತ್ವ, ಅರ್ಚಕವರ್ಗ, ಪ್ರಾಣಿಬಲಿಗಳಿಂದ ಕೂಡಿದ್ದ ಜೀವನದಿಂದ ಜನರು ಎಚ್ಚೆತ್ತು ಅತ್ಯಂತ ಮರ್ಮಭೇದಕವಾದ ಪ್ರಶ್ನೆಗಳನ್ನು ಹಾಕಲಾರಂಭಿಸಿದರು. ಮಾನವಕುಲ ಇಪ್ಪತ್ತು ಸಾವಿರ ವರ್ಷಗಳ ಕಾಲ ಬಾಲ್ಯಾವಸ್ಥೆಯಲ್ಲಿದ್ದು ಕಡೆಗೆ ನವತಾರುಣ್ಯದಲ್ಲಿ ಕಾಲಿರಿಸಿತೋ ಎಂಬಂತೆ ಆಗಿನ ಪರಿಸ್ಥಿತಿಯನ್ನು ನೋಡಿದರೆ ಎನಿಸುತ್ತಿತ್ತು.

ಇಂಡಿಯಾ ದೇಶದ ಚರಿತ್ರೆಯ ಮೊದಲ ಭಾಗ ಸ್ವಲ್ಪವೂ ಸ್ಪಷ್ಟವಾಗಿಲ್ಲ. ಪ್ರಾಯಶಃ ಕ್ರಿ.ಪೂ. 2000ದ ಸುಮಾರಿಗೆ ಆರ್ಯನ್ ಭಾಷೆಯನ್ನಾಡುತ್ತಿದ್ದ ಜನರು ವಾಯುವ್ಯದಿಕ್ಕಿನಿಂದ ಇಲ್ಲಿಗೆ ಬಂದರು ಇವರೆಲ್ಲ ಒಂದೇ ಬಾರಿ ಬಂದರೋ ಅಥವಾ ಬೇರೆ ಬೇರೆ ತಂಡಗಳಲ್ಲಿ ಬಂದರೋ ಸರಿಯಾಗಿ ಗೊತ್ತಿಲ್ಲ. ಇವರ ಭಾಷೆ ಮತ್ತು ಪದ್ಧತಿಗಳು ಉತ್ತರ ಇಂಡಿಯದ ಬಹು ಭಾಗಗಳಲ್ಲಿ ಹರಡಿದುವು. ಇದಕ್ಕೆ ಮುಂಚೆ ಸಿಂಧೂ ಮತ್ತು ಗಂಗಾನದಿ ಪ್ರದೇಶಗಳು ಇವರಿಗಿಂತಲೂ ನಾಗರಿಕರಾಗಿದ್ದ ಕಂದುವರ್ಣದ ಜನರ ವಶದಲ್ಲಿದ್ದುವು. ಈ ಜನ ಆರ್ಯರಷ್ಟು ಚೈತನ್ಯವಂತರಾಗಿರಲಿಲ್ಲ. ಗ್ರೀಕರು, ಪರ್ಷಿಯನ್ನರು ತಮಗಿಂತ ಮುಂಚೆ ಇದ್ದವರೊಡನೆ ಬೆರೆತು ಹೋದಂತೆ ಇಂಡಿಯದ ಆರ್ಯರು ಈ ಜನರೊಡನೆ ಬೆರೆಯಲಿಲ್ಲ. ಚರಿತ್ರಕಾರನಿಗೆ ಇಲ್ಲಿಯ ಚರಿತ್ರೆಯ ಆದಿಭಾಗ ಮಸಕು ಮಸಕಾಗಿ ಕಾಣಬರುವ ಹೊತ್ತಿಗಾಗಲೇ ಅಲ್ಲಿಯ ಸಮಾಜದಲ್ಲಿ ಅನೇಕ ವಿಭಾಗಗಳಿರುವುದು ಕಾಣಬರುತ್ತದೆ. ಈ ವಿಭಾಗಗಳಲ್ಲಿ ಮತ್ತೆ ಉಪವಿಭಾಗಗಳಿರುತ್ತಿದ್ದುವು. ಬೇರೆ ಬೇರೆ ವಿಭಾಗಗಳ ಜನರು ಒಬ್ಬರೊಡನೊಬ್ಬರು ಯಾವುದೇ ರೀತಿಯಲ್ಲೂ ಸಂಪರ್ಕವಿಟ್ಟುಕೊಳ್ಳುತ್ತಿರಲಿಲ್ಲ. ಅಂದರೆ ಇವರ ನಡುವೆ ವಿವಾಹಗಳು ಜರುಗುತ್ತಿರಲಿಲ್ಲ. ಒಬ್ಬರ ಜೊತೆ ಒಬ್ಬರು ಊಟಮಾಡುತ್ತಿರಲಿಲ್ಲ. ಅಂದಿನಿಂದ ಇದುವರೆಗೂ ಈ ಜಾತಿ ವಿಭಾಗ ಹಾಗೆಯೇ ನಡೆದುಕೊಂಡು ಬಂದಿದೆ. ಯೂರೋಪಿಯನ್ ಮತ್ತು ಮಂಗೋಲಿಯನ್ ಸಮಾಜಗಳಿಗೂ ಭಾರತೀಯ ಸಮಾಜಕ್ಕೂ ಇದೊಂದು ದೊಡ್ಡ ವ್ಯತ್ಯಾಸ ಹಿಂದು ಸಮಾಜ ಒಂದೇ ಸಮಾಜವಲ್ಲ ; ಅನೇಕ ಕಿರಿದಾದ ಸಮಾಜಗಳ ಸಂಘಟನೆ.

ಸಿದ್ಧಾರ್ಥ ಗೌತಮನು ಹಿಮಾಲಯದ ತಪ್ಪಲಿನ ಸಣ್ಣರಾಜ್ಯ ಒಂದನ್ನು ಆಳುತ್ತಿದ್ದ ಶ್ರೀಮಂತ ವಂಶದಲ್ಲಿ ಜನಿಸಿದನು. ಈತನಿಗೆ ಹತ್ತೊಂಬತ್ತು ವರ್ಷ ವಯಸ್ಸಾದಾಗ ಸಂಬಂಧಿಕರಲ್ಲಿಯ ಸುಂದರ ಕನ್ಯೆಯೊಬ್ಬಳೊಡನೆ ವಿವಾಹವಾಯಿತು. ತೋಟಗಳು, ತೋಪುಗಳು, ಭತ್ತದ ಗದ್ದೆಗಳು, ಉದ್ಯಾನ ವನಗಳಲ್ಲಿ ಈತನು ಬೇಟೆ ಮತ್ತಿತರ ಕ್ರೀಡೆಗಳಲ್ಲಿ ಕಾಲಕಳೆಯುತ್ತಾ ಉಲ್ಲಾಸದಿಂದ ಜೀವಿಸುತ್ತಿದ್ದನು. ಹೀಗಿದ್ದಂತೆಯೇ ಈತನಿಗೆ ಏನೋ ಒಂದು ವಿಧವಾದ ಅತೃಪ್ತಿ ತಲೆದೋರಿತು. ತೀಕ್ಷ್ಣವಾದ ಬುದ್ಧಿಯಿದ್ದೂ ಉದ್ದಿಶ್ಯರಹಿತ ಜೀವನಕಳೆಯುವುದೆಂದರೆ ಹೀಗೆಯೇ ಅಸಮಾಧಾನ ಉಂಟಾಗುತ್ತದೆ. ತನ್ನ ಜೀವನ ಸಹಜ ಜೀವನವಲ್ಲ, ದಿನನಿತ್ಯವೂ ಸಂತೋಷ ಸಮಾರಂಭಗಳಲ್ಲಿ ಭಾಗವಹಿಸಿದಂತೆ ತನ್ನ ಜೀವನ ನಡೆಯುತ್ತಿದೆಯೆಂದು ಆತನಿಗೆ ಎನ್ನಿಸಿತು.

ರೋಗರುಜಿನಗಳು ಹಾಗೂ ಸಾವಿನ ಅರಿವು, ಐಹಿಕ ಸುಖದ ಅನಿತ್ಯತೆ ಮತ್ತು ಅದರಿಂದ ನೈಜತೃಪ್ತಿ ದೊರಕದೆಂಬ ಭಾವನೆ ಗೌತಮನ ಮನಸ್ಸನ್ನು ಕವಿದುವು. ಅಂದಿನ ಕಾಲದಲ್ಲೂ ಇಂಡಿಯಾ ದೇಶದಲ್ಲಿರುತ್ತಿದ್ದ ಸಂನ್ಯಾಸಿಗಳಲ್ಲಿ ಒಬ್ಬನನ್ನು ಇದೇ ಯೋಚನೆಯಲ್ಲಿದ್ದಾಗ ಈತನು ಭೆಟ್ಟಿ ಮಾಡಿದನು. ಇಂತಹ ಸಂನ್ಯಾಸಿಗಳು ಬಹು ಕಠಿಣವಾದ ನಿಯಮಗಳನ್ನನುಸರಿಸುತ್ತಾ ಧ್ಯಾನ ಮತ್ತು ಧಾರ್ಮಿಕ ಚರ್ಚೆಗಳಿಗೋಸ್ಕರ ತಮ್ಮ ಕಾಲವನ್ನು ವಿನಿಯೋಗಿಸುತ್ತಿದ್ದರು. ಜೀವನದಲ್ಲಿರಬಹುದಾದ ಗೂಢಸತ್ಯವನ್ನು ತಿಳಿದುಕೊಳ್ಳಬೇಕೆಂಬುದು ಇವರ ಉದ್ದೇಶವಾಗಿರುತ್ತಿತ್ತು. ತಾನೂ ಹಾಗೆಯೇ ಮಾಡಬೇಕೆಂದು ಗೌತಮನ ಮಹದಾಶಯವಾಯಿತು.

ಇದೇ ಧ್ಯಾನದಲ್ಲಿದ್ದಾಗ ಈತನಿಗೆ ಮೊದಲು ಮಗ ಹುಟ್ಟಿದನೆಂಬ ಸುದ್ದಿ ಬಂದಿತಂತೆ. "ಸರಿ, ಇದು ಮತ್ತೊಂದು ಬಂಧನ" ಎಂದ ಗೌತಮ.

ಈ ಸುದ್ದಿ ತಿಳಿದು ನಗರಕ್ಕೆ ಹಿಂತಿರುಗಿದಾಗ ಈತನ ಬಂಧು ಬಳಗದವರು ಬಹು ಸಡಗರದಲ್ಲಿದ್ದರು. ಈ ಹೊಸಬಂಧನ ಹುಟ್ಟಿನ ಸಂತೋಷಕ್ಕೆ ದೊಡ್ಡ ಔತಣ ಮತ್ತು ನೃತ್ಯ ಸಮಾರಂಭದ ಏರ್ಪಾಟಾಗಿತ್ತು. "ತನ್ನ ಮನೆಗೆ ಬೆಂಕಿ ಬಿದ್ದಿತೆಂಬ ಸುದ್ದಿ ಕೇಳಿದಾಗ ಯಾವನಿಗೇ ಆಗಲಿ ಎಷ್ಟು ಸಂಕಟ ವಾಗಬಹುದು" ಅಷ್ಟೇ ಸಂಕಟದಿಂದ ಗೌತಮನು ಆ ರಾತ್ರಿ ನಿದ್ದೆಯಿಂದ ಎಚ್ಚತ್ತು ಅಂದಿನವರೆಗಿನ ಉದ್ದಿಶ್ಯರಹಿತ ಜೀವನವನ್ನು ತಕ್ಷಣ ತ್ಯಜಿಸಿ ಹೋಗಬೇಕೆಂಬ ನಿರ್ಧಾರ ಮಾಡಿದನು. ತನ್ನ ಪತ್ನಿಯ ಕೋಣೆಯ ಬಾಗಿಲವರೆಗೆ ಹೋಗಿ ಹಣತೆಯ ಬೆಳಕಿನಲ್ಲಿ ಎಳೆ ಮಗುವನ್ನು ಮಲಗಿಸಿಕೊಂಡು ಸುಖನಿದ್ರೆಯಲ್ಲಿದ್ದ ಆಕೆಯನ್ನು ನೋಡಿದನು. ಮಗುವನ್ನು ಮಾತ್ರ ಒಂದೇ ಸಲ, —ಅದೇ ಮೊದಲ ಮತ್ತು ಕೊನೆಯಬಾರಿ—ಎತ್ತಿಕೊಂಡು ಮುದ್ದಿಸಬೇಕೆಂದು ತುಂಬ ಆಸೆಯಾಯಿತು. ಆದರೆ ಹೆಂಡತಿ ಎದ್ದು ಬಿಡುವಳೆಂಬ ಭಯದಿಂದ ಆ ಆಸೆಯನ್ನು ಹತ್ತಿಕ್ಕಿದನು. ಅಂತೂ ಕೊನೆಗೆ ಅಲ್ಲಿಂದ ಹೊರಬಿದ್ದು ಪ್ರಕಾಶಮಾನವಾದ ಬೆಳುದಿಂಗಳಿನಲ್ಲಿ ಕುದುರೆಯನ್ನೇರಿ ಹೊರಟು ಹೋದನು.

ಆ ರಾತ್ರಿ ಹಾಗೆಯೇ ಬಹು ದೂರ ಪ್ರಯಾಣ ಮಾಡಿ ಬೆಳಗಿನ ಹೊತ್ತಿಗೆ ತನ್ನ ಜನರ ಪ್ರಾಂತದ ಗಡಿಯನ್ನು ದಾಟಿ ನದಿಯೊಂದರ ಹತ್ತಿರ ಕುದುರೆಯಿಂದಿಳಿದನು. ಕತ್ತಿಯಿಂದ ತಲೆಯನ್ನು ಬೋಳಿಸಿಕೊಂಡು ತಾನು ಧರಿಸಿದ್ದ ಒಡವೆಗಳು, ಕತ್ತಿ ಮತ್ತು ಕುದುರೆಗಳನ್ನು ಮನೆಗೆ ಕಳುಹಿಸಿದನು. ಹೀಗೆ ಪ್ರಾಪಂಚಿಕ ಬಂಧನಗಳನ್ನೆಲ್ಲಾ ತೊರೆದು ಸ್ವತಂತ್ರನಾಗಿ ಜ್ಞಾನವನ್ನು ಹುಡುಕಹೊರಟನು. ಮೊದಲು ಈತನು ದಕ್ಷಿಣ ದಿಕ್ಕಿಗೆ ಹೊರಟು ವಿಂಧ್ಯಪರ್ವತದ ಶಾಖೆ ಒಂದರಲ್ಲಿದ್ದ ಆಶ್ರಮವನ್ನು ಸೇರಿದನು. ಇಲ್ಲಿರುತ್ತಿದ್ದ ಧರ್ಮ ಗುರುಗಳು ಮತ್ತು ಸಂನ್ಯಾಸಿಗಳು ಬೆಟ್ಟದ ಗುಹೆಗಳಲ್ಲಿ ವಾಸಿಸುತ್ತಾ ತಮ್ಮ ದಿನನಿತ್ಯದ ಅವಶ್ಯಕ ಪದಾರ್ಥಗಳಿಗೋಸ್ಕರ ಮಾತ್ರ ಊರಿನ ಕಡೆ ಹೋಗುತ್ತಿದ್ದರು ತಮ್ಮ ಬಳಿ ಬಂದವರಿಗೆಲ್ಲಾ ತಾವು ತಿಳಿದು ಕೊಂಡಿದ್ದನ್ನು ಉಪದೇಶಮಾಡುತ್ತಿದ್ದರು. ಇಲ್ಲಿ ಗೌತಮನು ಆಗ ಆಯುಗದಲ್ಲಿ ಪ್ರಚಾರದಲ್ಲಿದ್ದ ಆಧ್ಯಾತ್ಮಿಕ ವಿದ್ಯೆಯಲ್ಲಿ ಪಾರಂಗತನಾದನು. ಆದರೂ ಇವನ ತೀಕ್ಷ್ಣ ಬುದ್ಧಿಗೆ ಇವರು ಕೊಟ್ಟ ಉತ್ತರಗಳು ಒಪ್ಪಿಗೆಯಾಗಲಿಲ್ಲ.

ಕಠೋರವಾದ ತಪಸ್ಸು. ಉಪವಾಸ, ದೇಹದಂಡನೆಗಳಿಂದ ಆತ್ಮಶಕ್ತಿ ಮತ್ತು ಜ್ಞಾನವೃದ್ಧಿ ಮಾಡಿಕೊಳ್ಳಬಹುದೆಂಬ ನಂಬಿಕೆ ಇಂಡಿಯದಲ್ಲಿ ಬಹು ಮೊದಲಿನಿಂದಲೂ ಇದೆ. ಗೌತಮನು ಈ ಮಾರ್ಗವನ್ನೂ ಪರೀಕ್ಷಿಸಿದನು. ಐವರು ಶಿಷ್ಯರೊಡಗೂಡಿ ಕಾಡಿಗೆ ಹೋಗಿ ಅಲ್ಲಿ ಉಪವಾಸ ಮತ್ತಿತರ ರೀತಿಯಲ್ಲಿ ದೇಹವನ್ನು ದಂಡಿಸಿದನು "ಆಕಾಶದಲ್ಲಿ ತೂಗುವ ದೊಡ್ಡ ಗಂಟೆಯ ಶಬ್ದದಂತೆ ಇವನ ಕೀರ್ತಿ ಎಲ್ಲೆಲ್ಲೂ ಹರಡಿತು. ಆದರೆ ಇವನಿಗೆ "ಸತ್ಯ"ದ ಅರಿವು ಮಾತ್ರ ಆಗಲಿಲ್ಲ. ತುಂಬ ಅಶಕ್ತನಾದರೂ ಹಾಗೆಯೇ ಧ್ಯಾನಮಾಡುತ್ತಾ ಶತಪಥ ತಿರುಗುತ್ತಿದ್ದಾಗ ಒಂದು ದಿನ ಈತನು ಜ್ಞಾನತಪ್ಪಿ ಬಿದ್ದನು. ಮೂರ್ಛೆಯಿಂದ ಎಚ್ಚೆತ್ತಾಗ ಈ ರೀತಿಯ ಇಂದ್ರಜಾಲ ವಿದ್ಯೆಯಿಂದೇನೂ ಪ್ರಯೋಜನವಿಲ್ಲವೆಂದು ನಿರ್ಧರಿಸಿಕೊಂಡನು.

ದೇಹ ದಂಡಿಸುವುದನ್ನು ನಿಲ್ಲಿಸಿ ಎಲ್ಲರಂತೆ ಆಹಾರವನ್ನು ಸೇವಿಸುವೆನೆಂದು ಹೇಳಿದಾಗ ಈತನ ಶಿಷ್ಯರು ಬಹು ಜುಗುಪ್ಸೆಗೊಂಡರು. ಆರೋಗ್ಯವಾದ ಶರೀರ, ಸರಿಯಾಗಿ ಪೋಷಿಸಿದ ಮಿದುಳು ಇದ್ದರೇ ಸರಿ, ಮಾನವ "ಸತ್ಯ"ವನ್ನು ಸಾಧಿಸಬಲ್ಲನು ಎಂದು ಗೌತಮನ ಅಭಿಪ್ರಾಯ ವಾಯಿತು. ಈತನಿದ್ದ ದೇಶ, ಕಾಲಗಳಿಗೆ ಈ ಭಾವನೆಗಳು ಸಂಪೂರ್ಣವಾಗಿ ವ್ಯತಿರಿಕ್ತವಾಗಿದ್ದುವು. ಶಿಷ್ಯರೈವರೂ ಈತನನ್ನು ತ್ಯಜಿಸಿ ದುಃಖದಿಂದ ಕಾಶಿಗೆ ಹೊರಟು ಹೋದರು. ಗೌತಮ ಒಂಟಿಯಾಗಿ ಜೀವಿಸಲಾರಂಭಿಸಿದನು.

ಮಾನವನ ಮನಸ್ಸು ಮಹತ್ತಾದ ಗಹನ ಸಮಸ್ಯೆಯನ್ನು ಬಿಡಿಸಲು ಯತ್ನಿಸುವಾಗ ಒಂದೊಂದೇ ಹೆಜ್ಜೆ ಮುಂದೆ ಹೋಗುತ್ತದೆ. ಒಬ್ಬನಲ್ಲಿ ತಾನು ಎಷ್ಟು ಮುಂದೆ ಹೋಗಿರುವೆನೆಂದು ಅದಕ್ಕೇ ತಿಳಿದಿರುವುದಿಲ್ಲ. ಕೊನೆಗೆ ಇದಕ್ಕಿದ್ದಂತೆ ಬೆಳಕಾಗಿ ತಾನು ವಿಜಯಿಯಾದೆನೆಂದು ಅದಕ್ಕೆ ತಿಳಿಯುತ್ತದೆ. ಗೌತಮನಿಗೂ ಹೀಗೆಯೇ ಆಯಿತು. ಒಂದುದಿನ ಊಟಮಾಡುವುದಕ್ಕೋಸ್ಕರ ನದಿಯ ಬಳಿಯ ದೊಡ್ಡ ಮರದ ನೆರಳಿನಲ್ಲಿ ಕುಳಿತಿದ್ದಾಗ ಎಲ್ಲವನ್ನೂ ಸ್ಫುಟವಾಗಿ ಕಂಡೆನೆಂಬ ಭಾವನೆ ಆತನಲ್ಲಿ ಮೂಡಿತು. ಆತನ ಒಳ ದೃಷ್ಟಿಗೆ ಜೀವನವೆಲ್ಲಾ ಸ್ಪಷ್ಟವಾಗಿ ಗೋಚರ ವಾಯಿತೆನಿಸಿತು. ಒಂದು ಹಗಲು ಮತ್ತು ರಾತ್ರಿ ಪೂರ್ಣ ಆಳವಾದ ಧ್ಯಾನದಲ್ಲಿ ಮಗ್ನ ನಾಗಿದ್ದು ಬಳಿಕ ಎದ್ದು ತನ್ನ ದೃಷ್ಟಿಗೆ ಕಂಡದ್ದನ್ನು ಜಗತ್ತಿಗೆ ಪ್ರಸಾರ ಮಾಡ ಹೊರಟನು.

ಮೊದಲು ಇವನು ಕಾಶಿಗೆ ಹೋಗಿ ತನ್ನನ್ನು ತ್ಯಜಿಸಿ ಹೋಗಿದ್ದ ಶಿಷ್ಯರನ್ನು ಹುಡುಕಿ ಅವರಿಗೆ ಈ ಹೊಸ ಮತವನ್ನು ಉಪದೇಶಿಸಿದನು. ಕಾಶಿಯ ರಾಜನ "ಹರಿಣವನ" (Deer Park) ದಲ್ಲಿ ಗುಡಿಸಿಲು ಕಟ್ಟಿಕೊಂಡು ಇವರು ವಾಸಿಸಲಾರಂಭಿಸಿದರು. ಅದೇ ಒಂದು ಬಗೆಯ ಶಾಲೆಯಾಯಿತು. ಜ್ಞಾನವನ್ನರಸುತ್ತಾ ಎಷ್ಟೋ ಜನ ಅಲ್ಲಿಗೆ ಬರಲು ಮೊದಲಿಟ್ಟರು.

"ಅದೇಕೆ ನಾನು ಪೂರ್ಣ ಸುಖಿಯಲ್ಲ?" —ಇದೇ ಈ ಮತದ ಮೊದಲ ವಿಚಾರ. ಇದು ಗೌತಮ ತಾರುಣ್ಯದಲ್ಲಿ ತನ್ನನ್ನೇ ಕೇಳಿಕೊಂಡ ಪ್ರಶ್ನೆ. ಇದು ಸಂಪೂರ್ಣ "ಅಂತರ್ಮುಖಿ" ಭಾವನೆ. ಥೇಲ್ಸ್ ಮತ್ತು ಹೆರಾಕ್ಲಿಟಸ್ ಕುತೂಹಲ ಭರಿತರಾಗಿ ತಮ್ಮನ್ನು ತಾವೇ ಮರೆತು ಬಿಟ್ಟು ಮನಸ್ಸಿನಿಂದ ಬಾಹ್ಯ ಪ್ರಪಂಚದೆಡೆ ತಮ್ಮ ದೃಷ್ಟಿಯನ್ನು ತಿರುಗಿಸುತ್ತಿದ್ದರು. ಹೀಬ್ರೂ ಪ್ರವಾದಿಗಳು ತಮ್ಮ ಆಗುಹೋಗುಗಳ ಕಡೆ ಗಮನ ಕೊಡದೆ ಉಳಿದ ಮಾನವರ ಬಗೆಗೆ ತಮ್ಮ ನೈತಿಕ ಹೊರೆಯೇನೆಂಬುದನ್ನು ಮುಖ್ಯವಾಗಿ ಪರಿಗಣಿಸುತ್ತಿದ್ದರು. ಇವರಿಗೂ ಗೌತಮ ಬುದ್ಧನಿಗೂ ನಡುವೆ ದೊಡ್ಡ ವ್ಯತ್ಯಾಸವಿತ್ತು. ಬುದ್ಧನು ತನ್ನ ಆತ್ಮವನ್ನು ಮರೆಯಲಿಲ್ಲ. ಮನಸ್ಸನ್ನೆಲ್ಲಾ ಆತ್ಮದ ಮೇಲೆ ಕೇಂದ್ರೀಕರಿಸಿ ಅದನ್ನು ಪೂರ್ತಿ ನಾಶಮಾಡಬೇಕೆಂದು ಈತನು ಪ್ರಯತ್ನಿಸಿದನು. "ದುರಾಶೆಯೇ ದುಃಖದ ಮೂಲ, ಮಾನವ ತನ್ನ ಆಸೆ ಆಕಾಂಕ್ಷೆಗಳನ್ನು ಹತ್ತಿಡುವವರೆಗೆ ಅವನಿಗೆ ಕಷ್ಟಗಳು ತಪ್ಪಿದ್ದಲ್ಲ. ಅದರಿಂದ ಕೊನೆಗೆ ದುಃಖವೇ ಪ್ರಾಪ್ತಿ. ಜೀವನದ ಆಸೆಗಳು ಮುಖ್ಯವಾಗಿ ಮೂರು ವಿಧ. ಇವೆಲ್ಲವೂ ಕೆಡುಕನ್ನೇ ಉಂಟು ಮಾಡುವುವು. ಮೊದಲನೆಯದು ಇಂದ್ರಿಯ ಸುಖಾಪೇಕ್ಷೆ. ಎರಡನೆಯದು ವೈಯಕ್ತಿಕವಾಗಿ ತನ್ನ ಆತ್ಮಕ್ಕೆ ಮೋಕ್ಷವಾಗಬೇಕೆಂಬ ಅಪೇಕ್ಷೆ. ಮೂರನೆಯದು ಇಹ ಪ್ರಪಂಚದಲ್ಲಿ ಐಶ್ವರ್ಯ ಯಶಸ್ಸು ಮುಂತಾದುವನ್ನು ಗಳಿಸ

ಬೇಕೆಂಬ ಅಪೇಕ್ಷೆ. ಜೀವನದ ಸಂಕಟಗಳಿಂದ ಮುಕ್ತರಾಗಬೇಕಾದರೆ ಈ ಎಲ್ಲಾ ಆಸೆಗಳನ್ನೂ ಜಯಿಸಬೇಕು. ಇವುಗಳನ್ನು ಗೆದ್ದ ಮೇಲೆ, "ನಾನು" ಎಂಬ ಭಾವನೆ ಅಳಿಸಿ ಹೋದಾಗ ಅತ್ಯುನ್ನತ ಸ್ಥಿತಿಯಿಂದ ಪೂರ್ಣಶಾಂತಿಯನ್ನು ಕೊಡುವ ನಿರ್ವಾಣ ಉಂಟಾಗುತ್ತದೆ.

ಇದು ಈತನ ಬೋಧನೆಯ ಸಾರಾಂಶ. ಬಹು ಸೂಕ್ಷ್ಮವಾದ ಅಧ್ಯಾತ್ಮ ಜ್ಞಾನದಿಂದ ತುಂಬಿದ ಇದು ಗ್ರೀಕ್ ತತ್ತ್ವಜ್ಞಾನಿಗಳ ಮತ್ತು ಹೀಬ್ರೂ ಪ್ರವಾದಿಗಳ ಬೋಧನೆಗಳಂತೆ ಸುಲಭವಾಗಿ ಅರ್ಥವಾಗುವುದಿಲ್ಲ. ನಿರ್ಭೀತಿಯಿಂದ ಯಥಾರ್ಥ ಜ್ಞಾನವನ್ನು ತಿಳಿದುಕೊ ಎಂದು ಗ್ರೀಕ್ ಜ್ಞಾನಿಗಳು ಮಾನವನಿಗೆ ಹೇಳುತ್ತಿದ್ದರು. ಭಗವಂತನಲ್ಲಿ ಭಯ ಗೌರವಗಳನ್ನಿಟ್ಟು ನ್ಯಾಯ ಮಾರ್ಗದಲ್ಲಿ ನಡೆಯೆಂದು ಹೀಬ್ರೂ ಪ್ರವಾದಿಗಳು ಅಧಿಕಾರವಾಣಿಯಿಂದ ಆಜ್ಞಾಪಿಸುತ್ತಿದ್ದರು. ಗೌತಮನ ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಆತನ ಅತಿ ಆಪ್ತ ಶಿಷ್ಯರ ಯೋಗ್ಯತೆಗೆ ಸಹ ಮೀರಿದುದಾಗಿತ್ತು. ಆತನ ವೈಯಕ್ತಿಕ ಪ್ರಭಾವ ಹೊರಟು ಹೋಗುತ್ತಲೂ ಈ ಬೋಧನೆಯ ಪರಿಶುದ್ಧತೆ ಮತ್ತು ಸೂಕ್ಷ್ಮತೆಗಳು ಮರೆಯಾಗಿ ಹೋದುವೆನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ. "ಮಹಾಪ್ರಜ್ಞ" ಆಗಾಗ್ಗೆ ಭೂಮಿಯಲ್ಲಿ ಯಾವನಾದರೊಬ್ಬ ಮನುಷ್ಯನ ರೂಪದಲ್ಲಿ ಅವತಾರವೆತ್ತುವುದೆಂದು ಆಗ ಇಂಡಿಯಾದಲ್ಲಿ ಒಂದು ಸಾಮಾನ್ಯ ನಂಬಿಕೆ ಇತ್ತು. ಅಂತಹ ಮನುಷ್ಯನನ್ನು "ಬುದ್ಧ"ನೆಂದು ಕರೆಯುತ್ತಿದ್ದರು. ಗೌತಮನೂ ಒಬ್ಬ ಬುದ್ಧನೆಂದು ಆತನ ಶಿಷ್ಯರು ಘೋಷಿಸಿದರು. ಆದರೆ ಈ ಹೆಸರನ್ನು ಗೌತಮನು ಒಪ್ಪಿಕೊಂಡಿದ್ದನೆಂದು ಹೇಳಲು ಯಾವ ಆಧಾರವೂ ಇಲ್ಲ. ಗೌತಮನಿನ್ನೂ ಮರಣ ಹೊಂದಿದ್ದನೋ ಇಲ್ಲವೋ ಆತನ ಹೆಸರಿನಲ್ಲಿ ಚಿತ್ರ ವಿಚಿತ್ರವಾದ ದಂತ ಕಥೆಗಳು ಹುಟ್ಟಿಕೊಂಡುವು. ಕಷ್ಟಪಟ್ಟು ನೈತಿಕ ಸಾಧನೆ ಮಾಡುವುದಕ್ಕಿಂತಲೂ ಇಂತಹ ಆಶ್ಚರ್ಯ ಭರಿತ ಕಥೆಯನ್ನು ನಂಬುವುದೇ ಮಾನವರ ಮನಸ್ಸಿಗೆ ಹೆಚ್ಚು ಒಪ್ಪಿಗೆ. ಆದುದರಿಂದ ಗೌತಮ ಬುದ್ಧನೂ ಒಬ್ಬ ಅದ್ಭುತ ವ್ಯಕ್ತಿಯಾಗಿ ಹೋದನು.

ಆದರೂ ಈತನ ಉಪದೇಶ ನಿಷ್ಫಲವಾಗಲಿಲ್ಲ. ನಿರ್ವಾಣವನ್ನು ಅರ್ಥಮಾಡಿಕೊಳ್ಳುವಷ್ಟು ಉನ್ನತ ಮಟ್ಟದ ಸೂಕ್ಷ್ಮಬುದ್ಧಿ ಮಾನವರಿಗೆ ಇಲ್ಲದಿರಬಹುದು. ಅಂತೆಯೇ ಅತಿ ಸೋಜಿಗದ ಕಥೆಗಳಲ್ಲಿ ಮಾನವರಿಗಿರುವ ಆಸಕ್ತಿ ಈತನ ಸರಳ ಜೀವನದ ಕಥೆಯನ್ನು ದಂತ ಕಥೆಗಳಲ್ಲಿ ಮುಳುಗಿಸಿರಬಹುದು. ಆದರೆ ಈತನು ಬೋಧಿಸಿದ ಉದಾತ್ತವಾದ ಅಷ್ಟ ವಿಧಮಾರ್ಗ (eight-fold path) ದ ಉದ್ದೇಶ ಎಲ್ಲರಿಗೂ ಸ್ವಲ್ಪ ಮಟ್ಟಿಗಾದರೂ ಅರ್ಥವಾಗುತ್ತಿತ್ತು. ಸತ್ಯಂಕಲ್ಪ, ಸದ್ವಾಕ್ಯ, ಸತ್ಕರ್ಮ, ಪ್ರಾಮಾಣಿಕತೆಗಳಿಂದ ಇರಬೇಕು, ಅಂದರೆ ಒಟ್ಟಿನಲ್ಲಿ ಋಜು ಮಾರ್ಗದಲ್ಲಿ ನಡೆಯಬೇಕೆಂಬುದನ್ನು ಇದರಲ್ಲಿ ಒತ್ತಿ ಹೇಳಲಾಗಿತ್ತು. ಉದಾತ್ತ ಮನೋಭಾವದಿಂದ ನಿಸ್ವಾರ್ಥಿಯಾಗಿ ವರ್ತಿಸಬೇಕೆಂದು ಬೋಧಿಸುತ್ತಿದ್ದ ಈ ಮತದ ಭಾವನೆಗಳು ಮಾನವರ ಅಂತರಾತ್ಮನಲ್ಲಿ ನವ ಚೈತನ್ಯವನ್ನು ತುಂಬಿದುವು.

29. ಅಶೋಕ ಚಕ್ರವರ್ತಿ

ಗೌತಮನ ಮರಣಾನಂತರ ಕೆಲವು ತಲೆಮಾರುಗಳು ಬೌದ್ಧಮತ— ಆತ್ಮ ನಿಗ್ರಹವೇ ಮಾನವನ ಅತ್ಯುನ್ನತ ಧ್ಯೇಯವೆಂದು ಪ್ರಪಂಚದಲ್ಲಿ ಮೊದಲನೆ ಬಾರಿ ಬೋಧಿಸಿದ ಉದಾತ್ತ ಮತ—

ಅಷ್ಟೇನೂ ಮುಂದೆ ಬರಲಿಲ್ಲ. ಕೊನೆಗೆ ಪ್ರಪಂಚ ಕಂಡಿರುವ ಅತಿಶ್ರೇಷ್ಠರಾದ ರಾಜರಲ್ಲೊಬ್ಬನ ಮನಸ್ಸನ್ನು ಇದು ಸೂರೆಗೊಂಡಿತು.

ಅಲೆಗ್ಸಾಂಡರ್ ಇಂಡಿಯಾಕ್ಕೆ ಬಂದು ಸಿಂಧೂ ನದಿಯ ದಡದಲ್ಲಿ ಪೋರಸ್ಸನೊಡನೆ ಕಾದಿದ್ದನ್ನು ನಾವು ಆಗಲೇ ನೋಡಿದೆವು. ಆಗ ಚಂದ್ರಗುಪ್ತಮೌರ್ಯನೆಂಬೊಬ್ಬಾತನು ಗ್ರೀಕ್ ಪಾಳೆಯಕ್ಕೆ ಬಂದು ಗಂಗಾನದಿ ಪ್ರದೇಶಕ್ಕೆ ಹೋಗಿ ಭಾರತವೆಲ್ಲವನ್ನೂ ಗೆಲ್ಲಲು ಅಲೆಕ್ಸಾಂಡರನನ್ನು ಪ್ರಚೋದಿಸಲು ಯತ್ನಿಸಿದನೆಂದು ಗ್ರೀಕ್ ಚರಿತ್ರಕಾರರು ಹೇಳಿದ್ದಾರೆ. ಮ್ಯಾಸಿಡೋನಿಯನ್ ಸೈನಿಕರು ಇನ್ನು ಮುಂದೆ ತಾವು ಕಂಡರಿಯದ ದೇಶಕ್ಕೆ ಹೋಗಲು ನಿರಾಕರಿಸಿದುದರಿಂದ ಇದು ಸಫಲವಾಗಲಿಲ್ಲ. ಗ್ರೀಕರ ಸಹಾಯವಿರದಿದ್ದರೂ ಮುಂದೆ ಕ್ರಿ. ಪೂ. 321ರ ಹೊತ್ತಿಗೆ ಗುಡ್ಡಗಾಡಿನ ಜನರ ಸಹಾಯದಿಂದ ಚಂದ್ರಗುಪ್ತನು ತನ್ನ ಕನಸನ್ನು ನೆನಸಾಗಿ ಮಾಡಿಕೊಂಡನು. ಉತ್ತರ ಭಾರತದಲ್ಲಿ ಚಕ್ರಾಧಿಪತ್ಯ ಕಟ್ಟಿ ಕ್ರಿ.ಪೂ. 303ರ ಹೊತ್ತಿಗೆ ಪಂಜಾಬಿನಲ್ಲಿ ಆಳುತ್ತಿದ್ದ ಒಂದನೆ ಸೆಲ್ಯೂಕಸನನ್ನು ಸೋಲಿಸಿ ಭಾರತದಲ್ಲಿ ಗ್ರೀಕ್ ಆಡಳಿತವನ್ನು ಸಂಪೂರ್ಣವಾಗಿ ತೊಡೆದು ಹಾಕಿದನು. ಆತನ ಮಗ ಚಕ್ರಾಧಿಪತ್ಯವನ್ನು ಮತ್ತಷ್ಟು ವಿಸ್ತರಿಸಿದನು. ಮುಂದೆ ನಾವು ವರ್ಣಿಸಲಿರುವ ಅಶೋಕ ಚಕ್ರವರ್ತಿ ಚಂದ್ರಗುಪ್ತನ ಮೊಮ್ಮಗ. ಕ್ರಿ.ಪೂ. 264ರಲ್ಲಿ ಈತನು ಆಫ್ಘಾನಿಸ್ಥಾನದಿಂದ ಮದ್ರಾಸ್‌ವರೆಗಿದ್ದ ಸಾಮ್ರಾಜ್ಯದ ಒಡೆಯನಾಗಿದ್ದನು.

ಮೊದಲು ತನ್ನ ತಂದೆ ತಾತಂದಿರಂತೆಯೇ ಅಶೋಕನೂ ಸಹ ದಂಡಯಾತ್ರೆ ನಡೆಸಿ ಇಂಡಿಯಾ ಪರ್ಯಾಯದ್ವೀಪವನ್ನೂ ವಶಪಡಿಸಿಕೊಳ್ಳಲು ನೋಡಿದನು. ಕ್ರಿ.ಪೂ. 255ರಲ್ಲಿ ಪೂರ್ವತೀರದ ಕಳಿಂಗ ದೇಶವನ್ನು ಜಯಿಸಿದನು. ಆದರೆ ಯುದ್ಧ ಅದೆಷ್ಟು ಕ್ರೂರ, ಭಯಂಕರವಾದುದೆಂದು ತಿಳಿದು ಜುಗುಪ್ಸೆಗೊಂಡು ಮುಂದೆಂದೂ ತಾನು ಯುದ್ಧ ಮಾಡೆನೆಂದು ನಿರ್ಧರಿಸಿದನು. ಸೋಲನ್ನೇ ಕಾಣದಿದ್ದರೂ ಯುದ್ಧ ಮಾಡಲು ಹಿಂತೆಗೆದ ರಾಜ ಪ್ರಪಂಚದಲ್ಲಿ ಈತನೊಬ್ಬನೇ. ಬಳಿಕ ಶಾಂತಿ ಬೋಧಕವಾದ ಬೌದ್ಧಮತವನ್ನವಲಂಬಿಸಿ ಇನ್ನು ಮುಂದೆ ತಾನು ರಾಜ್ಯ ವಿಸ್ತಾರಕ್ಕೋಸ್ಕರ ದಂಡಯಾತ್ರೆ ನಡೆಸುತ್ತಿದ್ದುದನ್ನು ನಿಲ್ಲಿಸಿ ಧರ್ಮಪ್ರಸಾರಕ್ಕಾಗಿ ಶಾಂತಿಯುತ ದಂಡಯಾತ್ರೆಗಳನ್ನು ನಡೆಸುವುದಾಗಿ ಘೋಷಿಸಿದನು.

ಕ್ಲೇಶ ಸಂಕಟಗಳಿಂದ ತುಂಬಿದ ಮಾನವನ ಚರಿತ್ರೆಯಲ್ಲಿ ಈ ದೊರೆ ಆಳಿದ ಇಪ್ಪತ್ತೆಂಟು ವರ್ಷಗಳ ಕಾಲ ಒಂದು ಪ್ರಕಾಶಮಾನವಾದ ದೃಶ್ಯವೆಂಬಂತೆ ಕಾಣಬರುತ್ತದೆ. ಈತನು ಅನೇಕ ಭಾವಿಗಳನ್ನು ತೋಡಿಸಿದನು. ನೆರಳು ಕೊಡುವ ಮರಗಳನ್ನು ಬೆಳೆಸಿದನು. ಔಷಧಾಲಯಗಳನ್ನು ಸ್ಥಾಪಿಸಿದುದಲ್ಲದೆ ಔಷಧಿ ಮೂಲಿಕೆಗಳನ್ನು ಬೆಳೆಸಲು ತೋಟಗಳನ್ನೂ ಸಾರ್ವಜನಿಕ ಉದ್ಯಾನಗಳನ್ನೂ ಬೆಳೆಸಿದನು. ದೇಶದ ಮೂಲನಿವಾಸಿಗಳ, ಮತ್ತು ಅಧೀನ ರಾಜ್ಯಗಳ ಪ್ರಜೆಗಳ ಯೋಗಕ್ಷೇಮ ನಿರ್ವಹಣೆಗೋಸ್ಕರ ಒಂದು ಇಲಾಖೆಯನ್ನೇ ನೇಮಿಸಿದನು. ಸ್ತ್ರೀ ವಿದ್ಯಾಭ್ಯಾಸಕ್ಕೂ ಈತನ ಪ್ರೋತ್ಸಾಹವಿತ್ತು. ಬೌದ್ಧಮಠಗಳಿಗೆ ಬೇಕಾದಷ್ಟು ಧನಸಹಾಯ ಮಾಡಿ ಬೌದ್ಧಮತೀಯರು ಅದುವರೆಗೂ ಸಂಗ್ರಹವಾಗಿದ್ದ ತಮ್ಮ ಮತ ಗ್ರಂಥಗಳನ್ನು ಉತ್ಸಾಹದಿಂದಲೂ ವಿಮರ್ಶಾತ್ಮಕ ದೃಷ್ಟಿಯಿಂದಲೂ ಅಧ್ಯಯನ ಮಾಡುವಂತೆ ಪ್ರಚೋದಿಸಲು ಯತ್ನಿಸಿದನು. ಇದಕ್ಕಾ

ಕಾರಣವಿಲ್ಲದೆ ಇರಲಿಲ್ಲ. ಮಹಾತ್ಮ ಬುದ್ಧನ ಪರಿಶುದ್ಧ ಸರಳಬೋಧನೆ ಅಷ್ಟು ಹೊತ್ತಿಗಾಗಲೇ ಮೂಢನಂಬಿಕೆಗಳೊಡನೆ ಬೆರೆತು ಕಲುಷಿತವಾಗಿ ಹೋಗಿತ್ತು. ಅಶೋಕನು ಕಳುಹಿಸಿದ ಬೌದ್ಧ ಧರ್ಮ ಪ್ರಸಾರಕರು ಕಾಶ್ಮೀರ, ಪರ್ಷಿಯ, ಸಿಲೋನ್ ಮತ್ತು ಅಲೆಕ್ಸಾಂಡ್ರಿಯಗಳವರೆಗೂ ಹೋದರು.

ರಾಜರಲ್ಲೆಲ್ಲಾ ಪರಮ ಶ್ರೇಷ್ಠನಾದ ಅಶೋಕ ಚಕ್ರವರ್ತಿ ಆ ಯುಗಕ್ಕೆ ಬಹಳ ಮುಂದು ವರಿದವನಾಗಿದ್ದನು. ಈತನಿಗೆ ಯಾರೂ ಉತ್ತರಾಧಿಕಾರಿಗಳಿರಲಿಲ್ಲ. ಈತನ ಕಾರ್ಯವನ್ನು ಮುಂದು ವರಿಸುವಂತಹ ಸುವ್ಯವಸ್ಥಿತ ಆಡಳಿತವೂ ಇರಲಿಲ್ಲ. ಹೀಗಾಗಿ ಈತನ ಮರಣಾನಂತರ ಕೇವಲ ಒಂದು ಶತಮಾನವೊಳಗಾಗಿ ಈತನ ಆಡಳಿತದ ಸುದಿನಗಳು ಬರಿಯ ಒಂದು ಕನಸಿನಂತೆ ಜನರ ಮನಸ್ಸಿನಲ್ಲಿ ಉಳಿದುವು. ಭಾರತ ದೇಶ ಒಡೆದು ಚೂರು ಚೂರಾಗಿ ಶಿಥಿಲವಾಗಿ ಹೋಯಿತು. ಭಾರತೀಯ ಸಮಾಜದ ಅತ್ಯುನ್ನತ ಜಾತಿಯ ಬ್ರಾಹ್ಮಣರಿಗೆ ಬುದ್ಧನ ಬಿಚ್ಚು ಹೃದಯದ ಬೋಧೆ ಎಂದಿನಿಂದಲೂ ಸರಿಹೋಗಿರಲಿಲ್ಲ. ಕ್ರಮೇಣ ಬೌದ್ಧ ಪ್ರಭಾವವನ್ನು ಇವರು ಅಳಿಸಿ ಬಿಟ್ಟರು. ಮೊದಲಿದ್ದಂತೆಯೇ ವಿಲಕ್ಷಣವಾದ ದೇವತೆಗಳೂ, ಅಸಂಖ್ಯಾತ ಪಂಥಗಳೂ ಪ್ರಾಬಲ್ಯಕ್ಕೆ ಬಂದುವು. ಜಾತಿ ಪದ್ಧತಿಗಳು ಮೊದಲಿಗಿಂತಲೂ ಜಟಿಲವೂ ಕಠಿಣವೂ ಆದುವು. ಕೆಲವು ಶತಮಾನಗಳು ಮಾತ್ರ ಬೌದ್ಧ, ಬ್ರಾಹ್ಮಣ ಮತಗಳೆರಡೂ ಜೊತೆ ಜೊತೆಯಾಗಿಯೇ ಬೆಳೆದವು. ಬಳಿಕ ನಿಧಾನ ವಾಗಿ ಬೌದ್ಧಮತ ಕ್ಷಯಿಸಿ ಹೋಗಿ ಬ್ರಾಹ್ಮಣ ಮತವೇ ಅನೇಕ ರೂಪಗಳನ್ನು ತಳೆದು ಅದರ ಸ್ಥಾನದಲ್ಲಿ ನಿಂತಿತು. ಆದರೆ ಜಾತಿ ಪದ್ಧತಿ ಇಲ್ಲದಿದ್ದ ಹೊರನಾಡುಗಳಲ್ಲಿ ಬೌದ್ಧಮತ ಹರಡಿತು. ಚೈನಾ, ಸಯಾಂ, ಬರ್ಮಾ ಮತ್ತು ಜಪಾನ್‌ಗಳಲ್ಲಿ ಇಂದಿಗೂ ಅದು ಪ್ರಬಲವಾಗಿಯೇ ಇದೆ.

30. ಕನ್‌ಫ್ಯೂಷಿಯಸ್ ಮತ್ತು ಲಾ–ಒಟ್ಸೆ

ಮಾನವವರ್ಗ ಪಡೆಯಾದ ಹೊಸ ಚೈತನ್ಯವನ್ನು ಕಂಡ ಕ್ರಿ.ಪೂ 6 ನೇ ಶತಮಾನದಲ್ಲಿದ್ದ ಇನ್ನಿಬ್ಬರು ಮಹಾಪುರುಷರ ವಿಷಯ ಈಗ ಅವಲೋಕಿಸೋಣ.

ಚೈನಾದ ಆದಿಚರಿತ್ರೆಯ ವಿಷಯ ಈ ಪುಸ್ತಕದಲ್ಲಿ ಇದುವರೆಗೂ ಹೇಳಿರುವುದು ಬಹು ಸ್ವಲ್ಪ ಮಾತ್ರ. ಇನ್ನೂ ಆ ಬಗ್ಗೆ ಏನೂ ಸ್ಪಷ್ಟವಾಗಿ ತಿಳಿದಿಲ್ಲ. ಇದೀಗ ಎಚ್ಚತ್ತಿರುವ ಆಧುನಿಕ ಚೈನಾದ ಭೂ ಶೋಧಕ ಮತ್ತು ಪ್ರಾಚ್ಯ ಸಂಶೋಧಕರು ಕಳೆದ ಶತಮಾನದ ಐರೋಪ್ಯ ಸಂಶೋ ಧಕರಂತೆ ತಮ್ಮ ದೇಶದ ಪ್ರಾಚೀನ ಚರಿತ್ರೆಯನ್ನು ಸರಿಯಾಗಿ ರೂಪಿಸಬೇಕಾಗಿದೆ. ಎಲ್ಲದಕ್ಕೂ ಮೊದಲು ಇದ್ದಿರಬಹುದಾದ ಸೂರ್ಯ ಶಿಲಾ ಸಂಸ್ಕೃತಿಯಿಂದ (Heliolithic culture) ಚೀನೀ ಯರ ಆದಿ ನಾಗರೀಕತೆ ದೊಡ್ಡ ದೊಡ್ಡ ನದಿಗಳ ಕಣಿವೆಗಳಲ್ಲಿ ಉದಯವಾಗಿರಬೇಕು. ಈಜಿಪ್ಟ್, ಸುಮೇರಿಯಗಳಂತೆಯೇ ಅಲ್ಲಿಯೂ ಈ ಸಂಸ್ಕೃತಿಯ ಮುಖ್ಯ ಲಕ್ಷಣಗಳಾದ ದೇವಸ್ಥಾನಗಳು, ಋತುಮಾನಾನುಸಾರ ರಕ್ತಬಲಿ, ಅರ್ಚಕ ವರ್ಗ ಎಲ್ಲ ಇದ್ದು ಅಲ್ಲಿಯ ನಗರ ಜೀವನ ಆರೇಳು ಸಾವಿರ ವರ್ಷಗಳ ಹಿಂದಿನ ಈಜಿಪ್ಟ್ ಸುಮೇರಿಯ ಮತ್ತು ಸಾವಿರ ವರ್ಷ ಹಿಂದಿನ ಮಾಯಾನಗರ ಗಳಲ್ಲಿದ್ದಂತೆಯೇ ಇದ್ದಿರಬೇಕು.

ಆದರೆ ಚರಿತ್ರೆ ಖಚಿತವಾಗಿ ತಿಳಿಯುವಷ್ಟು ಹೊತ್ತಿಗೆ ಅಲ್ಲಿ ನರಬಲಿ ತಪ್ಪಿಹೋಗಿತ್ತು.

ಆದಕ್ಕೆ ಮುಂಚೆಯೂ ಇತ್ತೋ ಇಲ್ಲವೋ ಹೇಳಬರುವಂತಿಲ್ಲ. ಪ್ರಾಣಿಬಲಿ ಮಾತ್ರ ಇತ್ತು. ಕ್ರಿ.ಪೂ. 1000ಕ್ಕೂ ಬಹುಮುಂಚೆಯೇ ಒಂದು ಬಗೆಯ ಚಿತ್ರಲಿಪಿ ಹುಟ್ಟಿಕೊಂಡಿತಂ.

ಯೂರೋಪ್ ಮತ್ತು ಪಶ್ಚಿಮ ಏಷ್ಯಾದ ಪ್ರಾಚೀನ ನಾಗರಿಕತೆಗಳು ಹೇಗೆ ಮರಳು ಕಾಡಿನ ಮತ್ತು ಉತ್ತರ ದಿಕ್ಕಿನಿಂದ ಬರುತ್ತಿದ್ದ ಸಂಚಾರಿ ಜನಾಂಗದವರೊಡನೆ ಸೆಣಸ ಬೇಕಾಗಿತ್ತೋ ಹಾಗೆಯೇ ಪ್ರಾಚೀನ ಚೀನದ ಜನರೂ ಉತ್ತರದಿಂದ ಬರುತ್ತಿದ್ದ ಸಂಚಾರಿ ಜನರನ್ನು ಎದುರಿಸ ಬೇಕಾಗುತ್ತಿತ್ತು. ನಡೆನುಡಿಗಳಲ್ಲಿ ಸಾಮ್ಯವಿದ್ದ ಈ ಗುಂಪುಗಳ ಜನರನ್ನು ಚರಿತ್ರಕಾರರು ಹೂಣರು, ಮಂಗೋಲರು, ತುರುಕರು ಮತ್ತು ಟಾರ್ಟರರೆಂದು ಕರೆದಿದ್ದಾರೆ. ಉತ್ತರ ಯೂರೋಪಿನ ಮತ್ತು ಮಧ್ಯ ಏಷ್ಯದ ನಾರ್ಡಿಕ್ ಜನರು ಹೇಗೆ ಒಮ್ಮೆ ಬೇರೆ ಬೇರೆಯಾಗುವುದು ಮತ್ತೊಮ್ಮೆ ಸೇರಿಕೊಳ್ಳುವುದು ಮಾಡುತ್ತಿದ್ದರೋ ಹಾಗೆಯೇ ಇವರೂ ಹೆಸರಿನಲ್ಲಿ ಬೇರೆ ಬೇರೆಯಾಗಿದ್ದರೂ ಸ್ವಭಾವತಃ ಒಂದೇ ಆಗಿದ್ದರು. ಇವರು ನಾರ್ಡಿಕರಿಗಿಂತ ಮುಂಚೆಯೇ ಕುದುರೆಯನ್ನು ಪಳಗಿಸಿದ್ದರು. ಕ್ರಿ ಪೂ. 100ರಿಂದ ಈಚೆಗೆ ಈ ಜನ ಆಲ್ಟೈ ಪರ್ವತಪ್ರದೇಶದಲ್ಲಿ ಸ್ವತಂತ್ರವಾಗಿ ಕಬ್ಬಿಣದ ಉಪಯೋಗವನ್ನು ಕಂಡು ಹಿಡಿದಿರಲಿಕ್ಕೂ ಸಾಕು. ಪಶ್ಚಿಮದಂತೆಯೇ ಇಲ್ಲಿಯೂ ಸಹ ಈ ಜನರು ಆಗಾಗ್ಗೆ ರಾಜಕೀಯ ಐಕ್ಯತೆ ಪಡೆದು ನಾಗರಿಕ ಜನರು ನೆಲಸಿದ್ದೆಡೆಗಳಿಗೆ ದಂಡೆತ್ತಿ ಹೋಗಿ ಅಲ್ಲಿಯ ಒಡೆಯರಾಗುತ್ತಿದ್ದರು.

ಯೂರೋಪ್ ಪಶ್ಚಿಮ ಏಷ್ಯಾಗಳಲ್ಲಿ ಪ್ರಪ್ರಥಮ ನಾಗರಿಕತೆ ನಾರ್ಡಿಕ್ ಅಥವಾ ಸೆಮಿಟಿಕರದಾಗಿರಲಿಲ್ಲ. ಹಾಗೆಯೇ ಚೀನದಲ್ಲೂ ಮೊದಲ ನಾಗರಿಕತೆ ಮಂಗೋಲರದ್ದಲ್ಲದೆ ಈಜಿಪ್ಷಿಯನ್, ಸುಮೇರಿಯನ್ ಮತ್ತು ದ್ರಾವಿಡ ಕುಲಗಳಿಗೆ ಸಂಬಂಧಿಸಿದ ಕಂದು ಜನರದಾಗಿದ್ದಿರಬಹುದು. ಅಲ್ಲಿನ ಚರಿತ್ರೆ ನಮಗೆ ತಿಳಿದು ಬರುವ ಹೊತ್ತಿಗಾಗಲೇ ಅನೇಕ ದಂಡಯಾತ್ರೆಗಳು ನಡೆದು ಬೇರೆ ಬೇರೆಗಳ ಕುಲ ಜನರು ಬೆರಸಿ ಹೋಗಿದ್ದಿರಬಹುದು. ಅಂತೂ ಕ್ರಿ.ಪೂ. 1750ರ ಹೊತ್ತಿಗಾಗಲೇ ಚೀನಾದಲ್ಲಿ ಅನೇಕ ಪುಟ್ಟ ಪುಟ್ಟ ರಾಜ್ಯಗಳೂ ನಗರ ರಾಜ್ಯಗಳೂ ಇದ್ದುವು. ಈ ಎಲ್ಲ ರಾಜ್ಯಗಳೂ, ಎಲ್ಲರಿಗಿಂತ ಉನ್ನತ ಸ್ಥಾನದಲ್ಲಿದ್ದು "ಸ್ವರ್ಗಪುತ್ರ"ನೆಂದು ಕರೆಸಿಕೊಳ್ಳುತ್ತಿದ್ದ ಚಕ್ರವರ್ತಿಯೊಬ್ಬನಿಗೆ ಕಪ್ಪ ಕಾಣಿಕೆಗಳನ್ನು ಕೊಡುತ್ತಿದ್ದವು. ಈ ಚಕ್ರವರ್ತಿಯೇ ಧಾರ್ಮಿಕ ಮುಂದಾಳುವೂ ಆಗಿರುತ್ತಿದ್ದನು. ಕ್ರಿ.ಪೂ. 1125 ರಲ್ಲಿ ಈ ಶಾಂಗ್ ವಂಶ ಕೊನೆಗೊಂಡಿತು. ಇದರ ನಂತರ ಬಂದ ಛೌ ವಂಶ ಈಜಿಪ್ಟಿನ ಟಾಲೆಮಿಗಳು ಮತ್ತು ಭಾರತದ ಅಶೋಕ ಚಕ್ರವರ್ತಿಯ ಕಾಲದವರೆಗೂ ಚೀನಾವನ್ನು ಸಡಿಲವಾದರೂ ಒಂದು ಬಗೆಯ ಶಿಸ್ತಿನಲ್ಲಿ ನಡೆಸಿಕೊಂಡು ಬಂದಿತು. ಆದರೂ ಚೀನಾ ಈ "ಛೌ" ಕಾಲದಲ್ಲಿ ಶಿಥಿಲಗೊಂಡು ಕ್ರಮೇಣ ಒಡೆಯುತ್ತಾ ಬಂತು. ಹೂಣರು ದಂಡೆತ್ತಿ ಬಂದು ಅಲ್ಲಲ್ಲಿ ತಮ್ಮ ಪಾಳೆಯ ಪಟ್ಟುಗಳನ್ನು ಸ್ಥಾಪಿಸಿದರು. ಅಲ್ಲಿಯ ರಾಜರು ಚಕ್ರವರ್ತಿಗೆ ಕಪ್ಪ ಸಲ್ಲಿಸುವುದನ್ನು ನಿಲ್ಲಿಸಿ ಸ್ವತಂತ್ರರಾಗಿ ಹೋದರು. ಕ್ರಿ.ಪೂ. 6ನೆ ಶತಮಾನದಲ್ಲಿ ಚೈನಾದಲ್ಲಿ ಸರ್ವತಂತ್ರ ಸ್ವತಂತ್ರವೆಂದೇ ಹೇಳಬಹುದಾದ ಐದಾರು ಸಾವಿರ ಸಂಸ್ಥಾನಗಳಿದ್ದುವೆಂದು ಚೀನಾ ಚರಿತ್ರೆಯನ್ನು ಚೆನ್ನಾಗಿ ಅಧ್ಯಯನ ಮಾಡಿರುವ ಒಬ್ಬರು ವಿದ್ವಾಂಸರು ಹೇಳುತ್ತಾರೆ. ಈ ಕಾಲವನ್ನು ಚೀನೀಯರು "ಅವ್ಯವಸ್ಥೆಯ ಯುಗ" ವೆಂದು ಕರೆಯುತ್ತಾರೆ.

ಆದರೆ ಈ ಯುಗದಲ್ಲಿ ಕೂಡ ಬೌದ್ಧಿಕ ಚಟುವಟಿಕೆಗೇನೂ ಕಡಿಮೆ ಇರಲಿಲ್ಲ. ಅಲ್ಲಲ್ಲಿಯೇ ಕಲೆ ಮತ್ತು ನಾಗರಿಕತೆಗಳ ಕೇಂದ್ರಗಳಿದ್ದವು. ಚೀನಾ ವಿಷಯ ಹೆಚ್ಚು ಹೆಚ್ಚಾಗಿ ತಿಳಿದು ಬಂದಂತೆ ಅಲ್ಲಿಯೂ ಗ್ರೀಕ್ ಸಂಸ್ಕೃತಿಯ ಮಿಲೆಟಸ್ ಮತ್ತು ಅಥೆನ್ಸ್, ಪರ್ಗಾಮಮ್ ಮತ್ತು ಮ್ಯಾಸಿಡೋನಿಯಾಗಳಂತಹ ಜ್ಞಾನಾರ್ಜನೆಯ ಕೇಂದ್ರಗಳಿದ್ದುವೆಂದು ತಿಳಿದು ಬರುತ್ತದೆ. ಆದರೆ ಈ ಕಾಲದ ಬಗೆಗೆ ಇನ್ನೂ ಸಾಕಷ್ಟು ತಿಳಿದಿಲ್ಲವಾದುದುದರಿಂದ ಇದಕ್ಕಿಂತ ಇನ್ನೇನೂ ಹೆಚ್ಚಿಗೆ ಹೇಳಲು ಸಾಧ್ಯವಿಲ್ಲ.

ಹರಿದು ಹಂಚಿ ಹೋಗಿದ್ದ ಗ್ರೀಸ್ ತತ್ತ್ವಜ್ಞಾನಿಗಳಿಗೆ ಜನ್ಮವಿತ್ತಿತು. ಪರತಂತ್ರದಲ್ಲಿದ್ದು ಜರ್ಝರಿತವಾಗಿ ಹೋಗಿದ್ದ ಯಹೂದ್ಯ ಸಮಾಜದಲ್ಲಿ ಪ್ರವಾದಿಗಳು ಉದಯಿಸಿದರು. ಅಂತೆಯೇ ಅವ್ಯವಸ್ಥಿತವಾದ ಅಂದಿನ ಚೀನಾದಲ್ಲಿ ತತ್ತ್ವಜ್ಞಾನಿಗಳು ಬೋಧಕರು ಜನ್ಮ ತಾಳಿದರು. ಇವೆಲ್ಲ ವನ್ನೂ ನೋಡಿದರೆ ಸುತ್ತಣ ಪರಿಸ್ಥಿತಿ ಅಸಿಸ್ಥಿತವಾಗಿದ್ದು ಆತಂಕಪೂರ್ಣವಾಗಿದ್ದಷ್ಟೂ ಉನ್ನತ ಮಟ್ಟದ ಚೇತನಗಳಿಗೆ ಪ್ರೋತ್ಸಾಹ ದೊರಕುತ್ತದೆಯೆಂಬಂತೆ ತೋರುತ್ತದೆ. ಈ ಕಾಲದಲ್ಲಿ ಲು ಎಂಬೊಂದು ಸಣ್ಣ ಸಂಸ್ಥಾನದ ಅಧಿಕಾರಿವರ್ಗದ ಶ್ರೀಮಂತ ಮನೆತನದಲ್ಲಿ ಕನ್‌ಫ್ಯೂಷಿಯಸ್ ಜನಿಸಿದನು. ಹೆಚ್ಚು ಕಡಿಮೆ ಗ್ರೀಕ್ ತತ್ತ್ವಜ್ಞಾನಿಗಳಂತೆಯೇ ಈತನೂ 'ಜ್ಞಾನ'ವನ್ನು (wisdom) ಸಂಪಾದಿಸಿ ಬೋಧಿಸುವುದಕ್ಕೋಸ್ಕರ ಒಂದು ಬಗೆಯ ಅಕ್ಯಾಡೆಮಿಯನ್ನು ಪ್ರಾರಂಭಿಸಿದನು. ಏನೊಂದು ಕಟ್ಟುಪಾಡುಗಳಿಲ್ಲದೆ ಅವ್ಯವಸ್ಥೆಯಿಂದಿದ್ದ ಅಂದಿನ ಚೀನಾವನ್ನು ಕಂಡು ಈತನಿಗೆ ಬಹು ವ್ಯಥೆಯಾಯಿತು. ಆದರ್ಶಪೂರ್ಣ, ಉತ್ತಮ ಜೀವನ ಕ್ರಮ ಮತ್ತು ಆಡಳಿತ ವ್ಯವಸ್ಥೆಯನ್ನು ಈತನು ಮನಸ್ಸಿನಲ್ಲಿ ಯೋಜಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಬಲ್ಲ ದೊರೆಯನ್ನು ಹುಡುಕುತ್ತಾ ಒಂದು ಸಂಸ್ಥಾನದಿಂದ ಮತ್ತೊಂದಕ್ಕೆ ತಿರುಗಿದನು. ಕೊನೆಗೆ ಒಬ್ಬ ರಾಜನು ಇದಕ್ಕೆ ಒಪ್ಪಿಕೊಂಡರೂ ಆ ಸ್ಥಾನದ ಒಳಜಗಳಗಳು ಮತ್ತು ಪಿತೂರಿಗಳು ಕನ್‌ಫ್ಯೂಷಿಯಸ್ ಗುರುವಿನ ಪ್ರಭಾವವನ್ನು ತಪ್ಪಿಸಿ ಸುಧಾರಣೆ ಮಾಡಬೇಕೆಂದು ದೊರೆಗಿದ್ದ ಅಪೇಕ್ಷೆಗೆ ಅಡ್ಡಿಯಾದುವು. ಇದಾಗಿ ಸುಮಾರು 150 ವರ್ಷಗಳ ನಂತರ ಪ್ಲೇಟೋ ಸಹ ಹೀಗೆಯೇ ತನ್ನ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವಂತಹ ದೊರೆಯೊಬ್ಬನನ್ನು ಹುಡುಕುತ್ತಾ ಹೊರಟು ಸಿಸಿಲಿಯ ಸೈರಕೂಸಿನ ರಾಜನಾದ ಟೈರಂಟ್ ಡೈಯೊನಿಸಿಯಸ್‌ನ ಸಲಹೆಗಾರನಾಗಿ ಕೆಲಕಾಲ ಇದ್ದನೆಂಬುದು ಗಮನಾರ್ಹವಾಗಿದೆ.

ಕಡೆಗೂ ಕನ್‌ಫ್ಯೂಷಿಯಸ್ಸನ ಆಸೆ ಫಲಿಸಲಿಲ್ಲ. "ಬುದ್ಧಿವಂತನಾದ ದೊರೆ ಯಾರೂ ನನ್ನನ್ನು ನಿಯಮಿಸಿಕೊಳ್ಳುತ್ತೇನೆಂದು ಮುಂದೆ ಬರಲಿಲ್ಲ. ನನ್ನ ಸಾವಿನ ಸಮಯ ಸಹ ಬಂದೇ ಬಿಟ್ಟಿತು" ಎಂದು ಕೊನೆಗೆ ಈತನು ಉದ್ಗಾರವೆತ್ತಬೇಕಾಯಿತು. ಆದರೂ ನಿರಾಶಾಭರಿತವಾದ ಕಡೆ ಗಾಲದಲ್ಲಿ ಎಂದು ಕೊಂಡಷ್ಟು ಈತನ ಬೋಧನೆ ನಿಷ್ಫಲವಾಗಲಿಲ್ಲ. ಇವು ಚೀನೀ ಜನತೆಯ ನಡೆ ನುಡಿಗಳನ್ನು ರೂಪಿಸುವ ದೊಡ್ಡ ಪ್ರಭಾವವಾಗಿ ಮುಂದುವರಿದುವು. ಲಾ ಓಟ್ಸೆ ಮತ್ತು ಬುದ್ಧ ಇವರ ಉಪದೇಶಗಳೊಡನೆ ಇದನ್ನೂ ಸೇರಿಸಿ, ಅವುಗಳನ್ನು "ಮೂರು ಉಪದೇಶಗಳು" ಎಂದು ಚೀನಿಯರು ಗೌರವಿಸುತ್ತಾರೆ.

ಆದರ್ಶ ಪುರುಷನೆಂದರೆ ಹೇಗಿರಬೇಕೆಂದು ವರ್ಣಿಸುವುದರ ಮೂಲಕ ಕನ್‌ಫ್ಯೂಷಿಯಸ್ ತನ್ನ ಮತವನ್ನು ಬೋಧಿಸಿದನು. "ಆತ್ಮ ನಿಗ್ರಹ" ದಿಂದ ಶಾಂತಿ ಗೌತಮನ ಬೋಧನೆಯ ಸಾರಾಂಶ ವಾಗಿತ್ತು. ಬಾಹ್ಯ ಪ್ರಪಂಚದ ಬಗೆಗೆ ಯಥಾರ್ಥ ಜ್ಞಾನ ಗ್ರೀಕ್ ವಿದ್ವಾಂಸರ ಗುರಿಯಾಗಿತ್ತು. ಧರ್ಮಯುತ ನಡೆವಳಿಕೆ ಯಹೂದ್ಯ ಮತದ ಮುಖ್ಯ ಅಂಶವಾಗಿತ್ತು. ಕನ್‌ಫ್ಯೂಷಿಯಸ್ ವೈಯಕ್ತಿಕ ನಡತೆಗೆ ಮುಖ್ಯವಾಗಿ ಗಮನ ಕೊಟ್ಟನು. ಉಳಿದ ಮಹಾ ಬೋಧಕರಲ್ಲಿ ಕನ್‌ಫ್ಯೂಷಿಯಸ್‌ನಷ್ಟು ಸಾರ್ವಜನಿಕ ಏಳಿಗೆಯನ್ನು ಕುರಿತು ಚಿಂತಿಸಿದವರು ಮತ್ತೆ ಯಾರೂ ಇರಲಿಲ್ಲ. ಜನ ಜೀವನದಲ್ಲಿ ತೋರುತ್ತಿದ್ದ ಅವ್ಯವಸ್ಥೆ ಕಷ್ಟ ಸಂಕಟಗಳನ್ನು ಕಂಡು ಮರುಗಿದ ಈತನು ಮಾನವರೆಲ್ಲಾ ಉದಾರ ಮನೋಭಾವವನ್ನು ಪಡೆದರೆ ಮಾನವ ಸಮಾಜ-ಉತ್ತಮಗೊಳ್ಳುವುದೆಂದು ಚಿಂತಿಸಿದನು. ನಮಗೆ ಅತಿ ಎನಿಸುವಷ್ಟು ಮಟ್ಟಿಗೆ ಈತನು ದೈನಂದಿನ ನಡತೆ ಹೇಗಿರಬೇಕೆಂದು ನಿಯಮಗಳನ್ನು ರಚಿಸಿದನು; ಅಂದರೆ ಜೀವನದಲ್ಲಿ ಒದಗಬಹುದಾದ ಸಂದರ್ಭಗಳೊಂದೊಂದರಲ್ಲೂ ಹೇಗೆ ವರ್ತಿಸಬೇಕೆಂದು ಈತನು ನಿಯಮಗಳನ್ನು ರಚಿಸಿಟ್ಟಿದ್ದಾನೆ. ಅಷ್ಟು ಹೊತ್ತಿಗಾಗಲೇ ಉತ್ತರ ಚೀನದಲ್ಲಿ ವಿನಯಶೀಲನೂ ಆತ್ಮನಿಗ್ರಹವುಳ್ಳವನೂ ಆಗಿದ್ದು ಸಾರ್ವಜನಿಕ ವ್ಯವಹಾರಗಳಲ್ಲಿ ಆಸಕ್ತಿಯುಳ್ಳ ಸಭ್ಯ ಮನುಷ್ಯನೆಂದರೆ ಎಲ್ಲರೂ ಗೌರವಿಸುತ್ತಿದ್ದರು. ಕನ್‌ಫ್ಯೂಷಿಯಸ್ ಈ ಆದರ್ಶ ಶಾಶ್ವತ ವಾಗಿ ನಿಲ್ಲುವಂತೆ ಮಾಡಿದನು.

ಛೌ ವಂಶದ ಆಸ್ಥಾನದ ಲೈಬ್ರರಿಯನ್ನು ಬಹುಕಾಲ ನೋಡಿಕೊಳ್ಳುತ್ತಿದ್ದ ಲಾ ಓಟ್ಸೆ ಚೀನದ ಮತ್ತೊಬ್ಬ ಗುರು. ಈತನ ಉಪದೇಶ ಕನ್‌ಫ್ಯೂಷಿಯಸ್ಸನ ಬೋಧನೆಗಿಂತ ರಹಸ್ಯ ಪೂರ್ಣವೂ ಅಸ್ಪಷ್ಟವೂ ಅರಿವಿಗೆ ಸುಲಭವಾಗಿ ಸಿಕ್ಕದ್ದೂ ಆಗಿತ್ತು. ಪ್ರಾಪಂಚಿಕ ಸುಖ, ಅಧಿಕಾರ ಗಳನ್ನು ಗಣನೆಗೆ ತಾರದೆ ಉದಾಸೀನರಾಗಿರಬೇಕೆಂದೂ ಕಾಲ್ಪನಿಕವಾದ ಪುರಾತನ ಕಾಲದ ಸರಳ ಜೀವನವನ್ನನುಸರಿಸಬೇಕೆಂದೂ ಈತನು ಬೋಧಿಸಿದನು. ಈತನ ಬರವಣಿಗೆ ಬಹು ಸಂಕ್ಷಿಪ್ತ. ಗೂಢಾರ್ಥಗಳಿಂದ ತುಂಬಿರುವ ಅದನ್ನು ಅರ್ಥಮಾಡಿಕೊಳ್ಳುವುದು ಸುಲಭ ಸಾಧ್ಯವೂ ಅಲ್ಲ. ಗೌತಮ ಬುದ್ಧನ ಬೋಧನೆಯಂತೆಯೇ ಈ ಉಪದೇಶಗಳೂ ಈತನ ಮರಣಾನಂತರ ಬಹಳ ಬದಲಾಯಿಸಿಹೋದವು. ಅದರೊಡನೆ ದಂತ ಕಥೆಗಳು, ಐತಿಹ್ಯಗಳು ಮಿಶ್ರವಾಗಿ ಹೋದುವಲ್ಲದೆ ವಿಚಿತ್ರವಾದ ಆಚರಣೆಗಳೂ ಮೂಢ ನಂಬಿಕೆಗಳು ಇದಕ್ಕೆ ತಗುಲು ಹಾಕಿಕೊಂಡವು. ಇಲ್ಲಿಯೂ ಇಂಡಿಯಾದಲ್ಲಿ ಆದಂತೆಯೇ ಈ ಹೊಸ ಭಾವನೆಗಳು ಮಾನವ ಕುಲದ ಶೈಶವದ ಯಂತ್ರಮಂತ್ರ ಗಳಲ್ಲಿನ ನಂಬಿಕೆಗಳನ್ನು ಪೈಶಾಚಿಕ ಭಾವನೆಗಳನ್ನೂ ಎದುರಿಸಬೇಕಾಯಿತು. ಈ ಘರ್ಷಣೆಗಳ ಫಲವಾಗಿ ಈ ಹೊಸ ಭಾವನೆಗಳನ್ನು ಪ್ರಾಚೀನ ಕಾಲದ ಅಸಂಬದ್ಧವೆನಿಸುವ ವಿಚಿತ್ರ ಆಚರಣೆಗಳು ಮುಚ್ಚಿ ಹಾಕಿದುವು. ಈಗ ಚೈನಾದಲ್ಲಿ ಆಚರಣೆಯಲ್ಲಿರುವ ಟಾವೊಯಿಸಂ (ಲಾ-ಓಟ್ಸೆಯ ಉಪದೇಶಗಳೇ ಇದಕ್ಕೆ ಮುಖ್ಯ ಆಧಾರವೆನ್ನುತ್ತಾರೆ) ಮತ್ತು ಬೌದ್ಧಮತಗಳೆರಡೂ ಪ್ರಾಚೀನ ಸುಮೇರಿಯ ಮತ್ತು ಈಜಿಪ್ಟ್ ದೇಶಗಳ ಪಶುಯಜ್ಞ ಪ್ರಧಾನ ಮತಗಳನ್ನು ಬಹುವಾಗಿ ಹೋಲುತ್ತವೆ. ಅಲ್ಲಿಯಂತೆ ಇಲ್ಲಿಯೂ ದೇವಸ್ಥಾನ, ಪೂಜಾರಿ, ದೇವರಿಗೆ ಒಪ್ಪಿಸಬೇಕಾದ ಕಾಣಿಕೆ ಎಲ್ಲವೂ ಕಾಣ ಬರುತ್ತವೆ. ಆದರೆ ಕನ್‌ಫ್ಯೂಷಿಯಸ್ಸನ ಮತ ಹೀಗೆ ಮುಚ್ಚಿ ಹೋಗಲಿಲ್ಲ. ಏಕೆಂದರೆ

ಆದರಲ್ಲಿ ಜನ ತಪ್ಪು ತಪ್ಪಾಗಿ ತಿಳಿದುಕೊಳ್ಳುವಂತಹ ಗೂಢ ವಚನಗಳೇನೂ ಇಲ್ಲದೆ ಎಲ್ಲ ಸರಳ ವಾಗಿತ್ತು.

ಹ್ವಾಂಗ್ ಹೋ ನದಿಯನ್ನು ಆಧರಿಸಿರುವ ಉತ್ತರ ಚೀನಾದಲ್ಲಿ ಜನರ ನಡೆ ನುಡಿ ಕನ್ ಫ್ಯೂಷಿಯಸ್ಸಿನ ಬೋಧನೆಯನ್ನವಲಂಬಿಸಿತು. ಯಾಂಗ್‌ಟ್ಸಿ ನದಿ ಹರಿಯುವ ದಕ್ಷಿಣ ಚೀನ ಟಾವೊ ಮತವನ್ನು ಹಿಡಿಯಿತು. ಅಂದಿನಿಂದ ಈವರೆಗೂ ಇವೆರಡು ತತ್ತ್ವಗಳ ಘರ್ಷಣೆಯನ್ನು ಚೀನದ ಚರಿತ್ರೆಯಲ್ಲಿ ನಾವು ನೋಡಬಹುದು. ಉತ್ತರಚೀನ–ದಕ್ಷಿಣಚೀನ, ಪೀಕಿಂಗ್–ನ್ಯಾನ್‌ಕಿಂಗ್ ಹೀಗೆ ಈ ಹೋರಾಟ ನಡೆದೇ ಇದೆ. ಉತ್ತರ ಚೀನೀಯರು ಋಜು ಸ್ವಭಾವದವರೂ, ಸಂಪ್ರದಾಯ ಶರಣರೂ, ಅಧಿಕಾರಕ್ಕೆ ತಲೆಬಾಗುವವರೂ ಆಗಿದ್ದರೆ ದಕ್ಷಿಣದವರು ಸಂದೇಹವಾದಿಗಳಾಗಿದ್ದು ಯಾವುದೇ ಕಟ್ಟು ಪಾಡಿಗೆ ಮನ್ನಣೆ ಕೊಡದೆ ಹೊಸತನ್ನು ಪ್ರಯೋಗಿಸಿ ನೋಡುವ ಮನೋಭಾವ ದವರೂ ಕಲಾಭಿರುಚಿಯುಳ್ಳವರೂ ಆಗಿದ್ದಾರೆ.

ಮೊದಲೇ "ಅವ್ಯವಸ್ಥೆಯ ಯುಗ"ವನ್ನು ಪ್ರವೇಶಿಸಿದ್ದು ಹರಿದು ಹಂಚಿ ಹೋಗಿದ್ದ ಚೀನಾ ಕ್ರಿ.ಪೂ. 6ನೆ ಶತಮಾನದಲ್ಲಿ ಅತ್ಯಂತ ಅಧೋಗತಿಗಿಳಿಯಿತು. ಛೌ ರಾಜವಂಶ ತೀರಾ ಬಲಹೀನವಾಗಿ ಶೋಚನೀಯ ಸ್ಥಿತಿಗಿಳಿಯಿತು. ಇದರಿಂದ ಬೇಸರಗೊಂಡ ಲಾ-ಒಟ್ಸೆ ಏನೂ ಸ್ವಾರಸ್ಯವಿಲ್ಲದ ರಾಜಾಸ್ಥಾನವನ್ನು ತೊರೆದು ಏಕಾಂತವಾಸಕ್ಕೆ ಹೊರಟು ಹೋದನು.

ಅಪ್ರಧಾನವೆಂದು ಮೇಲ್ನೋಟಕ್ಕೆ ತೋರುತ್ತಿದ್ದರೂ ಈ ಮೂರು ಪ್ರಭುತ್ವಗಳು ಅಂದಿನ ಚೀನಾದಲ್ಲಿ ಅಧಿಕಾರ ನಡೆಸುತ್ತಿದ್ದವು; ಉತ್ತರದಲ್ಲಿ, ಟ್ಸಿ ಮತ್ತು ಟ್ಸಿನ್, ದಕ್ಷಿಣದಲ್ಲಿ ಯಾಂಗ್‌ಟ್ಸಿ ನದಿ ಪ್ರದೇಶದಲ್ಲಿ ಆಕ್ರಮಣಕಾರಿ ಪ್ರವೃತ್ತಿಯ ಛು. ಕೊನೆಗೆ ಮೊದಲಿನ ಎರಡು ಪ್ರಭುತ್ವ ಗಳು ಒಪ್ಪಂದ ಮಾಡಿಕೊಂಡು ಛು ಪ್ರಭುತ್ವವನ್ನು ಸೋಲಿಸಿ ಚೀನಾದಲ್ಲಿ ಶಾಂತಿ, ನಿಶ್ಶಸ್ತ್ರೀ ಕರಣಗಳನ್ನು ತಂದಿತ್ತುವು. ಇವುಗಳಲ್ಲಿ ಟ್ಸಿನ್ ಹೆಚ್ಚು ಪ್ರಭಾವಶಾಲಿಯಾಯಿತು. ಕಡೆಗೆ ಅಶೋಕ ಚಕ್ರವರ್ತಿಕಾಲದ ಸುಮಾರಿಗೆ ಟ್ಸಿನ್ ರಾಜನು ಛೌ ಚಕ್ರವರ್ತಿಯ ಧಾರ್ಮಿಕ ಯಜ್ಞಪಾತ್ರೆಗಳನ್ನು ವಶಪಡಿಸಿಕೊಂಡು ಧಾರ್ಮಿಕ ವಿಧಿಗಳನ್ನೆಲ್ಲಾ ತಾನೇ ನಡೆಸಲು ಮೊದಲಿಟ್ಟನು. ಈತನ ಮಗ ಷಿ-ಹ್ಯಾಂಗ್-ಟಿ ಯನ್ನು ಚೀನೀ ಚರಿತ್ರೆಯಲ್ಲಿ "ಪ್ರಪ್ರಥಮ ವಿಶ್ವ ಸಾಮ್ರಾಟ"ನೆಂದು ಕರೆದಿದ್ದಾರೆ. (ಈತನು ಕ್ರಿ.ಪೂ. 246 ರಲ್ಲಿ ರಾಜಪಟ್ಟಕ್ಕೆ ಬಂದು ಕ್ರಿ.ಪೂ. 220 ರಲ್ಲಿ ಚಕ್ರವರ್ತಿಯಾದನು.)

ಷಿ-ಹ್ಯಾಂಗ್-ಟಿ ಅಲೆಗ್ಸಾಂಡರನಿಗಿಂತ ಅದೃಷ್ಟಶಾಲಿ. ಈತನು ಮೂವತ್ತಾರು ವರ್ಷಕಾಲ ರಾಜ್ಯಭಾರ ಮಾಡಿದನು. ಈ ಉತ್ಸಾಹಪೂರ್ಣ ಆಳ್ವಿಕೆಯಿಂದ ಚೀನದಲ್ಲಿ ಒಗ್ಗಟ್ಟು ಬಂದು ಸಂಪದ್ಯುಕ್ತವಾದ ಹೊಸಯುಗವೇ ಆರಂಭವಾಯಿತು. ಉತ್ತರದ ಮರಳು ಕಾಡುಗಳಿಂದ ದಂಡೆತ್ತಿ ಬರುತ್ತಿದ್ದ ಹೂಣರೊಂದಿಗೆ ಈತನು ಹುರುಪಿನಿಂದ ಹೋರಾಡಿ ಅವರು ಮುನ್ನುಗ್ಗಲು ತಡೆ ಯಾಗುವಂತೆ ಅದ್ಭುತವಾದ "ಚೀನದ ದೊಡ್ಡಗೋಡೆ" ಯನ್ನು ಕಟ್ಟಿಸಲು ಪ್ರಾರಂಭಿಸಿದನು.

ಅಡಿ ಟಿಪ್ಪಣಿ

24 ಗ್ರೀಕ್ ಪುರಾಣಗಳಲ್ಲಿ ಬರುವ ಕಾವ್ಯ, ಸಂಗೀತ, ನೃತ್ಯ, ನಾಟಕ ಮತ್ತು ಶಾಸ್ತ್ರಗಳ ಅಭಿಮಾನಿದೇವತೆಗಳು

ಪುಸ್ತಕ ವಿಮರ್ಶೆ

ಕಲಿಸುವ ಸಾಮಾನ್ಯ ಪದ್ಧತಿಗಳು

ಲೇ ; ಪ್ರೊ॥ ವ್ಹಿ. ಜಿ. ಮಾರಿಹಾಳ, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ದ್ವಿತೀಯ ಆವೃತ್ತಿ, 1984, ಪುಟಗಳು 453.
ಬೆಲೆ ರೂ. 46–00.

ಮಕ್ಕಳಿಗೆ ವಿದ್ಯೆ ಕಲಿಸುವ ಶಿಕ್ಷಕರಿಗೆ ವ್ಯವಸ್ಥಿತವಾದ ಪ್ರಶಿಕ್ಷಣ ಆವಶ್ಯಕವೆಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಶಿಕ್ಷಕ ವೃತ್ತಿಯನ್ನು ಕೈಗೊಳ್ಳುವವರಿಗೆ ಉತ್ತಮ ರೀತಿಯ ಪ್ರಶಿಕ್ಷಣ ವನ್ನು ನೀಡುವುದರ ಜೊತೆಗೆ,ವೃತ್ತಿನಿರತ ಅಧ್ಯಾಪಕರಿಗೂ ಸೇವಾವಧಿ ಪ್ರಶಿಕ್ಷಣದ ಆವಶ್ಯಕತೆಯಿದೆ. ಇದರಿಂದ ಅಧ್ಯಾಪಕರು ತಮ್ಮ ಬೋಧನ ಕಾರ್ಯವನ್ನು ಇನ್ನೂ ಉತ್ತಮಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಧ್ಯಾಪಕರ ಪ್ರಶಿಕ್ಷಣದ ಪಠ್ಯಕ್ರಮದಲ್ಲಿ ಶಿಕ್ಷಣದ ತಾತ್ವಿಕ, ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಆಧಾರಗಳು, ಶೈಕ್ಷಣಿಕ ಹಣಕಾಸು, ಶೈಕ್ಷಣಿಕ ಇತಿಹಾಸ, ಶೈಕ್ಷಣಿಕ ಆಡಳಿತ ಈ ವಿಷಯಗಳ ಬಗೆಗೆ ಸೈದ್ಧಾಂತಿಕ ವಿಚಾರಗಳ ಬೋಧನೆಯ ಜೊತೆಗೆ, ತರಗತಿಗಳಲ್ಲಿ ವಿವಿಧ ಶಾಲಾ ವಿಷಯಗಳನ್ನು ಬೋಧಿಸುವ ವಿಧಾನಗಳನ್ನೂ, ತಂತ್ರಗಳನ್ನೂ ಬೋಧಿಸಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡುವ ತಂತ್ರಗಳನ್ನು ಬೋಧನೋಪಕರಣಗಳನ್ನು ತಯಾರಿಸುವ ಮತ್ತು ಉಪಯೋಗಿಸುವ ವಿಧಾನಗಳನ್ನು ಶಿಕ್ಷಕರು ತಿಳಿದಿರಬೇಕಾಗುತ್ತದೆ. ಸೈದ್ಧಾಂತಿಕ ವಿಚಾರಗಳ ಬೋಧನೆಗಿಂತ ಬೋಧನಾ ವಿಧಾನಗಳಲ್ಲಿ ಶಿಕ್ಷಕರಿಗೆ ಹೆಚ್ಚಿನ ತರಬೇತಿ ಆವಶ್ಯಕವೆನಿಸುತ್ತದೆ. ಏಕೆಂದರೆ ಈ ಕೌಶಲ್ಯಗಳು ತರಗತಿಯಲ್ಲಿ ಬೋಧಿಸುವಾಗ ಶಿಕ್ಷಕರಿಗೆ ನೇರವಾಗಿ ಉಪಯೋಗಕ್ಕೆ ಬರುತ್ತವೆ. ಆದ್ದರಿಂದ ಶಿಕ್ಷಕ ತರಬೇತಿ ಕಾರ್ಯಕ್ರಮಗಳಲ್ಲಿ ಬೋಧನ ವಿಧಾನಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ.

ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಟ್ಟದಲ್ಲಿ ತರಬೇತಿ ಪಡೆಯುವ ಶಿಕ್ಷಣಾರ್ಥಿಗಳಿಗೆ ಬೋಧನ ವಿಧಾನಗಳಲ್ಲಿ ಸರಿಯಾದ ತರಬೇತಿಯನ್ನು ಕೊಡಬೇಕು. ಆಂಗ್ಲಭಾಷೆಯಲ್ಲಿ ಬೋಧನ ವಿಧಾನಗಳ ಬಗ್ಗೆ ಅನೇಕ ಉತ್ತಮ ಗ್ರಂಥಗಳು ಲಭ್ಯವಿದೆ. ಬೋಧನ ವಿಧಾನಗಳ ಬಗ್ಗೆ ನಡೆಯುವ ಸಂಶೋಧನೆಗಳ ಫಲವಾಗಿ ಹೊಸದಾದ ಬೋಧನ ವಿಧಾನಗಳೂ ಮತ್ತು ತಂತ್ರಗಳೂ ಬೆಳಕಿಗೆ ಬರುತ್ತಿರುತ್ತವೆ. ಇವುಗಳ ಬಗ್ಗೆಯೂ ಆಂಗ್ಲ ಭಾಷೆಯಲ್ಲಿ ಗ್ರಂಥಗಳು ಪ್ರಕಟವಾಗುತ್ತಿರುತ್ತವೆ. ಆದರೆ ಟಿ. ಸಿ. ಎಚ್. ಮತ್ತು ಬಿ. ಎಡ್. ಮಟ್ಟದಲ್ಲಿ ಕನ್ನಡ ಮಾಧ್ಯಮದಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಬೋಧನ ವಿಧಾನಗಳ ಬಗ್ಗೆ ಒಳ್ಳೆಯ ಗ್ರಂಥಗಳೇ ಕನ್ನಡ ಭಾಷೆಯಲ್ಲಿ ಇಲ್ಲವೆಂದರೆ ತಪ್ಪಾಗಲಾರದು. ಅಂಥ ಗ್ರಂಥಗಳ ಆವಶ್ಯಕತೆ ಇತ್ತು. ಈ ದೃಷ್ಟಿಯಿಂದ

ಕರ್ನಾಟಕ ವಿಶ್ವವಿದ್ಯಾನಿಲಯದ, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯವು ಪ್ರಕಟಿಸಿರುವ ಮತ್ತು ಪ್ರೊ॥ ವ್ಹಿ. ಜಿ. ಮಾರಿಹಾಳರಿಂದ ರಚಿತವಾಗಿರುವ "ಕಲಿಸುವ ಸಾಮಾನ್ಯ ಪದ್ಧತಿಗಳು" ಎನ್ನುವ ಗ್ರಂಥ ಕನ್ನಡ ಮಾಧ್ಯಮದಲ್ಲಿ ಶಿಕ್ಷಕ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಬೋಧನ ವಿಧಾನಗಳ ಬಗ್ಗೆ ಸೂಕ್ತ ಗ್ರಂಥವಾಗಿದೆ ಎನ್ನಬೇಕು.

ಪ್ರಸ್ತುತ ಗ್ರಂಥ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳನ್ನು ಕಲಿಸುವ ವಿಧಾನಗಳನ್ನೂ ತಂತ್ರಗಳನ್ನೂ ವಿವೇಚಿಸುವ ಸಮಗ್ರ ಗ್ರಂಥವಾಗಿದೆ. ಜೊತೆಗೆ ಈ ಗ್ರಂಥದಲ್ಲಿ ಬೋಧನಾ ವಿಧಾನಗಳ ತಾತ್ವಿಕ ಹಿನ್ನೆಲೆ, ಆಧುನಿಕ ಶೈಕ್ಷಣಿಕ ಬೆಳವಣಿಗೆಗಳು, ಮೌಲ್ಯಮಾಪನ, ಶಿಕ್ಷಕರ ಲಕ್ಷಣಗಳು ಮುಂತಾದ ವಿಚಾರಗಳನ್ನೂ ವಿವೇಚಿಸಲಾಗಿದೆ. ಇದು 1975ರಲ್ಲಿ ಪ್ರಥಮವಾಗಿ ಪ್ರಕಟಗೊಂಡಿದ್ದು, 1984ರಲ್ಲಿ ದ್ವಿತೀಯ ಆವೃತ್ತಿಯಾಗಿ ಹೊರಬಿದ್ದಿದೆ.

ಈ ಗ್ರಂಥವನ್ನು ಎಂಟು ಘಟಕಗಳಾಗಿ ವಿಭಾಗಿಸಲಾಗಿದೆ. ಮೊದಲನೇ ಘಟಕದಲ್ಲಿ ಕಲಿಸುವ ವಿಧಾನಗಳ ತಾತ್ವಿಕ ಹಾಗೂ ಮನೋವೈಜ್ಞಾನಿಕ ತತ್ವಗಳ ಸ್ಥೂಲ ಪರಿಚಯವಿದೆ. ಕಲಿಸುವ ಪದ್ಧತಿಗಳ ಮೂಲಗಳಾವವು, ಪಾಠಯೋಜನೆಯನ್ನು ಹೇಗೆ ಮಾಡಿಕೊಳ್ಳಬೇಕು, ಎನ್ನುವುದನ್ನೂ ವಿವರಿಸಲಾಗಿದೆ. ಕಡೆಯಲ್ಲಿ ಉತ್ತಮ ಪಾಠಗಳ ಲಕ್ಷಣಗಳನ್ನೂ, ಬೋಧನೆ ಮಾಡುವಾಗ ಉಂಟಾಗಬಹುದಾದ ಸಾಮಾನ್ಯ ತಪ್ಪುಗಳನ್ನು ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ. ಪಾಠ ಯೋಜನೆಯ ಮಾದರಿಯೊಂದನ್ನು ಕೊಟ್ಟಿದ್ದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನ ಉಂಟಾಗುತ್ತಿತ್ತು.

ಎರಡನೇ ಘಟಕದಲ್ಲಿ ವಿವಿಧ ನಮೂನೆಯ ಪಾಠಗಳ ಲಕ್ಷಣಗಳನ್ನು ವಿವರಿಸಲಾಗಿದೆ. ಸಮಸ್ಯಾಪಾಠ, ದೃಢೀಕರಣ ಪಾಠ, ಚರ್ಚೆಯ ಪಾಠ, ಪುನರವಲೋಕನ ಪಾಠ, ರಸಗ್ರಹಣ ಪಾಠ, ಮುಂತಾದವುಗಳ ಲಕ್ಷಣಗಳು, ಉದ್ದೇಶಗಳು, ಅವುಗಳನ್ನು ಕೈಗೊಳ್ಳುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳನ್ನು ಈ ಘಟಕದಲ್ಲಿ ಚೆನ್ನಾಗಿ ವಿವೇಚಿಸಲಾಗಿದೆ. ಶಿಕ್ಷಕರು ತಮ್ಮ ವೃತ್ತಿಯಲ್ಲಿ ವಿವಿಧ ರೀತಿಯ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೋಧಿಸಬೇಕಾಗುತ್ತದೆ. ಆದ್ದರಿಂದ ಅವರು ವಿವಿಧ ರೀತಿಯ ಪಾಠಗಳನ್ನು ಕೈಗೊಳ್ಳುವುದರಲ್ಲಿ ಸಿದ್ಧಹಸ್ತರಿರಬೇಕಾಗುತ್ತದೆ.

ಯಾವುದೇ ರೀತಿಯ ಪಾಠವನ್ನು ಕೈಗೊಳ್ಳುವಾಗ ಅದು ಯಶಸ್ವಿಯಾಗಬೇಕಾದರೆ ವಿವಿಧ ರೀತಿಯ ಬೋಧನಾತಂತ್ರಗಳನ್ನು ಬಳಸಬೇಕಾಗುತ್ತದೆ. ಪ್ರಶ್ನೆಗಳನ್ನು ಕೇಳುವುದು, ಮನೆಗೆಲಸ ಕೊಡುವುದು, ಮತ್ತು ಅವುಗಳನ್ನು ತಿದ್ದುವುದು, ವಿವರಣೆ ನೀಡುವುದು, ಕಪ್ಪು ಹಲಗೆಯನ್ನು ಫಲಪ್ರದವಾಗಿ ಉಪಯೋಗಿಸುವುದು, ಇತರ ಪಾಠೋಪಕರಣಗಳನ್ನು ಉಪಯೋಗಿಸುವುದು, ದೃಷ್ಟಾಂತಗಳ ಮೂಲಕ ಬೋಧಿಸುವುದು, ಪಠ್ಯಪುಸ್ತಕಗಳನ್ನು ಉಪಯೋಗಿಸಿಕೊಳ್ಳುವುದು, ಮುಂತಾದ ಚಟುವಟಿಕೆಗಳಲ್ಲಿ ಇರುವ ತಂತ್ರಗಳನ್ನು ಅಧ್ಯಾಪಕರು ತಿಳಿದಿರಬೇಕಾಗುತ್ತದೆ ಮತ್ತು ಅವುಗಳಲ್ಲಿ ತರಬೇತಿ ಹೊಂದಿರಬೇಕಾಗುತ್ತದೆ. ಮೂರನೇ ಘಟಕದಲ್ಲಿ ಈ ಎಲ್ಲಾ ತಂತ್ರಗಳನ್ನು ಕೆಲವು ಚಿತ್ರಗಳ ಸಹಾಯದಿಂದ ವಿವರಿಸಲಾಗಿದೆ. ಎರಡು ಮತ್ತು ಮೂರನೇ ಘಟಕಗಳು ಶಿಕ್ಷಕರಿಗೆ ಮತ್ತು ಶಿಕ್ಷಕ-ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವೆನಿಸುತ್ತದೆ.

ನಾಲ್ಕನೇ ಘಟಕದಲ್ಲಿ ತರಗತಿಯಲ್ಲಿ ಶಿಕ್ಷಕನ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.

ವಿದ್ಯಾರ್ಥಿಗಳನ್ನು ವರ್ಗೀಕರಿಸುವುದು ಹೇಗೆ, ವಿವಿಧ ವಿಷಯಗಳ ನಡುವೆ ಸಂಬಂಧವನ್ನು ಕಲ್ಪಿಸಿ ಬೋಧಿಸುವುದು ಹೇಗೆ, ತರಗತಿಯಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ತರುವುದು ಹೇಗೆ, ತರಗತಿಯಲ್ಲಿ ಅಧ್ಯಾಪಕನ ಯಶಸ್ಸಿಗೆ ಕಾರಣವಾದ ಅಂಶಗಳಾವುವು ಎಂಬ ವಿಚಾರಗಳನ್ನು ವಿವೇಚಿಸಿ, ಕಡೆಯಲ್ಲಿ ತರಗತಿಯಲ್ಲಿ ವಿದ್ಯಾರ್ಥಿಗಳ ಗಮನವನ್ನು ಸೆಳೆಯುವುದು ಹೇಗೆ ಎನ್ನುವುದನ್ನು ವಿವರಿಸಲಾಗಿದೆ. ಐದನೇ ಘಟಕ ಮೌಲ್ಯಮಾಪನದ ವಿವಿಧ ತಂತ್ರಗಳು, ಅಂಕನಿರ್ಧಾರ, ವಿವಿಧ ರೀತಿಯ ಪರೀಕ್ಷೆಗಳನ್ನು ತಯಾರಿಸಿ, ಉಪಯೋಗಿಸುವ ವಿಧಾನಗಳಿಗೆ ಸಂಬಂಧಿಸಿದೆ.

ಆರನೇ ಘಟಕದಲ್ಲಿ ಆಧುನಿಕ ಶಿಕ್ಷಣದಲ್ಲಿ ಬೆಳೆದು ಬಂದಿರುವ ಕೆಲವು ನೂತನ ಶಿಕ್ಷಣ ಪದ್ಧತಿಗಳನ್ನು ವಿವರಿಸಿದ್ದಾರೆ. ಈ ಪದ್ಧತಿಗಳು ಪ್ರಸಿದ್ಧ ಶಿಕ್ಷಣ ತಜ್ಞರಿಂದ ಪ್ರಯೋಗಿಸಲ್ಪಟ್ಟು ಸಾಕಷ್ಟು ಫಲಪ್ರದವೆನಿಸಿವೆ. ಇವುಗಳಿಂದ ಇಂದು ತರಗತಿಗಳಲ್ಲಿ ಉಪಯೋಗದಲ್ಲಿರುವ ಅನೇಕ ಬೋಧನಾ ವಿಧಾನಗಳು ಹಾಗೂ ತಂತ್ರಗಳು ಹುಟ್ಟಿಕೊಂಡಿವೆ. ಈ ಪದ್ಧತಿಗಳ ಪ್ರವರ್ತಕರು ಶಿಕ್ಷಣಕ್ಷೇತ್ರಕ್ಕೆ ತಮ್ಮ ಕ್ರಾಂತಿಕಾರಕ ಕೊಡುಗೆಗಳನ್ನು ನೀಡಿದ್ದಾರೆ. ಶ್ರೀಮತಿ ಮೇರಿಯಾ ಮಾಂಟೆಸ್ಸೋರಿ, ಜಾನ್ ಡ್ಯೂಯಿ, ಹರ್ಬಾರ್ಟ್ ಫ್ರೊಬೆಲ್–ಇವರುಗಳ ವಿಚಾರಗಳನ್ನು ಈ ಘಟಕದಲ್ಲಿ ಲೇಖಕರು ಬಹು ಚೆನ್ನಾಗಿ ವಿವರಿಸಿದ್ದಾರೆ.

ಏಳನೇ ಘಟಕದಲ್ಲಿ ಇತ್ತೀಚೆಗೆ ಬಂದಿರುವ ಇನ್ನೂ ಕೆಲವು ಹೊಸ ಬೋಧನ ವಿಧಾನಗಳನ್ನು ವಿವರಿಸಿದ್ದಾರೆ. ಸಮೂಹ ಬೋಧನೆ, ಯೋಜಿತ ಬೋಧನೆ ಮತ್ತು ಶಿಕ್ಷಣದಲ್ಲಿ ತಂತ್ರಜ್ಞಾನದ ಪ್ರಭಾವಗಳನ್ನು ವಿವರಿಸಲಾಗಿದೆ. ಕಡೆಯಲ್ಲಿ ಲೇಖಕರೇ ಸ್ವತಃ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕಾಲೇಜು ಮಟ್ಟದಲ್ಲಿ ಬೋಧನೆಯ ಬಗ್ಗೆ ಕೈಗೊಂಡಿದ್ದ ಸಂಶೋಧನೆಯೊಂದನ್ನು ವಿವರಿಸಿರುವುದು ಈ ಘಟಕದ ಒಂದು ವೈಶಿಷ್ಟ್ಯತೆ. ಈ ವಿಧಾನವನ್ನು "ಕ್ಯೂಸ್" (KUCE) ಪದ್ಧತಿ ಅಂದರೆ Karnataka University College of Education Plan ಎಂದು ಹೆಸರಿಸಿದ್ದಾರೆ. "ಕ್ಯೂಸ್" ಪದ್ಧತಿಯಿಂದ ಕಲಿತ ವಿದ್ಯಾರ್ಥಿಗಳ ಕಲಿಕೆ ಸಾಂಪ್ರದಾಯಿಕ ವಿಧಾನದಿಂದ ಕಲಿತ ಕಲಿಕೆಗಿಂತ ಉತ್ತಮವಾಗಿದ್ದುದು ಕಂಡುಬಂದಿದೆ.

ಎಂಟನೇ ಘಟಕದಲ್ಲಿ ಶಿಕ್ಷಕನ ಕರ್ತವ್ಯಗಳು, ತರಗತಿಯಲ್ಲಿ ಶಿಕ್ಷಕನ ಪಾತ್ರ, ಮತ್ತು ವಿದ್ಯಾರ್ಥಿಗಳ ಮೇಲೆ ಶಿಕ್ಷಕನ ಪ್ರಭಾವ, ಈ ವಿಚಾರಗಳನ್ನು ವಿವರಿಸಲಾಗಿದೆ. ಕಡೆಯಲ್ಲಿ ಭಾರತದಲ್ಲಿ ಪ್ರಚಲಿತವಿರುವ ಕೆಲವು ಅಪ್ಪಟ ಭಾರತೀಯ ಕಲಿಸುವ ಪದ್ಧತಿಗಳನ್ನು ಕೀರ್ತನೆ, ಲಾವಣಿ, ಗಮಕ, ನಾಟಕ, ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಈ ಗ್ರಂಥದ ಲೇಖಕರು ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿದ್ದಾರೆ. ಈ ಹಿಂದೆ ವಿವಿಧ ಮಟ್ಟಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ದೀರ್ಘ ಅನುಭವ ಪಡೆದಿದ್ದಾರೆ. ಈ ಆಳವಾದ ಹಾಗೂ ವಿಸ್ತೃತವಾದ ಅನುಭವದ ಫಲವಾಗಿ ಈ ಗ್ರಂಥ ರೂಪುಗೊಂಡಿದೆ. ಲೇಖಕರು ಈ ಗ್ರಂಥ ರಚನೆಗೆ ಇತ್ತೀಚೆಗೆ ಶಿಕ್ಷಣಶಾಸ್ತ್ರದ ಬಗ್ಗೆ ಪ್ರಕಟವಾಗಿರುವ ಗ್ರಂಥಗಳಿಂದ ಸಾಮಗ್ರಿಯನ್ನು ಸಂಗ್ರಹಿಸುವುದರ ಜೊತೆಗೆ, ತಮ್ಮ ಅನುಭವಗಳನ್ನೂ ಉಪಯೋಗಿಸಿಕೊಂಡಿದ್ದಾರೆ.

ಭಾಷೆ ಸರಳವಾಗಿಯೂ,ಗ್ರಾಹ್ಯವಾಗಿಯೂ ಇದೆ. ಆದರೂ ಅಲ್ಲಲ್ಲಿ ಉಪಯೋಗಿಸಿರುವ ಪ್ರಗಲ್ಭ, ಭೂಮ,ಟ್ರೋಟಕ, ಭಾಷ್ಕಳ ಮುಂತಾದ ಶಬ್ದಗಳಿಗೆ ಬದಲಾಗಿ ಸರಳವಾದ ಶಬ್ದಗಳನ್ನು ಉಪಯೋಗಿಸಬಹುದಿತ್ತು. ಇಯತ್ತೆ, ಹ್ನೂಂಟಿ, ಕುಬಿ, ನಿತ್ತರಣೆ. ಖಿಡು, ಲವಾಜಮೆ, ಗೇನಿಸು ಮುಂತಾದ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಶಬ್ದಗಳು ಹಳೇ ಮೈಸೂರು ರಾಜ್ಯದ ವಿದ್ಯಾರ್ಥಿಗಳಿಗೆ ಸುಲಭ ಗ್ರಾಹ್ಯವಲ್ಲ. ಅದರೂ ಅವರಿಗೆ ಈ ಶಬ್ದಗಳ ಪರಿಚಯವಾಗುವುದು ಒಳ್ಳೆಯದಾದುದರಿಂದ. ಇವುಗಳಿಗೆ ಸಮಾನಾರ್ಥಕಗಳಾದ ಹಳೇ ಮೈಸೂರು ಪ್ರಾಂತ್ಯದಲ್ಲಿ ಪ್ರಚಲಿತವಿರುವ ಶಬ್ದಗಳನ್ನೂ ಕೊಟ್ಟಿದ್ದರೆ ಒಳ್ಳೆಯದೆನಿಸುತ್ತಿತ್ತು. ವಿಷಯ ವಿವರಣೆ ಸುಲಭವಾಗಿ ಅರ್ಥವಾಗುವಂತಿವೆ. ಅಲ್ಲಲ್ಲಿ ಚಿತ್ರಗಳನ್ನೂ. ಕೊಟ್ಟಿರುವುದರಿಂದ ವಿಷಯದ ಸ್ಪಷ್ಟೀಕರಣ ಹೆಚ್ಚಿದೆ. ಪ್ರತಿ ಅಧ್ಯಾಯದ ಕಡೆಯಲ್ಲಿ ಮುಖ್ಯ ಅಂಶಗಳನ್ನೂ, ಅಭ್ಯಾಸಕ್ಕಾಗಿ ಪ್ರಶ್ನೆಗಳನ್ನು ಕೊಟ್ಟಿರುವುದು ಒಂದು ಒಳ್ಳೆಯ ಅಂಶ. ಈ ಪ್ರಶ್ನೆಗಳಲ್ಲಿ ಕೆಲವಕ್ಕೆ ಉತ್ತರ ಈ ಗ್ರಂಥದಿಂದ ನೇರವಾಗಿ ದೊರೆಯುವುದಿಲ್ಲ. ವಿದ್ಯಾರ್ಥಿಗಳು ಬೇರೆ ಗ್ರಂಥಗಳಿಂದಲೂ ಸಾಮಗ್ರಿಯನ್ನು ಸಂಗ್ರಹಿಸಲು ಈ ಪ್ರಶ್ನೆಗಳು ಪ್ರೇರೇಪಿಸುತ್ತವೆ. ಇದರಿಂದ ಅವರ ಅಧ್ಯಯನ ವಿಸ್ತೃತಗೊಳ್ಳುತ್ತದೆ. ಪ್ರತಿ ಅಧ್ಯಾಯದ ಪ್ರಾರಂಭದಲ್ಲಿ ಆಯಾ ಅಧ್ಯಾಯದಲ್ಲಿ ವಿವರಿಸುವ ವಿಷಯಗಳಿಗೆ ಸಂಬಂಧಿಸಿದ ಒಂದು ಅಥವಾ ಎರಡು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಕೆಲವನ್ನು ಆಂಗ್ಲಭಾಷೆಯಲ್ಲೂ, ಕೆಲವನ್ನು ಕನ್ನಡದಲ್ಲಿಯೂ ಕೊಟ್ಟಿದ್ದಾರೆ. ಇವುಗಳನ್ನು ಪ್ರಸಿದ್ಧ ಶಿಕ್ಷಣ ತಜ್ಞರಿಂದ ರಚಿತವಾಗಿರುವ ಗ್ರಂಥಗಳಿಂದಲೂ, ಕನ್ನಡ. ಸಾಹಿತ್ಯ ಗ್ರಂಥಗಳಿಂದಲೂ ಆರಿಸಿಕೊಳ್ಳಲಾಗಿದೆ. ಇದು ಒಂದು ಒಳ್ಳೆಯ ಅಂಶವೇ. ಆಂಗ್ಲಭಾಷೆಯ ಗ್ರಂಥಗಳಿಂದ ಉದ್ಧೃತವಾದ ಹೇಳಿಕೆಗಳ ಕನ್ನಡ ಅನುವಾದವನ್ನು ಕೊಡಬಹುದಿತ್ತು. ಕಡೆಯಲ್ಲಿ ಕೊಟ್ಟಿರುವ ಪಾರಿಭಾಷಿಕ ಶಬ್ದಗಳ ಸಂಗ್ರಹ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದಾಗಿದೆ.

ಈ ಗ್ರಂಥವನ್ನು ಉತ್ತಮ ಮಟ್ಟದ ಕಾಗದದಲ್ಲಿ ಅಂದವಾಗಿ ಮುದ್ರಿಸಿದ್ದಾರೆ. ಮುಖಪುಟ ಅರ್ಥಪೂರ್ಣವಾದ ಚಿತ್ರವನ್ನೂ ಹೊಂದಿದೆ. ಹೆಚ್ಚಿನ ಮುದ್ರಣ ದೋಷಗಳಿಲ್ಲದಿರುವುದು ಈ ಗ್ರಂಥದ ಮತ್ತೊಂದು ಉತ್ತಮ ಅಂಶ. ಒಟ್ಟಿನಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಕ ತರಬೇತಿ ಪಡೆಯುವ ಅಧ್ಯಾಪಕರಿಗೂ, ವೃತ್ತಿನಿರತ ಅಧ್ಯಾಪಕರಿಗೂ ಮತ್ತು ಶಿಕ್ಷಣದ ಬಗ್ಗೆ ಆಸ್ಥೆ ಹೊಂದಿರುವವರಿಗೂ ಈ ಗ್ರಂಥ ಒಂದು ಉತ್ತಮ ಆಧಾರ ಗ್ರಂಥವಾಗಲು ಅರ್ಹವಾಗಿದೆ ಎನ್ನಬಹುದು.

ಬಿ. ಎಸ್. ನಂಜುನಾಥಯ್ಯ

ನಷ್ಟ ಪರಿಹಾರ ಕಾನೂನು

ಲೇ : ಶ್ರೀ. ಜಿ. ಎನ್. ಸಭಾಹಿತ, ಸರ್ವೋಚ್ಚ ನ್ಯಾಯಾಲಯ, ಬೆಂಗಳೂರು.
ಪ್ರ : ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1984. ಬೆಲೆ-ರೂ. 15-00.

ಕೆಲವು ವರ್ಷಗಳ ಹಿಂದೆ ಬರಡಾಗಿದ್ದ ಕನ್ನಡ ಕಾನೂನು ಸಾಹಿತ್ಯದಲ್ಲಿ ಇತ್ತೀಚೆಗೆ ಹಲವಾರು ವ್ಯಕ್ತಿಗಳ ಪ್ರಯತ್ನದಿಂದ ಕೆಲವು ಕಾನೂನು ಗ್ರಂಥಗಳು ಕನ್ನಡದಲ್ಲಿ ಹೊರಬಂದಿವೆ. ಇದರಲ್ಲಿ ವಿಶೇಷವಾಗಿ ಕರ್ನಾಟಕ. ವಿದ್ಯಾವರ್ಧಕ ಸಂಘದ ಪಾತ್ರವನ್ನು ನೆನೆಯಬಹುದು.

ಶ್ರೀ ಜಿ. ಎನ್. ಸಭಾಹಿತರು ಈಗಾಗಲೆ ಕನ್ನಡದಲ್ಲಿ ಕೆಲವು ಕಾನೂನು ಗ್ರಂಥಗಳನ್ನು ಬರೆದಿದ್ದಾರೆ. ನಷ್ಟ ಪರಿಹಾರ ಕಾನೂನು ಶ್ರೀಯುತರ ಇತ್ತೀಚಿನ ಗ್ರಂಥ. ಕಾನೂನು ಗ್ರಂಥಗಳನ್ನು ಹೊರತರುವುದರ ಉದ್ದೇಶ, ಕಾನೂನಿನಂತಹ ಕ್ಲಿಷ್ಟವಾದ ವಿಷಯವನ್ನು ಜನ ಸಾಮಾನ್ಯರಿಗೆ ತಲುಪಿಸಬೇಕೆಂಬುದು. ಆದರೆ ಹೀಗೆ ಜನ ಸಾಮಾನ್ಯರಿಗೆ ತಲುಪುವಂತಿರಲು ಆ ಗ್ರಂಥವು ಮೂರು ದೃಷ್ಟಿಗಳಿಂದ ಸಮಂಜಸವಾಗಿರಬೇಕು—

1) ಗ್ರಂಥವು ಚಿಕ್ಕದಾಗಿದ್ದರೆ ಕಾಲ ಹಾಗೂ ಹಣದ ದೃಷ್ಟಿಯಿಂದ ಸಾಮಾನ್ಯರಿಗೆ ಎಟುಕುವಂತಾಗಿರುತ್ತದೆ.

2) ವಿಷಯವನ್ನು ಸರಳವಾಗಿ ನಿರೂಪಿಸಿದ್ದಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವಂತಿರುತ್ತದೆ. ಆದರೆ ಸರಳವಾಗಿ ವಿಷಯವನ್ನು ರಚಿಸುವಾಗ ವಿಷಯದ ಗಹನತೆಯು ಬಲಿಯಾಗಬಾರದು.

3) ಪಾರಿಭಾಷಿಕ ಪದಗಳ ಸಮಸ್ಯೆಯನ್ನು ತೃಪ್ತಿಕರವಾಗಿ ನಿವಾರಿಸಬೇಕಾಗುತ್ತದೆ. ಕನ್ನಡದ ಪಾರಿಭಾಷಿಕ ಪದಗಳು ಅರ್ಥ ನಿರೂಪಿಸುವುದರ ಜತೆಗೆ ಸಾಮಾನ್ಯ ಜನರಿಗೆ ಮನದಟ್ಟಾಗುವಂತಿರಬೇಕು.

ಈ ಮೂರೂ ದೃಷ್ಟಿಗಳಿಂದಲೂ ಮೇಲ್ಕಂಡ ಗ್ರಂಥವು ಸ್ತುತ್ಯಾರ್ಹ.

ಲೇಖಕರೇ ತಿಳಿಸಿರುವಂತೆ ನಷ್ಟ ಪರಿಹಾರ ಕಾನೂನಿನ ಜ್ಞಾನ ಜನಸಾಮಾನ್ಯರಿಗೆ ತೀರ ಅಗತ್ಯವಾಗಿದೆ. ನಮ್ಮಲ್ಲಿ ನಷ್ಟ ಪರಿಹಾರ ದಾವೆಗಳು ಅಪರೂಪವಾಗಿರುವುದಕ್ಕೆ ಆ ಕಾನೂನಿನ ಬಗ್ಗೆ ಜನರಿಗಿರುವ ಅಜ್ಞಾನವೇ ಕಾರಣ. ಈ ಗ್ರಂಥವು ಸ್ವಲ್ಪ ಮಟ್ಟಿಗಾದರೂ ಈ ನ್ಯೂನತೆಯನ್ನು ತೆಗೆದು ಹಾಕುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಕಾಯಿದೆಯಲ್ಲಿ ಪರಿಣಿತರಾದ ಶ್ರೀ ಸಭಾಹಿತರು ಈ ವಿಷಯವನ್ನು ಆರಿಸಿಕೊಂಡು ಬರೆದಿರುವುದು ನಿಜಕ್ಕೂ ಸ್ವಾಗತಾರ್ಹ.

ವಿಷಯವನ್ನು ಸರಳವಾಗಿ, ಚೊಕ್ಕವಾಗಿ ಹಾಗೂ ಅರ್ಥವತ್ತಾಗಿ ವಿವರಿಸಿರುವ ಲೇಖಕರು ಪಾರಿಭಾಷಿಕ ಪದಗಳ ಪಟ್ಟಿಯನ್ನು ಗ್ರಂಥದ ಕೊನೆಯಲ್ಲಿ ಕೊಟ್ಟಿದ್ದರೆ ಅದರ ಉಪಯುಕ್ತತೆ ಇನ್ನಷ್ಟು ಹೆಚ್ಚುತ್ತಿತ್ತು.

ಎಚ್. ಕೆ. ನಾಗರಾಜ

ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು ; ಲೇ : ಪ್ರೊ. ಇಲ್ಲೂರು ಜಯರಾಮಪ್ಪ; ಕರ್ನಾಟಕ ವಿಶ್ವವಿದ್ಯಾಲಯ; 1981, ಬೆಲೆ 0-50 ಪೈ. ಪು. 66

ದಾಸ ಸಾಹಿತ್ಯದ ಅಭ್ಯಾಸ ಹೆಚ್ಚು ಹೆಚ್ಚಾಗಿ ಆಗುತ್ತಿರುವಂತೆ, ಆ ಸಾಹಿತ್ಯದ ವಿವಿಧ ಮುಖಗಳ ಪರಿಚಯವನ್ನು ಮಾಡಿಕೊಳ್ಳುವ ಅವಕಾಶವೂ ಹೆಚ್ಚುತ್ತಿದೆ. ದಾಸಸಾಹಿತ್ಯದ ಮುಖ್ಯ ಲಕ್ಷಣವೆಂದರೆ, ಅದರಲ್ಲಿ ಕಾಣಬರುವ ಸಾಮಾಜಿಕ ಕಳಕಳಿ. ಜನಗಳ ಬಾಳನ್ನು ಹಸನು ಮಾಡಬೇಕು ; ಅವರ ಅಂಕು ಡೊಂಕುಗಳನ್ನು ತಿದ್ದಬೇಕು ; ಭಕ್ತಿಯ ಮೂಲಕ ಜನಸಾಮಾನ್ಯರನ್ನು ದೈವದತ್ತ ಕೊಂಡೊಯ್ಯಬೇಕು ಎನ್ನುವುದೇ ದಾಸಸಾಹಿತ್ಯದಲ್ಲಿ ವಿಶೇಷವಾಗಿ ಕಾಣಬರುವ ಸಾಮಾಜಿಕ ಮೌಲ್ಯ. ಈ ಪುಟ್ಟ ಪುಸ್ತಕದಲ್ಲಿ ಪ್ರೊ. ಜಯರಾಮಪ್ಪನವರು ಈ ಮೌಲ್ಯದ ಪರಿಚಯವನ್ನು ಸುಲಭವಾಗಿಯೂ ಸರಳವಾಗಿಯೂ ಮಾಡಿದ್ದಾರೆ.

ದಾಸ ಸಾಹಿತ್ಯದ ಲಕ್ಷಣ, ಉಗಮ, ಉದ್ದೇಶ, ಮುಂತಾದ ವಿಷಯಗಳನ್ನು ಪರಿಚಯಿಸಿದ ನಂತರ ಲೇಖಕರು ಸಾಮಾಜಿಕ ಮೌಲ್ಯದ ಕಡೆಗೆ ತಮ್ಮ ಗಮನ ಹರಿಸಿದ್ದಾರೆ. ಮನುಷ್ಯ ದೊಡ್ಡವನಾಗುವುದು ಹುಟ್ಟಿನಿಂದಲ್ಲ; ಆದರೆ ಗುಣದಿಂದ ಎಂಬುದನ್ನು 'ಕುಲಕುಲವೆನ್ನುತಿಹರೇ ಕುಲಯಾವುದು ನೋಡಿ ಸತ್ಯ ಸಜ್ಜನಕೆ' ಎಂದು ಹೇಳಿ ಕೆಸರಲ್ಲಿ ಹುಟ್ಟುವ ತಾವರೆಯ ಹೋಲಿಕೆಯನ್ನು ಕೊಟ್ಟಿದ್ದಾರೆ. ಸಮಾಜ ಸುಧಾರಿಸಬೇಕಾದರೆ ಕುಟುಂಬಗಳು ಉತ್ತಮಗೊಳ್ಳಬೇಕು; ಕುಟುಂಬಗಳು ಸುಧಾರಿಸಬೇಕಾದರೆ ವ್ಯಕ್ತಿಗಳು ಉತ್ತಮಗೊಳ್ಳಬೇಕು ಎಂಬ ತತ್ವವನ್ನು ದಾಸರು ಹತ್ತಾರು ಉದಾಹರಣೆಗಳೊಂದಿಗೆ ಮನಮುಟ್ಟುವಂತೆ ಹೇಳಿದ್ದಾರೆ. ಧಾರ್ಮಿಕ, ನಿಯಮ ನಿಷ್ಠೆಗಳ ವಿಚಾರದಲ್ಲಿ ದಾಸರು ವಿಶೇಷವಾಗಿ ತಮ್ಮ ದೃಷ್ಟಿ ಹರಿಸಿದ್ದಾರೆ. ಮಡಿ, ಸ್ನಾನ, ಜಪ, ತಪ, ಉಪವಾಸ ಮುಂತಾದ ಪದಗಳ ನಿಜವಾದ ಅರ್ಥವನ್ನು ದಾಸರು ಹೇಳುವ ರೀತಿ ವಿಶಿಷ್ಟವಾದುದು. ದೇಹಶುದ್ಧಿ ಮಡಿಯಲ್ಲ; ಆತ್ಮಶುದ್ಧಿಯೇ ನಿಜವಾದ ಮಡಿ; ಚರ್ಮವ ತೊಳೆಯುವುದು ಸ್ನಾನವಲ್ಲ ಎಂದು ಹೇಳಿ 'ಹೃದಯ ಶುದ್ಧವಾಗದೆ ಉದಯ ಸ್ನಾನವೇತಕ್ಕೆ' ಎಂದು ಪ್ರಶ್ನಿಸಿದ್ದಾರೆ. ಪುಣ್ಯಕ್ಷೇತ್ರಗಳಲ್ಲಿ ಸಿಗಬಹುದಾದ ಪವಿತ್ರತೆಯನ್ನು ಮನುಷ್ಯ ತನ್ನ ಹೃದಯದಲ್ಲೇ ನಿರ್ಮಿಸಿಕೊಳ್ಳಬೇಕೆಂಬುದೇ ದಾಸರ ಆಸೆ. ಹೀಗೆ ದಾಸ ಸಾಹಿತ್ಯದಲ್ಲಿ ಕ್ಲಿಷ್ಟವಲ್ಲದ ಆದರೆ ಮನುಷ್ಯನ ಜೀವನಕ್ಕೆ ಅತ್ಯಾವಶ್ಯಕವಾದ ನೂರಾರು ಮುಕ್ತಕಗಳಿವೆ. ಅವುಗಳನ್ನು ಎತ್ತಿ ತೋರಿಸಿ, ಜನಗಳಿಗೆ ದಾಸಸಾಹಿತ್ಯದಲ್ಲಿ ಆಸಕ್ತಿಯನ್ನುಂಟುಮಾಡುವುದೇ ಲೇಖಕರ ಮುಖ್ಯ ಉದ್ದೇಶ. ಅದರಲ್ಲಿ ಅವರು ಸಫಲರಾಗಿದ್ದಾರೆಂದು ಹೇಳಬಹುದು.

ಎ. ವಿ. ನರಸಿಂಹಮೂರ್ತಿ



ಪ್ರೊ॥ ವೈ. ಪಿ. ರುದ್ರಪ್ಪನವರು
ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

ಸಂಪಾದಕೀಯ

ಮಾನವಿಕ ಕರ್ಣಾಟಕ ೧೫ನೆಯ ಸಂಪುಟದ ೩ನೆಯ ಸಂಚಿಕೆಯನ್ನು ಇದೀಗ ಹೊರಗಿಡಲು ಬಹಳ ಹರುಷವೆನಿಸುತ್ತಿದೆ. ನಮ್ಮ ಸಂಪ್ರದಾಯದಂತೆ ಮಾನವಿಕಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಕುರಿತ ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಕನ್ನಡ ನಾಡಿನ ಚಿರಂಜ್ಯೋತಿಯಂತೆ ಬೆಳಗಿದ, ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿಸಲು ಬಹುಮಟ್ಟಿಗೆ ಕಾರಣರಾದ, ಧರ್ಮ, ಸಾಹಿತ್ಯ, ಕಲೆಗಳಿಗೆ ಅಪಾರ ಪ್ರೋತ್ಸಾಹ ನೀಡಿದ, ಎಲ್ಲಕ್ಕಿಂತ ಮಿಗಿಲಾಗಿ ರಾಜರ್ಷಿಯೆನಿಸಿದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರದೊಂದಿಗೆ ಅವರ ಕಲಾಸೇವೆಯ ಕಿರುಪರಿಚಯಮಾಡಿಕೊಡುವ ಅಗ್ರ ಲೇಖನವನ್ನು ಈ ಅವರ ಶತಾಬ್ದಿ ಸಂದರ್ಭದಲ್ಲಿ ಹೊರತರಲು ಹೆಮ್ಮೆಯೆನಿಸುತ್ತದೆ. ನಮ್ಮ ವಿಶ್ವವಿದ್ಯಾನಿಲಯದ ಶಿಲ್ಪಿ, ಪ್ರಸಾರಾಂಗದ ರೂವಾರಿಯಾದ ಆ ಮಹಾನುಭಾವರಿಗೆ ಕರ್ನಾಟಕದ ಜನತೆಯ ಪರವಾಗಿ ನಮನ.

ತಂತ್ರಜ್ಞರ, ಪ್ರತಿಭಾವಂತರ ಸಮಸ್ಯೆ, ಶೈಕ್ಷಣಿಕ ಆಡಳಿತ ವ್ಯವಸ್ಥೆ, ಸಂಗೀತ, ಸಾಹಿತ್ಯಕ ಅನುವಾದ, ಮೈಸೂರು ನಗರದ ಪ್ರಾಚೀನ ದೇವಾಲಯವೊಂದರ ಐತಿಹಾಸಿಕ ಸಮೀಕ್ಷೆ, ಎರಡು ಹೊಸ ತಾಮ್ರಶಾಸನಗಳ ಅಧ್ಯಯನ, ಹೊಯ್ಸಳ ಕಾಲದ ಯುದ್ಧಸಾರಿಗೆಯ ವ್ಯವಸ್ಥೆಯ ಒಂದು ಅಂಶದ ಪರಿಚಯ, ಕರ್ನಾಟಕದ ಆದಿವಾಸಿಗಳಲ್ಲೊಂದು ಪಂಗಡದವರ ಜೀವನ ಪರಿಚಯ, ವ್ಯಾಕರಣ ರಚನೆ, ಇತಿಹಾಸದ ಮೇಲೆ ಶಾಸನಾಧಾರಿತವಾದ ಹೊಸಬೆಳಕು ಮುಂತಾದ ಹಲಬಗೆಯ ಅಧ್ಯಯನ ಗಳೊಂದಿಗೆ ನಮ್ಮ ಪತ್ರಿಕೆಯಲ್ಲಿ ಸರಣಿ ರೂಪದಲ್ಲಿ ಪ್ರಕಟಗೊಳ್ಳುತ್ತಿರುವ ಪ್ರಪಂಚದ ಸಂಕ್ಷಿಪ್ತ ಇತಿಹಾಸದ ಮತ್ತೊಂದು ಕಂತು ಕೆಲವು ಗ್ರಂಥ ಪರಿಚಯಗಳು ಈ ಸಂಚಿಕೆಯ ಓದುಗರಿಗೆ ತೃಪ್ತಿ ನೀಡುತ್ತದೆಂದು ನಂಬುತ್ತೇವೆ.

ಈ ಸಂಚಿಕೆಯ ಮತ್ತೊಂದು ವೈಶಿಷ್ಟ್ಯವೆಂದರೆ ನಮ್ಮ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಆಗಮಿಸಿರುವ ನೂತನ ಕುಲಪತಿಗಳನ್ನು ಸ್ವಾಗತಿಸುವ ಅವಕಾಶ ಹೊಂದಿರುವುದು. 1985ರ ಏಪ್ರಿಲ್ ಮಾಸದಲ್ಲಿ ಪ್ರೊ॥ ವೈ. ಪಿ. ರುದ್ರಪ್ಪನವರು ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಈ ಮೊದಲು ರಾಜ್ಯಸರ್ಕಾರದ ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯಕೀಯ ಶಾಸ್ತ್ರಾಧ್ಯಯನ ರಂಗದಲ್ಲಿ ಅಪಾರ ಸೇವೆ ಸಲ್ಲಿಸುವ ಮೂಲಕ ಖ್ಯಾತನಾಮರಾಗಿದ್ದಾರೆ. ಆ ಸಂದರ್ಭದಲ್ಲಿ ಅವರ ಕಾರ್ಯ ವೈಖರಿ ಎಲ್ಲರ ಮೆಚ್ಚುಗೆ ಗಳಿಸಿದೆ. ಅವರ ನಿಷ್ಠ ದಕ್ಷ ಆಡಳಿತ ನಿಷ್ಠುರವಾದರೂ ಮಾನವೀಯತೆ ಯಿಂದ ಕೂಡಿದ ವರ್ತನೆ ಎಲ್ಲರ ಮೆಚ್ಚುಗೆ ಗಳಿಸಿದೆ. ಕರ್ನಾಟಕದ ಅತ್ಯಂತ ಹಳೆಯ ಮತ್ತು ತನ್ನ ಸಾಧನೆಗಳಿಂದ ಕೀತಿ೯ ಪಡೆದಿರುವ ಮೈಸೂರು ವಿಶ್ವವಿದ್ಯಾನಿಲಯ ಇವರ ಆಡಳಿತಾವಧಿಯಲ್ಲಿ ಇನ್ನೂ ಸಾಧನೆಗಳನ್ನು ಪಡೆದು ಇತರ ವಿದ್ಯಾಸಂಸ್ಥೆಗಳಿಗೆ ದಾರಿ ದೀಪವಾಗಲೆಂದು ಪ್ರಾರ್ಥಿಸೋಣ.

ಬಿ. ಕೆ. ಗುರುರಾಜರಾವ್

ಸಂಪಾದಕ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★★★★

★ಮಾನವಿಕ ಕರ್ಣಾಟಕ

★ವಿಜ್ಞಾನ ಕರ್ಣಾಟಕ

★ಪ್ರಬುದ್ಧ ಕರ್ನಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	...	ಐದು ರೂಪಾಯಿಗಳು
ಇತರರಿಗೆ	...	ಹತ್ತು ರೂಪಾಯಿಗಳು
ಸಂಸ್ಥೆಗಳಿಗೆ	...	ಹದಿನೈದು ರೂಪಾಯಿಗಳು

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕ
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬